ಕಲಾವಿದ ಡಾ. ಎಂ. ವ್ಹಿ. ಮಿಣಜಿಗಿ

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್ ಪದವಿಗಾಗಿ
ಸಾದರ ಪಡಿಸಿದ ಕಿರು ಪ್ರಬಂಧ



ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ - ೫೮೭ ೨೦೧
೨೦೦೫

106






ಶ್ರೀ ಮಡಿವಾಳಪ್ಪ ವೀರಪ್ಪ ಮಿಣಜಗಿ.



ಪತ್ನಿ ಸರಸ್ವತಿ ಬಾಯಿ ಮಡಿವಾಳಪ್ಪ ಮಿಣಜಗಿ.



ಶ್ರೀ ಮಡಿವಾಳಪ್ಪ ಹಾಗೂ ಪತ್ನಿ ಸರಸ್ವತಿ ಬಾಯಿ

ಕಲಾವಿದ ಡಾ. ಎಂ. ವ್ಹಿ. ಮಿಣಜಗಿ

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ. ಫಿಲ್ ಪದವಿಗಾಗಿ
ಸಾದರ ಪಡಿಸಿದ ಕಿರು ಪ್ರಬಂಧ

ಮಾ: Patil

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ - ೫೮೭ ೨೦೧
೨೦೦೫



ಕಲಾವಿದ ಎಂ.ವ್ಹಿ. ಮಿಣಜಗಿ
ಒಂದು ಅಧ್ಯಯನ

ಪರಿವಿಡಿ



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಸ್ವರೂಪ ಹಾಗೂ ವಿಧಾನ :

ಕಲೆ ಜೀವನಾವಲಂಬಿ, ಜೀವನ ವಿಮರ್ಶೆ, ಜೀವೋನ್ನತಿ ಸಾಧಕ, ಎಂಬ ಮಾತನ್ನು ಒಪ್ಪಿಕೊಂಡತೆಯೆ ಅದರ ಮೂಲೋದ್ದೇಶ ಮನರಂಜನೆ ಎಂಬುದನ್ನು ಒಪ್ಪಿಕೊಳ್ಳದಿರಲಾರೆವು. ಈ ವಿಸ್ಮಯಕಾರಿ ಕಲಾ ಪ್ರಪಂಚದ ನೆಲೆ-ಸೆಲೆಗಳ ಬಗ್ಗೆ ಬಹು ಬಗೆಯಲ್ಲಿ ಚರ್ಚೆಗಳು ನಡೆದಿವೆ. ಒಂದೊಂದು ಬಗೆಯಲ್ಲಿ ಒಬ್ಬೊಬ್ಬ ದಾರ್ಶನಿಕರು ಅದರ ಮೌಲ್ಯವನ್ನು ತೂಗಿ ನೋಡಿದ್ದಾರೆ, ಮನುಷ್ಯನ ಮನಸ್ಸು ಅಗಮ್ಯವಾಗಿರುವ ತನಕ ಅದರ ಅಭಿವ್ಯಕ್ತಿಯು ಕಲೆ-ಸೆಲೆ ಸ್ವರೂಪಗಳು ಸಂದಿಗ್ಧವಾಗಿಯೇ ಉಳಿದಿದೆ. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಗಮನಿಸಿದಾಗ ಚಿತ್ರ, ಶಿಲ್ಪ, ಸಂಗೀತ, ಸಾಹಿತ್ಯ ಎಲ್ಲವೂ ಸ್ವತಂತ್ರವಾದ ಒಂದೊಂದು ಧರ್ಮವುಳ್ಳ, ಒಂದೊಂದು ಪರಿಮಿತಿವುಳ್ಳ ಭಾವ ಪ್ರಕಟಣೆಯ ಸಾಧನೆಗಳೆಂಬುದು ನಮಗೆ ತಿಳಿದೇ ಇದೆ. ಹಾಗೆಯೇ ಈ ಕಲಾ ಪರಂಪರೆಯ ಹಿಂದೆ ದುಡಿದ ಕಲಾವಿದರ ಅನನ್ಯ ಸೇವೆ ಅಥವಾ ಕಲಾಕೃತಿ ನಿರ್ಮಿಸಿದ ಕಲಾವಿದರ ಕೊಡುಗೆಯೂ ಬಹು ಪ್ರಾಮುಖ್ಯವಾಗಿರುತ್ತದೆ.

ಅಭಿವ್ಯಕ್ತಿ ಕ್ರಿಯೆಯಿಂದ ವ್ಯಕ್ತಿಯ ಜೊತೆಜೊತೆಗೆ ಅವನ ಸಮುದಾಯದ ಬದುಕು ವ್ಯಕ್ತವಾಗುತ್ತಾ ಹೋಗುತ್ತದೆ, ಭೌತಿಕ ಮತ್ತು ಆಧ್ಯಾತ್ಮಿಕ ಅಸ್ತಿತ್ವಕ್ಕೆ ಸೌಂದರ್ಯವನ್ನು ತಂದುಕೊಡುವ ಕೆಲಸಗಳೆಲ್ಲವೂ ಕಲೆಯ ಕ್ಷೇತ್ರದಲ್ಲಿ ನಡೆಯುತ್ತಾ ಬಂದಿವೆ[೧] ಕಲಾ ಪ್ರಪಂಚದ ಮೇಲೆ ಚೆಲ್ಲಿದ ಬೆಳಕು ಹೊಸದಾಗಿ ಎದ್ದ ಹಲವು ಸಮಸ್ಯೆಗಳು ಇಲ್ಲಿ ಮುಖ್ಯವಾಗಿರುವಾಗ ನಮ್ಮ ನವ್ಯ ಪೀಳಿಗೆಗೆ ಈ ಕಲೆ, ಕಲಾವಿದರ ಸಾಧನೆಗಳನ್ನು ಪರಿಚಯಿಸುವ ದಾಖಲೆಗಳು ತುಂಬಾ ಅಪರೂಪವಾಗಿವೆ.

ಸಾಂಸ್ಕೃತಿಕ ಕಲಾ ಇತಿಹಾಸ ಜಡುವಾಗಿ, ಯಾರ ಒಂದು ಕಾಲದ ಜನಕ್ಕೆ ಅಂಟಿಕೊಂಡು ಯಾವುದೇ ಸಾಂಪ್ರದಾಯಿಕ ಸಾಧನ ಶೈಲಿಗಳನ್ನು ಅನುಕರಿಸುತ್ತಾರೋ ಅಂತ ಜನರ ಸಮಾಜ ಜೀವನವು ಚೈತನ್ಯಮಯವಾಗಿ ಸಾಗಿಲ್ಲವೆಂದು ಹೇಳಬೇಕು. ಅಂತ ಜನ ಸಂಪ್ರದಾಯಗಳ ಗುಲಾಮರಾಗಿದ್ದಿರಬೇಕು. ಸ್ವಂತ ಜೀವನವನ್ನು ಚೇತನವನ್ನು ಮರೆತವರಾಗಿರಬೇಕು. ಬರೀಯ ಮಾರ್ಪಾಟಿನಿಂದಲೇ ಹೊಸ ಜೀವನದ ಸೂಚನೆಯಾಗುತ್ತದೆ ಎಂದು ಹೇಳಲಾರೆವಾದರೂ, ಮಾರ್ಪಾಟು ಹೊಸ ಜೀವನದ ಒಂದು ಮುಖ್ಯ ಕುರುಹು.

---

೧. ಡಾ. ಎಸ್.ಸಿ. ಪಾಟೀಲ : ವರ್ಣ ಸಂಚಯ, ಪುಟ - ೨೯.



ಕಲಾವಿದನಲ್ಲಿ ಅನುಭವ ವೈವಿಧ್ಯ ಬಂದಂತೆ ಆತ ಚಿತ್ರಿಸಲು ಬಳಸುವ ಸಾಧನಗಳ ಮಾರ್ಪಾಟು ಆಗಿಯೇ ಆಗುತ್ತದೆ [೨]

ಚಿತ್ರಕಲೆ ಪ್ರಾಚೀನವಾದ ಕಲೆ ಎಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಭಾರತೀಯ ಚಿತ್ರಕಲೆ ಬಹುಪ್ರಾಚೀನ ಎಂಬುವುದಕ್ಕೆ ಸಂಸ್ಕೃತ ಕಾವ್ಯ, ಶಾಸ್ತ್ರ ಪುರಾಣಗಳಲ್ಲಿ ಪ್ರಮಾಣಭೂತ ವಾಕ್ಯಗಳು ಸಂದರ್ಭಗಳು ದೊರೆಯುತ್ತವೆ[೩]. ಪ್ರತಿಯೊಂದು ಕಲಾಮಾಧ್ಯಮಕ್ಕೂ ತನ್ನದೇ ಭಾವಲೋಕ, ಅರ್ಥಲೋಕ ಸಹೃದಯ ಲೋಕಗಳಿವೆ ಎಂಬುದು ಸುಳ್ಳಲ್ಲ. ಎಲ್ಲ ಕಲೆಗಳ ಮೂಲ ಆಶಯವೂ ಒಂದೇ. ಆದರೆ ಸಾಹಿತ್ಯ ಕಲೆಯೊಂದಿಗೆ ಹೋಲಿಸಿದಾಗ ಇತರ ಕೆಲವು ಲಲಿತಕಲೆಗಳ ವೈಶಿಷ್ಟ್ಯ ಎದ್ದು ಕಾಣುತ್ತವೆ [೪]. ಪ್ರಾಚೀನ ಭಾರತದಲ್ಲಿ ಚಿತ್ರಕಲೆಯ ಕುರಿತು ಪ್ರಾಸ್ತಾವಿಕವಾಗಿ ಕೆಲವು ಸಲ ಚಿತ್ರಕಲೆ ವಿಷಯವಾಗಿಯೇ ಸಾಹಿತ್ಯ ಗ್ರಂಥಗಳು ರಚನೆಗೊಂಡಿವೆ. ಈ ಪರಂಪರೆಯಲ್ಲಿಯೇ ನಿರ್ಮಾಣಗೊಂಡ ಕ್ರಿ. ಶ. ಸುಮಾರು ೩ನೇ ಶತಮಾನದ ವಾತ್ಸಾನಯನ ಕಾಮಸೂತ್ರ ತುಂಬಾ ಪ್ರಸಿದ್ಧಿಯನ್ನು ಪಡೆದ ಗ್ರಂಥವಾಗಿದೆ. ಹೆಸರೇ ಸೂಚಿಸುವ ಹಾಗೆ ಈ ಕೃತಿ ಬರೀ ಕಾಮ ಕಲೆಯ ವರ್ಣಾಕೃತಿಯಲ್ಲ. ಅಲ್ಲಿ ವಿಜ್ಞಾನ, ತತ್ವ ಜ್ಞಾನ, ೬೪ ಕಲೆಗಳಂತಹ ವಿಷಯಗಳ ವಿವೇಚನೆ ಇದೆ. ಮಾನಸೋಲ್ಲಾಸ ಗ್ರಂಥ ಕೂಡ ಚಿತ್ರಕಲೆಯನ್ನು ಪರಿಚಯಿಸುತ್ತದೆ [೫].

ಭಾರತೀಯರು ಕಲೆಯ ಮಹತ್ವವನ್ನು ಪ್ರಾಚೀನ ಕಾಲದಲ್ಲಿಯೇ ಅರಿತು ಅನೇಕ ಕಲಾವಿದರು ಕೃತಿ ನಿರ್ಮಾಣ ಮಾಡಿದುದಕ್ಕೆ ಅನೇಕ ನಿದರ್ಶನಗಳಿವೆ. ಪ್ರಾಚ್ಯ ಸಂಶೋಧನೆ ಫಲವಾಗಿ ಮೆಹೊಂಜೋದಾರೋದಲ್ಲಿ ದೊರೆತ ಬಣ್ಣ ಹಾಕಿದ ವಿಗ್ರಹಗಳಿಂದ ೪೫೦೦ ವರ್ಷಗಳ ಹಿಂದೆಯೇ ವಿವಿಧ ಬಣ್ಣಗಳನ್ನು ಉಪಯೋಗಿಸಿ ವಸ್ತುಗಳನ್ನು ಅಲಂಕರಿಸುವುದು ರೂಢಿಯಲ್ಲಿತ್ತೆಂದು ತಿಳಿದು ಬರುತ್ತದೆ. ಅಜಂತದ ಗುಹೆಗಳಲ್ಲಿರುವ ಭಿತ್ತಿಚಿತ್ರಗಳು, ಮೂರ್ತಿಗಳು, ಬುದ್ಧ ಭಿಕ್ಷುಗಳಿಂದ ಕ್ರಿಸ್ತ ಪೂರ್ವದಲ್ಲಿಯೇ ಬರಿಯಲ್ಪಟ್ಟವೆಂದು ದೃಢಪಟ್ಟಿರುತ್ತವೆ. ಇದರಂತೆಯೇ ಪದುಕೋಟೆಯ ಬಳಿಯಲ್ಲಿರುವ ಸಿತ್ತನಿವಾಸಲ್‌ದಲ್ಲಿಯೂ ಪುರಾತನ ಭಿತ್ತಿಚಿತ್ರಗಳು ದೊರೆತಿವೆ. ಕೆಲವು ಪ್ರಾಚೀನ ದೇವಾಲಯಗಳಲ್ಲಿ ಕ್ರಿ.ಶ. ೭, ೮ನೇ ಶತಮಾನಗಳಲ್ಲಿ ಬರೆದ ಅನೇಕ ಪೌರಾಣಿಕ ಮತ್ತು ಐತಿಹಾಸಿಕ ಚಿತ್ರಗಳು ಅಂದಿನ ಕಲಾವಿದರ ಪ್ರತಿಭೆಯ ಪ್ರದರ್ಶನದಂತಿವೆ [೬].

ಮಾನವ ಸಂಸ್ಕೃತಿಯಲ್ಲಿ ಕಲೆಗೆ ಅಗ್ರ ಸ್ಥಾನವಿದೆ. ಆದೀ ಕಾಲದಿಂದಲೂ ಆದಿಮನುಷ್ಯನ ಕೈ ಹಿಡಿದುಕೊಂಡೇ ಬಂದಿದೆ. ಪ್ರತಿಭೆಯ ಮೂಸೆಯಲ್ಲಿ ಅರಳಿ ನಿಲ್ಲುವ ಇದು ಅವನ ದಿನನಿತ್ಯದ ವ್ಯವಹಾರದಲ್ಲಿಯೂ ತೋರಿ ಬರುತ್ತದೆ, ತನ್ನನ್ನು ಅಲಂಕರಿಸಿಕೊಳ್ಳುವುದರಲ್ಲಿ ತನ್ನ ಕೆಲಸ ಕಾರ್ಯಗಳನ್ನು ಹಗುರ ಮಾಡಿಕೊಳ್ಳುವುದರಲ್ಲಿ ಶ್ರಮವನ್ನು ಮರೆತು ಕೆಲಕಾಲ ಆನಂದದಲ್ಲಿ ಮೈಮರೆಸುವ ಕಲೆ ಅವನಿಗೆ ಸಹಾಯಕ, ಅದು ಹಾಡಿನ ರೂಪದಲ್ಲಿರಬಹುದು, ಚಿತ್ರದ ರೂಪದಲ್ಲಿರಬಹುದು, ಶಿಲ್ಪದ ರೂಪದಲ್ಲಿರಬಹುದು, ಕುಣಿತದ ರೂಪದಲ್ಲಿರಬಹುದು, ಬೆಳವಣಿಗೆಯನ್ನು ಪಡೆದುಕೊಂಡಂತೇ

---

೨. ಡಾ. ಎಸ್.ಸಿ. ಪಾಟೀಲ (ಸಂ): ಪ್ರೇಕ್ಷಕ ಕಲಾಪಿದ ಹಾಗೂ ವಿಮರ್ಶಕ, ಡಾ. ಶಿವರಾಂ ಕಾರಂತ (ಲೇ): ಚಿತ್ರಾಕ್ಷಿ, ಪುಟ- ೨೭.
೩. ಪಿ. ಆರ್ ತಿಪ್ಪೆಸ್ವಾಮಿ (ಪ್ರಸಂ.) : ಚಿತ್ರಕಲಾ ಪ್ರಪಂಚ, ಪುಟ-೧೧೦.
೪. ಪ್ರೋ. ಎಂ ಎಚ್. ಕೃಷ್ಣಯ್ಯ (ಸಂ) : ಕಲೆ ಮತ್ತು ರಸ ಸ್ವಾದನೆ, ಪುಟ -೯೨.
೫. ಡಾ. ಎಸ್.ಸಿ.ಪಾಟೀಲ (ಸಂ) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ -೧೪೪.
೬. ಡಾ. ಎಸ್.ಸಿ. ಪಾಟೀಲ (ಸಂ) : ಚಿತ್ರಕಲೆ ಪೂರಕ ಕ್ಷೇತ್ರಗಳು, ಪುಟ -೧೩೩.



ರೂಪುಗೊಂಡು ಚಿತ್ರ, ಶಿಲ್ಪ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಮೊದಲಾದ ಲಲಿತ ಕಲಾ ಪ್ರಕಾರಗಳಲ್ಲಿ ಪ್ರೌಢ ಕಲೆಯಾಗಿ ಮಾರ್ಪಡಬಹುದು[೭]. ರಸ ಋಷಿ ಡಿ.ವಿ.ಜಿ ಯವರೇ ಹೇಳಿದಂತೆ ಕಲೆಗಳಲ್ಲಿ ಪರಮ ಕಲೆ ಜೀವನದ ಲಲಿತ ಕಲೆ ಎಂಬುದು ಸಾರ್ಥಕವಾಗುತ್ತದೆ. ಚಿತ್ರಕಲೆ ಸಪ್ತ ಕಲೆಗಳ ದೃಷ್ಟಿಯಿಂದ ಹಿರಿಯ ಸ್ಥಾನ ಪಡೆದದ್ದು ನಿಜ. ಅತ್ತ ಚಿತ್ರಕಾರರ ಕುಂಚದ ಕೈಚಳಕದಲ್ಲಿ ಹತ್ತು ಬಗೆಯ ವರ್ಣ ರಂಜನೀಯ ಹೊಸ ಹೊಸ ಕಲೆಗಳು ಹೊರಚಿಮ್ಮುತ್ತವೆ. ಕಲೆ ನಿರ್ಮಾಣಕ್ಕೆ ಬೇಕಾಗುವ ಸಮನ್ವಯ ಪ್ರತಿಭೆಯನ್ನು ಕಲಾವಿದ ಉಳಿಸಿಕೊಂಡು ಹೋಗುವ ಮನೋಧರ್ಮವನ್ನು ಬೆಳೆಸಿಕೊಂಡಲ್ಲಿ ಆಗ ತನ್ನಿಂದ ರಚಿತವಾದ ಚಿತ್ರಕಲೆ ಇಂದ್ರ ಸೃಷ್ಟಿಯನ್ನೇ ನಿರ್ಮಿಸಬಲ್ಲದು. ಕಲೆಯಿಂದ ಸೌಂದರ್ಯ ತುಂಬುವ ಶಕ್ತಿ ಕಲಾರಾಧಕನಿಗೆ ಮಾತ್ರ ಸಾಧ್ಯ.ಅಂತೆಯೇ ಬಣ್ಣದ ಬದುಕಿನಲ್ಲಿಯೇ ಬಾಳಿ ಕಲ್ಪನಾ ಶಕ್ತಿಯಿಂದ ಅಳಿದುದ್ದನ್ನು ಸಹ ಜೀವಂತವಾಗಿರಿಸುವ ಪ್ರತಿಭೆಯನ್ನು ಕಲಾವಿದ ಕುಂಚದಿಂದ ಚಿತ್ರಿಸುವಾಗ ಜನರ ಕಣ್ಮಣ ಸೆಳೆಯುವ ಚಿತ್ರಕಲೆಯಲ್ಲಿ ತನ್ನ ಅಪ್ರತಿಮ ಪ್ರತಿಭೆಯನ್ನು ಕಾಣಿಕೆಯಾಗಿ ನೀಡುತ್ತಾ ಬಂದಿದ್ದಾನೆ. ಇಂತಹ ಅನೇಕ ಕಲಾತಪಸ್ವಿಗಳು ಚಿತ್ತಾರ ಲೋಕಕ್ಕೆ ರೂವಾರಿಯಾಗಿದ್ದಾರೆ.

ಕರ್ನಾಟಕದ ಸಾಂಸ್ಕೃತಿಕ ಪರಪಂಪರೆಯ ಇತಿಹಾಸದಲ್ಲಿ ಲಲಿತ ಕಲೆಗಳ ಪಾತ್ರ ತುಂಬಾ ಮೌಲಿಕವಾದದ್ದು. ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮವಿದೆ, ಬೆವರಿದೆ ಆದರಲ್ಲಿ ಕಲಾವಿದನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಚಿತ್ರ, ಶಿಲ್ಪಕಲೆಗಳು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಅಲ್ಲದೆ ಅವುಗಳು ಸಾವಿರಾರು ವರ್ಷದ ಇತಿಹಾಸವನ್ನು ಇಂದಿಗೂ ಸಾರಿ ಹೇಳುತ್ತವೆ. ಅವುಗಳ ಸಂರಕ್ಷಣೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ನಡೆಯದೇ ಇರುವುದು ಕಂಡುಬರುತ್ತದೆ. ನಾಡಿನ ಸಾಂಸ್ಕೃತಿಕ ಪರಪಂರೆಯ ಹರಿಹಾರರಾದ ಕಲಾವಿದರ ಕುರಿತಾದ ಅಧ್ಯಯನಗಳು ಗಮನಾರ್ಹವಾಗಿ ನಡೆಯಬೇಕಾಗಿವೆ. ಬಾಂಬೆ (ಉತ್ತರ) ಕರ್ನಾಟಕ ಪ್ರದೇಶದಲ್ಲಿ ಹಲವಾರು ಕಲಾವಿದರು ತಮ್ಮ ಬದುಕನ್ನೆ ಕಲೆಗಾಗಿ ಮುಡುಪಾಗಿಟ್ಟುಕೊಂಡಿರುವರು. ನಮ್ಮಲ್ಲಿ ಕಲಾವಿದರು, ಕಲಾನಿದರ್ಶನಗಳು ಸಾಕಷ್ಟಿದ್ದರೂ ಅವುಗಳ ಕುರಿತು ನಡೆದ ಚರ್ಚೆ ವಿಮರ್ಶೆಗಳು, ಸಂಶೋಧನೆಗಳು ಮಾತ್ರ ತುಂಬಾ ವಿರಳ. ಬೆರಳೆಣಿಕೆಯಷ್ಟು ಎಂದರೆ ತಪ್ಪಿಲ್ಲ. ಇಂತಹ ಪ್ರಮುಖ ಕಲಾವಿದರ ಅಧ್ಯಯನಗಳು ಇಂದು ನಡೆಯಬೇಕಿವೆ. ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಖ್ಯಾತಿ ಪಡೆದ ಅನೇಕ ಕಲಾಕೃತಿಗಳನ್ನು ನಿರ್ಮಿಸಿ, ತಮ್ಮದೇ ಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕ ಕಲಾಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿ ಚಿತ್ರಕಲಾ ಕ್ಷೇತ್ರದಲ್ಲಿ ಎತ್ತರ ಸಾಧನೆಯನ್ನು ಮಾಡಿ, ತಮ್ಮ ಜೀವನ ತ್ಯಾಗ ಮಾಡಿದ ಮಡಿವಾಳಪ್ಪ. ವೀರಪ್ಪ .ಮಿಣಜಗಿಯವರ ಜೀವನ ಸಾಧನೆ ಕಲಾಕೃತಿಗಳ ಹಾಗೂ ಕಲಾಕ್ಷೇತ್ರಕ್ಕೆ ಕೊಟ್ಟ ಅವರ ವಿಶಿಷ್ಟ ಕೊಡುಗೆಯನ್ನು ಅವಲೋಕಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಬಾಂಬೆ ಕರ್ನಾಟಕ ಪ್ರದೇಶದಲ್ಲಿಯೂ ಕೂಡ ಅನೇಕ ಕಲಾವಿದರಿಗೆ ಜನ್ಮ ನೀಡಿದ ತಾಣವಾಗಿದೆ. ಇತ್ತೀಚಿನ ಈ ಆಧುನಿಕ ಯುಗದಲ್ಲಿ ಉತ್ತರ ಕರ್ನಾಟಕದ ಕಲಾವಿದರು ರಾಷ್ಟ್ರಮಟ್ಟದವರೆಗೂ ಬೆಳೆದು ವ್ಯಾಪಿಸಿರುವಂತೆ ತೋರುತ್ತದೆ. ಆದರಲ್ಲಿ ಮುಖ್ಯವಾಗಿ ಡಿ.ಜಿ. ಬಡಿಗೇರ, ದಂಡಾವತಿಮಠ, ಎಂ. ಎ. ಚೆಟ್ಟಿ, ಹಾಲಭಾವಿ, ಟಿ.ಪಿ.ಅಕ್ಕಿ ಯಂತವರನ್ನು ಹೆಸರಿಸಬಹುದು. ಇವರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡವರಲ್ಲಿ ಎಂ.ವ್ಹಿ. ಮಿಣಜಗಿಯವರ ಒಬ್ಬರು. ಎಂ. ವ್ಹಿ. ಮಿಣಜಗಿಯವರ ಬಗ್ಗೆ ಇಲ್ಲಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

---

೭. ಪಿ. ಆರ್. ತಿಪ್ಪೆಸ್ವಾಮಿ (ಸಂ) : ಚಿತ್ರಕಲಾ ಪ್ರಪಂಚ, ಪುಟ -೩೦೮.



ಯಾವುದೇ ಒಬ್ಬ ಕಲಾವಿದ ಕಲಾವಿದನಾಗಬೇಕಾದರೆ ನಿಸರ್ಗವೇ ಮೊದಲ ಗುರು, ಅದಕ್ಕಾಗಿ ಕಲಾವಿದ ಸೌಂದರ್ಯಾನ್ವೇಶಕನಾಗಬೇಕು, ಪ್ರಾಣಿಕೋಟಿಯ ಆಗು-ಹೋಗುಗಳಿಗೆ ಸ್ಪಂದಿಸುವ ಹಾಗೂ ಪ್ರಕೃತಿಯೊಂದಿಗೆ ಬೆರೆತು ಕ್ಷಣಕ್ಷಣಕ್ಕೂ ಚಿನ್ನಾಟವಾಡುವ ಸೌಂದರ್ಯ ಚೇತನವನ್ನು ಕಂಡುಕೊಳ್ಳಲು ಕಣ್ಣುಗಳನ್ನು ಸಹ ಪಳಗಿಸಬೇಕಾಗುತ್ತದೆ[೮].

ಕಲಾವಿದನ ಬದುಕು, ಪರಿಸರ, ವ್ಯಾಸಂಗ, ಧ್ಯೇಯ, ಪ್ರೇರಣೆ, ಸಾಧನೆ ಸಿದ್ಧಿ ಮುಂತಾದವುಗಳನ್ನು ಆತನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ ಅಭಿವ್ಯಕ್ತಗೊಂಡಿರುತ್ತದೆ ಎಂದು ಮುಖ್ಯವಾಗಿರುತ್ತದೆ. ಕಲಾ ವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೇ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ದೊರಣೆಯು ಅವನದೇ ಆದ ಅಭಿವ್ಯಕ್ತಿ ವೈಯಕ್ತಿತತೆಯಲ್ಲಿ ಅವನ ಕಲಾ ಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು[೯]. ಈ ಹಿನ್ನೆಲೆಯಲ್ಲಿ ಕಲಾವಿದರ ಜೀವನ ಚರಿತ್ರೆಯ ಅಧ್ಯಯನವು ಇಲ್ಲಿ ಅಷ್ಟೇ ಮಹತ್ವ ಪಡೆದುದಾಗಿದೆ.

ಈ ಸಂಸ್ಕೃತಿಯ ಅತೀ ಮುಖ್ಯವಾದ ಅಭಿವ್ಯಕ್ತಿಯಲ್ಲಿ ಚಿತ್ರಕಲೆಯೂ ಒಂದು. ಯಾವುದೇ ಕಲಾಕೃತಿಯೊಂದರ ಅಧ್ಯಯನಕ್ಕೆ ಅದರ ಕತೃವಿನ ಜೀವನಾಭ್ಯಾಸವು ಅಗತ್ಯವಾಗಿರುತ್ತದೆ. ಕಲಾವಿದ ಬಾಳಿದ ಕಾಲ, ಪರಿಸರ ಅಲ್ಲದೇ ಅವನ ಸಮಕಾಲೀನ ಅಂಶಗಳು ಹೇಗೆ ಕಲಾಕೃತಿಯಲ್ಲಿ ಒಡಮೂಡಿವೆ ಎಂಬ ಅಂಶಗಳನ್ನು ಅಭ್ಯಸಿಸಿದರೆ ಮಾತ್ರ ಕಲಾಕೃತಿಯನ್ನು ತಿಳಿದುಕೊಳ್ಳಲು ಸಾಧ್ಯ. ಇಲ್ಲಿ ಎಂ.ವ್ಹಿ. ಮಿಣಜಗಿಯವರ ಸಾಂಸ್ಕೃತಿಕ ಪರಿಸರ ಈ ಒಂದು ಪರಿಸರದಲ್ಲಿ ಅವರಿಗೆ ಚಿತ್ರಕಲೆಯ ಕಡೆಗೆ ಒಲಿದ ಮನಸ್ಸು ಅವರ ಬಾಲ್ಯ ಜೀವನ ಕಲಾಸಕ್ತಿಗಳು ಅವರಿಗೆ ಪ್ರೇರಣೆ, ಪ್ರೋತ್ಸಾಹವನ್ನು ನೀಡಿದವರು, ಅವರ ಪ್ರೇರಣೆಯಿಂದ ಎಂ. ವ್ಹಿ. ಮಿಣಜಗಿಯವರು ಉನ್ನತ ಚಿತ್ರಕಲಾ ವ್ಯಾಸಂಗ ಮಾಡಲು ಮುಂಬೈನ ಜೆ.ಜೆ. ಕಲಾ ಶಾಲೆಗೆ ತೆರಳಿದ್ದು. ಮುಂಬೈಯ ಪರಿಸರದಲ್ಲಿಯ ಅವರ ಕಲಾಸಕ್ತಿ ಅಲ್ಲಿಯ ಕಲಾ ಗುರುಗಳು, ಅವರ ಸಮಕಾಲೀನ ಕಲಾವಿದರು ಇವರ ಜೊತೆಗೂಡಿ ಎಂ.ವ್ಹಿ. ಮಿಣಜಗಿಯವರ ಕಲಾಚಟುವಟಿಕೆಗಳಲ್ಲಿ ಭಾಗವಹಿಸಿದ್ದು, ಅದಲ್ಲದೇ ರಾಯಲ್ ಸ್ಕೂಲ್ ಆಫ್ ಆರ್ಟ್ಸ್ ಲಂಡನ್‌ಗೆ ಹೋಗಲು ಪ್ರೋತ್ಸಾಹಿಸಿದ ಗುರುಗಳು ಹಾಗೂ ಕಲಾಕೃತಿ ಅಲ್ಲಿಯ ವ್ಯಾಸಂಗ ಶೈಲಿ, ಅವರಿಗಾದ ಅನುಭವ, ಇವರಿಗೆ ಪ್ರೇರಣೆಯನ್ನು ನೀಡಿದವರು ಬೇರೆಯವರ ಕಲಾಕೃತಿಗಳಿಂದ ಇವರ ಮೇಲಾದ ಪ್ರಭಾವ ಬೇರೆಯವರ ಕಲಾಕೃತಿಗಳಿಂದ ಪ್ರಭಾವಿತರಾಗಿ ತಮ್ಮ ಕಲಾಕೃತಿಗಳಲ್ಲಿ ಬಳಸಿಕೊಂಡ ವಸ್ತು ವಿಷಯ, ತಂತ್ರ, ಶೈಲಿ ಮತ್ತು ಕಲಾ ಚಟುವಟಿಕೆಗಳನ್ನು ಕುರಿತು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗುವುದು.

ಎಂ.ವ್ಹಿ. ಮಿಣಜಗಿಯವರು ೧೯೫೦ರ ಹೊತ್ತಿಗೆ ಹುಬ್ಬಳ್ಳಿಗೆ ಆಗಮಿಸಿ ಕರ್ನಾಟಕ ಫೈನ ಆರ್ಟ್ಸ್ ಸೊಸಾಯಿಟಿಯನ್ನು ಪ್ರಾರಂಭಿಸಿ ಕಲಾ ಶಾಖೆಯನ್ನು ಸ್ಥಾಪಿಸಿದರು. ಹುಬ್ಬಳ್ಳಿಯ ಪರಿಸರದಲ್ಲಿ ಕಲಾ ವಾತಾವರಣವನ್ನು ಸೃಷ್ಟಿಸಿದವರಾಗಿದ್ದಾರೆ, ಇದಲ್ಲದೇ ಬೆಂಗಳೂರಿನಲ್ಲಿ ಆರ್ಟ ಟೀಚರ್ಸ ಟ್ರೇನಿಂಗ್ ಕೋರ್ಸ ಹಾಗೂ ದಾವಣಗೆರೆಯಲ್ಲಿ ಸರಕಾರದಿಂದ ಆರ್ಟ ಆ್ಯಂಡ ಕ್ರಾಫ್ಟ್ ಶಾಲೆಯನ್ನು ನಿರ್ಮಿಸಿ ನಿದೇಶಕರಾಗಿ, ಕಲಾಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಕೈಯಲ್ಲಿ ಪಳಗಿದ ವಿದ್ಯಾರ್ಥಿಗಳು ನಾಡಿನ ಹಲವಾರು

---

೮. ವಿ.ಟಿ.ಕಾಳೆ (ಲೇ) : ಎಸ್.ಎಂ. ಪಂಡಿತ, (ಪ್ರ) ಕರ್ನಾಟಕ ಲಲಿತ ಕಲಾ ಅಕಾಡೆಮಿ, ಪುಟ -೪.

೯. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ. ವಿ.ಚಿಟ್ಟಿ ಮತ್ತು ಜೀವನ, ಕಲಾಕೃತಿಗಳು ಅಪ್ರಕಟಿತ ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿ



ಕಡೆಗಳಲ್ಲಿ ತಮ್ಮನ್ನು ಪರಿಚಯಿಸಿಕೊಂಡಿದ್ದಾರೆ. ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರಾಗಿದ್ದಾರೆ. ಆದರ್ಶ ಕಲಾ ಶಿಕ್ಷಕರಾಗಿ, ಕಲಾವಿದರಾಗಿ ಒಳ್ಳೆಯ ಆಡಳಿತಗಾರರಾಗಿ, ಅಲ್ಲದೇ ಚಿತ್ರಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಶ್ರೀ ಎಂ.ವ್ಹಿ. ಮಿಣಜಗಿಯವರ ರೇಖಾ ಚಿತ್ರ, ಜಲವರ್ಣ, ತೈಲ ವರ್ಣಗಳಲ್ಲಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ನೈಜ ಸಂಯೋಜನಾ ಕಲಾಕೃತಿಗಳು ಈ ಭಾಗದ ಮನೆ,ಮಠಗಳಲ್ಲಿ ಸಂಗ್ರಹಗೊಂಡಿರುವುದನ್ನು ಕಾಣಬಹುದಾಗಿದೆ. ಯುವ ಪೀಳಿಗೆಗೆ ಅವು ಕಲಾಸಕ್ತಿಯನ್ನು ಮೂಡಿಸುವಂತವುಗಳಾಗಿವೆ. ಇದಲ್ಲದೆ ದೇಶ, ವಿದೇಶ ಸಂಗ್ರಹಾಲಯಗಳಲ್ಲಿ ಮತ್ತು ಖಾಸಗಿ ಸಂಘ ಸಂಸ್ಥೆಗಳಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಎಂ. ವ್ಹಿ. ಮಿಣಜಗಿಯವರು ಚಿತ್ರಿಸಿದ ಕಲಾಕೃತಿಗಳು ಅವರ ಕಲಾ ಪ್ರದರ್ಶನಗಳು ಅವರು ಕೈಗೊಂಡ ಅನೇಕ ಕಲಾಚಟುವಟಿಕೆಗಳನ್ನು ಅವರ ಕಲಾ ಬದುಕು, ಅವರ ಜೀವನ ಮತ್ತು ಕಲಾಸಾಧನೆಯನ್ನು ಮುಂದಿನಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ ಈ ಅಧ್ಯಯನವು ತುಂಬಾ ಮಹತ್ವದ್ದಾಗಿರುತ್ತದೆ. ಕನ್ನಡ ನೆಲೆ, ಕಲಾಕೌಶಲ್ಯಗಳ ಪವಿತ್ರ ಸಂಗಮವೆನಿಸದ ವಿಜಾಪೂರದಲ್ಲಿ ಜನ್ಮ ತಾಳಿದ ಎಂ.ವ್ಹಿ. ಮಿಣಜಗಿ ಇಂದಿಗೂ ಸಹ ರಾಗಮಾಲಾ ಚಿತ್ರ ಹಾಗೂ ಬಾವಚಿತ್ರಗಳ ರಚನೆಯಲ್ಲಿ ಸಿದ್ಧಹಸ್ತರಾಗಿ ತಮ್ಮತನದಿಂದ ಗೌರವಿಸಲ್ಪಟ್ಟವರು.

ಚಿತ್ರಕಲಾ ಉನ್ನತ ವ್ಯಾಸಂಗವನ್ನು ಮುಂಬೈಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ ಮತ್ತು ರಾಯಲ್ ಕಲಾ ಕಾಲೇಜ ಲಂಡನ್ (ಇಂಗ್ಲಂಡ) ದಲ್ಲಿ ಉನ್ನತ ಕಲಾವ್ಯಾಸಂಗದ ಅವಕಾಶವನ್ನು ಕಲ್ಪಿಸಿಕೊಂಡ ಕರ್ನಾಟಕದ ಮೊಟ್ಟಮೊದಲ ಕನ್ನಡಿಗ ಕಲಾವಿದ. ವ್ಯಾಸಂಗದ ಜೊತೆಗೆ ಲಂಡನ್ ಕೌಂಟಿ ಕೌನ್ಸಿಲ್ ಸ್ಕೂಲ್‌ದಲ್ಲಿ ಫೋಟೋ ಎನ್‌ಗ್ರೇವಿಂಗ್, ಲಿಥೋಗ್ರಾಫಿ ವಿಷಯಗಳನ್ನು ಅಧ್ಯಯನ ಪೂರೈಸಿದ ಕನ್ನಡಿಗ ಕಲಾವಿದರೆಂದರೆ ತಪ್ಪಾಗಲಾರದು. ಪಾಶ್ಚಿಮಾತ್ಯ ಕಲಾವಿದ ಸರ್ ವಿಲಿಯಂ ರೊಥೆನ್ ಸ್ಟೇನ್‌ರವರ ಶಿಷ್ಯರಾಗಿಯೂ ಕಲೆಯ ವ್ಯಾಸಂಗ ಮಾಡತೊಡಗಿದರು. ವ್ಯಾಸಂಗದ ಜೊತೆಗೆ ಫ್ರಾನ್ಸ್, ಜರ್ಮನಿ, ಇಟಲಿ, ಸ್ವಿಜರ್‌ಲ್ಯಾಂಡ್ ಮೊದಲಾದ ರಾಷ್ಟ್ರಗಳ ಕಲಾಗ್ಯಾಲರಿಗಳಲ್ಲಿ ಅಧ್ಯಯನ ಶೀಲರಾದದ್ದನ್ನು ಕಾಣಬಹುದಾಗಿದೆ. ಇಂದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಸಂಶೋಧನೆ ನಡೆಯುತ್ತಿದ್ದರೂ ಚಿತ್ರಕಲಾ ಕ್ಷೇತ್ರದಲ್ಲಿಯ ಸಂಶೋಧನೆ ಮಾತ್ರ ಇನ್ನೂ ಕಡಿಮೆ. ಆದರೆ ಈ ಕ್ಷೇತ್ರದ ಕೊಡುಗೆ ಅಪಾರವಾದದ್ದು ಎಂಬುವುದರಲ್ಲಿ ಎರಡು ಮಾತಿಲ್ಲ. ಹಲವಾರು ಕಲಾವಿದರು ಉನ್ನತ ಶಿಕ್ಷಣ ಕೊರತೆಯಿಂದಾಗಿ ಮತ್ತು ಕಲಾ ಸೌಕರ್ಯಗಳ ಕೊರತೆಯಿಂದಾಗಿ ಈ ಕಲಾಕ್ಷೇತ್ರದ ಅಧ್ಯಯನ ಕುಂಠಿತಗೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು.

ಮುಂದಿನ ಪೀಳಿಗೆಗೆ ಈ ಕಲೆ, ಕಲಾವಿದರ ಸಾಧನೆಯನ್ನು ಪರಿಚಯಿಸುವ ದಾಖಲೆಗಳು ತುಂಬಾ ಮಹತ್ವದ್ದಾಗಿದೆ ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಈ ಕ್ಷೇತ್ರದ ಸಂಶೋಧನೆ ಇನ್ನುಳಿದ ಕ್ಷೇತ್ರಗಳ ಸಂಶೋಧನೆಯಂತೆ ಪ್ರಾರಂಭಗೊಂಡಿರುವುದು ಒಂದು ಶುಭದ ಸಂಕೇತವಾಗಿದೆ.

ಮಡಿವಾಳಪ್ಪ ವೀರಪ್ಪ ಮಿಣಜಗಿಯವರು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಹೊಂದಿದ ಕಲಾವಿದರು.ಕರ್ನಾಟಕ ರಾಜ್ಯದ ಉಚ್ಚ ಕಲಾ ಶಿಕ್ಷಣ ಪಠ್ಯ ಸಮಿತಿಯ ಅಧ್ಯಕ್ಷರಾಗಿದ್ದರು [೧೦] . ಕರ್ನಾಟಕ ರಾಜ್ಯದ ಲಲಿತ ಕಲಾ ಅಕಾಡೆಮಿ ಸದಸ್ಯತ್ವ [೧೧] ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಚಿತ್ರಕಲೆಯು ಮಂಡಳಿ ಅಧ್ಯಕ್ಷ, ರಾಜ್ಯ ಕಲಾ ಶಿಕ್ಷಣ ಮಂಡಳಿಯ ಸದಸ್ಯತ್ವ, ರಾಜ್ಯ ಸಂಗೀತ, ನಾಟಕ ಅಕಾಡೆಮಿಯ ಉಪಾಧ್ಯಕ್ಷ, ಕೇಂದ್ರ ಲಲಿತಕಲಾ ಅಕಾಡೆಮಿ ಸದಸ್ಯ, ಮೈಸೂರ ದಸರಾ ಪ್ರದರ್ಶನದ ಸಮಿತಿಯ ಸದಸ್ಯ

---

೧೦. Revansiddayya Hanneradumath : Dr. Minajigi Arts & the man, Page-31

೧೧. D. V. Halbhavi : My Contemporary artists, Page- 2

[illegible]

ಹಾಗೂ ರಾಜ್ಯ ಲಲಿತ ಕಲಾ ಅಕಾಡೆಮಿ, ಸುಸ್ಥಿತವಾಗಿ ಈ ರಂಗದಲ್ಲಿ ಕಾರ್ಯ ಸುಗಮವಾಗಿ ನಡೆಯುವಂತೆ ಮಾಡಿದ್ದು ಗಮನಾರ್ಹ, ಅಲ್ಲದೇ ಯುನೆಸ್ಕೋ (ಪ್ಯಾರಿಸ್) ಅಂತರಾಷ್ಟ್ರೀಯ ಕಲಾ ಸಂಘಟನೆಯ ಭಾರತೀಯ ರಾಷ್ಟ್ರೀಯ ಸಮಿತಿಯ ಪ್ರತಿನಿಧಿಯಾಗಿ[೧೨], ಕಿತ್ತೂರ ರಾಣಿ ಚೆನ್ನಮ್ಮ ಮೆಮೋರಿಯಲ್ ಅಧ್ಯಕ್ಷ, ಚಾಮರಾಜೇಂದ್ರ ತಾಂತ್ರಿಕ ಇನ್‌ಸ್ಟಿಟ್ಯೂಟ ಮೈಸೂರು, ಇದರ ಸದಸ್ಯರಾಗಿದ್ದರು ಅಲ್ಲದೇ ಜಪಾನ್‌ದ ಟೋಕಿಯೋದಲ್ಲಿ ನಡೆದ ಐದನೇ ಅಂತರಾಷ್ಟ್ರೀಯ ಕಲಾ ಕಾಂಗ್ರೇಸದಲ್ಲಿ ಭಾರತೀಯ ಪ್ರತಿನಿಧಿಯಾಗಿ ಭಾಗವಹಿಸಿದವರು[೧೩], ೧೯೫೦ ರಿಂದ ಕರ್ನಾಟಕದ ಹುಬ್ಬಳ್ಳಿಯಲ್ಲಿ ಬಂದು ನೆಲೆಸಿದರು. ಜಗದ್ಗುರು ಮೂರುಸಾವಿರ ಮಠದ ಲಿಂಗೈಕ್ಯ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು ಈ ಕಲಾವಿದರ ಸೇವೆ ಕರ್ನಾಟಕದಲ್ಲಿ ತಮ್ಮ ಆಶ್ರಯದಲ್ಲಿ ನಡೆಯಬೇಕೆಂದು ಜಗದ್ಗುರುಗಳ ಆಶೆಯವಾಗಿತ್ತು. ಹೀಗೆ ಎಂ.ವ್ಹಿ.ಮಿಣಜಗಿಯವರ ಜೀವನದೊಂದಿಗೆ ಅವರ ಕಲಾಸಾಧನೆಯನ್ನು ಇಲ್ಲಿ ಮುಖ್ಯವಾಗಿ ಗುರುತಿಸಬಹುದಾಗಿದೆ. ಇಂದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾದ ಸಂಶೋಧನೆ ನಡೆಯುತ್ತಿದ್ದರೂ ಚಿತ್ರಕಲಾ ಕ್ಷೇತ್ರದಲ್ಲಿಯ ಸಂಶೋಧನೆ ಮಾತ್ರ ಇನ್ನೂ ಕಡಿಮೆ ಈ ಕ್ಷೇತ್ರದ ಕೊಡುಗೆ ಅಪಾರವಾದದ್ದು ಎಂಬುವುದರಲ್ಲಿ ಎರಡು ಮಾತಿಲ್ಲ. ಇಂತಹ ಪರಿಶ್ರಮದ ಹಲವಾರು ಸಮ್ಮಾನಗಳು ಅರಸಿಬಂದಿದೆ. ೧೯೬೪ ರಲ್ಲಿ ಮೈಸೂರ ದಸರಾ ಪ್ರದರ್ಶನದಲ್ಲಿ ಕುಂಚ ಬ್ರಹ್ಮ, ೧೯೬೬ ರಲ್ಲಿ ರಾಜ್ಯಲಲಿತಕಲಾ ಆಕಾಡೆಮಿಯ ಗೌರವ ಪ್ರಶಸ್ತಿ, ೧೯೭೬ ರಲ್ಲಿ ಕರ್ನಾಟಕವಿಶ್ವ ವಿದ್ಯಾಲಯ "ಗೌರವಡಾಕ್ಟರೇಟ", ೧೯೭೮ ರಲ್ಲಿ ಇಳಕಲ್‌ದ ಪರಮಪೂಜ್ಯ ಚಿತ್ತರಗಿಯ ಶ್ರೀ ವಿಜಯಮಹಾಂತ ಸ್ವಾಮಿಗಳವರು "ಕರ್ನಾಟಕ ಕಲಾ ಸಾರ್ವಭೌಮ" ೧೯೭೯ ರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆ "ಚಿತ್ರಕಲಾ ಭಾಸ್ಕರ" ಪ್ರಶಸ್ತಿಯನ್ನು ನೀಡಿ ಸತ್ಕರಿಸಲಾಯಿತು. ಮಿಣಜಗಿಯವರ ಕಲಾ ಸೇವೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಇರುವುದನ್ನು ಗಮನಿಸಿ ಕಲಾ ಕ್ಷೇತ್ರಕ್ಕೆ ಇವರ ಹೆಸರು ಸ್ಥಿರಸ್ಥಾಯಿಯಾಗುವಂತೆ ಆರ್ಟ ಗ್ಯಾಲರಿಯೊಂದನ್ನು ಇವರ ಸವಿನೆನಪಿಗಾಗಿ ನಿರ್ಮಾಣ ಮಾಡಿತು. ಇವೆಲ್ಲಕ್ಕಿಂತ ಮಿಗಿಲಾಗಿ ಅವರ ಕಲಾಕ್ಷೇತ್ರಕ್ಕೆ ಕೊಡಮಾಡಿದ ಅನೇಕ ಕಲಾಕೃತಿಗಳು ಈ ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಹಲವಾರು ಕಲಾವಿದರು ಉನ್ನತ ಶಿಕ್ಷಣದ ಕೊರತೆಯಿಂದಾಗಿ ಮತ್ತು ಕಲಾಸೌಕರ್ಯಗಳ ಕೊರತೆಯಿಂದಾಗಿ ಈ ಕಲಾಕ್ಷೇತ್ರದ ಅಧ್ಯಯನ ಕುಂಠಿತಗೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು.

ಮುಂದಿನ ಪೀಳಿಗೆಗೆ ಕಲೆ, ಕಲಾವಿದರ ಪರಿಶ್ರಮ, ಸಾಧನೆಯನ್ನು ಗುರುತಿಸಿ ದಾಖಲಿಸುವುದು ತುಂಬಾ ಮಹತ್ವದ್ದಾಗಿದೆ. ಇತ್ತಿಚಿನ ದಿನಗಳಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಈ ಕ್ಷೇತ್ರದ ಸಂಶೋಧನೆ ಇನ್ನುಳಿದ ಕ್ಷೇತ್ರಗಳ ಸಂಶೋಧನೆಯಂತೆ ಪ್ರಾರಂಭಗೊಂಡಿರುವುದು ಒಂದು ಶುಭದ ಸೂಚನೆಯಾಗಿದೆ.

---

೧೨. ಗವೀಶ ಹಿರೇಮಠ : ಡಾ. ಎಂ.ವ್ಹಿ. ಮಿಣಜಗಿ, ಪುಟ -೨೨

೧೩. ಶಂಕರ ಪಾಟೀಲ : ಕಲಾ ತಪಸ್ವಿ, ಡಾ. ಎಂ.ವ್ಹಿ. ಮಿಣಜಗಿ, ಪುಟ -೬೭.



ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು.

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ ನಂತರದಲ್ಲಿ ಅಧ್ಯಯನಗಳು ೬೦ರ ದಶಕದಲ್ಲಿ ತೀವ್ರಗೊಂಡು ಈಗ ಪ್ರೌಢವಸ್ಥೆಗೆ ಬಂದು ತಲುಪಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ಚಿತ್ರಕಲಾ ಅಧ್ಯಯನಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ [೧೪] ಎಂಬ ಸಂಶೋಧನ ಕಿರು ಪ್ರಬಂಧದಲ್ಲಿ ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ ಡಾ. ಬಿ.ಕೆ.ಹಿರೇಮಠರವರು ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ [೧೫] ಎಂಬ ಪಿ.ಹೆಚ್.ಡಿ. ಮಹಾಪ್ರಬಂಧದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ ಕರ್ನಾಟಕ ಜನಪದ ಚಿತ್ರಕಲೆ [೧೬] ಈ ಮಹಾಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು ನಮ್ಮ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿ ಪಿಹೆಚ್.ಡಿ ಮಹಾಪ್ರಬಂಧ ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು [೧೭] ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು [೧೮] ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೭ರಲ್ಲಿ ಡಾ. ಪುಷ್ಪಾದ್ರಾವಿಡ ಇವರು ಮಂಡಿಸಿದ ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು [೧೯] ಕುರಿತು ಅಧ್ಯಯನ ಮಾಡಿದ್ದಾರೆ.

---

೧೪. ಡಾ. ಎಸ್. ಸಿ. ಪಾಟೀಲ್ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ, ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ. - ೧೯೮೩

೧೫. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು - ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾ ಪ್ರಬಂಧ ಕರ್ನಾಟಕ ವಿ.ವಿ. -೧೯೮೭

೧೬. ಡಾ. ಎಸ್. ಸಿ. ಪಾಟೀಲ್ : ಕರ್ನಾಟಕ ಜನಪದ ಚಿತ್ರಕಲೆ ಪಿ. ಹೆಚ್.ಡಿ. ಮಹಾ ಪ್ರಬಂಧ ಕರ್ನಾಟಕ ವಿ.ವಿ. - ೧೯೯೧

೧೭. ಡಾ. ಅ.ಲ. ನರಸಿಂಹನ್ : ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು ಪಿ. ಹೆಚ್.ಡಿ. ಮಹಾ ಪ್ರಬಂಧ ಬೆಂಗಳೂರು ವಿ.ವಿ. - ೧೯೯೮

೧೮. ಡಾ. ಸಂಪದಾ ಭಟ್ ಹಿಂದುಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು ಪಿ. ಹೆಚ್.ಡಿ. ಮಹಾ ಪ್ರಬಂಧ ಕರ್ನಾಟಕ ವಿ.ವಿ. - ೧೯೯೮

೧೯. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೆವಲ್ ಇನ್ ಕರ್ನಾಟಕ ಸ್ಟೇಟ್ ಸ್ಪೆಶಲ್ ರೆಫರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಕರ್ನಾಟಕ ವಿ.ವಿ. - ೨೦೦೩

[illegible]



೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ ಉತ್ತರ ಕರ್ನಾಟಕ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ,[೨೦] ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರು ಕರ್ನಾಟಕ ಜನಪದ ಶಿಲ್ಪಕಲೆ, ಒಂದು ಅಧ್ಯಯನ,[೨೧] ೨೦೦೨ರಲ್ಲಿ ಡಾ. ಗಿರೀಶ ಅವರು ಬುಡಕಟ್ಟು ಚಿತ್ರಕಲೆ,[೨೨] ೨೦೦೨ರಲ್ಲಿ ಡಾ. ಲಕ್ಷ್ಮೀದೇವಿಗವಾಯಿಯವರ ಕಲಾವಿದ ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ[೨೩] ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ ಕೊಪ್ಪಳ-ಹಂಪಿ ಪ್ರದೇಶದ ಐತಿಹಾಸಿಕ ಕಾಲದ ಕಲೆ[೨೪] 2002ರಲ್ಲಿ ಡಾ. ಸೌಮ್ಯ ಅವರ ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನಸ್ ಟು ಕಂಟೆಂಪರರಿ ತಾಂತ್ರಿಕ ಆರ್ಟಿಸ್ಟ[೨೫] ಪ್ರಮಿಳಾ ಲೋಚನ ಮೈಂಡ್, ಮ್ಯೂಸಿಕ್ ಆ್ಯಂಡ ಕಲರ್ ಎಕ್ಸಪೋಜಿಸ್ ಆ್ಯಂಡ್ ಡೆವಲಪಮೆಂಟ್ ಆಫ್ ರಾಗಮಾಲಾ ಆ್ಯಂಡ ಕಂಟೆಂಪರರಿ ಪೇಂಟಿಂಗ್[೨೬] ೨೦೦೩ ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦),[೨೭] ೨೦೦೩ ರಲ್ಲಿ ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ ಅವರ ಕಲಾವಿದ ಆರ್. ಎಮ್. ಹಡಪದ, ಒಂದು ಅಧ್ಯಯನ[೨೮] ಕುರಿತು ಕನ್ನಡ ವಿ.ವಿ. ಹಂಪಿಯಿಂದ ಅಧ್ಯಯನ ಮಾಡಿದ್ದಾರೆ.

೨೦೦೩ ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ ಎಕ್ರಿಟಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಆಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್[೨೯] ೨೦೦೪ರಲ್ಲಿ ಡಾ. ವಿ. ಎಮ್. ಬಾಗಾಯತ್ ಅವರ ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦),[೩೦] ೨೦೦೪ ರಲ್ಲಿ ಡಾ. ಶಶಿಕಲಾ ಹೂಗಾರ ಅವರ

---

೨೦. ಡಾ. ಯಾದಪ್ಪ ಪರದೇಸಿ : ಉತ್ತರ ಕರ್ನಾಟಕ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2001

೨೧. ಡಾ. ಶಿವಾನಂದ ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೨. ಶ್ರೀ ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೩. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳ ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೪. ಶರಣಪ್ಪ ಕೋಲ್ಕಾರ : ಕೊಪ್ಪಳ-ಹಂಪಿ ಪ್ರದೇಶದ ಐತಿಹಾಸಿಕ ಕಾಲದ ಕಲೆ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೫. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನಸ್ ಟು ಕಂಟೆಂಪರರಿ ತಾಂತ್ರಿಕ ಆರ್ಟಿಸ್ಟ, ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೬. ಪ್ರಮಿಳಾ ಲೋಚನ ಮೈಂಡ್ : ಮ್ಯೂಸಿಕ್ ಆ್ಯಂಡ ಕಲರ್ ಎಕ್ಸಪೋಜಿಸ್ ಆ್ಯಂಡ್ ಡೆವಲಪಮೆಂಟ್ ಆಫ್ ರಾಗಮಾಲಾ ಆ್ಯಂಡ ಕಂಟೆಂಪರರಿ ಪೇಂಟಿಂಗ್ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2002

೨೭. ಡಾ. ವೀಣಾ ಶೇಖರ : ಎ ಸ್ಟಡಿ ಆಫ್ ಹಿಸ್ಟರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (1780-1820) ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2003

೨೮. ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠ ಅವರ ಕಲಾವಿದ ಆರ್. ಎಮ್. ಹಡಪದ, ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2003

೨೯. ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ ಎಕ್ರಿಟಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಆಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್, ಕರ್ನಾಟಕ ವಿಶ್ವವಿದ್ಯಾಲಯ-2003

೩೦. ಡಾ. ವ್ಹಿ.ಎಮ್. ಬಾಗಾಯತ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ ಪಿ. ಎಚ್.ಡಿ. ಮಹಾ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೪

ಕರ್ನಾಟಕ ತೊಗಲು ಗೊಂಬೆ ಚಿತ್ರಕಲೆ ಒಂದು ಅಧ್ಯಯನ, [೩.೧] ೨೦೦೪ರಲ್ಲಿ ಡಾ. ಶಿವಕುಮಾರ ಎ.ಓ. ಅವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು [೩.೨] ೨೦೦೫ ರಲ್ಲಿ ಡಾ. ಶಿವಪ್ರಕಾಶ ಎಲ್. ತುಕ್ಕಣ್ಣನವರ ಅವರ ಕರ್ನಾಟಕ ರಥಶಿಲ್ಪಕಲೆ ಒಂದು ಅಧ್ಯಯನ, [೩.೩] ಕುರಿತು ಪ್ರಬಂಧಗಳು, ೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ ಎಂ. ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಎ. ಎಸ್. ಖಂಡೇರಾವ - ಒಂದು ಅಧ್ಯಯನ, [೩.೪] ಮತ್ತು ಎ.ಎಸ್. ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ. [೩.೫] ಕರ್ನಾಟಕ ದೃಶ್ಯಕಲೆ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿದ್ದು ಈಗ ಗುಲಬರ್ಗಾ, ಬೆಂಗಳೂರು, ಕರ್ನಾಟಕ ವಿ. ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿ. ಹೆಚ್.ಡಿ. ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ ಇದಲ್ಲದೆ ಅನೇಕ ಬಿ.ಎಫ್.ಎ. ಪದವಿ ಹಾಗೂ ಎಂ.ವ್ಹಿ.ಎ., ಎಂ. ಎಫ್.ಎ. ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆ ತೀವ್ರವಾಗಿ ಮುನ್ನಡೆಯುತ್ತಲಿದೆ.

ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರವನ್ನು ಇಲ್ಲಿ ಕೊಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವೈದಾನೀಕತೆ ಮತ್ತು ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿಯ ಕುರಿತಾದ ವಿವರಣೆ ಇರುವುದು. ಎರಡನೆಯ ಅಧ್ಯಾಯದಲ್ಲಿ ಎಂ.ವ್ಹಿ. ಮಿಣಜಗಿಯವರು ಬಿಜಾಪೂರದಲ್ಲಿ ತಮ್ಮ ಪ್ರೌಢ ಹಂತದ ಶಿಕ್ಷಣವನ್ನು ಮುಗಿಸಿಕೊಂಡು ಉನ್ನತ ಚಿತ್ರಕಲಾ ವ್ಯಾಸಂಗವನ್ನು ಮುಂಬೈ ಹಾಗೂ ಲಂಡನ್‌ದಲ್ಲಿ ಕೈಗೊಂಡು ಕಲಾಶಿಕ್ಷಣ ಕಲಾಗುರುಗಳು ಹಾಗೂ ಅವರು ಕೈಗೊಂಡ ಕಲಾ ಚಟುವಟಿಕೆಗಳನ್ನು ಮತ್ತು ಸಾಂಸ್ಕೃತಿಕ ವಾತಾವರಣವನ್ನು ಕುರಿತು ಇಲ್ಲಿ ವಿವರಿಸಲಾಗಿದೆ.


೩.೧. ಡಾ. ಶಶಿಕಲಾ ಹೂಗಾರ : ಕರ್ನಾಟಕದ ತೊಗಲು ಗೊಂಬೆ ಚಿತ್ರಕಲೆ ಪಿ. ಹೆಚ್.ಡಿ.ಮಹಾ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ - ಹಂಪಿ -೨೦೦೪

೩.೨. ಡಾ. ಶಿವಕುಮಾರ ಎ. ಓ. : ಕರ್ನಾಟಕ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು ಪಿ. ಹೆಚ್.ಡಿ. ಮಹಾ ಪ್ರಬಂಧ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೨೦೦೪

೩.೩. ಶಿವಕುಮಾರ ತುಕ್ಕಣ್ಣನವರ : ಕರ್ನಾಟಕ ರಥಶಿಲ್ಪಕಲೆ ಒಂದು ಅಧ್ಯಯನ ಪಿ. ಹೆಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೪

೩.೪. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ ಎಂ. ಫಿಲ್ ಸಂ. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨

೩.೫. ಎ. ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷ ಭೂಷಣಗಳು ಎಂ. ಫಿಲ್ ಸಂ. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೩.



ಮೂರನೆಯ ಅಧ್ಯಾಯದಲ್ಲಿ ಎಂ.ವ್ಹಿ.ಮಿಣಜಗಿ ಚಿತ್ರಕಲಾ ಶಿಕ್ಷಣವನ್ನು ಪೂರೈಸಿದ ನಂತರ ಚಿತ್ರಕಲಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ವೃತ್ತಿ ಜೀವನವನ್ನು ನಡೆಸಿರುವ ಬಗ್ಗೆ ಸ್ಥೂಲ ವಿವರಗಳನ್ನು ಹೊಂದಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಎಂ.ವ್ಹಿ. ಮಿಣಜಗಿಯವರು ಹುಬ್ಬಳ್ಳಿಗೆ ಬಂದು ಚಿತ್ರಕಲಾ ಕ್ಷೇತ್ರದ ಉನ್ನತಿಕರಣಕ್ಕಾಗಿ ಕಲಾಶಾಲೆಯೊಂದನ್ನು ಪ್ರಾರಂಭಿಸಿದರು. ಅದಲ್ಲದೆ ಬೆಂಗಳೂರು, ದಾವಣಗೆರೆಯಲ್ಲಿ ಕಲಾಕ್ಷೇತ್ರಕ್ಕೆ ಕಲಾ ವಿದ್ಯಾರ್ಥಿಗಳಿಗೆ ಇಂದು ವಿದ್ಯಾರ್ಜನೆ ನೀಡುವಂತೆ ಮಾಡಿದರು. ಈ ಎಲ್ಲ ಸಾಹಸಗಳೊಂದಿಗೆ ಅನೇಕ ಗಣ್ಯ ವ್ಯಕ್ತಿಗಳೊಂದಿಗೆ ಸ್ನೇಹ ಶೀಲರಾಗಿಬದುಕಿದ್ದನ್ನು ಇಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಎಂ.ವ್ಹಿ.ಮಿಣಜಗಿ ರಚಿಸಿದ ವೃತ್ತಿ ಜೀವನದ ಹಾಗೂ ಈ ಅವಧಿಯಲ್ಲಿ ಅವರು ರಚಿಸಿದ ಕಲಾಕೃತಿಗಳು ಅವರ ಮಾರ್ಗದರ್ಶನದಲ್ಲಿ ತಯಾರಾದ ಕಲಾವಿದರ ಸ್ಥೂಲ ವಿವರಗಳನ್ನು ಹೊಂದಿದೆ.

ಆರನೆಯ ಅಧ್ಯಾಯದಲ್ಲಿ ಎಂ.ವ್ಹಿ. ಮಿಣಜಗಿಯವರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿ ಹಾಗೂ ಕಲಾಕೃತಿಗಳಿಗೆ ರಚನೆಗೆ ಪರಿಸರ, ವಾತಾವರಣ ಕಲಾವಿದರುಗಳ ಪ್ರೇರಣೆ ಪ್ರಭಾವ ಕುರಿತು ಮತ್ತು ಅವರ ಕಲಾಕೃತಿಗಳು ಮತ್ತೊಬ್ಬರ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಅಧ್ಯಯನದಿಂದ ಹೊರಬಂದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿರುತ್ತದೆ.

ಅಧ್ಯಯನದ ವಿಧಾನ :

ಈ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ

೨) ಆನುಷಂಗಿಕ ಆಕರ ಸಾಮಗ್ರಿ

೧) ಮೂಲ ಆಕರ ಸಾಮಗ್ರಿ :

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯ, ಡಾ. ಎಂ.ವ್ಹಿ. ಮಿಣಜಗಿಯವರ ಕುರಿತು ಗಣ್ಯ ವ್ಯಕ್ತಿಗಳ ಸಂದರ್ಶನ, ಚರ್ಚೆ, ಕಲಾಕೃತಿಗಳ ಛಾಯಾ ಚಿತ್ರಣ ಮಾಡುವುದು, ಅವರ ಕುರಿತು ಬಂದ ಸಂದರ್ಶನಗಳಿಂದ ವಿಷಯಗಳನ್ನು ಸಂಗ್ರಹಿಸಿ ಅಧ್ಯಯನವು ವಿಶಿಷ್ಟ ಪೂರ್ಣರೂಪದಲ್ಲಿರುತ್ತದೆ.

ಸಂದರ್ಶನ :

ಕಲಾವಿದ ಎಂ. ವ್ಹಿ. ಮಿಣಜಗಿಯವರ ಶಿಷ್ಯರಿಂದ ಮಾಹಿತಿಯನ್ನು, ಅವರ ಸಾಂಸ್ಕೃತಿಕ ಪರಿಸರ, ವೃತ್ತಿ ಜೀವನ, ಈ ಹಂತದಲ್ಲಿ ಅವರ ರಚಿಸಿದ ಕಲಾಕೃತಿಗಳ ರಚನೆ ಅವರ ಕಲಾಕೃತಿಗಳ ರಚನಾ ತಂತ್ರ, ವಸ್ತು ವಿಷಯ, ವರ್ಣಗಾರಿಕೆಯ ಪ್ರಭಾವ ಹೀಗೆ ಹತ್ತು ಹಲವು ವಿಷಯಗಳನ್ನು ಶಿಷ್ಯ ಬಳಗದಿಂದ ತಿಳಿದುಕೊಳ್ಳಲಾಯಿತು. ಇಷ್ಟಲ್ಲದೇ ಆವರ ವ್ಯಕ್ತಿತ್ವವನ್ನು ತಿಳಿದುಕೊಳ್ಳುವ ಸಲುವಾಗಿ ಅವರ ಆಪ್ತ ಪರಿಚಿತರನ್ನು ಸಂದರ್ಶಿಸಿ ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ :

ಕಲಾವಿದ ಎಂ.ವ್ಹಿ.ಮಿಣಜಗಿಯವರ ಕಲಾಕೃತಿಗಳನ್ನು ವಿವಿಧ ಕಡೆಗಳಲ್ಲಿ ಸಂದರ್ಶಿಸಿ ಭೇಟ್ಟಿ ಕೊಟ್ಟು



ಛಾಯಾಚಿತ್ರಣ ಮಾಡಿಕೊಳ್ಳಲಾಯಿತು. ಇವರ ಕಲಾಕೃತಿಗಳನ್ನು ಛಾಯಾಚಿತ್ರಣ ಮಾಡಿಕೊಳ್ಳುವುದೆಂದರೆ ಲ್ಯಾಟೀನು ಹಚ್ಚಿ ಹುಡುಕಿದ ಹಾಗೆಯೇ ಸರಿ. ಕಾರಣ ಇಷ್ಟೇ ಇವರ ಕೌಟುಂಬಿಕ ಜೀವನದಲ್ಲಿ ತಮ್ಮವರು ಯಾರು ಇರದೇ ಇದ್ದುದರ ಕಾರಣ ರಚಿಸಿದ ಕಲಾಕೃತಿಗಳು ನಿಗೂಢವಾಗಿ ಮನೆಯ ಒಳಗೆ ಸೇರಿಕೊಂಡಿವೆ. ಈ ಕುರಿತಂತೆ ಸಾಕಷ್ಟು ಶ್ರಮ ವಹಿಸಿ ಅವರು ವಿವಿಧ ಹಂತಗಳಲ್ಲಿ ಚಿತ್ರಿಸಿದ ರೇಖಾ ಚಿತ್ರಗಳು ಹಾಗೂ ವರ್ಣ ಚಿತ್ರಗಳು, ಭಾವಚಿತ್ರಗಳು, ನಿಸರ್ಗದ ಚಿತ್ರಗಳು, ನೈಜ ಸಂಯೋಜನಾ ಚಿತ್ರಗಳು, ಪೌರಾಣಿಕ ಚಿತ್ರಗಳು ಹಾಗೂ ಹಲವಾರು ವಿಷಯಗಳನ್ನೊಂಡ ಕಲಾಕೃತಿಗಳ ಛಾಯಾಚಿತ್ರಗಳನ್ನು ಮಾಡಿಕೊಳ್ಳಲಾಯಿತು. ಇದಲ್ಲದೇ ಗಣ್ಯ ವ್ಯಕ್ತಿಗಳು ಕಲಾಶಾಲೆಗೆ ಭೆಟ್ಟಿ ಕೊಟ್ಟ ಛಾಯಾ ಚಿತ್ರಗಳನ್ನು ಸಹಿತ ಬಳಸಿಕೊಳ್ಳಲಾಯಿತು. ಹೀಗೆ ಈ ಎಲ್ಲ ವಿಧಾನಗಳಿಂದ ಅವಶ್ಯವಾದ ವಿಷಯಗಳನ್ನು ಸಂಗ್ರಹಿಸಿ ಈ ಕಿರು ಪ್ರಬಂಧಕ್ಕೆ ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ :

ಸಂಶೋಧನ ಮಹಾಪ್ರಬಂಧಗಳು ಪ್ರಕಟಿತ, ಅಪ್ರಕಟಿತ ಕೃತಿಗಳು ನಿಘಂಟುಗಳು, ಗೆಝಟಿಯಕಗಳು, ಪತ್ರಿಕೆಗಳು ಕಲಾವಿದರ ಕಲಾಕೃತಿಗಳನ್ನು ಉದ್ದೇಶಿಸಿ ಪ್ರಕಟವಾದ ಕಲಾಮಿವರ್ಶೆ ಮತ್ತು ಅಭಿಪ್ರಾಯಗಳು ಲೇಖನಗಳು, ಸಂಶೋಧನಾ ಲೇಖನಗಳು, ಬೇರೆ ಬೇರೆ ಕಲಾಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಗ್ರಂಥಾಲಗಳಿಗೆ ಹೋಗಿ ಅಲ್ಲಿಂದ ವಿಷಯಗಳನ್ನು ಸಂಗ್ರಹಿಸಿಕೊಂಡು ಬಂದು ಈ ಕಿರು ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ : ಎರಡು

ಎಂ.ವ್ಹಿ. ಮಿಣಜಗಿಯವರು ೧೯೦೧ ಜನೇವರಿ ೩೦ ರಂದು ಜನಿಸಿದರು. ಇವರ ತಂದೆ ವೀರಪ್ಪ, ತಾಯಿ ಶರಣವ್ವ ಇವರದು ಸುಸಂಸ್ಕೃತ ಮನೆತನವಾಗಿದ್ದಲ್ಲದೇ ವ್ಯಾಪಾರಸ್ಥರಾಗಿದ್ದರು. ಈ ಕುಟುಂಬದಲ್ಲಿ ಜನ್ಮ ತಾಳಿದ ಮಿಣಜಗಿ (ಮಡಿವಾಳಪ್ಪ) ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಅನಾಥರಾದರು. ತಂದೆ ಆ ಸ್ಥಾನವನ್ನು ತುಂಬಲು ಪ್ರಯತ್ನಿಸಿ ಮಗನನ್ನು ವಾತ್ಸಲ್ಯದಿಂದ ಬೆಳೆಸಿದರು. ಇವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೆಳೆದರು.

ಇವರು ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣ ಬಿಜಾಪೂರದಲ್ಲಿಯೇ ನಡೆಯಿತು. ಬೆಳೆವ ಸಿರಿ ಮೊಳಕೆಯಲ್ಲಿಯೇ ನೋಡಾ ಎನ್ನುವಂತೆ ಬಾಲ್ಯದಲ್ಲಿಯೇ ಮಿಣಜಗಿಯವರು ಕಲಾಪ್ರತಿಭೆ ಪ್ರದರ್ಶಿಸಿ ಗೆಳೆಯರು, ಗುರುಗಳ ಮನ ಮೆಚ್ಚಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಚಿತ್ರ, ಸಂಗೀತ ಕಲೆಗಳಲ್ಲಿ ಆಸಕ್ತಿ. ಶಾಲೆಯ ಕಾರ್ಯಕ್ರಮಗಳ ಪ್ರಾರಂಭದಲ್ಲಿ ಮಡಿವಾಳಪ್ಪನಿಂದಲೇ ಪ್ರಾರ್ಥನಾ ಗೀತೆ, ಸ್ವಾಗತ ಗೀತೆ ಪ್ರತಿ ಸಾಂಸ್ಕೃತಿಕ ಕೆಲಸದಲ್ಲಿ ಉತ್ಸುಕತೆಯಿಂದ ಆಸಕ್ತಿಯಿಂದ ಭಾಗವಹಿಸಿದ್ದು ತಿಳಿದು ಬರುತ್ತದೆ. ಹೀಗೆ ಮಿಣಜಗಿಯವರು ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯ ಜೀವನವನ್ನು ಕುರಿತು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

[illegible]



ಅಧ್ಯಾಯ : ಮೂರು

ಈ ಅಧ್ಯಾಯದಲ್ಲಿ ಎಂ.ವ್ಹಿ.ಮಿಣಜಗಿಯವರು ಬಿಜಾಪೂರದಲ್ಲಿ ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದ ನಂತರ ಕಲಾ ವ್ಯಾಸಂಗಕ್ಕಾಗಿ ಮುಂಬೈನ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ ಸಂಸ್ಥೆ ಸೇರಿ ಅಲ್ಲಿ ಅವರು ವರ್ಣಚಿತ್ರಕಲೆಯಲ್ಲಿ ಡಿಪ್ಲೋಮಾ ಅಧ್ಯಯನ ಮಾಡಿದರು. ಅದಲ್ಲದೇ ಆರ್ಟ ಮಾಸ್ಟರ್ ವ್ಯಾಸಂಗವನ್ನು ಸಹಿತ ಅಭ್ಯಾಸ ಮಾಡಿದರು. ಜೊತೆಗೆ ಶಿಷ್ಯವೇತನ ಪಡೆದು ಭಿತ್ತಿ ಚಿತ್ರ ರಚನೆಯ ಒಂದು ವರ್ಷದ ಅಧ್ಯಯನ ಸಹ ಪೂರೈಸಿದರು. ಖ್ಯಾತ ಕಲಾವಿದರಾದ ಕೆ.ಬಿ. ತಾಸ್ಕರ, ಅಗರಕರ, ತ್ರಿನಿದಾದಾ ರಾವಬಹಾದ್ದೂರ, ದುರಂದರ ಚುರ್ಡೇಕರರಂತವರು ಇವರ ಕಲಾ ಗುರುಗಳಾಗಿದ್ದರು. ಮಿಣಜಗಿಯವರು ರಾಜ್ಯ ಮತ್ತು ಹೊರ ರಾಜ್ಯದವರ ಜೊತೆಗೂಡಿ ಹಲವಾರು ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ಸರ್. ಜೆ.ಜೆ. ಕಲಾಶಾಲೆಯ ಕಟ್ಟುನಿಟ್ಟಾದ ಶಿಸ್ತಿನ ವ್ಯಾಸಂಗ ಪದ್ಧತಿಯನ್ನು ಹೊಂದಿದ್ದಿತು. ಇದು ಮಿಣಜಗಿಯವರ ಜೀವನದಲ್ಲಿ ಮುಂದೆ ಕಲಾಸಾಧನೆಗೆ ಭದ್ರ ಬುನಾದಿಯಾಯಿತು. ಮುಂದೆ ಅವರು ೧೯೩೦ ರಲ್ಲಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿ ತಮ್ಮ ಕಲಾ ವ್ಯಾಸಂಗವನ್ನು ರಾಯಲ್ ಕಲಾ ಶಾಲೆಯಲ್ಲಿ ಮುಂದುವರೆಸಿದರು. ಇಂತಹ ಅವಕಾಶವನ್ನು ಪಡೆದುಕೊಂಡ ಮೊದಲ ಕನ್ನಡಿಗ ಕಲಾವಿದರಾಗಿದ್ದಾರೆ.

ಲಂಡನ್ ರಾಯಲ್ ಕಲಾ ಶಾಲೆಯಲ್ಲಿ ವರ್ಣ ಚಿತ್ರಕಲೆ ಬಗ್ಗೆ ಅಧ್ಯಯನ ಮಾಡಿದರೆ ಲಂಡನ್ ಕೌಂಟಿ ಕೌನ್ಸಿಲ್ ಸ್ಕೂಲ್‌ದಲ್ಲಿ ಫೋಟೊ ಎನ್‌ಗ್ರೇವಿಂಗ್ ಮತ್ತು ಲಿಥೋಪ್ರಾಫಿಕ ಶಾಸ್ತ್ರಗಳ ಅಧ್ಯಯನ ಪೂರೈಸಿದರು. ಆಗಿನ ಕಾಲದ ಪಠ್ಯಕ್ರಮ ಹಾಗೂ ಸುಪ್ರಸಿದ್ಧ ಪಾಶ್ಚಿಮಾತ್ಯ ಕಲಾವಿದ ಸರ್. ಎಂ. ವಿಲಿಯಂ ರೋಥೇನ ಸ್ಟೇನ್ ಅವರ ಶಿಷ್ಯತ್ವ, ಕಲಾ ವಾತಾವರಣ ಹಾಗೂ ಸ್ನೇಹಿತರ ಬಳಗದ ಕಲಾಸಾಧನೆಯ ಕುರಿತು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ : ನಾಲ್ಕು

ಕಲಾವಿದ ಎಂ.ವ್ಹಿ. ಮಿಣಜಗಿಯವರು ಲಂಡನ್‌ದಲ್ಲಿ ಯಶಸ್ವಿ ಕಲಾಶಿಕ್ಷಣ ಪೂರೈಸಿ ಅನೇಕ ಪ್ರಶಸ್ತಿಗಳನ್ನು ಕೂಡ ಸಂಪಾದಿಸಿ ಕಲಾವಿದನ ಜೀವನಕ್ಕೆ ಅಣಿಗೊಂಡು ೧೯೩೯ ರಲ್ಲಿ ಭಾರತಕ್ಕೆ ಮರಳಿದರು. ಕರ್ನಾಟಕದಲ್ಲಿ ಆಗಿನ್ನು ಕಲಾ ಜೀವನಕ್ಕೆ ಸಾಕಷ್ಟು ಅವಕಾಶಗಳು ಇಲ್ಲದ್ದರಿಂದ ಮುಂಬೈಯಲ್ಲಿ ನೆಲೆನಿಲ್ಲುವದು ಅವಶ್ಯವಾಗಿ ಪರಿಣಮಿಸಿತು. ಮಿಣಜಗಿಯವರ ಕಲಾಗುರುಗಳಾದ ರೋಥೆನ್ ಸ್ಟೇನ್ ಮತ್ತು ಜೆ.ಜೆ. ಸ್ಕೂಲ್ ಆಫ್ ಆರ್ಟ್ಸದ ಸೊಲೊಮನ್ನರಲ್ಲಿ ಅಂತಹ ಸಾಮರಸ್ಯವಿಲ್ಲದ್ದರಿಂದ ಇವರಿಗೆ ಪ್ರಾರಂಭದಲ್ಲಿ ತೊಂದರೆಯಾಗಿ ಪರಿಣಮಿಸಿತು. ತದನಂತರ ಬಹುದಿಟ್ಟತನದಿಂದ ಸ್ವತಂತ್ರ ಕಲಾವಿದ ಜೀವನವನ್ನು ಕೈ ಗೊಳ್ಳಲು ನಿರ್ಧರಿಸಿದರು. ಕಲಾವಿದ ಎಂ. ವ್ಹಿ. ಮಿಣಜಗಿಯವರ ಕೀರ್ತಿಯನ್ನು ಕೇಳಿದ ಮುಂಬೈ ನಾಗರಿಕರು ಇವರ ಹಸ್ತದಿಂದ ಅನೇಕ ಕಲಾಕೃತಿಗಳನ್ನು ನಿರ್ಮಿಸಿಕೊಳ್ಳಲು ಸಾಲುಗಟ್ಟಿ ನಿಂತರು. ತದನಂತರ ಈ ವಸತಿ ಕಲಾವಿದನ ಮನೆ ಕಲಾಮಂದಿರವಾಗಿ ಪರಿಣಮಿಸಿತು. ಅಲ್ಲದೇ ಸ್ಟುಡಿಯೋ ಎಂಬ ಕೀರ್ತಿ ಪಡೆಯಿತು.

ಮುಂಬೈಯಲ್ಲಿರುವಾಗ ಆಗಿನ್ನು ರಾಷ್ಟ್ರೀಯ ಆಂದೋಲನ ನಡೆಯುತ್ತಿದ್ದರಿಂದ, ರಾಷ್ಟ್ರೀಯ ನಾಯಕರ ಚಿತ್ರಗಳಾದ ಪಂಡಿತ ಮದನ್ ಮೋಹನ ಮಾಲವಿ, ಬ್ಯಾರಿಸ್ಟರ್ ಎಂ. ಎ. ಜಿನ್ನಾ ಸರ್. ಎಂ.ವಿಶ್ವೇಶ್ವರಯ್ಯ, ಸರ್ ಸಿದ್ದಪ್ಪ ಕಂಬಳಿ, ಕರ್ನಲ್ ಭಾಟಿಯಾ ಹೀಗೆ ಇನ್ನೂ ಅನೇಕ ಭಾವಚಿತ್ರಗಳು ಇವರ ಕುಂಚದಿಂದ ಮೂಡಿಬಂದವು.




ಪೌರಾಣಿಕ, ಐತಿಹಾಸಿಕ, ಧಾರ್ಮಿಕ ವಿಷಯಗಳ ಮೇಲೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ವರ್ಣ ಚಿತ್ರಗಳನ್ನು ರೂಪಿಸಿದರು. ಕಾಮದಹನ, ಜಲಂಧರ ನಾಮಕರಣ, ಪೌರಾಣಿಕ ವರ್ಗದಲ್ಲಿ ಚಿತ್ರ ರಚನೆಯಾದರೆ ಸಿದ್ಧರಾಮನ ಲಿಂಗಧಾರಣೆ, ಬಿಜ್ಜಳನ ಅರಮನೆಯಲ್ಲಿ ಪತ್ರವನ್ನು ಓದುತ್ತಿರುವ ಬಸವಣ್ಣನವರ ಚಿತ್ರಗಳು ಐತಿಹಾಸಿಕ ಕಲಾಕೃತಿಗಳಾಗಿವೆ. ಅಲ್ಲದೇ ಉಮರ್ ಖಯಾಮನ ವರ್ಣಚಿತ್ರಗಳು ಅವರ ಹೆಸರು ತರುವುದಕ್ಕೆ ಉಪಜೀವನಕ್ಕೂ ತುಂಬಾ ನೆರವಾದವು.

ಚಿತ್ರಕಲಾವಿದರಾಗಿ ರಾಷ್ಟ್ರೀಯ, ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದದ್ದಾಯಿತು. ಆದರೆ ಕರ್ನಾಟಕದ ಎಷ್ಟೋ ಬಡವಿದ್ಯಾರ್ಥಿಗಳು ದೂರ ಮುಂಬೈ ನಗರದಲ್ಲಿ ವಾಸಿಸಿ ಶಿಕ್ಷಣ ಪಡೆಯುವುದು ಸುಲಭವಾಗಿ ಸಾಧ್ಯವಾಗುತ್ತಿಲ್ಲವೆಂಬ ಕೊರಗಿನಿಂದ ೧೯೫೦ ರ ವೇಳೆಗೆ ಮುಂಬೈಯಿಂದ ಹುಬ್ಬಳ್ಳಿಗೆ ಬಂದರು. ಅವರ ಅನುಭವದ ಲಾಭವು, ಅವರ ಅಪಾರ ಜ್ಞಾನದ ಪ್ರಯೋಜನವು ಕನ್ನಡಿಗರಿಗೆ, ಕನ್ನಡ ವಿದ್ಯಾರ್ಥಿಗಳಿಗೆ ಆಗಬೇಕೆಂದು ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳಾಗಿದ್ದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳವರ ಮಹತ್ವಾಕಾಂಕ್ಷೆಯಾಗಿತ್ತು. ಕರ್ನಾಟಕ ಫೈನ ಆರ್ಟ ಸೊಸಾಯಿಟಿ ಎಂಬ ನೊಂದಾಯಿತ ಸಂಸ್ಥೆಯ ಆಶ್ರಯದಲ್ಲಿ ಕಲಾಶಾಲೆಯೊಂದನ್ನುಪ್ರಾರಂಭಿಸಿದರು. ಮೂರುಸಾವಿರ ಮಠದ ಜಗದ್ಗುರುಗಳಾದ ಶ್ರೀ ಗುರುಸಿದ್ಧಮಹಾಸ್ವಾಮಿಗಳು ಹಾಗೂ ಶಿಕ್ಷಣ ಪ್ರೇಮಿ ಎಚ್. ಎಫ. ಕಟ್ಟಿಮನಿಯವರು ಈ ಕಲಾಶಾಲೆ ಸ್ಥಾಪನೆಗೆ ತುಂಬಾ ನೆರವಾದರು. ಕಲಾಮಂದಿರ ಸ್ಥಾಪನೆಯೊಂದಿಗೆ ಕಲಾವಿದರಾಗಿ, ಕಲಾಶಿಕ್ಷಕರಾಗಿ ಕಲಾ ಶಾಲೆಯ ಸಂಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅದಲ್ಲದೇ ಬೆಂಗಳೂರಿನಲ್ಲಿ ಆರ್ಟ ಮಾಸ್ಟರ್ ಶಿಕ್ಷಕರ ತರಬೇತಿಯ ಕಲಾಶಾಲೆಯನ್ನು ಸಂಸ್ಥಾಪಿಸಿದರು. ಈ ಹಿನ್ನೆಲೆಯಲ್ಲಿ ಹೀಗೆ ಹಲವಾರು ರೀತಿಯಲ್ಲಿ ಇವರ ಚಿತ್ರಗಳ ಹರವು ಕಾರ್ಯಕ್ಷಮತೆ ವಿಸ್ತಾರಗೊಂಡಿದ್ದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಅಧ್ಯಾಯ : ಐದು

ಈ ಅಧ್ಯಾಯದಲ್ಲಿ ಎಂ.ವ್ಹಿ.ಮಿಣಜಗಿಯವರು ರಚಿಸಿದ ಕಲಾಕೃತಿಗಳನ್ನುಕುರಿತು ಇಲ್ಲಿವಿಶೇಷವಾಗಿ ಚರ್ಚಿಸಲಾಗಿದೆ. ಕಲಾವಿದ ಮಿಣಜಗಿ ಸಂಪ್ರದಾಯಿಕ ಕಲಾವಿದರಾಗಿದ್ದು ಪರಂಪರೆಯಿಲ್ಲದೇ ಯಾವ ಕಲೆ, ಶಿಲ್ಪ ಸಾಹಿತ್ಯ ಬೆಳೆಯುವದಿಲ್ಲ. ಪರಂಪರೆ ಕಟ್ಟಡಕ್ಕೆ ಇರುವ ಭದ್ರ ತಳಹದಿಯಂತೆ ಎಂಬುದು ಮಿಣಜಗಿಯವರ ಮಾತಾಗಿತ್ತು. ವಿದೇಶಿ ಪದ್ಧತಿಯಲ್ಲಿ ಕಲಾಶಿಕ್ಷಣವನ್ನು ಪಡೆದರೂ ದೇಶಿ ಕಥೆಯನ್ನು ತಮ್ಮ ಚಿತ್ರಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ.

ಚಿತ್ರಕಲಾ ಕ್ಷೇತ್ರದಲ್ಲಿ ಕಲಾವಿದ ಮಿಣಜಗಿಯವರು ನೀಡಿದ ಮಹತ್ತರ ಅಪರೂಪದಿಂದ ಕೂಡಿದ ರಜಪೂತ ಶೈಲಿಯ ಸಂಯೋಜನಾತ್ಮಕ ರಾಗಮಾಲಾ ಚಿತ್ರಗಳು ತಮ್ಮ ಜೀವನದಲ್ಲಿಯೇ ಅತ್ಯಂತ ತೃಪ್ತಿ ನೀಡಿದ ಶ್ರೇಷ್ಠ ಕಲಾಕೃತಿಗಳು ಅದಲ್ಲದೇ ಬಹು ಸಂಖ್ಯಾತ ರೀತಿಯಲ್ಲಿ ಭಾವಚಿತ್ರಗಳು, ನಿಸರ್ಗ ಚಿತ್ರಗಳು, ಚಾಲುಕ್ಯ ಅರಸರ ಭಿತ್ತಿ ಚಿತ್ರಗಳು, ಶರಣ ಸಾಹಿತ್ಯ ದೃಶ್ಯಗಳು, ಪೌರಾಣಿಕ, ಐತಿಹಾಸಿಕ, ಧಾರ್ಮಿಕ ವಿಷಯಗಳ ಚಿತ್ರಣಗಳು, ರೇಖಾ ಚಿತ್ರಗಳು, ಪಹರಿ ಚಿತ್ರಗಳು ಹೀಗೆ ಹಲವಾರು ರೀತಿಗಳಲಿ ಕಲಾಕೃತಿಗಳ ಅಧ್ಯಯನ ಮಾಡಲಾಗುವುದು. ಮಿಣಜಗಿಯವರ ಚಿತ್ರಮಯ ಬದುಕು ಭಕ್ತಿಪೂರ್ಣ ಕಲಾನಿಷ್ಠೆ ಹಾಗೂ ಪರಿಶ್ರಮಗಳಿಂದ ಕೂಡಿದ್ದಾಗಿದೆ. ಪರಂಪರೆಯ ಮೌಲ್ಯವನ್ನು ಉಳಿಸಿಕೊಂಡು ಬರುವ ಶಾಸ್ತ್ರಿಯವಾದ ಚರಿತ್ರಾಪೂರ್ಣವಾದ ಚಿತ್ರಕಲೆಯಲ್ಲಿ ಮಿಣಜಗಿಯರಿಗೆ ಇರುವ ಅಸಾಧಾರಣ ಶಕ್ತಿಯನ್ನು ಈ ಚಿತ್ರಗಳು ಸಾರಿ ಹೇಳುತ್ತವೆ.



ಈ ಎಲ್ಲ ಚಿತ್ರಗಳನ್ನು ಜಲವರ್ಣ, ತೈಲ ವರ್ಣ, ಪೆನ್ಸಿಲ್ ಮಾಧ್ಯಮ, ರೇಖಾ ಚಿತ್ರಗಳು, ಮತ್ತು ಸಂಕೀರ್ಣ ಮಾಧ್ಯಮದಲ್ಲಿ ನೋಡಬಹುದಾಗಿದೆ. ಸುಮಾರು ಇವರು ರಚಿಸಿದ ರಾಗಮಾಲಾ ೧೫ ಚಿತ್ರಗಳು ೨೫೦ ನಿಸರ್ಗ ಚಿತ್ರಗಳು, ೧೦೦ ರೇಖಾ ಚಿತ್ರಗಳು, ೬೦೦ ಹೀಗೆ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಈ ಚಿತ್ರಗಳ ವರ್ಣಗಾರಿಕೆ, ಕಲಾ ತಂತ್ರ ಹಾಗೂ ಶೈಲಿಯ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಲಾಗುವುದು.

ಅಧ್ಯಾಯ : ಆರು

ಈ ಅಧ್ಯಾಯದಲ್ಲಿ ಎಂ.ವಿ. ಮಿಣಜಗಿ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ಶೈಲಿಗಳ ಕುರಿತು ಚರ್ಚಿಸಲಾಗಿದೆ. ಮಿಣಜಗಿಯವರ ಕಾಲದ ಆಗಿನ ಪರಿಸರ ಸಮಾಜದ ಜನರು ನೈಜ ಚಿತ್ರಗಳನ್ನು ಹೆಚ್ಚು ಪ್ರೀತಿಸುತ್ತಿದ್ದರು ಮತ್ತು ಇವರ ಮೇಲೆ ಸಮಕಾಲೀನ ಕಲಾವಿದರ, ಕಲಾ ಗುರುಗಳ, ಕೆಲಮಟ್ಟಿನ ಪ್ರಭಾವ ಮಿಣಜಗಿಯವರ ಮೇಲೆ ಆಗಿರುವದರಿಂದ ಮಿಣಜಗಿಯವರು ವಿಶೇಷವಾಗಿ ಪಾರಂಪರಿಕ ನೈಜವಾದ ಚಿತ್ರಗಳನ್ನು ಚಿತ್ರಿಸುವದರಲ್ಲಿ ಸಿದ್ಧಹಸ್ತರಾದರು[೩೬].

ಮಿಣಜಗಿಯವರು ಅತ್ಯಂತ ಮೃದು ಬಣ್ಣಗಳನ್ನು ಇವರು ತಮ್ಮ ಚಿತ್ರಗಳಲ್ಲಿ ಬಳಸುತ್ತಿದ್ದರಲ್ಲದೇ ನೆರಳು ಬೆಳಕನ್ನು ಅತ್ಯಂತ ಪ್ರಭಾವಶಾಲಿಯಾಗಿ ಯೋಜಿಸಿದ್ದಾರೆ[೩೭]. ಚಿತ್ರ ರಚಿಸುವಾಗ ಚಿತ್ರದಲ್ಲಿ ಅತ್ಯಂತ ಸಣ್ಣ ವಸ್ತುವಿಗೆ ಸಹ ಅಷ್ಟೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಚಿತ್ರದಲ್ಲಿ ಸೂಕ್ಷ್ಮತೆಯನ್ನು, ಸ್ಪಷ್ಟತೆಯನ್ನು, ವ್ಯಕ್ತಿಗಳ ಗಾಂಭೀರ್ಯ, ಉತ್ಸುಕತೆ, ಭಾವಪರವಶತೆಯನ್ನು ಹಾಗೂ ಎಲ್ಲ ನವರಸಗಳಿಂದ ಕೂಡಿ ಕಾವ್ಯಮಯವಾದ ಅಪೂರ್ವವಾದ ಕಳೆಯನ್ನು ತಂದುಕೊಟ್ಟವೆ[೩೮]. ಕಲಾವಿದ ಮಿಣಜಗಿಯವರ ಅಘಾದವಾದ ಪಾಂಡಿತ್ಯ ಪ್ರತಿಭೆಯಂತೆ ಚಿತ್ರಗಳ ವಿಷಯಗಳು ಅಮೋಘವಾದವು. ಪವಾಡ ಪುರುಷ ವ್ಯಕ್ತಿಗಳ ಭಾವಚಿತ್ರ, ಜೀವನ ಚಿತ್ರವನ್ನು ನಮ್ಮೆದುರಿಗೆ ನಿಲ್ಲಿಸುವುದು ಇವರ ಕಲಾಕೃತಿಗಳ ವೈಶಿಷ್ಟ್ಯವೆಂದು ಹೇಳಬಹುದು. ಅತ್ಯಂತ ವಿರಳ ಬಣ್ಣಗಳಲ್ಲಿ ಚಿತ್ರಗಳನ್ನು ರಚಿಸಿದ್ದಾರೆ. ಈ ರೀತಿ ಕಲಾವಿದ ಮಿಣಜಗಿಯವರ ರೇಖಾವಿನ್ಯಾಸ, ವರ್ಣಗಾರಿಕೆ, ಪ್ರಭಾವ ಕಲಾತಂತ್ರಶೈಲಿಯ ವಿಶಿಷ್ಟ ಕೊಡುಗೆಯ ಅಪಾರ ವಿಷಯ ವೈವಿಧ್ಯತೆಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಏಳು

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ವಿವರಗಳನ್ನು ಸಮೀಕ್ಷಿಸಲಾಗಿದೆ.

★★★★★

೩೬. ಶ್ರೀ ಪಾಟೀಲ ಪುಟ್ಟಪ್ಪನವರ ಸಂದರ್ಶನದ, ದಿನಾಂಕ ೧೯-೧೦-೨೦೦೪
೩೭. ಶ್ರೀ ಪಿ. ಎಸ್. ಹಿರೇಮಠ ಅವರ ಸಂದರ್ಶನ ದಿನಾಂಕ ೮-೧೦-೨೦೦೪
೩೮. ಶ್ರೀ ಎಂ. ಬಿ. ಪಾಟೀಲ : ಸಂದರ್ಶನ ದಿನಾಂಕ ೧೬-೧೨-೨೦೦೪



ಅಧ್ಯಾಯ : ಎರಡು

ಎಂ.ವ್ಹಿ. ಮಿಣಜಗಿ : ಸಾಂಸ್ಕೃತಿಕ ಪರಿಸರ ಮತ್ತು ಕಲಾ ಬದುಕು :

ಹೈದಾರಾಬಾದ ನಿಜಾಮನ ಕಾಲದಿಂದಲೂ ಕಲಬುರ್ಗಿಯು ಒಂದು ದೊಡ್ಡ ಪ್ರಮುಖ ಪಟ್ಟಣ ಕೇಂದ್ರವಾಗಿತ್ತು. ಇಂತಹ ಒಂದು ಪಟ್ಟಣವು ಅಂದು ನಿಜಾಮನ ಆಳ್ವಿಕೆಯ ಕಾಲದ ಭಾಷೆ, ಆಚಾರ, ವಿಚಾರಗಳಿಗೆ ಮುಸ್ಲಿಮ ಕೇಂದ್ರಿಕೃತವಾದ ಪ್ರದೇಶವಾಗಿತ್ತು. ಮಿಣಜಗಿಯವರು ಮೂಲತಃ ಕಲಬುರ್ಗಿ ಜಿಲ್ಲೆಯ ಮಿಣಜಗಿ ಗ್ರಾಮಕ್ಕೆ ಸೇರಿದವರಾಗಿದ್ದರು. ಇವರ ಪೂರ್ವಜರು ಅಲ್ಲಿಂದ ಮಹಾರಾಷ್ಟ್ರ ಜವಳಿ ಕೇಂದ್ರಕ್ಕೆ ಹೆಸರುವಾಸಿಯಾದ ಸೊಲ್ಲಾಪೂರಕ್ಕೆ ಬಂದರು [೧]. ಇದಕ್ಕಿಂತ ಪೂರ್ವದಲ್ಲಿ ಇವರ ಅಜ್ಜಂದಿರ ಅಣ್ಣ-ತಮ್ಮಂದಿರಾದ ಶಿವಪ್ಪ ಮತ್ತು ಚಂದ್ರಪ್ಪ ಕಿರಾಣಿ ವ್ಯಾಪಾರವನ್ನು ನಡೆಸುತ್ತಿದ್ದರು. ಈ ಮನೆತನದವರು ಸೊಲ್ಲಾಪೂರದಲ್ಲಿ ಕಿರಾಣಿ ವ್ಯಾಪಾರದಲ್ಲಿ ಸಾಕಷ್ಟು ಜನಪ್ರೀಯತೆಯನ್ನು ಮಾಡಿಕೊಂಡಿದ್ದರು. ಆದರೆ ಅಂದಿನ ದಿನಗಳಲ್ಲಿ ಕರ್ನಾಟಕದ ಉತ್ತರ ಭಾಗದಲ್ಲಿ ಸಾಕಷ್ಟು ಹೆಸರನ್ನು ಗಳಿಸಿದ ಕನ್ನಡ ನೆಲ ಕಲಾಕೌಶಲ್ಯಗಳ ಪವಿತ್ರಸಂಗಮವೆನಿಸಿದ ಬಿಜಾಪೂರಕ್ಕೆ ಬಂದು ಇವರು ನೆಲೆಸಿದರು.

ಕ್ರಿ.ಶ. (೧೬೨೬-೫೬) ಆದಿಲ್ ಶಾಹಿ ವಂಶದವರು ಬಿಜಾಪೂರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ೨ ಶತಮಾನಗಳ ಅವಧಿಯಲ್ಲಿ ಮುಸ್ಲಿಮ ಶೈಲಿಯ ಅನೇಕ ಕಟ್ಟಡಗಳು ಬಿಜಾಪೂರದಲ್ಲಿ ನಿರ್ಮಿಸಲ್ಪಟ್ಟವು [೨]. ಇವುಗಳಲ್ಲೆಲ್ಲ ಗೋಲಗುಮ್ಮಟ ಅತ್ಯಂತ ಗಂಭೀರವಾದ ಕಟ್ಟಡ, ಇಬ್ರಾಹಿಂ ರೋಜಾ, ಮುಂತಾದ ಕಟ್ಟಡಗಳಲ್ಲಿ ಕಂಡು ಬರುವ ಅಲಂಕರಣದ ಕಾರ್ಯ ಇದರಲ್ಲಿ ಕಂಡು ಬಂದಿಲ್ಲವಾದರೂ ಇದರ ಭವ್ಯತೆ ಯಾರನ್ನಾದರೂ ಮೋಹಗೊಳಿಸುವಂತಹವದು.

ರಾಜ್ಯದಲ್ಲಿ ಬಿಜಾಪೂರ ಜಿಲ್ಲಾ ಕೇಂದ್ರವು ಬರಗಾಲದ ಬೀಡು, ಕೈಗಾರಿಕೆ, ಉದ್ಯಮಿ ರಂಗದಲ್ಲಿ ತೀರಾ ಹಿಂದುಳಿದ ಪ್ರದೇಶ, ಶಿಕ್ಷಣದಲ್ಲಿ ಅನಕ್ಷರಸ್ಥರ ನಾಡು ಹೀಗೆ ಹಲವು ರೀತಿಯಲ್ಲಿ ಬಿಜಾಪೂರ ಜಿಲ್ಲಾ

---

೧. ಶ್ರೀ ಶಂಕರ ಪಾಟೀಲ ; ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ -೩..

೨. ಜ್ಞಾನ ಗಂಗೋತ್ರಿ : ಸಂಪುಟ ೫ ಕಿರಿಯರ ವಿಶ್ವಕೋಶ , ಪುಟ ಸಂಖ್ಯೆ-೨೨೨.

[illegible]



ಕೇಂದ್ರವನ್ನು ಒಂದು ಕಾಲಕ್ಕೆ ಕಡೆಗಣಿಸಲಾಗುತ್ತಿತ್ತು. ಕರ್ನಾಟಕ ರಾಜ್ಯದಲ್ಲಿಯೇ ವಿಸ್ತಾರವಾಗಿದ್ದ ಅತೀ ದೊಡ್ಡ ಜಿಲ್ಲೆಯೆನಿಸಿದ್ದರೂ ಕಗ್ಗಾಡು ಎಂಬ ಅರ್ಥದಲ್ಲಿ ಅದನ್ನು ನೋಡಲಾಗುತ್ತಿತ್ತು. ಸಾಂಸ್ಕೃತಿಕ ದೃಷ್ಟಿಯಿಂದ ಬಿಜಾಪೂರ ಜಿಲ್ಲೆಯು ಐತಿಹಾಸಿಕವಾಗಿ ತುಂಬಾ ಹೆಸರಾದ ಪ್ರದೇಶವೆನಿಸಿತ್ತು. ಬಿಜಾಪೂರ ಜಿಲ್ಲೆಯಲ್ಲಿರುವ ಬಾದಾಮಿ ನಮ್ಮ ನಾಡಿನ ಪ್ರಾಚೀನ ಐತಿಹಾಸಿಕ ಕೇಂದ್ರಗಳಲ್ಲಿ ಒಂದು. ಚಾಲುಕ್ಯ ವಂಶದ ಮೂಲ ಪುರುಷನಾದ ಒಂದನೇಯ ಪುಲಕೇಶಿ, ೬ನೇ ಶತಮಾನದ ಆರಂಭದಲ್ಲಿ ಬಾದಾಮಿಯ ಕೋಟೆಯನ್ನು ಕಟ್ಟಿಸಿದನೆಂದು ಐತಿಹಾಸಿಕ ಆಧಾರಗಳು ದೊರೆತಿವೆ. ಒಂದನೇ ಪುಲಕೇಶಿ ಇಲ್ಲಿ ವಾತಾಪಿಪುರದ ಕೋಟೆಯನ್ನು ಕಟ್ಟುವುದಕ್ಕೆ ಮೊದಲೇ ಇಲ್ಲಿ ಒಂದು ಊರು ಇದ್ದಿರಬೇಕೆಂಬುವುದರಲ್ಲಿ ಅನುಮಾನವಿಲ್ಲ.

ಬಾದಾಮಿ ಚರಿತ್ರೆಯನ್ನು ತುಂಬಾ ಪ್ರಾಚೀನ ಕಾಲಕ್ಕೆ ಎಳೆದುಕೊಂಡು ಹೋಗುವವರು ಇದ್ದಾರೆ. ಬಾದಾಮಿ ವಾತಾಪಿ ಎಂಬ ಮಾಯಾವಿರಾಕ್ಷಸ ಮತ್ತು ಅವನ ತಮ್ಮ ಇಲ್ವಲ ಇವರ ರಾಜಧಾನಿಯಾಗಿತ್ತೆಂದು ಅಗಸ್ತ್ಯಮುನಿಗಳಿಂದ ನಾಶಹೊಂದಿದ ವಾತಾಪಿಯ ಈತ ಎಂದು ಇವರು ಹೇಳುತ್ತಾರೆ[೩].

ಕರ್ನಾಟಕದ ಕೀರ್ತಿಯನ್ನು ಬೆಳಗಿಸಲು ಬಹುಮುಖವಾಗಿ ಶ್ರಮಿಸಿದ ರಾಜ ಮನೆತನಗಳಲ್ಲಿ ಚಾಲುಕ್ಯರು ಪ್ರಮುಖರು. ಇಂದಿನ ಕರ್ನಾಟಕ ಮಾತ್ರವಲ್ಲದೇ ಅದರ ನಾಲ್ಕು ದಿಕ್ಕುಗಳಲ್ಲೂ ಇವರ ರಾಜ್ಯ ವಿಸ್ತಾರವಾಗಿ ಬೆಳೆದಿತ್ತು. ಸುಮಾರು ಏಳೂವರೆಶತಮಾನಗಳ ಕಾಲ ರಾಜಭಾರ ನಡೆಸಿದ ಈ ವಂಶ ಕಲೆ ಸಾಹಿತ್ಯಗಳಿಗೆ ಉತ್ತಮ ರೀತಿಯಲ್ಲಿ ಪೋಷಣೆ ಕೊಟ್ಟಿತು.

ಈ ಅಪೂರ್ವ ಸಾಧನೆಗೆ ಅತ್ಯುತ್ತಮ ಉದಾಹರಣೆ ಚಾಲುಕ್ಯ ಶಿಲ್ಪಿ ಮತ್ತು ವಾಸ್ತು ಶಿಲ್ಪ, ಗುಹಾಲಯ ಶಿಲ್ಪ, ಉತ್ತರದ ನಾಗರ ಶೈಲಿ, ದಕ್ಷಿಣದ ದ್ರಾವಿಡ ಸಂಪ್ರದಾಯ, ಈ ಮೂರರ ಪ್ರಭಾವವನ್ನು ಚಾಲುಕ್ಯ ಶಿಲ್ಪಿ, ವಾಸ್ತು ಶಿಲ್ಪಗಳಲ್ಲಿ ಕಾಣಬಹುದು. ಅದೇ ದೇವಾಲಯ ನಿರ್ಮಾಣದಲ್ಲಿ ಆರಂಭಿಕ ಪ್ರಯೋಗಗಳು ನಡೆದದ್ದು ಅವುಗಳ ವಿಕಾಸಕ್ಕೆ ಇಂಬು ದೊರೆತದ್ದು ಚಾಲುಕ್ಯ ಕಾಲದಲ್ಲಿಯೇ ಈ ಪ್ರಯೋಗಗಳ ಪ್ರಸಿದ್ಧ ಕ್ಷೇತ್ರಗಳೆಂದರೆ, ಐಹೋಳೆ, ಪಟ್ಟದಕಲ್ಲು, ಬಾದಾಮಿ.


ಚಾಲುಕ್ಯರ ಆಳ್ವಿಕೆಯನ್ನು ಪ್ರಧಾನವಾಗಿ ಎರಡು ಘಟ್ಟಗಳಲ್ಲಿ ಗುರುತಿಸಬಹುದು ಅವುಗಳಲ್ಲಿ ಮೊದಲನೆಯದು ಚಾಲುಕ್ಯರು ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಕಾಲ ಇನ್ನೊಂದು ಕಲ್ಯಾಣ ರಾಜಧಾನಿಯಾಗಿದ್ದ ಕಾಲ. ಚಾಲುಕ್ಯ ವಾಸ್ತುಶಿಲ್ಪ ಹುಟ್ಟಿದ್ದು ಆರಂಭ ಕಾಲದ ಬೆಳವಣಿಗೆಯನ್ನು ಕಂಡದ್ದು ಮೊದಲನೆಯ ಅವಧಿಯಲ್ಲಿ ಅಲ್ಲಿಂದ ಮುಂದೆ ಎರಡನೆಯ ಅವಧಿಯಲ್ಲಿಯೂ ಈ ಸಂಪ್ರದಾಯಕ್ಕನುಸಾರವಾಗಿ ಅನೇಕ ದೇವಾಲಯಗಳು ಕಟ್ಟಲ್ಪಟ್ಟವು. ಇಂತಹ ಸೃಷ್ಟಿಯ ಸೌಭಾಗ್ಯವನ್ನು ಕಂಡು ಮಿಣಜಗಿ ಮನೆತನವು ಸೊಲ್ಲಾಪೂರದಿಂದ ಬಿಜಾಪೂರಕ್ಕೆ ಬಂದು ನೆಲೆಸಿದರು, ಕಿರಾಣಿ ವ್ಯಾಪಾರದೊಂದಿಗೆ ದಲಾಲಿ ವ್ಯಾಪಾರವನ್ನು (ಕಮಿಷನ್ ಏಜೆಂಟ) ಸಹ ಬಿಜಾಪೂರದಲ್ಲಿ ಈ ಮನೆತನದವರು ನಿರ್ವಹಿಸುತ್ತಾ ಬಂದರು. ವ್ಯವಹಾರದಲ್ಲಿ ಅತ್ಯಂತ ಚತುರವಾದ ಅಷ್ಟೆ ಜಾಣ್ಮೆಯ ರೀತಿಯಲ್ಲಿ ವ್ಯವಹಾರವನ್ನು ನಿರ್ವಹಿಸುತ್ತ ಬಿಜಾಪೂರದಲ್ಲಿ ಗೌರವಾನ್ವಿತ ಮನೆತನವೆಂಬ ಹೆಸರು ಪಡೆದಿತ್ತು.

೩. ಜ್ಞಾನ ಗಂಗೋತ್ರಿ : ಸಂಪುಟ ೫ ಕಿರಿಯರ ವಿಶ್ವಕೋಶ, ಸಂಖ್ಯೆ - ೪೦೭.

[illegible]



ಮಿಣಜಗಿಯವರ ವಂಶಾವಳಿ



★ ಕಲಾವಿದರು





ಸಾಂಸ್ಕೃತಿಕವಾಗಿ ಬಿಜಾಪೂರವನ್ನುನಾವು ಅವಲೋಕಿಸಿದರೆ ಧಾರ್ಮಿಕ ಕ್ರಾಂತಿಗೆ ಕಾರಣಿಭೂತರಾಗಿ ಪರಿಣಮಿಸಿದ ಅಣ್ಣ ಬಸವಣ್ಣನವರು ಐಕ್ಯವಾದ ಶ್ರೇಷ್ಠ ಸ್ಥಳ ಕೂಡಲ ಸಂಗಮ, ಐಹೊಳೆ, ಪಟ್ಟದಕಲ್ಲು, ಶಿವಯೋಗ ಮಂದಿರ, ಪ್ರಮುಖ ಐತಿಹಾಸಿಕ ಸ್ಥಾನಗಳಾಗಿವೆ. ನದಿಗಳ ದೃಷ್ಟಿ ಅವಲೋಕಿಸಿದ್ದೇ ಆದರೆ ಮಲಪ್ರಭಾ, ಕೃಷ್ಣಾ, ಘಟಪ್ರಭಾ, ಡೋಣಿ, ತುಂಗಭದ್ರೆ ನದಿಗಳು ಪ್ರವಹಿಸಿದ ಪ್ರದೇಶ ಇದು. ಐತಿಹಾಸಿಕವಾಗಿ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಈ ಪ್ರದೇಶ ಅಂದಿಗೂ ಇಂದಿಗೂ ಆಕರ್ಷಣೀಯವಾದ ಕೇಂದ್ರವೆನಿಸಿ ನಿಂತಿದೆ. ವಿಶೇಷವಾಗಿ ಕಲಾಕೇಂದ್ರವಾಗಿ ಇದು ದೇಶ ವಿದೇಶಗಳ ಪ್ರವಾಸಿಗರನ್ನು ಅದರಲ್ಲಿಯೂ ಕಲಾವಿದರನ್ನುಕೈ ಮಾಡಿ ಕರೆಯುತ್ತಿದೆ. ಇಲ್ಲಿಯ ಶಿಲ್ಪಕಲೆ ಅಲ್ಲಲ್ಲಿ ಮಸಳಿಸಿ ನಿಂತಿರುವ ವರ್ಣ ಚಿತ್ರಕಲೆ ಕಲಾವಿದರ ಕಣ್ಣಿಗೆ ಹಬ್ಬವನ್ನುಂಟುಮಾಡಿರುವಂತೆ ಅನೇಕರಿಗೆ ಸ್ಫೂರ್ತಿಯನ್ನು, ಹುಮ್ಮಸ್ಸನ್ನು ನೀಡಿದ್ದು ಉಂಟು. ಪ್ರಾಕೃತಿಕವಾಗಿ ಅದೊಂದು ಅಪೂರ್ವವೆನಿಸಿದ ಪರಿಸರವೆನ್ನಬಹುದಾಗಿದೆ.

ಬಿಜಾಪೂರ ಇಷ್ಟು ಮಾತ್ರವಲ್ಲ, ಇನ್ನೂ ಅನೇಕ ಖ್ಯಾತ ಸಾಹಿತಿಗಳು, ಕಲಾವಿದರು, ಉದ್ದಿಮೆದಾರರು, ತಂತ್ರಜ್ಞರು, ಪತ್ರಿಕೋದ್ಯಮಿಗಳು, ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೂ ಬಿಜಾಪೂರಜಿಲ್ಲೆ ತವರೂರೆನಿಸಿದೆ. ಖ್ಯಾತ ಅಲಂಕಾರ ಕಲಾವಿದರು, ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ಸೃಜನ ಶೀಲ ಹಾಗೂ ಕ್ರಿಯಾತ್ಮಕತೆಗೆ ಖ್ಯಾತಿವೆನಿಸಿದ ಅಲಮೇಲಕರ, ವಚನ ಸಾಹಿತ್ಯದ ಪಿತಾಮಹ ಡಾ. ಪ.ಗು. ಹಳಕಟ್ಟಿ ಖ್ಯಾತ ಸಾಹಿತಿಗಳಾದ ಆದ್ಯ ರಂಗಾಚಾರ್ಯ, ಶ್ರೀ ಸ. ಸ. ಮಾಳವಾಡ, ಕೃಷ್ಣಮೂರ್ತಿ ಪುರಾಣಿಕ, ಬಾಲ್ಯ ಸಾಹಿತ್ಯದಲ್ಲಿ ತಮ್ಮದೇ ಆದ ಸಾಹಿತ್ಯವನ್ನು ಸೃಷ್ಟಿಸಿ ಹೆಸರು ಗಳಿಸಿದ ಸಿ.ಸು.ಸಂಗಮೇಶ, ಕಂಚ್ಯಾಣಿ ಶರಣಪ್ಪ ಪತ್ರಿಕೋಧ್ಯಮಿ, ಸ್ವಾತಂತ್ರ್ಯ ಹೋರಾಟಗಾರ ಡಾ. ಆರ್. ಆರ್. ದಿವಾಕರ, ಕರ್ನಾಟಕದಲ್ಲಿ ಕನ್ನಡ ಪತ್ರಿಕೆಗಳನ್ನು ಮನೆ ಮನೆಗೂ ತಲುಪಿಸಿದ ಮೊಹರೆ ಹನುಮಂತರಾಯರು, ಹುರ್ಡೇಕರ ಮಂಜಪ್ಪನವರು, ಮಳವೆಡೆ ಶ್ರೀನಿವಾಸರಾಯರು ಬಿಜಾಪೂರ ಜಿಲ್ಲೆಯವರು. ಹೀಗೆ ಕಲೆ ಸಾಹಿತ್ಯ ಸಾಂಸ್ಕೃತಿ ನಾಡಿನ ಐತಿಹಾಸಿಕ ತವರೂರೆನಿಸಿ ಸಂಗಮ ಸ್ಥಾನವೆಂದು ಹೆಸರು ಪಡೆದ ಬಿಜಾಪೂರದಲ್ಲಿಯೇ ಕಲಾವಿದ ಮಡಿವಾಳಪ್ಪ ಮಿಣಜಗಿಯವರು ಜನ್ಮ ವೆತ್ತಿದ್ದು ಒಂದು ವಿಶೇಷ ಯೋಗಾಯೋಗವೇ ಅನ್ನಬೇಕು. ಜನ್ಮ ಜಾತವಾಗಿ ಕಲೆ ಅವರಿಗೆ ಅಂಟಿಕೊಂಡು ಬಂದಿದ್ದರೆ ಅದು ಅಚ್ಚರಿಯೇನಲ್ಲ. ಈ ಬಗೆಯ ಪ್ರಾದೇಶಿಕ ಹಿನ್ನೆಲೆ ಪರಿಸರಗಳು ಬಾಲಕ ಮಾಡಿವಾಳಪ್ಪ ಮಿಣಜಗಿಯವರಲ್ಲಿ ಕಲಾ ಜೀವನಕ್ಕೆ ಉದ್ದೀಪನ ಪ್ರೇರಣೆ ನೀಡಿದ್ದರೆ ಅದು ತುಂಬಾ ಸ್ವಾಭಾವಿಕವೆನಿಸುವಂತದು.

ಅಜ್ಜ ಶರಣಪ್ಪನವರ ಕಿರಿಯ ಮಗ ವೀರಪ್ಪನವರೇ ಮಡಿವಾಳಪ್ಪನವರ ತಂದೆಯವರು ಮಡಿವಾಳಪ್ಪನವರು ೧೯೦೧ ಜನೇವರಿ ೩೦ ರಂದು ಬಿಜಾಪೂರ ಐತಿಹಾಸಿಕ ಪ್ರದೇಶದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪನವರ ಕುಟುಂಬವು ಬಹುದೊಡ್ಡ ಅವಿಭಕ್ತ ಕುಟುಂಬ ಒಂದೇ ಮನೆಯಲ್ಲಿ ಇವರೆಲ್ಲ ವಾಸಿಸುತ್ತಿದ್ದರು. ವಾಣಿಜ್ಯ ವ್ಯಾಪಾರದ ಸಲುವಾಗಿ ಅಲ್ಲಿಯ ಆಗು-ಹೋಗುಗಳ ಬಗ್ಗೆ ಸದಾ ಚಿಂತನೆಯುತ ಬದುಕನ್ನು ಸಾಗಿಸಲು ಇಂತಹ ಅವಿಭಕ್ತ ಕುಟುಂಬದಲ್ಲಿ ಕಕ್ಕಂದಿರು ಅವರ ಮಕ್ಕಳು ಹೀಗೆ ಎಲ್ಲರೂ ಸೇರಿಯೇ ಇರುತ್ತಿದ್ದರು.

ಕಲಾವಿದ ಮಡಿವಾಳಪ್ಪ ಬಾಲ್ಯಾವಸ್ಥೆಯ ಬದುಕಿನಲ್ಲಿಯೇ ಇರುವಾಗ ಮಡಿವಾಳಪ್ಪನವರ ತಾಯಿ ಶರಣವ್ವ ಮಗುವಿನ ಪ್ರೀತಿ, ವಾತ್ಸಲ್ಯವನ್ನು ಮಡಿವಾಳಪ್ಪನವರು ಚಿಕ್ಕವರಿರುವಾಗಲೇ ಗತಿಸಿದ್ದರಿಂದ ಇವರಿಗೆ ತಾಯಿಯ ವಾತ್ಸಲ್ಯದ ಕಲ್ಪನೆಗಳು ದೊರೆಯಲಿಲ್ಲ. ಮಿಣಜಗಿಯವರ ಕುಟುಂಬವು ಅವಿಭಕ್ತ



ಕುಟುಂಬವಾದ್ದರಿಂದ ಮಗುವಿನ ಪಾಲನೆ ಪೋಷಣೆಗೆ ಅಂತಹ ಯಾವ ತೊಂದರೆಯು ಕಂಡುಬರಲಿಲ್ಲ. ತಂದೆ ವೀರಪ್ಪನವರು ಅತ್ಯಂತ ಮೃದು ಸ್ವಭಾವವುಳ್ಳವರಾಗಿದ್ದರು. ಅಲ್ಲದೇ ತಂದೆಯ, ಪ್ರೀತಿ ಮಮತೆಯಿಂದ ಬೆಳೆಸಿದರು.

ಮಗನನ್ನು ಬಹಳ ಅಂತಃಕರಣದಿಂದ ನೋಡಿಕೊಂಡು ಜೋಪಾನವನ್ನು ಮಾಡಿದರು. ಮಡಿವಾಳಪ್ಪನವರಲ್ಲಿ ಕಂಡುಬರುತ್ತಿದ್ದ ಅಂತಃಕರಣ, ವಾತ್ಸಲ್ಯ ಆತ್ಮೀಯ ಭಾವಕ್ಕೆ ಬಹುಶಃ ಅವರು ಬೆಳೆದು ಬಂದ ಈ ಹಿನ್ನೆಲೆಯೇ ಬಹುಮಟ್ಟಿಗೆ ಕಾರಣವಾಗಿರಲು ಸಾಕು, ಇಂಥ ಪರಿಸರದಲ್ಲಿ ಬಾಲ್ಯವನ್ನು ಕಳೆದರು, ಅವರು ಯಾವುದೇ ಹುಡುಗಾಟಿಕೆಯಲ್ಲಿ ದಿನಗಳನ್ನು ಕಳೆಯುತ್ತಿರಲಿಲ್ಲವೆಂಬುದಾಗಿತ್ತು. ಮನೆಯಲ್ಲಿ ಅವಿಭಕ್ತ ಕುಟುಂಬವಾದ್ದರಿಂದ ಮನೆ ತುಂಬ ಮಂದಿ, ಮಕ್ಕಳಿದ್ದರೂ ಏಕಾಂಗಿತನ ಇವರಿಗೆ ಬಹಳವಾಗಿ ಸೇರುತ್ತಿತ್ತಂತೆ. ಅಂತೆಯೇ ಕಲಾವಿದನಾದವನು ತನ್ನ ಜೀವನದಲ್ಲಿ ಏಕಾಗ್ರತೆಯನ್ನು ಕಾಪಾಡಿಕೊಳ್ಳುವ ದಾರಿಯು ಸುಗಮವಾಗುತ್ತದೆ. ಅನೇಕ ಬಾರಿ ಏಕಾಂಗಿತನದಿಂದ ಮಡಿವಾಳಪ್ಪನವರು ಇದ್ದಾಗ ಅಥವಾ ಎಲ್ಲೆಲ್ಲಿಯೋ ಹೋದ ಸಂದರ್ಭದಲ್ಲಿ ಚಿತ್ತಾಕ್ರಾಂತದಲ್ಲಿ ಮರೆತು ಹೋದಾಗ ತಂದೆ ಮಗನನ್ನು ಎಷ್ಟೊ ಬಾರಿ ಹುಡಕಿಕೊಂಡು ಮನೆಗೆ ಕರೆದುಕೊಂಡು ಬಂದುದು ಉಂಟಂತೆ[೪]. ಕಾರಣ ತಾಯಿಯ ಮಮತೆಯನ್ನು ಚಿಕ್ಕವನಿರುವಾಗಲೇ ಕಳೆದುಕೊಂಡಾಗ ಮಗುವು ಪ್ರೀತಿ, ವಾತ್ಸಲ್ಯವನ್ನು ಗಳಸದೇ ಇರುವಾಗ ಏಕಾಂಗಿತನವೇ ಅನ್ಯ ಮಾರ್ಗವೆಂದು ಬಯಸುವಂತಾಗುತ್ತದೆ. ಹಾಗೆ ಮಡಿವಾಳಪ್ಪನ ಬಾಲ್ಯ ಜೀವನ ತಿರುಗಾಡುತ್ತಾ ಆಗಿನ ಪರಿಪಾಠದಂತೆ ಇವರು ಬಿಜಾಪೂರದಲ್ಲಿ ಬಾಂಬೆ ಸರಕಾರವು ತೆರವು ಮಾಡಿದ್ದ ಸರಕಾರಿ ಮರಾಠಿ ಪ್ರಾಥಮಿಕ ಶಾಲೆ ಸೇರಿದರು.

ಅಧ್ಯಯನದಲ್ಲಿ ಯಾವಾಗಲೂ ಅವರು ಹಿಂದುಳಿದವರಲ್ಲ. ಮಡಿವಾಳಪ್ಪನವರು ಗುರುವಿನ ಅತೀ ಮೆಚ್ಚಿನ ಶಿಷ್ಯರಾಗಿದ್ದರು. ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಸಹಿತ ಬಿಜಾಪೂರದ ಸರಕಾರಿ ಹೈಸ್ಕೂನಲ್ಲಿಯೇ ಇವರು ವಿದ್ಯಾಭ್ಯಾಸ ಮಾಡಿದರು. ಬೆಳೆವ ಸಿರಿ ಮೊಳಕೆಯಲ್ಲಿ ನೋಡಾ[೫] ಎನ್ನುವಂತೆ ಬಾಲ್ಯದಲ್ಲಿಯೇ ಮಿಣಜಗಿಯವರು ಕಲಾಪ್ರತಿಭೆ ಪ್ರದರ್ಶಿಸಿ ಗೆಳೆಯರ, ಗುರುಗಳ ಗಮನ ಸೇಳೆದರು, ಬಿಜಾಪೂರ ಶಿಲ್ಪಕಲಾ ಕೃತಿಗಳು ಈ ವೈವಿಧ್ಯತೆಯ ಬಗೆಬಗೆಯ ಆಸಕ್ತಿಗಳಿಗೊಂದು ಕಾರಣವಾಗಿದ್ದವು. ಅನೇಕ ಮಕ್ಕಳ ಕೈಗಳು ನಾವು ಕಾಗದ, ಬಣ್ಣ, ಕುಂಚ, ಪೆನ್ಸಿಲ್ ಮೊದಲಾದ ಸಾಮಗ್ರಿ ಕೊಟ್ಟರೆ ಅವರಲ್ಲಿ ಕೆಲವರು ಯಾವ ಪೂರ್ವ ಶಿಕ್ಷಣವೂ ಇಲ್ಲದೇ ಕೊಟ್ಟ ಕಾಗದದ ಮೇಲೆ ಏನೇನೋ ಗೆರೆಗಳನ್ನು ಬರೆದು ಬಣ್ಣ ಸವರಿ ತುಂಬಾ ತೃಪ್ತಿಕರವಾದ ಚಿತ್ರ ಸೃಷ್ಟಿಮಾಡುವುದನ್ನು ಕಾಣುತ್ತೇವೆ[೬]. ಕಲೆ ಸ್ವಭಾವಜನ್ಯವಾದ ಒಂದು ಗುಣವಾಗಿದ್ದು ಅದನ್ನು ಬೆಳೆಯಿಸಿಸುವ ವಾತಾವರಣವಿದ್ದರೆ ಅದು ಬೆಳೆಯುತ್ತದೆ.

ಇಂಥದೊಂದು ವಿಶಿಷ್ಟವಾದುದ್ದನ್ನೇನಾದರೂ ತಾವು ಸಾಧಿಸಿ ತೋರಿಸಬೇಕೆ ಎಂಬ ಬಯಕೆ ಕೂಡ ಸ್ವಾಭಾವಿಕವಾಗಿ ಮೂಡಿನಿಲ್ಲುತ್ತಿತ್ತು. ಹೊಸ ಹೊಸ ಸೃಷ್ಟಿಗಳನ್ನು ಮಾಡುವುದು ಮಾನವನ ಸ್ವಭಾವ ಗುಣಗಳಲ್ಲಿ ಸಾಕಷ್ಟು ಪ್ರಭಾವಶಾಲಿಯಾದ ಒಂದು ಗುಣವಾಗಿದೆ. ಸಾಮಾನ್ಯವಾಗಿ ಎಲ್ಲರಲ್ಲೂ ಈ ಬಗೆಯ ಸೃಜನ ಶೀಲತೆ ಇದೆ. ಅದನ್ನು ನಾವು ಬೆಳೆಯಗೊಡುವದಿಲ್ಲ ಎಂಬ ಅಭಿಪ್ರಾಯ ಆಧುನಿಕ ಮನಶಾಸ್ತ್ರಜ್ಞರದು. ಅವರ

---

೪. ಶ್ರೀ ಶಂಕರ ಪಾಟೀಲ ; ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ - ೩.

೫. ಶ್ರೀ ಗವೀಶ ಹಿರೇಮಠ. ಡಾ. ಎಂ.ವ್ಹಿ. ಮಿಣಜಗಿ. ಪುಟ-೮

೬. ಡಾ. ಶಿವರಾಂ ಕಾರಂತ : ಕಲಾ ಪ್ರಪಂಚ, ಪುಟ - ೨೫.

[illegible]



ಮಾನವರಲ್ಲಿಯ ಸೃಜನಶೀಲತೆಯನ್ನು ಎಂದರೆ ತಮ್ಮೊಳಗನ ಭಾವನೆಗಳನ್ನು ಕಲಾಕೃತಿಗಳ ಮೂಲಕ ಅನ್ಯರಿಗೆ ತೋರಿಸಿ ಕೊಡಬಲ್ಲ ಗುಣವನ್ನು ಗುರುತಿಸಿದ್ದಾರೆ. ೧೯೧೦-೨೦ ರ ಆ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ತಿಲಕರ ಪ್ರೇರಣೆಯಿಂದ ಗಣೇಶೋತ್ಸವವನ್ನು ಅತೀ ವಿಜೃಂಭಣೆಯಿಂದ ಸಾಂಸ್ಕೃತಿಕ ಹಬ್ಬವಾಗಿ ಆಚರಿಸುವುದು ಪ್ರಾರಂಭವಾಗಿತ್ತು[೭]. ಕ್ರಮೇಣ ಅದು ಉತ್ತರ ಕರ್ನಾಟಕ (ಬಾಂಬೆ ಪ್ರಾಂತ್ಯಕ್ಕೂ ವಿಸ್ತರಿಸಿತು) ಈ ಉತ್ಸವವನ್ನು ಕಲಾತ್ಮಕವಾಗಿ ಆಚರಿಸುವುದು ರೂಢವಾಗಿತ್ತು. ಅನೇಕ ರೀತಿಯ ವೈವಿಧ್ಯಮಯ, ಚಿತ್ತಾಕರ್ಷಕವಾದ, ನಾನಾ ರೀತಿಯಲ್ಲಿ ಕಮಾನುಗಳಲ್ಲಿ, ಹೂ, ಎಲೆ, ಬಳ್ಳಿ, ಗಿಳಿ, ಆನೆ, ಪ್ರಾಣಿ, ಪಕ್ಷಿಗಳ ಹಾರಾಟದ ವಿವಿಧ ಬಗೆಯ ಚಿತ್ರಗಳನ್ನು ಕಮಾನು ತಯಾರಿಸಿ ಅದರಲ್ಲಿಯ ಈ ನೋಟಗಳನ್ನು ಒಳಗೊಳ್ಳುವಂತೆ ತಯಾರಿಸುತ್ತಿದ್ದರು. ಹರ್ಬಟ್ ರೀಡ ಹೇಳುವಂತೆ " the sence are acquiring skill ti the doing "[೮] ಆದರೆ ನಿಜವಾದ ಕಲಾವಿದನಿಂದ ಕಲಿತಾಗ ಅದ್ಭುತ ಸ್ಥಿತಿ ವಿದ್ಯಾರ್ಥಿಗೆ ಬರಬಹುದು [೯]ಅದೇ ರೀತಿಯಲ್ಲಿ ಪೇಪರ ಮೂಲಕ ಸ್ಥಂಭಗಳ ನಿಯೋಜನೆ ಅವುಗಳಲ್ಲಿ ಹೂವುಗಳನ್ನು ಕತ್ತರಿಸುವುದು ಹಾಗೂ ವಿವಿಧ ಬಗೆಬಗೆಯಲ್ಲಿ ಕಂಡು ಬರುವ ಕ್ರಿಯಾತ್ಮಕತೆ ಅನೇಕ ರೀತಿಯ ಅಲಂಕಾರಗಳು ಬಾಲಕ ಮಾಡಿವಾಳಪ್ಪರನ್ನು ಸಹಜವಾಗಿ ಆಕರ್ಷಿಸುತ್ತಿದ್ದವು.

ನಿರೂಪಿಸುವ ವಿಷಯವೇ ಹೊಸತಾದರೆ, ಹೊಸ ತಂತ್ರವೇ ಸೃಷ್ಟಿಗೊಳ್ಳಬೇಕಾಗುತ್ತದೆ,[೧೦] ಆ ದಿನಗಳಲ್ಲಿ ತುಂಬಾ ಕುತೂಹಲದಿಂದ ಅವರು ಎಲ್ಲ ಗಣಪತಿ ಉತ್ಸವಗಳನ್ನು ಕಾಣಲು ತಿರುಗಾಡುವದು, ಅಲ್ಲಿರುವ ವಿವಿಧ ಕಲಾವಿದರು ರಚಿಸಿದ ಅಲ್ಲಿ ಹುದುಗಿರುವ ಕಲಾತ್ಮಕತೆಯನ್ನು ಚುರುಕು ಕಣ್ಣುಗಳಿಂದ ನಿರೀಕ್ಷಿಸುವದು ರೂಢಿಯಾಗಿತ್ತು.

ಕಲಾ ಸೃಷ್ಟಿ ಮತ್ತು ಕಲಾನುಭವದಲ್ಲಿ ತನ್ನೊಳಗಿನ ಒತ್ತಡದ ಪ್ರವೃತಿಯಿಂದ ಸಕ್ರೀಯವಾಗಿ ತೊಡಗಿಕೊಳ್ಳುವದರ ಫಲವಾಗಿ ಆನಂದವನ್ನು ಪಡೆಯುವದೇ ಕಲಾವಿದನೊಬ್ಬನ ಮುಖ್ಯ ಉದ್ದೇಶ [೧೧]ಬಹುಶಃ ಅವರಲ್ಲಿಯೂ ಕಲಾಪ್ರಜ್ಞೆ ಅವರಿಗೆ ತಿಳಿಯದಂತೆಯೇ ಮೂಡಿ ಬರುತ್ತಿದ್ದ ಕಾಲವದು. ಇಂತಹ ಯಾವ ಪ್ರಸಂಗವನ್ನು ಅವರು ಸಹಸಾ ತಪ್ಪಿಸಿಕೊಳ್ಳುತ್ತಿರಲಿಲ್ಲ. ಮನದನಿ ನೋಡಿ ನಲಿಯುವುದು ಮಾತ್ರವಲ್ಲ ಇಂತಹುದನ್ನು ಹೇಗೆ ಮಾಡಬಹುದು ಎಷ್ಟು ಚೆನ್ನಾಗಿ ರೂಪಿಸಲು ಸಾಧ್ಯವಾಗರಬಹುದು ಎಂಬುವುದನ್ನು ಕೂಡ ಅವರ ಮನಸ್ಸು ಕನವರಿಸುತ್ತಿತ್ತು. ಇಂತಹ ಸನ್ನಿವೇಶಗಳು ಈ ಬಾಲಕಲಾವಿದನಿಗೆ ತುಂಬಾ ಪ್ರೇರಣೆ ನೀಡಿದವು. ಕಲೆ, ಅಭಿರುಚಿ, ಸಂಸ್ಕಾರ, ಸಮಾಜ ಇವು ಹೆಚ್ಚು ನಿಗೂಢವಾಗುತ್ತಾ ಸಾಗುವ ಅನಿರ್ಧಿಷ್ಟ[೧೨]. (Amdiguous) ಪದಗಳು.

---

೭. Shri Revansiddayya Hanneradumath,: Dr. Minajigi the Artist & the man, Page -4.
೮. Herbart Read : Education through Art, 1958.
೯. Maurice Grosser : The Painters Eye, Page - 143.
೧೦. ಡಾ. ಶಿವರಾಂ ಕಾರಂತ : ಕಲಾ ಪ್ರಪಂಚ, ಪುಟ - ೨೮.
೧೧. ಶ್ರೀ ಕೆ.ವ್ಹಿ. ಸುಬ್ರಮಣ್ಯ : ಕಲಾ ಸಂವೇದನೆಯ ಒಳನೋಟಗಳು, ಪುಟ - ೪೭.
೧೨. ಶ್ರೀ ಎನ್. ಮರಿಶಾಮಾಚಾರ್ : ಕಲಾಚೇತನ, ಪುಟ - ೨೭.



ನಮ್ಮ ಸಂಸ್ಕೃತಿಯು ಉದಯಕಾಲದಿಂದಲೂ ಒಳಗೊಳಗೆ ಹುದುಗಿದ್ದ ಸೌಂದರ್ಯ ಪ್ರಜ್ಞೆ ಕಲಾ ಮಾಧ್ಯಮದಲ್ಲಿ ಹೊರ ಹೊಮ್ಮುತ್ತ ಬರುತ್ತಿದೆ[೧೩]. ಪ್ರಾಚೀನ ದೇವಸ್ಥಾನವಾದ ಬಿಜಾಪೂರದ ಸಿದ್ಧೇಶ್ವರ ದೇವಾಲಯವು ಬಹು ಮನೋಹರವಾಗಿಯೂ, ಅತಿರಮ್ಯವಾಗಿಯೂ ಆಗಿದೆ. ದೇವಸ್ಥಾನದಲ್ಲಿ ಕೇವಲ ಇಲ್ಲಿಯ ಶಿಲ್ಪ ಮಾತ್ರವಲ್ಲ ಒಳಗಿನ ಮೂರ್ತಿಯ ವಿನ್ಯಾಸ, ವರ್ಣ ವೈಶಿಷ್ಟ್ಯ ಕಂಗಳಿಗೆ ಹಬ್ಬವನ್ನುಂಟು ಮಾಡುವಂತವು.

ಬಾಲಕ ಮಡಿವಾಳಪ್ಪನವರು ಈ ದೇವಸ್ಥಾನಕ್ಕೆ ಬಂದಾಗಲೆಲ್ಲಾ ಈ ದೇವಾಲಯದ ಸ್ಥಂಬ, ಕಮಾನು ಶಿಲ್ಪಗಳನ್ನು ಒಂದೇ ಚಿತ್ತದಿಂದ ತಾಸುಗಟ್ಟಲೇ ನಿಂತು ವೀಕ್ಷಿಸುತ್ತಿದ್ದನು. ಇದು ಇವನ ವಾಡಿಕೆಯಾಗಿತ್ತು. ಓರ್ವ ಉಪಾಸಕನ ದೃಷ್ಟಿಕೋನದಿಂದಲೇ ಮಡಿವಾಳಪ್ಪ ಅವನ್ನು ವೀಕ್ಷಿಸುತ್ತಿದ್ದರು. ಈ ವರ್ಣ ಮಯ ಸಂಯೋಜನೆ ಮತ್ತು ಆಕಾರ ವಿನ್ಯಾಸಗಳು ಅವರ ಮೇಲೆ ಆಗಾಧವಾದ ಪರಿಣಾಮವನ್ನು ಬೀರಿದ್ದವು. ಅವನ್ನು ಎಷ್ಟು ನೋಡುತ್ತಾ ನಿಂತರೂ ದಣಿವೆನಿಸುತ್ತಿರಲಿಲ್ಲ. ಕಣ್ಣುಗಳನ್ನು ಅಲ್ಲಿಂದ ಕೀಳುವುದೆಂದರೆ ಅವರಿಗೆ ಬೇಸರದ ವಿಷಯವೆನಿಸುತಿತ್ತು. ಅವರ ಹಿರಿಯರಿಗೂ ಕೂಡ ಬಾಲಕನ ಈ ಮುಗ್ಧತೆ ಬಹು ಮೋಜಿನದೆನಿಸುತ್ತಿತ್ತು. ಎಳೆಯ ಸಿರಿಯ ಬೆಳೆಯನ್ನು ಮೊಳಕೆಯಲ್ಲಿ ನೋಡು ಎಂಬಂತೆ ಈ ಬಾಲಕನಲ್ಲಿ ಆಗಲೇ ಕಲೆಯ ಮೊಳಕೆ ಬಲವಾಗಿ ಮೂಡಿನಿಂತಿದ್ದು ಈಗ ಸ್ಪಷ್ಟವಾಗಿದ್ದಿತು. ಹೀಗೆ ಅವರಲ್ಲಿ ಬೆಳೆದು ನಿಂತ ಕುತೂಹಲ ಶಾಲೆಯಲ್ಲಿ ಅವರನ್ನು ಕಲಾವಿದ್ಯಾರ್ಥಿಯನ್ನಾಗಿಸಿತ್ತು. ಅವರಿಗೆ ತಿಳಿಯದೆಯೇ ಅವರು ಉತ್ತಮ ಕಲಾಕಾರರಾಗಿ ರೂಪಗೊಂಡಿದ್ದರೆಂಬುದು ಒಂದು ಸಂದರ್ಭದಲ್ಲಿ ಸ್ಪಷ್ಟವಾಗಿ ಅರಿವಿಗೆ ಬಂದಿತು. ಕಣ್ಣು ಮತ್ತು ಚಿಂತನೆಗಳ ದೃಷ್ಟಿಯಲ್ಲಿ ನೈಜಕತೆ (Originality) ಇಲ್ಲದ ವಿದ್ಯಾರ್ಥಿಗಳು (Original) ಆದ ಸೃಷ್ಟಿಗಳನ್ನು ರೂಢಿಸುವುದು ಅಸಾಧ್ಯ[೧೪]. ಒಳ್ಳೆಯ ಪರಿಸರದಿಂದ ಒಬ್ಬ ಕಲಾವಿದನಾಗಲು ಸಾಧ್ಯವೆಂಬುವುದನ್ನು ಒಪ್ಪಿಕೊಂಡರೆ ಆ ಪರಿಸರ ಎಂಥದ್ದು ಇರಬೇಕು ಎನ್ನುವುದನ್ನು ತಿಳಿಯುವುದು ಮುಖ್ಯವಾಗುತ್ತದೆ. ಪರಂಪರೆ ನಮಗೆ ಕಲೆಯನ್ನು ಕೊಟ್ಟಿದೆ ಎನ್ನುವುದಾದರೆ ನಮ್ಮ ತಂದೆ-ತಾತಂದಿರು ನಮಗೆ ಮೊದಲ ಗುರುಗಳಾಗುತ್ತಾರೆ. ಒಲವು ಇರದೇ ಹೋದರೂ ಅನಿವಾರ್ಯವಾಗಿ ಉದರ ಪೋಷಣೆಗಾಗಿ ತಮ್ಮ ಹಿರಿಯರ ವೃತ್ತಿಯನ್ನು ಕೆಲವರು ಅನುಸರಿಸುತ್ತಾರೆ. ಅಂಥವರು ತಂದೆ ಮಾಡಿದ್ದನ್ನೇ ಮುಂದುವರೆಸಿಕೊಂಡು ಬರುತ್ತಾರೆ. ಇದು ಕೇವಲ ನಕಲು ಅಥವಾ ಪ್ರಕೃತಿ ಮಾತ್ರ ಅದರಲ್ಲಿ ಒಳ್ಳೆಯ ಕಲೆಯ ಲಕ್ಷಣಗಳನ್ನು ಕಾಣಬಹುದು. ಆದರೆ ಇದು ಅವನ ಕೃತಿ ಎಂತಲೂ ಅಲ್ಲ. ಕೇವಲ ಸಂಪ್ರದಾಯಿಕವಾಗಿ ಬಂದದ್ದು ಅದರಲ್ಲಿ ಕೌಶಲ್ಯ ಮಾತ್ರ ಕಾಣಬಹುದು ಆದರೆ ಸೃಜನಶೀಲತೆ ಕಾಣದು[೧೫].

ಕಲೆಯ ಮುಖ್ಯ ಉದ್ದೇಶ ಸೌಂದರ್ಯ ಸೃಷ್ಟಿ ತನ್ಮೂಲಕ ನೋಡುಗನಲ್ಲಿ ಸೌಂದರ್ಯಾನುಭಾವ ಉಂಟು ಮಾಡುವುದು ಒಂದು ಸುಂದರವಾದ ನಿಗರ್ಸ ದೃಶ್ಯವನ್ನು ನೋಡಿದಾಗ ಅಲ್ಲಿರುವ ರಮ್ಯತೆಯನ್ನು ವರ್ಣವೈಭವವನ್ನು ಮೆಚ್ಚಿಕೊಂಡು ಅದು ಒದಗಿಸುವ ಸೊಗಸಿನಲ್ಲಿ ತಲ್ಲೀನವಾಗಬೇಕಾದುದು ಯಾವುದೇ ಕಲಾಸಕ್ತನ ಮೊಟ್ಟಮೊದಲ ಕೆಲಸ[೧೬].

---

೧೩. ಡಾ. ಎಸ್.ಸಿ. ಪಾಟೀಲ (ಸಂ) : ಚಿತ್ರಾಕ್ಷಿ, (ಲೇ) ಪ್ರೊ. ರಘುನಾಥ ಭಟ್ ಎಚ್. ಆರ್. ಪುಟ - ೪೧.
೧೪. ಶ್ರೀ ಕೆ.ವ್ಹಿ. ಸುಬ್ರಮಣ್ಯ : ಕಲಾ ಸಂವೇದನೆಯ ಒಳನೋಟಗಳು, ಪುಟ - ೩೩.
೧೫. ಡಾ. ಎಸ್.ಸಿ. ಪಾಟೀಲ (ಸಂ) : ಚಿತ್ರಾಕ್ಷಿ, ಪುಟ - ೩೧.
೧೬. ಚಿ.ಸು. ಕೃಷ್ಣ ಶೆಟ್ಟಿ : ದೃಶ್ಯಕಲೆ ಎಂದರೇನು ?, ಪುಟ - ೧೭.

[illegible]



ಹೈಸ್ಕೂಲ್‌ದಲ್ಲಿರುವಾಗ ಒಂದು ಘಟನೆ : ಮಿಣಜಗಿಯವರಿಗೆ ಯಾವಾಗಲೂ ತುಂಬ ಅಚ್ಚರಿಯುಂಟು ಮಾಡುತ್ತಿತ್ತು. ಕ್ಲಾಸಿನಲ್ಲಿ ಶಿಕ್ಷಕರು ಪಾಠವನ್ನು ಹೇಳತೊಡಗಿದ್ದರು. ಎಲ್ಲ ವಿದ್ಯಾರ್ಥಿಗಳು ಭಯಭಕ್ತಿಯಿಂದ ತುಂಬ ಆಸಕ್ತಿಯಿಂದ ಅದನ್ನು ಆಲಿಸುತ್ತಿದ್ದರು. ಆದರೆ ವರ್ಗದಲ್ಲಿ ಒಮ್ಮೆಲೇ ಗಲಭೆಯಾಗತೊಡಗಿತು. ಶಿಕ್ಷಕರು ತಮ್ಮ ಪಾಠವನ್ನು ನಿಲ್ಲಿಸಿದರು, ಇದೇನೆಂದು ವೇದಿಕೆಯಿಂದ ಕೆಳಗೆ ಇಳಿದು ಬಂದರು. ವಿದ್ಯಾರ್ಥಿ ಪಾಠ ಕೇಳುವ ಬದಲು ತಮ್ಮ ಮುಂದಿನ ಸಾಲಿನಲ್ಲಿ ಕುಳಿತ ವಿದ್ಯಾರ್ಥಿಯೊಬ್ಬನ ರೇಖಾಚಿತ್ರವನ್ನು ಬರೆದಿದ್ದರು. ಆ ಚಿತ್ರದಲ್ಲಿ ವಿದ್ಯಾರ್ಥಿಯದು ಡೊಣ್ಣೆ ಮೂಗಿತ್ತು. ಮಿಣಜಗಿಯವರು ಬಳಿ ಕುಳಿತಿದ್ದ ವಿದ್ಯಾರ್ಥಿಗಳು ಅದನ್ನು ಕಂಡು ನಗೆ ತಡೆಯಲಾರದೇ ನಕ್ಕು ಬಿಟ್ಟಾಗ ಇತರ ವಿದ್ಯಾರ್ಥಿಗಳ ಚಿತ್ತವು, ಮನಸ್ಸು ಇತ್ತ ಹೊರಳಿತು. ಚಿತ್ರದಲ್ಲಿ ಮೂಡಿನಿಂತ ವಿದ್ಯಾರ್ಥಿಯೂ ಅತ್ತ ವೀಕ್ಷಿಸಿದ, ಪಾಪ ಇನ್ನು ಸಣ್ಣವನಲ್ಲವೇ? ಚಿತ್ರದ ಕುರಿತು ಅವನಿಗೇನು ಅರ್ಥವಾಗಬೇಕು, ತನ್ನ ಮೂಗನ್ನು ದೊಡ್ಡದಾಗಿ ಚಿತ್ರಿಸಿ ತನ್ನನ್ನು ಅಂದಗೇಡಿ ಮಾಡಿದ್ದಾರೆಂದು ಮಿಣಜಗಿಯವರ ಮೇಲೆ ಅವನಿಗೆ ತುಂಬ ಕೋಪ. ಆದರೆ ಅದನ್ನು ವ್ಯಕ್ತಪಡಿಸುವಂತಿರಲಿಲ್ಲವಲ್ಲ. ಅಸಹಾಯಕನಾಗಿ ಅಳತೊಡಗಿದ, ಹೀಗಾಗಿ ಗದ್ದಲವಾಗತೊಡಗಿತು. ಶಿಕ್ಷಕರು ಬಂದು ಚಿತ್ರವನ್ನು ನೋಡಿದರು. ಬಾಲಕ ಮಿಣಜಗಿಯವರು ಬರೆಯುವಾಗ ಏನು ಅನ್ನಿಸಿಕೊಳ್ಳದೆ ಚಿತ್ರವನ್ನು ಬರೆದು ಬಿಟ್ಟಿದ್ದರು. ಈ ಗದ್ದಲವನ್ನು ನೋಡಿ ತುಂಬ ಗಾಬರಿಯಾದರು . ಶಿಕ್ಷಕರು ಏನನ್ನುವರೋ ಎಂಬ ಭೀತಿ ಅವರನ್ನು ಕಾಟಿತು. ಆದರೆ ತಮ್ಮದು ಇದರಲ್ಲಿ ಅಂತಹ ತಪ್ಪು ಇದೆಂದು ಅವರಿಗನ್ನಿಸಿರಲಿಲ್ಲ. ಏನೋ ಮನದಲ್ಲಿ ಭಾವನೆ ಮೂಡಿ ಬಂದಿತ್ತು, ತಮ್ಮೆದುರು ಕುಳಿತಿದ್ದ ಸಹವಿದ್ಯಾರ್ಥಿಯನ್ನು ನೋಡಿದವರೇ ಆ ಚಿತ್ರವನ್ನು ಬರೆದು ಬಿಟ್ಟಿದ್ದರು.

ಕಲೆಯ ಕಡೆಗೆ ಒಲವು ಇದ್ದು ಕಲಾವಿದನಾಗಬೇಕೆಂಬ ಹಂಬಲದಿಂದ ಪ್ರಯತ್ನದಲ್ಲಿ ತೊಡಗುವವರು ಇನ್ನೊಂದು ಬಗೆಯವರು. ಅವರು ಪರಿಸರವನ್ನು ಹುಡಿಕಿಕೊಂಡು ಹೋಗುವಂತವರು, ಅಂಥವರು ಅಧ್ಯಯನಶೀಲರು. ಸಂಪ್ರದಾಯಗಳ ಬಗ್ಗೆ ತಿಳಿದುಕೊಂಡು ಅಂಥದ್ದೆ ನಕಲುಗಳನ್ನು ಮಾಡುತ್ತಾ ಸಮಾಧಾನ ಸಿಗದೇ ಹೊಸದನ್ನು ಸೃಷ್ಟಿಸುವ ಕಡೆಗೆ ಗಮನ ಹರಿಸುವವರು. ಕೌಶಲ್ಯವನ್ನು ಕರಗಮಾಡಿಕೊಂಡು ಮುಂದೆ ಹೋಗಬೇಕೆನ್ನುವ ಮನೋಭಾವದವರು. ಹೊಸ ಹೊಸ ವಿಷಯಗಳತ್ತ ಆಸಕ್ತಿ ಹೊಂದಿ ಅನೇಕ ವಿಚಾರಗಳನ್ನು ತಿಳಿಯಬಯಸುವವರು. ಇಂಥವರು ಬುದ್ಧಿವಂತರ ಸಾನಿಧ್ಯ ಬಯಸುವಂಥವರು.[೧೭] ಕಲಾವಿದ ಲೋಕವಸ್ತುವನ್ನು ಕಲಾಕೃತಿಯನ್ನಾಗಿ ಮಾಡಿ, ನೀಡುವಲ್ಲಿ ಈ ಒಂದು ದೂರದಲ್ಲಿ ನಿಲ್ಲಿಸಿಕೊಡದೇ ಹೋದಲ್ಲಿ ದೂರಭಂಗ ವಾಗಿ ರಸಾನುಭವಕ್ಕೆ ಚ್ಯುತಿ ಒದಗುತ್ತದೆ. ಆದಕಾರಣ ಯಾವ ಒಂದು ನೆಲೆಯಲ್ಲಿ ಕಲಾಕೃತಿಯಿಂದಾಗಲಿ, ಲೋಕವಸ್ತುವಿನಿಂದಾಗಲಿ ನಾವು ಸೌಂದರ್ಯಾನುಭವವನ್ನು ಪಡೆಯಲು ಸಾಧ್ಯವೋ ಅಂತಹ ಒಂದು ನಿಲುವಿನಲ್ಲಿ ನಮ್ಮನ್ನು ಹಾಗೂ ವಸ್ತುವನ್ನು ನಿಲ್ಲಿಸಿಕೊಳ್ಳುವ ಈ ಕೌಶಲವೇ ಮಾನಸಿಕ ದೂರ [೧೮] ಕಲೆ ಎನ್ನುವುದೇನಿದ್ದರೂ ಅತೀತದ ನೇರವಾದ ದರ್ಶನವನ್ನು ಮಾಡಿಸುವ ವಿಧಾನ [೧೯] ಯಾವುದೇ ಕಲಾಕೃತಿಯನ್ನು ಕಂಡು ಒಬ್ಬ ಪ್ರೇಕ್ಷಕನ ಮನಸ್ಸು ಹೇಗೆ ಮಿಡಿಯಬಹುದು, ಆ ವಿಷಯದಲ್ಲಿ ಅವನಿಗಿರುವ ಪೂರ್ವಾನುಭವಗಳಿಂದ ರೂಪಿತವಾಗುತ್ತದೆ.[೨೦]

---

೧೭. ಡಾ. ಎಸ್.ಸಿ. ಪಾಟೀಲ (ಸಂ): ಚಿತ್ರಾಕ್ಷಿ, ಪುಟ - ೩೨.
೧೮. Education Bullough : Aesthetics : Lecturer and Essays, Page -129.
೧೯. E.F. Carrit : Philosophy of Beauts, Page -207.
೨೦. ಶಿವರಾಂ ಕಾರಂತ : ಕಲಾ ಪ್ರಪಂಚ, ಪುಟ - ೪.

[illegible]



ಚಿತ್ರಕಲೆಯಲ್ಲಿ ಅವರಿಗಿದ್ದ ಅಭಿರುಚಿಗೆ ಆಸಕ್ತಿಗೆ ಆ ಚಿತ್ರವು ನಿದರ್ಶನವೆನಿಸಿದ್ದಿತು. ಶಿಕ್ಷಕರು ತುಂಬ ಕುತೂಹಲದಿಂದ ಮತ್ತು ಅಷ್ಟೇ ಆಸಕ್ತಿಯಿಂದ ಆ ಚಿತ್ರವನ್ನು ಪರಿಶೀಲಿಸಿದರು ವಿದ್ಯಾರ್ಥಿಗಳ ತುಂಬ ಗದ್ದಲಕ್ಕೆ ಕಾರಣವಾಗಿದ್ದ ಆ ಚಿತ್ರದ ರೇಖೆಗಳು ಸ್ಪುಟವಾಗಿದ್ದವು, ವಿಧ್ಯಾರ್ಥಿಯ ಕುಶಲತೆಗೆ ಅದು ಅವನಿಗೆ ಉತ್ತೇಜನಕಾರಿಯಾಗಿತ್ತು, ಪ್ರೋತ್ಸಾಹವಾಗಿತ್ತು. ಮಿಣಜಗಿಯವರಿಗೆ ಈ ಘಟನೆ ಮರೆಯಲಾಗದ್ದೆನಿಸಿತ್ತು.[೨೧]

ಈ ತಲ್ಲೀನತೆಗೆ ಕಲಾಕೃತಿನನ್ನನ್ನು ಮರುಳಾಗಿರುವುದೇ ಕಾರಣ: ನಾವು ಒಂದು ಚಿತ್ರವನ್ನು ನೋಡಿ, ಬೆರಗಾಗಿ ಮರುಳಾಗಿ ನಿಲ್ಲುತ್ತೇವೆ; ಹೀಗೆ ಮರುಳುಗೊಳಿಸುವ ಮಾಯಿಕತೆಯ ಸೌಂದರ್ಯ ಎಂದು ಹಲವರ ಮತ. ಹೀಗೆ ಮರುಳಾಗಿಸುವದರಲ್ಲಿ ಕಲಾಕೃತಿ, ಮುಖ್ಯವಾಗಿ ನಮಗೆ ಅದು ಒಂದು ಬಗೆಯಲ್ಲಿ ವಾಸ್ತವದೇ ಎಂಬ ಬ್ರಾಂತಿಯನ್ನು ಹುಟ್ಟಿಸುತ್ತದೆ. ಈ ಭ್ರಮೆ ಅಥವಾ ಬ್ರಾಂತಿ ಎಂದರೆ ಮಿಥ್ಯ ಎಂದಲ್ಲ, ಅದು ಸತ್ಯವೇ, ಅನುಭವದಲ್ಲಿ ಕಲಾಸತ್ಯವೇ ತನ್ನನ್ನು ತಾನೇ ಮರಳುಗೊಳಿಸುವ ಒಂದು ಸ್ವಭಾವ ಮಾನವನಲ್ಲಿದೆ. ಅದನ್ನು ಕಲಾವಿದ ತೃಪ್ತಗೊಳಿಸುತ್ತಾನೆ.[೨೨] ಮಿಣಜಗಿಯವರು ರಚಿಸಿದ ಪ್ರತಿಯೊಂದು ವಸ್ತುವಿಗೆ ಒಂದು ವ್ಯಕ್ತಿತ್ವವಿದೆ. ಅದರಲ್ಲಿ ಒಂದು ಅಭೇದ್ಯವಾದ ಹೊಂದಿಕೆಯಿದೆ. ಇದನ್ನು ತಿಳಿಯಬೇಕಾದರೆ ನಮಗೂ ವಸ್ತುವಿಗೂ ಇರುವ ಅಂತರವನ್ನು ದಾಟಬೇಕು, ಅದನ್ನು ಈಕ್ಷಿಸಿದರೆ ಪ್ರಯೋಜನವಿಲ್ಲ. ಅದರ ಅಂತರಂಗದಲ್ಲಿ ಹೊಕ್ಕು ತಲ್ಲೀನರಾಗಬೇಕು, ಇಂಥ ತಲ್ಲೀನತೆ ಸಾಧ್ಯವಾಗುವುದು ಪ್ರತಿಭಾನದಿಂದ ಈ ತಲ್ಲೀನತೆಯಿಂದ ವಸ್ತುವಿನ ವ್ಯಕ್ತಿತ್ವವು ನಮಗೆ ಗೋಚರಿಸುತ್ತದೆ.[೨೩]

ಕಲಾವಿದನಿಗೆ ಲೋಕ ವಸ್ತುಗಳಲ್ಲಿ ತಾರ್ಕಿಕ ಭಾವ ದೂರವಾದ ಪರಿಭಾವನೆಯ ಸ್ಥಿತಿಯಲ್ಲಿ ಗೋಚರಿಸುವ ಅರ್ಥಪೂರ್ಣತೆ ಅತೀತ ಶಕ್ತಿಯದು. ಅಂತಹ ರಸವಶತೆಯಲ್ಲಿ ವಸ್ತುವಿನ ಹಿಂದೆ ಇರುವ ಮೂಲ ಚೈನತ್ಯದ ಛಂದೋಗತಿಯನ್ನು ಗ್ರಹಿಸಿ ಅದನ್ನು ಕಲಾಕೃತಿ ಎಂಬ ಶುದ್ದ ರೂಪದಲ್ಲಿ ಅಭಿವ್ಯಕ್ತಗೊಳಿಸುತ್ತಾನೆ. ವಸ್ತು ಹೇಗೆ ಅವನಿಗೆ ಪರಿಶುದ್ಧರೂಪದಲ್ಲಿ ಎಂದರೆ ಯಾವ ಲೌಕಿಕ ಭವವ ಸೋಂಕು ಇಲ್ಲದೆ, ಗೋಚರಿಸಿತೋ ಅಂತಯೇ ಅವನ ಕಲಾಕೃತಿಯೂ ಸಹ ಯಾವ ಲೌಕಿಕ ಭಾವದ ಸೋಂಕು ಇಲ್ಲದ ಶುದ್ಧರೂಪ. ಆದುದರಿಂದ ನಾವು ಕಲಾಕೃತಿಯ ಆಸ್ವಾದಕ್ಕೆ ಲೋಕ ಜೀವನದಿಂದ ಏನನ್ನು ತರಬೇಕಾಗಿಲ್ಲ.[೨೪] ಕಲಾಕೃತಿಯ ತ್ರಿಗಾತ್ರದ ಅರಿವು ಮತ್ತು ವರ್ಣರೇಖಾದಿಗಳ ಪರಿಜ್ಞಾನ, ಇಷ್ಟಿದ್ದರೆ ಸಾಕು. ಕಲೆಯಲ್ಲಿ ಲೋಕಭಾವಗಳ ಒಂದು ಲೀಲೆಯನ್ನು ಪ್ರದರ್ಶಿಸುತ್ತೇನೆಂದು ಹೊರಡುವದು, ಕಲಾವಿದನ ಮಿಡುಕಾಡುವ ಸ್ಫೂರ್ತಿಯ ಕುರುಹಾದರೆ, ಕಲಾಕೃತಿಯಲ್ಲಿ ಲೋಕ ಭಾವಗಳನ್ನೇ ಅರಸುವ ಸಹೃದಯದ ಅಭಿರುಚಿಯೂ ದೋಷಪೂರ್ಣವೆನ್ನುವುದರ ಕುರುಹು. ಒಟ್ಟಿನಲ್ಲಿ ಅವರ ಸೌಂದರ್ಯಾನುಭವ ಶಕ್ತಿ ದುರ್ಬಲ ಅಪರಿಪೂರ್ಣ[೨೫].

---

೨೧. ಶ್ರೀ ಶಂಕರ ಪಾಟೀಲ (ಸ) : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ. ಪುಟ -೮

೨೨. C.K.Orgen and I.A. Rechards : Foundations of Aesthetics, Page - 39.

೨೩. ಜಿ. ಹನುಮಂತರಾವ್ : ಆಧುನಿಕ ತತ್ವಶಾಸ್ತ್ರದ ಸಮಸ್ಯೆಗಳು, ಪುಟ - ೩೫.

೨೪. To appreciate a work of art we need bring with us nothing from life, no knowledge of its ideas and affairs, no farmalities with its emotion clive Bell, Page - 25.

೨೫. ಅಲ್ಲೆ ಪುಟ : ೨೮-೨೯.

[illegible]



ಲೋಕಭಾವ ಪ್ರದರ್ಶನಕ್ಕೆ ಕಲೆಯನ್ನು ಮಾಧ್ಯಮವಾಗಿ ಬಳಸುವದು ವೃತ್ತಪತ್ರಿಕೆಯನ್ನೋದಲು ಟೆಲಿಸ್ಕೋಪನ್ನು ಬಳಸಿದಂತೆ [೧೬] ಏಕೆಂದರೆ ಕಲಾಕೃತಿಗೆ ವಿಶಿಷ್ಟವಾದ ಒಂದು ಅರ್ಥಪೂರ್ಣಕೃತಿ ಉಂಟು ಈ ಅರ್ಥ ಪೂರ್ಣತೆ ಜೀವನದ ಯಾವ ಅರ್ಥಪೂರ್ಣತೆಗೂ ಸಂಬಂಧಿಸಿದ್ದಲ್ಲ. ಈ ಕಲಾ ಲೋಕದಲ್ಲಿ ಲೋಕಭಾವಗಳಿಗೆ ಸ್ಥಾನವೇ ಇಲ್ಲ. ಅದು ತನ್ನದೇ ಆದ ನಿರ್ದಿಷ್ಟ ಭಾವಗಳಿಂದ ಕೂಡಿದ ಒಂದು ಲೋಕ.[೧೭]

ಬಾಲಕ ಮಿಣಜಗಿಯವರಿಗೆ ಪ್ರಾಥಮಿಕ ಶಾಲೆಯ ನಂತರದ ಘಟನೆಯು ಮರೆಯಲಾಗದ್ದೆನಿಸಿತು. ಆ ಶಿಕ್ಷಕರು ತಮ್ಮನ್ನು ದಂಡಿಸದೇ ತಮ್ಮ ಆಸಕ್ತಿಯನ್ನು ಗುರುತಿಸಿದ್ದು ತುಂಬಾ ಸಂತೋಷವುಂಟು ಮಾಡಿತ್ತು. ಅವರ ಜೀವನದಲ್ಲಿ ಇದು ತುಂಬಾ ಮಾರ್ಗದರ್ಶಿಯಾಗಿ ಪರಿಣಮಿಸಿತ್ತು. ಹೀಗಿರುವಾಗ ಅವರು ಅದನ್ನು ಹೇಗೆ ಮರೆಯಲು ಸಾಧ್ಯ? [೧೮]

ಕಲಾಜೀವನಕ್ಕೆ ಇದು ನಾಂದಿಯಾಗಿ ಪರಿಣಮಿಸಿತಲ್ಲ ಎಂಬ ಅಚ್ಚರಿ ಅನಂತರವೂ ಅವರಲ್ಲಿದ್ದಿತು. ಸುಪ್ತವಾಗಿದ್ದ ಕಲಾಚೇತನಕ್ಕೆ ಇದು ದಾರಿಮಾಡಿಕೊಟ್ಟಿದ್ದಲ್ಲವೆ? ಬೆಳದ ಕಾಯ ಗುಣಗಳನ್ನು ಹೀಚಿನಲ್ಲಿ ನೋಡು ಎಂಬುದಕ್ಕೆ ಇದು ತುಂಬ ಉತ್ತಮವಾದ ನಿದರ್ಶನವೇ ಹೌದು, ಮಿಣಜಗಿಯವರು ತಮ್ಮ ಎಳೆತನದಲ್ಲಿಯೇ ತಾವು ಉತ್ತಮ ಚಿತ್ರಕಲಾ ವಿದರಾಗಬಹುದೆಂಬುದನ್ನು ಈ ಮೂಲಕ ತೋರಿಸಿದರು. ಈ ಘಟನೆ ಅವರಲ್ಲಿ ಹಿರಿಯ ಕಲಾವಿದನಾಗುವ ಸುಂದರ ಕನಸನ್ನು ಕಾಣಲು ಹಚ್ಚಿತು. ಜೀವನದ ಗತಿ ತುಂಬಾ ವಿಚಿತ್ರ ಮಗ ಉಚ್ಚ ಶಿಕ್ಷಣ ಪಡೆದು ಹೆಚ್ಚು ಓದಿ ಪದವಿದರನಾಗಬೇಕು, ವಕೀಲನಾಗಬೇಕು, ಎಂದು ತಂದೆ ಅಂದುಕೊಂಡಿದ್ದರೆ ಮಗನ ದಾರಿ ಬೇರೆಯೇ ಆಗಿತ್ತು. ಆದರೆ ಮನೆತನದವರು ಬಾಲಕ ಮಿಣಜಗಿಯವರ ಅಭಿಲಾಷೆಗೆ ಆಡ್ಡಬರಲಿಲ್ಲವೆನ್ನುವುದೇ ತುಂಬ ಮಹತ್ವದ ಸಂಗತಿಯಾಗಿತ್ತು.

ಕಲಾವಿದನನ್ನು ವಿಶೇಷ ವ್ಯಕ್ತಿ ಎಂದು ತಿಳಿಯದೇ ಹೋದರು, ಅವನ ಸ್ವಭಾವ, ಮಾನಸಿಕ ಪ್ರವೃತ್ತಿ, ಗುಣ, ಅವನ ಸೌಂದರ್ಯ ಗುಣಗ್ರಹಣದ ಬೆಗೆಗಿನ ತೀವ್ರತೆ ಹಾಗೂ ಸಂವೇದನಾ ಶೀಲತೆಯನ್ನು ಬೆಳೆಸಿಕೊಂಡು ಬರಲು ಅವನಿಗೆ ವಿಶೇಷವಾದ ಉಪಚಾರ ಹಾಗೂ ಪರಿಸರವನ್ನು ಒದಗಿಸುವ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಕಲೆ ಹುಟ್ಟಿನಿಂದ ಬರುವಂತಹದು. ಎಂದು ಬಹು ಜನರು ಹೇಳುತ್ತಾರೆ. ಆದರೆ ಹುಟ್ಟಿನಿಂದಲೇ ಕಲಾವಿದರಾಗಿರುವವರು ವಿರಳ. ಒಳ್ಳೆ ಪರಿಸರ ಒಳ್ಳೆ ಕಲಾವಿದನನ್ನು ಸೃಷ್ಟಿಸಬಹುದು. ಎಂಬುದನ್ನು ಅನೇಕರು ಒಪ್ಪುತ್ತಾರೆ. ಪರಿಸರದಲ್ಲಿ ಬೆಳೆದು ಕಲಾವಿದರಾದವರೇ ಬಹಳಷ್ಟು ಜನ, ಹುಟ್ಟು ಕಲಾವಿದರು ಅಸಾಧಾರಣ ಬುದ್ಧಿ ಶಕ್ತಿ ಹೊಂದಿದ್ದು ಪ್ರತಿಭಾವಂತರಾಗಿರುತ್ತಾರೆ. ಸೂಕ್ಷ್ಮ ಮನಸ್ಸಿನ ಶೀಘ್ರ ಗ್ರಾಹಿಗಳಾಗಿರುತ್ತಾರೆ. ಮಾನಸಿಕ ಉದ್ವೇಗ, ಉದ್ರೇಕ, ಆವೇಗ ಹಾಗೂ ಕಳವಳದ ಭಾವದ ವಿಲಕ್ಷಣವಾದ ಹುಚ್ಚು ಸ್ವಭಾವದಿಂದ ಕೂಡಿದವರಾಗಿರುತ್ತಾರೆ. ಅವರಿಗೆ ಊಹಾತ್ಮಕ ಕಲ್ಪನಾಶಕ್ತಿ, ಭಾವನಾಶಕ್ತಿ, ಯೋಚನಾಶಕ್ತಿ, ತಾರ್ಕಿಕ ಶಕ್ತಿ ಇವೆಲ್ಲ ಮೈಗೂಡಿಕೊಂಡಿರುತ್ತವೆ, ಈ ಕಾರಣಕ್ಕಾಗಿ ಹುಟ್ಟು ಕಲಾವಿದ ಎಲ್ಲಿಲ್ಲದ ಸೃಜನಶೀಲತೆಯನ್ನು ಹೊಂದಿರುತ್ತಾನೆ, ಸ್ವಂತಿಕೆಯನ್ನು ಪಡೆದವನಾಗಿರುತ್ತಾನೆ.

ಮಡಿವಾಳಪ್ಪನವರು ವ್ಯಾಸಂಗ ಮಾಡುತ್ತಿದ್ದ ಪ್ರೌಢಶಾಲೆಯಲ್ಲಿ ಒಂದು ಸಮಾರಂಭಕ್ಕಾಗಿ ಆಗಿನ ಬಾಂಬೆ ರಾಜ್ಯದ ಗವರ್ನರ ಸರ್ ಜಾರ್ಜಲಾಯ್ಡರು ಸಂದರ್ಶನ ನೀಡಿದಾಗ ಶಾಲೆಯಲ್ಲಿ ಅನೇಕ

---

೧೬. ಅಲ್ಲೆ ಪುಟ : ೧೯-೨೦.
೧೭. ಅಲ್ಲೆ ಪುಟ : ೧೬-೧೭.
೧೮. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ. ಪುಟ-೧೧

[illegible]



ಚಟುವಟಿಕೆಗಳ ಜೊತೆಗೆ ಕಲಾಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಕಲಾ ಪ್ರದರ್ಶನದಲ್ಲಿಯ ಎರಡು ಚಿತ್ರಗಳನ್ನು ಅವರು ಬಹು ಸಮಯ ನೋಡುತ್ತ ನಿಂತರು. ಅವರನ್ನು ಈ ಎರಡು ಚಿತ್ರಗಳು ತುಂಬ ಆಕರ್ಷಿಸಿದ್ದವು. ಈ ವಿನ್ಯಾಸ ಸಂಯೋಜನೆಗಳಿಂದ ಮುಗ್ದರಾದ ಗರ್ವನರರು ಈ ಚಿತ್ರಗಳನ್ನು ಸೃಷ್ಟಿಸಿದ ವಿದ್ಯಾರ್ಥಿಯ ಬಗೆಗೆ ವಿವಿಧ ಬಗೆಯಲ್ಲಿ ವಿಚಾರಿಸಿ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು.

ಕಲಾಪ್ರದರ್ಶನದಲ್ಲಿ ಈ ಎರಡು ಚಿತ್ರಗಳು ಪ್ರಶಂಸೆಗೆ ಪಾತ್ರವಾಗಿದ್ದರು, ಆ ಎರಡು ಚಿತ್ರಗಳು ಬೇರಾರವೂ ಅಲ್ಲ ಬಾಲ ಕಲಾವಿದ ಮಡಿವಾಳಪ್ಪ ಮಿಣಜಗಿ ರೂಪಿಸಿದ್ದ ಚಿತ್ರಗಳಾಗಿದ್ದವು. ಈ ಸಂದರ್ಭದಲ್ಲಿ ಮಡಿವಾಳಪ್ಪನವರ ಸೂಪ್ತ ಕಲಾಭಿಜ್ಞತೆ ಬಹಿರಂಗಕ್ಕೆ ಬಂದಿತು. ಉತ್ತಮ ಕಲಾವಿದನ ಎಲ್ಲ ಲಕ್ಷಣಗಳನ್ನು ಈ ಬಾಲಕ ತೋರಿಸಿದ್ದು, ವಿಜಾಪೂರದ ನಾಗರಿಕರಿಗೂ ಅರಿವಿಗೆ ಬಂದಿತು, ಎಲ್ಲರಿಗಿಂತ ಮಿಗಿಲಾಗಿ ಇದರಿಂದ ಸುಪ್ರೀತರಾದವರು ಮಡಿವಾಳಪ್ಪನವರ ಕಲಾಶಿಕ್ಷಕರಾದ ಶ್ರೀ ಎನ್.ಎ.ಕುಲಕರ್ಣಿಯವರು. ತಮ್ಮ ಓರ್ವ ವಿದ್ಯಾರ್ಥಿ ಇಷ್ಟು ಉತ್ತಮ ಕಲಾಕಾರನಾಗಿದ್ದಾನೆಂಬುದು ಅವರಿಗೆ ಬಹು ಹೆಮ್ಮೆಯ ವಿಷಯವೆನಿಸಿತು. ತಮ್ಮ ಶ್ರಮದ ಸಾರ್ಥಕವೂ ಅವರಿಗೆ ಅನ್ನಿಸಿರಲು ಸಾಕು, ಇದು ಅವರಿಗೆ ಸಂತೋಷದ ಸಂಗತಿಯಾಗಿತ್ತು, ಹಾಗಾಗಿ ಈ ಬಾಲಕಲಾವಿದನ ಕಲಾ ವಿಕಾಸಕ್ಕೆ ಸರ್ವತೋಮುಖ ಸಹಾಯ ನೀಡಲು ಅವರು ಸ್ವಾಭಾವಿಕವಾಗಿಯೇ ಸಿದ್ದರಾದರು. ಈ ರೀತಿ ಅವರು ನಡೆದುಕೊಂಡರು ಸೂಕ್ತ ರೀತಿಯಲ್ಲಿ ಮಡಿವಾಳಪ್ಪನವರ ಕಲಾಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟು ಪ್ರತಿಯೊಂದರಲ್ಲಿಯೂ ಸ್ವತಃ ಆಸಕ್ತಿವಹಿಸುತ್ತಿದ್ದರು. ಇದರ ಪರಿಣಾಮ ಮಡಿವಾಳಪ್ಪನವರಲ್ಲಿ ಶಾಸ್ತ್ರೀಯ ಪದ್ದತಿಗನುಗುಣವಾದ ಶಿಕ್ಷಣಕ್ರಮ ರೂಢಿಗೊಂಡಿತು. ಕ್ರಮೇಣ ಅವರು ಕಲಾವಿದರಾಗತೊಡಗಿದರು, ವಿಜಾಪೂರ ಕೇಂದ್ರದಿಂದ ಇಂಟರ್ ಮಿಡಿಯಟ್ ಡ್ರಾಯಿಂಗ್ ಪರೀಕ್ಷೆಗೆ ಕುಳಿತು ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದುವದರೊಂದಿಗೆ ಪ್ರಥಮ ಪಾರಿತೋಷಕ ಪಡೆದು ಕೇಂದ್ರಕ್ಕೆ ಶಿಕ್ಷಕರಿಗೆ ಕೀರ್ತಿ ತಂದು ಕೊಟ್ಟು ತಮ್ಮ ಕಲಾಪ್ರತಿಭೆಯನ್ನು ಮೆರೆದರು. ವಿಜಾಪೂರವು ಬರಡು ಪ್ರದೇಶವಲ್ಲ. ಅದು ಇಂಥ ಅನೇಕ ಸತ್ಪುತ್ರರಿಗೆ ಜನ್ಮ ನೀಡಿದ ಪ್ರದೇಶವಾಗಿತ್ತು. ಎಂಬುದನ್ನು ಈ ಘಟನೆ ವ್ಯಕ್ತಪಡಿಸಿತು, ಅದೇಕೆ ಅವರ ಕಲಾ ಜೀವನದ ಉಗಮವೇ ಇದಾಗಿತೆನ್ನಬೇಕುಃ ಚಿತ್ರಕಲೆ ಅವರಲ್ಲಿ ತಾನೇ ತಾನಾಗಿ ರಾರಾಜಿಸುವದಕ್ಕೆ ಈಗ ಪ್ರಾರಂಭವಾಯಿತು.

ವಿಜಾಪುರ ನಗರದ ಹಿರಿಯರೂ ಅಭಿಮಾನದಿಂದ ಪ್ರೋತ್ಸಾಹ ನೀಡಿದರು, ಹುಮ್ಮಸ್ಸು ಮೂಡುವಂತೆ ನಡೆದುಕೊಂಡರೂ ಎಂಬುದು ಕೂಡ ಇಲ್ಲಿ ತುಂಬ ಗಮನಾರ್ಹವಾದ ಅಂಶವೇ ಆಗಿದೆ, ವ್ಯಾಪಾರಿ ಮನೆತನ, ಅದರಲ್ಲಿಯೂ ಸುಪ್ರಸಿದ್ದವಾದುದು. ವ್ಯಾಪಾರದಲ್ಲಿ ಆ ಮನೆತನಕ್ಕೆ ಇನ್ನಿಲ್ಲದ ಹೆಸರು ಇದ್ದಿತು. ಹೀಗಿರುವಾಗ ತಮ್ಮ ಮನೆತನಕ್ಕೆ ಸೇರಿದ ಹುಡುಗ ಕಲಿತು ವಿದ್ಯಾವಂತನಾಗಿ ವ್ಯಾಪಾರದಲ್ಲಿ ಮುಂದುವರಿಯಬೇಕು, ಅದನ್ನು ಅಭಿವೃದ್ದಿಪಡಿಸಬೇಕು. ಎಂಬ ಹಿರಿಯಾಸೆ ಹಿರಿಯರಲ್ಲಿರುವುದು ಸ್ವಾಭಾವಿಕ, ಆದರೆ ಇಲ್ಲಿ ಅದಕ್ಕೆ ತದ್ವಿರುದ್ದವಾಗಿ ಪರಸ್ಥಿತಿ ಇತ್ತು. ಮಡಿವಾಳಪ್ಪನವರಲ್ಲಿ ಅರಳಿದ ಪ್ರತಿಭೆ ಅಪೂರ್ವವಾದದು, ತಮ್ಮ ಮನೆತನಕ್ಕೆ ಈ ಬಾಲಕ ಹಿರಿಯ ಕಲಾವಿದನಾಗಿ ಹೆಸರು ತರುತ್ತಾನೆ ಎಂಬ ಹಂಬಲ ಹಿರಿಯರದು. ಅವರಿಗೆ ಅವನು ತಮ್ಮ ವೃತ್ತಿಯಲ್ಲಿ ಮುಂದುವರೆಯಬೇಕೆಂಬ ಬಲವಾದ ಇಚ್ಛೆ ಇತ್ತು. ಆದರೆ ತಮ್ಮ ಮನಸ್ಸಿನ ವಿರುದ್ದವಾಗಿ ಅವರು ಅವನನ್ನು ಇದರಿಂದ ಪರಾವೃತ್ತಗೊಳಿಸಲು ಮುಂದಾಗದೇ ಉತ್ಸಾಹವನ್ನು ತುಂಬಲು ಮುಂದಾದರೆಂಬುದು ಮಡಿವಾಳಪ್ಪನವರ ಜೀವನದಲ್ಲಿ ಎದ್ದು ಕಾಣುವ ಅಂಶವೇ ಆಗಿರುತ್ತದೆ.



ಮನುಷ್ಯನ ಮಾನಸಿಕ ಭಾವಗಳು ಪ್ರಕಟವಾಗುವ ರೀತಿ ಹಲವಾರು ಹೀಗಾಗಿ ಅವನ ಅಭಿವ್ಯಕ್ತಿಗೆ ಹಲವಾರು ಸೋಪಾನಗಳುಂಟು, ಸ್ವರಗಳ ಮಾಧ್ಯಮದಲ್ಲಿ ಅಭಿವ್ಯಕ್ತ ವಾಗುವ ರಸಾನುಭವ ಸಾಹಿತ್ಯವೆಂದೆನಿಸುತ್ತದೆ. ಬಣ್ಣಗಳ ಮಾಧ್ಯಮದಲ್ಲಿ ಅಭಿವ್ಯಕ್ತವಾಗುವ ರಸಾನುಭವ ಚಿತ್ರಕಲೆಯಾಗುತ್ತದೆ, ಭಾವಭಂಗಿವಾಗುವದು ನೃತ್ಯ ಕಲೆ.

ಸಂಗೀತ, ಸಾಹಿತ್ಯಗಳ ಬಗ್ಗೆ ಹೇಳುವಾಗ ಭಾಷೆಗಿಂತ ಮೊದಲು ಸಂಗೀತ ಉಗಮವಾಯಿತು ಸಂಗೀತಧ್ವನಿಯ ಮೂಲಕ ಮನಸ್ಸಿನಲ್ಲುಂಟಾಗುವ ಎಲ್ಲ ಭಾವೋದ್ವೇಗಗಳನ್ನು ಹೊರಹೊಮ್ಮಿಸುವ ಒಂದು ಶ್ರೇಷ್ಠ ಕಲೆ. ಇದು ಮನಸ್ಸಿನ ಭಾವನೆಗಳ ಧ್ವನಿ ಕನ್ನಡಿ ಭಾವನೆಗಳ ನವರಸಗಳನ್ನು ಸ್ವರಗಳ ಮೂಲಕ ಹೊರಹೊಮ್ಮಿಸಿ ಆನಂಧಾನುಭೂತಿಯನ್ನು ಉಂಟು ಮಾಡುವುದು ಸಂಗೀತ. ಆದರೆ ನಾದ ಕಲೆ ಹೆಗ್ಗಳಿಕೆ, ಸಂಗೀತವೆಂದರೆ ಅದರ ವ್ಯುತ್ಪತ್ತಿಯೇ ಹೇಳುವಂತೆ (ಸಮ್‌ಗೀತ) ಅಂದರೆ ಮಧುರ ಗಾಯನ ಎಂದು ಹೇಳಬಹುದು.[೨೯] ಇದು ಮಾತಿಗೆ ಮೀರಿದ ಅನುಭವ ವೇದ್ಯವಾದ ಆನಂದ.

ಆದರೆ ಭಾಷೆಯ ಜನನವಾದಂದಿನಿಂದ ಸಂಗೀತದಲ್ಲಿ ಸೌಂದರ್ಯ, ಸೊಗಸು, ಸೊಬಗು, ವೈವಿಧ್ಯತೆ ಹೆಚ್ಚುತ್ತಾ ಹೋಯಿತು, ಇದನ್ನು ಹೀಗೆ ಹೇಳಬಹುದು. ರಾಗದ ಸ್ವರಗಳನ್ನು ಬರಿಯ ಆಕಾರ ಉಕಾರಾದಿಗಳಲ್ಲಿ ಹಾಡುವುದರಿಂದ ಬರಿಯ ರಾಗದ ಸ್ವರೂಪದ ಅರಿವಾಗುತ್ತದೆ. ಆದರೆ ಕೇಳುವವರ ಮನಸ್ಸಿನಲ್ಲಿ ರಸವನ್ನು ಹುಟ್ಟಿಸಬೇಕಾದರೆ, ಈ ಸ್ವರ ಸಮೂದಾಯಕ್ಕೆ ಲಯ ಅಥವಾ ಕಾಲದ ನೆರವು ಬೇಕಾಗುತ್ತದೆ. ಆದರೆ ಬರಿಯ ಸ್ವರಗಳನ್ನು ಲಯಕ್ಕೆ ಹಾಡುತ್ತಿದ್ದರೆ, ಆನಂದೋತ್ಪತ್ತಿ ಅಷ್ಟಾಗಿ ಆಗಲಾರದು. ಅದಕ್ಕೆ ಸಾಹಿತ್ಯದ ಅಂದರೆ ಕಾವ್ಯದ ಸಹಕಾರವಿದ್ದರೆ, ಸ್ವರ ಸಂಯೋಜನೆ ಹೆಚ್ಚು ರಸವನ್ನು ಬಹಳ ಪ್ರಭಾವಕಾರಿಯಾಗಿ ನೀಡುತ್ತದೆ. ಪರಿಣಾಮಕಾರಿಯಾಗಿಯೂ ಇರುತ್ತದೆ.

ಮಡಿವಾಳಪ್ಪನವರು ಬಾಲಕನಿರುವಾಗಲೇ ಸಂಗೀತದಲ್ಲಿ ಕೂಡ ಆಸಕ್ತಿ ತೋರಿಸಿದ್ದರು. ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಕಂಡರೂಪಕ್ಕಿಂತ ಕಾಣದೊಡೆವೆಯ ಸೊಬಗು
ಉಂಡ ರುಚಿಗಳಿಗಿಂತ ಉಣ್ಣದಮೃತದ ಸವಿಯೂ
ಮಿಂದ ನೀರಿಂದಲೂ ಮೀಸಲಿರುವಂಥ ನೀರಿಂದ ಬಂದಂಥ ತಂಪು
ಅಂತ ಹಾಡಿಂದಲೂ ಬಂದ ಹಾಡಿನ ಸೊಗಸು
ಬಂದ ಗಂಧಕಿಂತ ಬರಲಿರುವ ಹೂಗಂಪು
ಅಂದವದು ಚಂದವದು ಆನಂದ ಕಂದವದು
ಕಂದದದು ಕುಂದದೆಂದೂ[೩೦]

ಅವರ ಸಹ ವಿದ್ಯಾರ್ಥಿಗಳು ಇದರಿಂದ ಬೆರಗುಗೊಳ್ಳುತ್ತಿದ್ದರು ತಮ್ಮ ಸಹಪಾಠಿ ಉತ್ತಮ ಚಿತ್ರಕಲಾವಿದನಾಗಿರುವಂತೆ ಉತ್ತಮ ಹಾಡುಗಾರನು ಆಗಿದ್ದಾನೆಂಬುದನ್ನು ಅವರು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದರು. ಶ್ರೀ ಕೃಷ್ಣ ಶಾಸ್ತ್ರಿಗಳು ಅವರ ಈ ಸಂಗೀತಾಸಕ್ತಿಗೆ ಲಬ್ದರಾಗಿ ಅವರಿಗೆ ಆ ವಿಷಯದಲ್ಲಿ ತರಬೇತಿ ನೀಡಲು ಮುಂದಾದರು.[೩೧] ಆದರ ಉತ್ತೇಜನಕ್ಕೆ ಮಡಿವಾಳಪ್ಪನವರಲ್ಲಿ ಸಂಗೀತ ಕಲಿಯುವುದಕ್ಕೆ

---

೨೯. ಶ್ರೀಮತಿ ಎಚ್. ಆರ್. ಲೀಲಾವತಿ (ಸ) : ಸುಗಮಸಂಗೀತ ಒಂದು ಸಿಂಹಾವಲೋಕನ, ಪುಟ -೨೫.
೩೦. ಬೆಂದ್ರೆ : ಗರಿ, ಪುಟ - ೯-೧೦.
೩೧. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ - ೧೨

[illegible]



ತುಂಬ ಪ್ರಯೋಜನಕಾರಿಯಾಗಿ ಪರಿಣಮಿಸಿತಲ್ಲದೇ ಮುಂದೆ ಹಲವಾರು ರೀತಿಯಲ್ಲಿ ಅವನಿಗೆ ಅದು ಸಹಾಯಕವಾಗಿ ನಿಂತಿತು.[೨೨] ಆಗ ಬಿಜಾಪೂರದಲ್ಲಿದ್ದ ಕಲೇಕ್ವರರ ಪತ್ನಿ ಸಂಗೀತದಲ್ಲಿ ಆಸಕ್ತಿವುಳ್ಳವರು. ಅವರ ಕಣ್ಣಿಗೆ ಮಡಿವಾಳಪ್ಪನವರು ಈ ಎರಡು ವಿದ್ಯೆಯಲ್ಲಿ ಪಾರಂಗತವಾಗುವ ಲಕ್ಷಣಗಳನ್ನು ತೋರಿಸಿದರು. ಆದರೂ ಚಿತ್ರಕಲೆಯ ಹೆಚ್ಚಿನ ವ್ಯಾಸಂಗವನ್ನು ಅವರು ಆರಿಸಿಕೊಂಡಿದ್ದು ಏಕೆ? ಹೇಗೆ ಎಂದು ಅನೇಕರಿಗೆ ಸ್ವಲ್ಪ ಅಚ್ಚರಿಯ ಸಂಗತಿಯೇನಿಸಬಹುದು. ಅವರ ಚಿತ್ರಕಲಾ ಗುರುಗಳಾದ ಶ್ರೀ ಕುಲಕರ್ಣಿಯವರು ನೀಡಿದ ಪ್ರೋತ್ಸಾಹ ಹಾಗೂ ಬಿಜಾಪೂರದ ಕಲಾತ್ಮಕ ಹಿನ್ನೆಲೆ ಅದಕ್ಕೆ ಹೆಚ್ಚು ಪ್ರೇರಕವಾಗಿ ಪರಿಣಮಿಸಿದವು. ಮಡಿವಾಳಪ್ಪನವರು ತಮ್ಮ ಇಳಿಯ ವಯಸ್ಸಿನಲ್ಲಿ ಶಿಷ್ಯೆಯೊಬ್ಬಳಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಈ ಸಂಗತಿಯನ್ನು ಬಹು ಸ್ಪಷ್ಟವಾಗಿ ನಿವೇದಿಸಿರುವರು.ಇಂಟರ ಮಿಡಿಯೇಟ ಪರೀಕ್ಷೆಯಲ್ಲಿ ಮೊದಲಿಗನಾಗಿ ಬಂದಾಗ ನಮ್ಮ ಗುರುಗಳಾದ ಎನ್.ಎ.ಕುಲಕರ್ಣಿಯವರು ಬಹಳ ಸಂತೋಷಪಟ್ಟರು. ಚಿತ್ರಕಲೆ ಅಭ್ಯಸಿಸಲು ಪ್ರೋತ್ಸಾಹಿಸಿದರು.

ಸುಂದರ ಆಕರ್ಷಕ ಮಡಿವಾಳಪ್ಪ ಸುಂದರ ಸುಮಧುರ ಕಂಠವನ್ನು ಪಡೆದಿದ್ದ, ಆ ಬಾಲಕನ ಹಾಡಿಗೆ ಸಮಸ್ತ ಗುರುವೃಂದವೇ ಮಾರುಹೋಗಿತ್ತು, ಹಾಗೆಂದೇ ಏನೇ ಕಾರ್ಯಕ್ರಮವಾದರೂ ಅದರ ಪ್ರಾರಂಭ ಆತನ ಹಾಡಿನಿಂದಲೇ ಆಗಬೇಕು. ಒಮ್ಮೆ ಶಾಲೆಯ ಕ್ಲಾಸ್ ರೂಮಿನಲ್ಲಿ ಯಾರು ಇಲ್ಲದಾಗ ಈ ಬಾಲಕ ತನ್ಮಯವಾಗಿ ಹಾಡುವಾಗ ಅಧ್ಯಾಪಕರಾದ ಕೆ.ಎನ್.ಹುನಗುಂದ ಮರೆಯಲ್ಲಿ ನಿಂತು ಕೇಳಿ ನಂತರ ಕರೆದು ಬೆನ್ನು ತಟ್ಟಿ, ನಿತ್ಯ ಹಾಡುವುದನ್ನು ಅಭ್ಯಾಸಮಾಡು, ಒಳ್ಳೆಧ್ವನಿ ಇದೆ, ಒಳ್ಳೆಯ ಅವಕಾಶ ಕಲ್ಪಿಸಿಕೊ ಎಂದು ಹರಿಸಿದರು. [೨೩]

ಹೀಗೆ ಮಿಣಜಗಿಯವರು ವಿದ್ಯಾರ್ಥಿ ದೆಸೆಯಲ್ಲಿಯೇ ಹಾಡುವದು, ಚಿತ್ರ ಬಿಡಿಸುವದು ಸುಂದರ ಕಾಗದದಿಂದ ಡೋಣಿ ಮಾಡುವುದು, ಗಣಪತಿ, ಬಸವಣ್ಣನಂತಹ ಚಿತ್ರ ಬರೆಯುವದು, ಹಲವಾರು ಕಲಾ ಚಟುವಟಿಕೆಗಳಿಂದ ಕಲಾಸಕ್ತಿ, ಕಲಾಪ್ರದರ್ಶನ ವ್ಯಕ್ತಪಡಿಸಿದ್ದಾರೆ, ಅಂತೆಯೇ ಸಿದ್ಧೇಶ್ವರ ದೇವಾಲಯದ ಗೋಪುರಕ್ಕೆ ಸ್ವತಃ ಬಣ್ಣವನ್ನು ತಯಾರು ಮಾಡಿ ಹಚ್ಚುತ್ತಿದ್ದರು, ಅವರು ಮಾಡುವುದನ್ನು ಗಂಟೆಗಟ್ಲೆ ನೋಡುತ್ತ ನಿಲ್ಲುತ್ತಿದ್ದೆ, ಮನೆಗೆ ಬಂದು ಅವರಂತೆಯೇ ಬಣ್ಣ ತಯಾರಿಸಲು ಪ್ರಯತ್ನ ಮಾಡುತ್ತಿದ್ದೆ, ಇವೆಲ್ಲವೂ ನನ್ನ ಮೇಲೆ ವಿಶೇಷ ಪರಿಣಾಮ ಬೀರಿದವು.[೨೪] ಗುರು ಒಳ್ಳೆಯವನಾಗಿದ್ದರೆ ಶಿಷ್ಯನು ತನ್ನ ಜೀವನವನ್ನು ಹೇಗೆ ಉದಾತ್ತವಾಗಿ ರೂಪಿಸಬಲ್ಲನು, ಎಂಬುದಕ್ಕೆ ಈ ಮಾತು ಒಳ್ಳೆಯ ನಿದರ್ಶನವೂ ಆಗಿದೆ. ಮುಂದೆ ಮಡಿವಾಳಪ್ಪನವರು ಉತ್ತಮ ಗುರುಗಳಾಗುವ ಸಲ್ಲಕ್ಷಣಗಳಿಗೆ ಇದೊಂದು ನಿದರ್ಶನವು ಆಗಿ ನಿಂತಿದೆ.

★★★★★

೨೨. Shri Revansiddayya Hanneradumath,: Dr. Minajigi the Artist & the man, Page-7

೨೩.. ಗವೀಶ ಹಿರೇಮಠ : ಡಾ. ಎಂ.ವ್ಹಿ. ಮಿಣಜಗಿ, ಪುಟ - ೪.

೨೪. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ - ೧೦.



ಅಧ್ಯಾಯ : ಮೂರು

ಎಂ.ವ್ಹಿ. ಮಿಣಜಗಿ ಚಿತ್ರಕಲಾ ಶಿಕ್ಷಣ ಮತ್ತು ವೃತ್ತಿ ಜೀವನ :

ಮಿಣಜಗಿಯವರು ಬೆಳೆದಂತೆ, ಅವರಲ್ಲಿ ಸುಪ್ತವಾಗಿದ್ದ ಕಲಾಚೇತನ ಜಾಗೃತವಾಗುತ್ತಾ, ಮನಸ್ಸು ಉಳಿದೆಲ್ಲ ವಿಚಾರಗಳಿಗಿಂತ ಹೆಚ್ಚು ಕಲೆಯತ್ತವಾಲಿತು. ಮನಸ್ಸು ಚಿತ್ರಕಲೆಯಿಂದ ತುಂಬಿ ತುಳುಕಿತು. ಆದರೆ ತಂದೆ ತಮ್ಮ ಮಗ ಪ್ರಸಿದ್ಧವಕೀಲನಾಗಬೇಕೆಂದು ಕನಸು ಕಾಣುತ್ತಿದ್ದರು. ಬಹುದಿನದ ಬಯಕೆ ಅವರದಾಗಿತ್ತು. ಆದರೆ ಬಯಸಿದಂತೆ, ನಿರೀಕ್ಷಿಸಿದಂತೆ ಮಗನ ಜೀವನ ಇರಲಿಲ್ಲ. ತಂದೆ ಬಯಸಿದ್ದೇ ಒಂದು ಮಗ ಆದುದೇ ಮತ್ತೊಂದು.[೧] ಇದು ಬಹುಪಾಲು ಜನರ ಬದುಕಿನಲ್ಲಿ ಸಹಜವಾಗಿ ಕಂಡು ಬರುವ ಅಂಶ. ಮಿಣಜಗಿಯವರು ಇದಕ್ಕೆ ಹೊರತಾಗಿಲ್ಲ. ಬಿಜಾಪೂರದಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ವ್ಯಾಸಂಗ ಮಾಡಿಕೊಂಡು ನಂತರದ ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣವನ್ನು ಮುಂಬೈಯ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟದಲ್ಲಿ ವ್ಯಾಸಂಗ ಮಾಡುವದು ಅವರ ಕನಸಾಗಿತ್ತು.[೨] ಅದನ್ನು ಅವರು ನನಸನ್ನಾಗಿ ಮಾಡಿಕೊಂಡರು.


ಜೆ.ಜೆ. ಸ್ಕೂಲ್ ಆಫ್ ಆರ್ಟದ ಕಲಾ ವಾತಾವರಣ :

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮತ್ತು ಭಾರತೀಯ ಕಲಾಸಂಪ್ರದಾಯದ ಅಧಃಪತನದ ಸಂಕ್ರಮಣದ ಕಾಲದಲ್ಲಿ ಈ ಸ್ಕೂಲ್ ಆಫ್ ಆರ್ಟ್ ಪ್ರಾರಂಭವಾಯಿತು. ಲಂಡನ್ನಿನ ರಾಯಲ್ ಅಕಾಡಮಿ ಆಫ್ ಆರ್ಟ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟಿಷರು ಸ್ಥಾಪನೆ ಮಾಡಿದ ಭಾರತದ ಏಕೈಕ ಚಿತ್ರಕಲಾ ಶಾಲೆಯೆಂದರೆ ಬಾಂಬೆಯ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್ ಆ್ಯಂಡ ಕ್ರಾಫ್ಟ್. ಕಲಾವಿದನಾಗುವ ಅಪೇಕ್ಷೆಯುಳ್ಳ ಪ್ರತಿಯೊಬ್ಬರಿಗೂ ಜೆ.ಜೆ. ಕಲಾಶಾಲೆಯ ಮಹತ್ತರವಾದ ಆಕರ್ಷಣೆ ಈ ಕಲಾಶಾಲೆಯ ಸ್ಥಾಪನೆಗೆ ಮೊದಲೇ ಭಾರತೀಯ ಕಲಾ ಸಂಪ್ರದಾಯ ಅಧೋಗತಿಯ ಹಂತ ತಲುಪಿತ್ತು. ಈಸ್ಟ್ ಇಂಡಿಯಾ

---

೧. ಗವೀಶ ಹಿರೇಮಠ : ಡಾ. ಎಂ. ವ್ಹಿ. ಮಿಣಜಗಿ, ಪುಟ - ೫.

೨. ಎನ್. ಮರಿಶಾಮಾಚಾರ್ : ಸಂಯುಕ್ತ ಕರ್ನಾಟಕ ದಿನಪತ್ರಿಕೆ : ದಿ. ೩೧-೧-೧೯೭೭ ಸಾಪ್ತಾಹಿಕ ಮಂಜರಿ, ಪುಟ - ೧.



ಕಂಪನಿಯು ಬರುವುದಕ್ಕೂ ಮೊದಲು ನಮ್ಮಲ್ಲಿ ರೂಢಿಯಲ್ಲಿದ್ದ ಜೈನ್, ರಜಪೂತ ಮತ್ತು ಮೊಘಲರ ಕಲೆಯಲ್ಲಿ ತನ್ನ ಪರಮೋಕ್ಷ ಸಿದ್ಧಿಯನ್ನು ಪಡೆದಿದ್ದ ಭಾರತೀಯ ಕಲಾ ಪರಂಪರೆ ಕಡಿದು ಹೋಗಿತ್ತು.[೩]

ಇಂಥ ಒಂದು ಪರಿಸ್ಥಿತಿಯಲ್ಲಿ ೧೮೫೭ ಮಾರ್ಚ ೨ ರಂದು ಅಸ್ತಿತ್ವಕ್ಕೆ ಬಂದ ಈ ಕಲಾಶಾಲೆಗೆ ಮೂಲ ಕಾರಣಿ ಪುರುಷರು ಪಾರ್ಸಿ ಜನಾಂಗದ ನೇಕಾರ ಮನೆತನದಲ್ಲಿ ಹುಟ್ಟಿದ ಜೀಜಾಬಾಯಿ ಜೆಮಶೇಡಜಿ ಇವರು ಹಡಗುಗಳಿಗೆ ನೆಲಹಾಸಿಗೆಗಳನ್ನು ತಯಾರಿಸಿ ಕೊಡುತ್ತಿದ್ದರಲ್ಲದೇ, ಹೊರದೇಶಗಳಿಗೂ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಆಗ ಚೈನಾ ದೇಶದ ಕರಕುಶಲ ಕಲೆಯಿಂದ ಪ್ರೇರೆಪಿತರಾಗಿ ಅವರ ಮನಸ್ಸಿನಲ್ಲಿಯೂ ಅದರಂತೆ ರೂಪ ತಾಳುತ್ತಾ ಬಂತು. ೧೮೫೧ರ ಲ್ಲಿ ಲಂಡನ್‌ನಲ್ಲಿ ಅಂತರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ನಡೆದಿತ್ತು. ಅದನ್ನು ನೋಡಲು ಜೀಜಾಬಾಯಿ ಜೇಮಶೇಡಜಿ ಅವರು ಹೋಗಿದ್ದರು. ಅವರ ಮನಸ್ಸಿನಲ್ಲಿಯೂ ಸಹ ಇಂತಹ ಕಲಾಶಾಲೆಯನ್ನು ನಮ್ಮ ಭಾರತದಲ್ಲೂ ಪ್ರಾರಂಭಿಸಬೇಕೆಂಬ ಇಚ್ಛೆಯುಂಟಾಯಿತು. ಇದರ ಪರಿಣಾಮವೇ ಇಂದಿನ ಸರ್ . ಜೆ.ಜೆ. ಕಲಾ ಶಾಲೆ ಸ್ಥಾಪನೆ,[೪] ಈ ಕಲಾ ಶಾಲೆ ಭಾರತದಲ್ಲಿ ಅದರಲ್ಲೂ ಕರ್ನಾಟಕದ ಕಲಾವಿದರಿಗೆ ಕಲಾ ಶಿಕ್ಷಣದ ಒಂದು ಮಹತ್ವದ ಕೇಂದ್ರವಾಗಿತ್ತು. ಈ ಗ ಅದೊಂದು ಇತಿಹಾಸವಾಗಿದೆ. ಸಂಪೂರ್ಣ ಬ್ರಿಟಿಷರ ಪ್ರಭಾವದಿಂದ ಕೂಡಿದ ಈ ಕಲಾಶಾಲೆಗೆ ಅಭ್ಯಾಸ ಮಾಡಲು ಬರುವ ವಿದ್ಯಾರ್ಥಿಗಳು ಒಳ್ಳೆಯ ದರ್ಜೆಯ ಪ್ಯಾಂಟು,ಶರ್ಟು ಟೈ ಕಟ್ಟಿಕೊಂಡು ಕಾರಿನಲ್ಲಿ ಬರುತ್ತಿದ್ದರು. ಒಬ್ಬರ ಮೇಲೊಬ್ಬರು ಕೈ ಹಾಕಿಕೊಂಡು ಗುಂಪು ಗುಂಪಾಗಿ ಬರುವದನ್ನು ನೋಡುತ್ತಿದ್ದ ಮಡಿವಾಳಪ್ಪನವರು ಸಹ ತಮ್ಮ ಜೀವನದಲ್ಲಿ ಬಿಜಾಪೂರದ ಸಾಂಸ್ಕೃತಿಕ ನೆಲೆಗಟ್ಟನ್ನು ಬದಲಾಯಿಸಿಕೊಂಡು ಬಾಂಬೆ ಪ್ರದೇಶದ ಹುಡುಗರಂತೆ ವಾಸಿಸಲು ಪ್ರಾರಂಭಿಸಿದರು. ಕಾರಣ ಆವರು ಮರಾಠಿ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರಿಂದ ಮಾಡಿವಾಳಪ್ಪನವರಿಗೆ ಅಷ್ಟೊಂದು ತೊಂದರೆಯಾಗಿ ಕಾಣಿಸಲಿಲ್ಲ.

ಚಿತ್ರಕಲೆಯಲ್ಲಿ ಉಚ್ಚ ಶಿಕ್ಷಣ ಪಡೆಯಲು ಆಗ ಉತ್ತಮ ಕೇಂದ್ರವೆನಿಸಿತ್ತು, ಮತ್ತು ಅನೇಕ ಕಲಾವಿದರಿಗೆ ಜನ್ಮ ನೀಡಿದ ಮುಂಬೈಯ ಜೆ.ಜೆ.ಸ್ಕೂಲ್ ಆಫ್ ಆರ್ಟದಲ್ಲಿ ಪ್ರವೇಶ ಪಡೆದು ಮುಂಬೈನ ನಿವಾಸಿ ಎನಿಸಿದರು. ಈ ಸಂಸ್ಥೆಯನ್ನು ಸೇರಬೇಕು. ಇಲ್ಲಿ ಚಿತ್ರಕಲೆಯ ಉಚ್ಚ ಶಿಕ್ಷಣ ಪಡೆಯಬೇಕು, ಅಪೂರ್ವ ತರಬೇತಿ ಹೊಂದಬೇಕು ಎಂಬುದು ಮಡಿವಾಳಪ್ಪನವರ ಜೀವನದಲ್ಲಿಯ ಒಂದು ಮಹತ್ವಾಕಾಂಕ್ಷೆಯೆನಿಸಿತ್ತು. ಅದೊಂದು ಅವರ ಜೀವನದ ಗುರಿಯೂ ಆಗಿತ್ತು. ಈ ಸಂಸ್ಥೆಯನ್ನು ಸೇರಿದಾಗ ಇನ್ನೂ ಯೌವನಾವಸ್ಥೆಯಲ್ಲಿದ್ದ ಮಡಿವಾಳಪ್ಪನವರಿಗೆ ಹಿಡಿಸಲಾರದಷ್ಟು ಸಂತೋಷವೂ ಎನಿಸಿತು, ಸಮಾಧಾನವುಆಯಿತು. ಜೀವನದಲ್ಲಿ ಇನ್ನು ನಿಶ್ಚಿತವಾದ ಗುರಿಯಲ್ಲಿ ಸಾಗಬಹುದು, ಎಂಬ ಆತ್ಮಿಕ ಪ್ರೇರಣೆಯೂ ಆಯಿತು. ಎಳೆಯರಿಗೆ ಅನೇಕ ಸಲ ತಮ್ಮ ಹಂಬಲಗಳನ್ನು ಈಡೇರಿಸಿಕೊಳ್ಳುವುದು ಸಾಧ್ಯವಾಗುವದಿಲ್ಲ. ಬಹಳ ಕಠಿಣವೆನಿಸುತ್ತದೆ. ಅದೇಕೆ, ಅವರಜೀವನ ಎತ್ತೆತ್ತಲೋ ಸಾಗಿ ಹೋಗುವದೂ ಉಂಟು. ಆದರೆ ಇವರ ಜೀವನದಲ್ಲಿ ಹಾಗಾಗಲಿಲ್ಲ ಎನ್ನುವುದು ಕೂಡಾ ಬಹು ಮಹತ್ವದ ಸಂಗತಿಯಾಗಿರುವಷ್ಟೇ ಅವರ ಸುದೈವವು ಕೂಡಾ ಹೌದು . ಅದು ೧೯೨೧ ಜೂನದಲ್ಲಿ ಮಡಿವಾಳಪ್ಪನವರ ಜೀವನದಲ್ಲಿ ಇದು ತುಂಬಾ ಮಹತ್ವದ ಮತ್ತು ವೈಶಿಷ್ಟ್ಯ ಪೂರ್ಣವಾದ ವರುಷವೆನ್ನಬೇಕು.

---

೩. ಲಕ್ಷ್ಮಿಗವಾಯಿ : ಕಲಾವಿದ ಎಂ.ಎ. ಚೆಟ್ಟಿ ಜೀವನ ಕಲಾಕೃತಿಗಳು ಒಂದು ಅಧ್ಯಯನ, ಅಪ್ರಕಟಿತ ಪಿ. ಎಚ್.ಡಿ. ಮಹಾಪ್ರಬಂಧ, ಪುಟ - ೪೬.

೪. N.N. Kelkar : Sir J.J.School of Art Bombay, A Hundred years of its Carrer, Page- 5.

[illegible]



ಜೆ.ಜೆ. ಕಲಾಶಾಲೆಗೆ ಶಿಕ್ಷಣವನ್ನು ಪಡೆಯಲು ಬರುವವರಲ್ಲಿ ಶ್ರೀಮಂತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು. ನಾನು ಮರಾಠಿ ಮಾಧ್ಯಮದಲ್ಲಿ ವ್ಯಾಸಂಗಮಾಡಿದ್ದರಿಂದ ಅಲ್ಲಿನನಗೆ ಯಾವುದೇ ರೀತಿಯ ತೊಂದರೆಗಳು ಅನಿಸಲಿಲ್ಲ, ವಿದ್ಯಾರ್ಥಿಗಳ ಜೊತೆಗೆ ಬೆರೆತು, ಕ್ಲಾಸಿನಲ್ಲಿ ಗುರುಗಳು ಏನಾದರೂ ಹೇಳಿದ್ದರೆ ಅದನ್ನು ಮಾಡುವುದು, ಕ್ಲಾಸು ಮುಗಿದ ಕೂಡಲೇ ಹೊರಗೆ ಬಂದು ನಡೆದುಕೊಂಡು ಹೊರಗೆ ಹೋಗುತ್ತಿದ್ದೆನು. ಉಳಿದವರೆಲ್ಲರೂ ತಮ್ಮ ತಮ್ಮ ವಾಹನದಲ್ಲಿ ಕುಳಿತುಕೊಂಡು ಹೋಗುತ್ತಿದ್ದರು. ಇಂಥಹ ಒಂದು ವಾತಾವರಣ ಜೆ.ಜೆ. ಕಲಾಶಾಲೆಯಲ್ಲಿತ್ತು.

ಮುಂಬೈಯಲ್ಲಿ ಇವರಿಗೆ ಕರ್ನಾಟಕದವರೊಬ್ಬರಿಂದ ತುಂಬಾ ಸಹಾಯ, ಸಹಕಾರ ದೊರೆತವು. ಬೆಳಗಾವಿಯ ಶ್ರೀ ಗಂಗಾಧರಪ್ಪ. ಸಾಬೋಜಿ ಅವರೇ ಇವರು.[೫] ಅಂಥಹ ದೊಡ್ಡ ಪಟ್ಟಣದಲ್ಲಿ ಈಗಿನಷ್ಟು ಅಲ್ಲದಿದ್ದರೂ ಕೂಡ , ಆಗಲೂ ವಾಸ್ತವ್ಯದ ತೊಂದರೆ ಇದ್ದೆ ಇತ್ತು. ಆದರೆ ಇವರು ತುಂಬಾ ಸುದ್ವೆವಿಗಳು. ಈ ಸಾಬೋಜಿ ಅವರ ಕೊಠಡಿಯಲ್ಲಿ ಉಳಿದುಕೊಳ್ಳಲು ಅವಕಾಶ ದೊರಕಿದ್ದರಿಂದ ಇವರ ಬಹು ದೊಡ್ಡ ಸಮಸ್ಯೆ ನಿವಾರಣೆಗೊಂಡಿತು.

ಬೆಳಗಿನ ಜಾವ ಬೇಗನೇ ಎದ್ದು ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಗುರುಗಳು ಹೇಳಿದ ವಿವಿಧ ರೀತಿಯ ರೇಖಾಚಿತ್ರಗಳ ಭಂಗಿಗಳನ್ನು ಅಭ್ಯಾಸ ಮಾಡುವುದು ಪರಿಪಾಠವಾಗಿತ್ತು, ಅಲ್ಲದೇ ಬೇರೆ ಬೇರೆ ಕಲಾಕೃತಿಯನ್ನು ಮಾಡುವುದು, ಗುರುಗಳು ಹೇಳಿದ ವಿವಿಧ ವಿಷಯಗಳ ಬಗ್ಗೆ ಚಿತ್ರ ಬಿಡಿಸುವುದು ಇವರ ದಿವಚರಿಯಾಗಿತ್ತು.

ಪ್ರತಿ ದಿವಸ ಐದು ಘಂಟೆಗೆ ಏಳುವುದು. ಒಂದುವರೆ ತಾಸು ರೇಖಾ ಚಿತ್ರಗಳನ್ನು ಮಾಡುವದು, ನಂತರ ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿಕೊಂಡು ತಮ್ಮ ಕಲಾಸಾಮಗ್ರಿಗಳ ಚೀಲದೊಂದಿಗೆ ಹೊರನಡೆಯುವುದು. ಕಲಾಶಾಲೆಗೆ ಹೋಗುವಾಗ ರಸ್ತೆಯಲ್ಲಿ ಕಾಣಸಿಗುವ ದೃಶ್ಯದ ರೇಖಾಚಿತ್ರಗಳನ್ನು ಮಾಡುತ್ತಿದ್ದರು. ಇದಕ್ಕಾಗಿಯೇ ತಮ್ಮ ಬ್ಯಾಗದಲ್ಲಿ ಕೆಲವು ಬಿಳಿ ಹಾಳೆಗಳನ್ನು, ಪೆನ್ಸಿಲ್‌ನ್ನು ಇಟ್ಟುಕೊಂಡಿರುತ್ತಿದ್ದರು. ಬೆಳಗಿನ ಉಪಹಾರಕ್ಕಾಗಿ ಹಾಲು ಕುಡಿದು ಹತ್ತು ಘಂಟೆಯನ್ನುವಷ್ಟರಲ್ಲಿ ಜೆ.ಜೆ. ಕಲಾಶಾಲೆಗೆ ತಲುಪುತ್ತಿದ್ದರು. ಹತ್ತು ಘಂಟೆಗೆ ತರಗತಿಗಳು ಪ್ರಾರಂಭವಾಗುವ ಮೊದಲು ವಿದ್ಯಾರ್ಥಿಗಳು ಮಾಡಿಕೊಂಡು ಬಂದಿದ್ದ ರೇಖಾ ಚಿತ್ರಗಳನ್ನು, ನೋಡಿ ಅದರ ಮೇಲೆ ರುಜು ಹಾಕುತ್ತಿದ್ದರು. ಒಂದು ವೇಳೆ ರೇಖಾಚಿತ್ರಗಳನ್ನು ಮಾಡಿಕೊಂಡು ಹೋಗಲಿಲ್ಲವೆಂದರೆ ಅಂದು ಹಾಜರಿಯು ಹಾಕುತ್ತಿರಲಿಲ್ಲ. ಪ್ರತಿಶತ ಶೇಕಡಾ ೭೫ % ರಷ್ಟು ಹಾಜರಾತಿ ಇರಲಿಲ್ಲವೆಂದರೆ ಪರೀಕ್ಷೆಗೆ ಕೂಡಲು ಅನುಮತಿ ಕೊಡುತ್ತಿರಲಿಲ್ಲ. ಇಂಥ ಒಂದು ಕಟ್ಟುನಿಟ್ಟಿನ, ಶಿಸ್ತಿನ ಕ್ರಮ ಜೆ.ಜೆ.ಕಲಾಶಾಲೆಯಲ್ಲಿತ್ತು.

ಪಠ್ಯಕ್ರಮ :

ಜೀಜಾಬಾಯಿ ಜೇಮಶೇಡಜಿ ಕಲಾಶಾಲೆಯಲ್ಲಿ ಮೊದಲು ಎಲಿಮೆಂಟರಿ ಡ್ರಾಯಿಂಗ್ ಮತ್ತು ಡಿಸೈನ್‌ನಿಂದ ವರ್ಗಗಳನ್ನು ಪ್ರಾರಂಭಿಸಿದರು. ಒಂದೇ ವಿಭಾಗದಿಂದ ಪ್ರಾರಂಭವಾದ ಸಂಸ್ಥೆ ಮುಂದೆ ಉಪಶಾಖೆಗಳನ್ನು ಹೊಂದಿ ಬೆಳೆಯಿತು, ಅವುಗಳೆಂದರೆ ಮಾಡಲಿಂಗ್ ವಿಭಾಗ, ವಾಸ್ತುಶಿಲ್ಪ ವಿಭಾಗ, ಶಿಲ್ಪಕಲಾ ವಿಭಾಗ, ಟೀಚರ್ ಟ್ರೇನಿಂಗ್ ವಿಭಾಗ, ಆರ್ಟ ಆ್ಯಂಡ ಆಫ್ ಇಂಡಿಯಾ ಮತ್ತು ಲಾರ್ಡರೇ ವರ್ಕಶಾಪ್

೫. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ, ಡಾ. ಎಂ.ವ್ಹಿ. ಮಿಣಜಗಿ, ಪುಟ - ೧೨.



ಅಲ್ಲದೇ ಅಪ್ಲೈಡ ಆರ್ಟ (ವಾಣಿಜ್ಯ ಚಿತ್ರಕಲೆ) ವಿಭಾಗಗಳು ಪ್ರಾರಂಭಗೊಂಡವು. ಮೊದಲನೆಯ ಮೂರು ಗ್ರೇಡ್ ಪರೀಕ್ಷೆಗಳ ಕೋರ್ಸ ಇದಾಗಿತ್ತು. ಪ್ರವೇಶ ಪಡೆದ ತಕ್ಷಣ ಇವರಿಗಿರುವ ಪಾಠವೆಂದರೆ ಒಂದು ಘನಾಕೃತಿಯನ್ನು ಇವರ ಮುಂದೆ ಇರಿಸುತ್ತಿದ್ದರು. ಅದನ್ನು ಏನಿಲ್ಲವೆಂದರೂ ೩೦ ಬಾರಿ ರೇಖಾ ಚಿತ್ರಗಳನ್ನು ಚಿತ್ರಿಸಿದ ನಂತರ ಅದನ್ನು ಸಂಪೂರ್ಣವಾಗಿ ನೆರಳು -ಬೆಳಕಿನ ಛಾಯೆಯಿಂದ ಚಿತ್ರಿಸಿದಾಗಲೇ ಮುಂದಿನ ವಸ್ತುಗಳನ್ನು ಚಿತ್ರಿಸಲು ಅವಕಾಶ ದೊರೆಯುತ್ತಿತ್ತು. ಎರಡನೇ ವರ್ಷಕ್ಕೆ ಸರಳ ಗೈ ಚಿತ್ರ (Free hand) ಜಾಮಿತಿಯ ಚಿತ್ರ,(Geometry) ಮೂರ್ತಿಶಿಲ್ಪ (Modelling) ಮತ್ತು ದೃಗ್‌ದರ್ಶನ (Perspective) ಇವುಗಳ ಪೂರ್ವ ಸಿದ್ಧತೆಯ ಚಿತ್ರಗಳನ್ನು (Speciman) ಮೊದಲು ಮಾಡಿತೋರಿಸಬೇಕು, ಅವು ಮಾನ್ಯತೆ ಪಡೆದರೆ ಮಾತ್ರ ಅವುಗಳನ್ನು ಪೂರ್ತಿ ಅಳತೆ (Impiral)ಯಲ್ಲಿ ಚಿತ್ರಿಸುವುದು. ಅದರಲ್ಲಿ ಯಾವುದಾದರೂ ಒಂದು ಮಾನ್ಯತೆ ಪಡೆಯದಿದ್ದರೆ ಅವರು ಮರುವರ್ಷಕ್ಕೆ ಮತ್ತೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈ ಪದ್ಧತಿ ಥರ್ಡ ಗ್ರೇಡ್ ಪರೀಕ್ಷೆಗೂ ಇತ್ತು.[೬] ಮೂರನೇಯ ಪರೀಕ್ಷೆಯಲ್ಲಿ ಛಾಯೆ ಚಿತ್ರ (Shading) ಇದ್ದಿಲು ಕಡ್ಡಿಯಿಂದ ಚಿತ್ರ ರಚಿಸಿ ಪುಡಿ ಬಣ್ಣಗಳಿಂದ ಛಾಯ ಪ್ರಕಾಶವನ್ನು ವ್ಯಕ್ತಗೊಳಿಸುವುದು (Foliage) ಮಣ್ಣಿನ ಶಿಲ್ಪ ಇರಿಸಿ ಮಸಿಕಡ್ಡಿಯಿಂದ ಹೊರರೇಖೆ ಹಾಕಿ ಪುಡಿ ಬಣ್ಣಗಳನ್ನು ಹಚ್ಚಿ ಉಬ್ಬು-ತಗ್ಗುಗಳನ್ನು ಗುರುತಿಸುವುದು. ಛಾಯಾಚಿತ್ರದಂತೆ ನೆರಳು-ಬೆಳಕನ್ನು ತೋರಿಸುವ ಮಾದರಿ (Out line from cast) ಮತ್ತು (ಅರ್ಥೋಗ್ರಾಫಿಕ್ ಪೊಜೆಕ್ಷನ್) ಇಷ್ಟು ವಿಷಯಗಳು ಇರುತ್ತಿದ್ದವು. ಯಾರು ಈ ಮೂರು ಪರೀಕ್ಷೆಗಳನ್ನು ಪಾಸಾಗುವರು ಅವರು ಎಂಥ ಚಿತ್ರಗಳನ್ನು ಬಿಡಿಸಬಲ್ಲಷ್ಟು ಸಾಮರ್ಥ್ಯವನ್ನು ಹೊಂದಿರುತ್ತಿದ್ದರಲ್ಲದೇ ಅವರು ಜೆ.ಜೆ. ಕಲಾಶಾಲೆಯ ಬೇರೆ ಬೇರೆ ವಿಭಾಗಗಳಿಗೆ ಕಲಿಸಲು ಯೋಗ್ಯ ಎಂದು ತಿಳಿಸುತ್ತಿದ್ದರು. ಇಂಥ ಒಂದು ಉನ್ನತ ಕಲಾಶಾಲೆಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ ಮೆಟ್ರಿಕ್ ಪಾಸಾಗಿರಬೇಕು, ಹೈಸ್ಕೂಲ್‌ನಲ್ಲಿ ಇಂಟರಮಿಡಿಯಟ್ ಪರೀಕ್ಷೆಯಲ್ಲಿ ಪಾಸಾಗಿರಲೇಬೇಕು. ಇಂಗ್ಲೀಷ ಮಾತನಾಡಲು, ಓದಲು ಬರೆಯಲು ಬರುತ್ತಿರಬೇಕು, ಇಂಥ ಒಂದು ಶಿಸ್ತು ಅಲ್ಲಿ ಸದಾಕಾಲವೂ ಆಗ ಇರುತ್ತಿತ್ತು.

ಕಲ್ಕತ್ತಾ ಹಾಗೂ ಮದ್ರಾಸ್ (ಚೆನ್ನೈ) ಕಲಾಶಾಲೆಗಳು ಪಠ್ಯಕ್ರಮದ ಪಟ್ಟಿಯನ್ನು ತಯಾರಿಸುತ್ತಿದ್ದವು. ಇದರಿಂದ ಕಲ್ಕತ್ತಾ ಕಲಾಶಾಲೆಯ ಪ್ರಭಾವ ಮೊಟ್ಟಮೊದಲಿಗೆ ತಕ್ಕಮಟ್ಟಿಗೆ ಇದರ ಮೇಲಾಯಿತು ಯಾಕೆಂದರೆ ಕಲ್ಕತ್ತಾ ಆ ಕಾಲಕ್ಕೆ ಇಡೀ ದೇಶದ ರಾಜಧಾನಿಯಾಗಿತ್ತು. ಸಾಂಸ್ಕೃತಿಕ ಕೇಂದ್ರ, ರಾಜಕೀಯ ಆಂದೋಲನ ನೆಲಮನೆ, ಐರೋಪ್ಯ ಸಂಸ್ಕೃತಿಯ ಪ್ರಭಾವ ಪ್ರಬಲವಾಗಿದ್ದುದು ಅಲ್ಲೇ, ಅಲ್ಲಿನ ಕಲಾಶಾಲೆ ೧೮೫೪ರಷ್ಟು ಹಿಂದೆಯೇ ಖಾಸಗಿ ಶಾಲೆಯಾಗಿ ಆರಂಭವಾಯಿತು. ಇಂಡಸ್ಟ್ರಿಯಲ್ ಆರ್ಟ ಸೊಸಾಯಿಟಿ ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ. ಅದು ಈ ಶಾಲೆಯಲ್ಲಿ ಶಿಕ್ಷಣ ವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧ ಪಟ್ಟವೇ ಆಗಿರುತ್ತಿದ್ದವು. ಮುಖ್ಯವಾಗಿ ಮರದಲ್ಲಿ ಕೆತ್ತನೆ, ಲಿಥೋಗ್ರಾಫಿ, ಇವುಗಳೊಂದಿಗೆ ಅಲಂಕರಣೆಯನ್ನು ಅದೆಷ್ಟು ಕೂಡಿಸುತ್ತಿದ್ದರು, ಶಾಲೆಗಳಲ್ಲಿ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಆಗ ನಾಡಿನ ಒಡೆಯನಾಗಿದ್ದ ಲಾರ್ಡ ಕರ್ಜನ್‌ನ ಆಗ್ರಹವಾಗಿತ್ತು. ಇದರಿಂದಾಗಿ ಆಗ ಕಲ್ಕತ್ತಾದಲ್ಲಿ ಕಲಿಸತಕ್ಕಂತಹ ವಿಷಯಗಳು ಇವುಗಳಾಗಿದ್ದವು. ಆಭರಣದ ರೇಖಾಚಿತ್ರ (Ornamental Drawing) ಪ್ಲಾಸ್ಟರ್‌ನಿಂದ ಮೂರ್ತಿ ರಚನೆ, (Modelling and Casting in Plaster)

೬. N.N. Kelkar : Sir J.J.School of Art Bombay, A Hundred years of its Carrer, Page - 73.

[illegible]




ಕುಂಭ ಕಲೆ (Manufacture of Pottery) ಮರಕೆತ್ತನೆ ಕೆಲಸ, (Wood Engraving)ಅಚ್ಚು ತೆಗೆಯುವುದು (Lithography) ಹಾಗೂ ಛಾಯಾ ಚಿತ್ರ (Photgraphy)ಈ ಎಲ್ಲ ವಿಷಯಗಳನ್ನೊಳಗೊಂಡ ಕಲ್ಕತ್ತಾ ಹಾಗೂ ಮದ್ರಾಸ್ ಕಲಾಶಾಲೆಯ ಪ್ರಭಾವವನ್ನು ನಾವು ಮುಂಬೈ ಜೆ.ಜೆ. ಕಲಾಶಾಲೆಯ ವಿಷಯಗಳಲ್ಲಿ ಅತ್ಯಂತ ಸುಲಭವಾಗಿ ಗುರುತಿಸಬಹುದಾಗಿದೆ. ಆದ್ದರಿಂದ ಎಲ್ಲ ಹಾಗೂ ಕರಕುಶಲ ಕಲೆಗಳಿಗೂ ಮೂಲಭೂತವಾದ ಶಾಲೆ ಇದಾದ್ದರಿಂದ ರೇಖಾಚಿತ್ರ ಹಾಗೂ ವರ್ಣಚಿತ್ರಗಳ (Department of Drawing and Painting)ವಿಭಾಗಗಳನ್ನು ಪ್ರಾರಂಭಿಸಿದ್ದರು.[೭]

ವರ್ಗದಲ್ಲಿ (Angular perspective, Anatomy, Composition, Portrait and Life Painting) ಈ ವಿಷಯಗಳನ್ನು ಪಠ್ಯಕ್ರಮವಾಗಿ ಹೇಳಿ ಕೊಡುತ್ತಿದ್ದರು. ಪಠ್ಯಕ್ರಮವನ್ನು ಬ್ರಿಟಿಷರು ಯಾವ ರೀತಿ ಮಾಡುತ್ತಿದ್ದರೋ ಅದೇ ರೀತಿಯಲ್ಲಿ ಮುಂದುವರೆಸಿಕೊಂಡು ಬಂದರು. ರೇಖಾಚಿತ್ರಗಳ ಅಭ್ಯಾಸ, ಅನಾಟಮಿಯ ಅಭ್ಯಾಸ, ಹೊರಗಡೆ ಹೋಗಿ ಚಿತ್ರಗಳನ್ನು ರಚಿಸುವುದು (Out door Sketches) ಸ್ಥಿರ ರೂಪ ಚಿತ್ರಣ, ಮೂರ್ತಿಶಿಲ್ಪ ಚಿತ್ರಣ, ಜೀವ ಮಾದರಿಯ (Life) ಚಿತ್ರಗಳಂತೆ ಮುಂತಾದವುಗಳು ವಿಷಯಗಳಾಗಿದ್ದವು. ಆಗಲೂ ಸಹ ಮನುಷ್ಯರ ದೇಹಗಳನ್ನು ಕತ್ತರಿಸಿ ಪ್ರತಿಯೊಂದು ಮಾಂಸ ಖಂಡಗಳ ಆಕಾರಗಳನ್ನು ತಿಳಿದುಕೊಳ್ಳಬೇಕಾಗಿತ್ತು. ಇದರ ಸಲುವಾಗಿಯೇ ವಾರಕ್ಕೊಂದು ಸಾರಿಯಂತೆ ಜೆ.ಜೆ. ಆಸ್ಪತ್ರೆಗೆ ಹೋಗಬೇಕಾಗುತ್ತಿತ್ತು. ಅನಾಟಮಿ ಪುಸ್ತಕಗಳಲ್ಲಿರುವ ಚಿತ್ರಗಳನ್ನು ಅಭ್ಯಾಸ ಮಾಡಿದರೆ ಮಾನವನ ದೇಹದಲ್ಲಿರುವ ಭಾಗಗಳನ್ನು ಅಷ್ಟು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗದು.ಈ ದೃಷ್ಟಿಯಿಂದ ಶವಗಳನ್ನು ಕೊಯ್ದು ಪ್ರತಿಯೊಂದು ಭಾಗವನ್ನು ವೀಕ್ಷಿಸಿ ಅಭ್ಯಾಸ ಮಾಡುವದರಿಂದ ಅನಾಟಮಿ ಬಗ್ಗೆ ಸಂಪೂರ್ಣವಾಗಿ ಮಾಹಿತಿಯಾಗುತ್ತದೆ,ಇದರಿಂದ ಮನುಷ್ಯನ ಯಾವುದೇ ಭಾಗವನ್ನು ಸರಾಗವಾಗಿ ಚಿತ್ರಿಸಬಹುದು. ಇದರಿಂದ ಚಿತ್ರಿತಗೊಂಡ ಆ ಚಿತ್ರದಲ್ಲಿ ವ್ಯಕ್ತಿಯ ಪ್ರತಿಯೊಂದು ಅವಯವಗಳನ್ನು ನಾವು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ, ಎಂದು ಅಧ್ಯಾಪಕರು ಹೇಳುತ್ತಿದ್ದರು. ಇಲ್ಲಿ ಪ್ರತಿಯೊಂದು ವಿಷಯವೂ ಕೂಡ ಇದೇ ರೀತಿಯ ಕಲಿಕೆಯಿಂದ ಕೂಡಿತ್ತು. ನಿಸರ್ಗ ಚಿತ್ರಣದಲ್ಲಿಯೂ ಕೂಡ ಹಿನ್ನೆಲೆಯ ವಿಷಯವಾಗಿ ಕಲಿಸುತ್ತಿದ್ದರು. ಬಣ್ಣಗಳ ದೃಷ್ಟಿಯಿಂದ ದೃಗ್ ದರ್ಶನದ ದೃಷ್ಟಿಯಿಂದ ದೂರ, ಸಮೀಪ ಅರ್ಥೈಸಿಕೊಳ್ಳಲು ನಿಸರ್ಗದ ಸಮೀಪ ಹೋಗಿ ಬಣ್ಣ-ನೆರಳು-ಬೆಳಕಿನ ರೀತಿಯಲ್ಲಿ ತಿಳಿದು ಕೊಳ್ಳುವುದು ಕಲಾಕಾರನ ಬೆಳವಣಿಗೆಗೆ ಅವಶ್ಯಕವೂ ಆಗಿತ್ತು. ಇಂಥ ಒಂದು ಶಿಸ್ತಿನ ಪಠ್ಯಕ್ರಮವು ಜೆ.ಜೆ. ಕಲಾಶಾಲೆಯಲ್ಲಿತ್ತು.

ಮಿಣಜಗಿಯವರ ಅತ್ಯಂತ ಪ್ರೀತಿಯ ವಿಷಯದ ಅಧ್ಯಯನವನ್ನು ಇಲ್ಲಿ ಸಮಾಧಾನ ಏಕಾಗ್ರತೆಯಿಂದ ಸಾಗಿಸಲು ಅವಕಾಶ ದೊರೆಯಿತೆನ್ನಬೇಕು, ಹೀಗೆ ದೊರೆತ ಅನುಕೂಲತೆಗಳನ್ನು ಅವರು ಸದುಪಯೋಗಪಡಿಸಿಕೊಂಡರು. ಚಿತ್ರಕಲೆಯಲ್ಲಿ ಪರಿಣಿತಿಯನ್ನು ಪಡೆಯಲು ಸಮಯವನ್ನು ಸಾರ್ಥಕವಾಗಿ ಉಪಯೋಗಿಸಕೊಳ್ಳತೊಡಗಿದರು. ಇನ್ನು ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಅವರು ನಾನಾ ಬಗೆಯ ಪ್ರಯೋಗಗಳನ್ನು ನಡೆಸತೊಡಗಿದರು. ಬಹುಶಃ ಅವರಿಗೆ ಹಾಗೆಯೇ ಕುಳಿತು ಸಮಯವನ್ನು ಕಳೆಯುವುದು ಗೊತ್ತೇ ಇರಲಿಲ್ಲವೆಂದರೂ ಸರಿಯೇ ![೮] ಏನಾದರೂ ಒಂದನ್ನು ಮಾಡುತ್ತಲೇ ಇರಬೇಕು ಅದು ಯಾವಾಗಲೂ

೭. ಲಕ್ಷ್ಮಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿ ಜೀವನ ಕಲಾಕೃತಿಗಳು ಒಂದು ಅಧ್ಯಯನ , ಅಪ್ರಕಟಿತ ಪಿ. ಎಚ್.ಡಿ. ಮಹಾಪ್ರಬಂಧ, ಪುಟ - ೪೭.

೮. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ - ೧೨.



ಚಿತ್ರಕಲೆಯ ವಿಷಯವಾಗಿಯೇ ಇರುತ್ತಿತ್ತು. ತುಂಬು ಹೃದಯದಿಂದ, ತುಂಬು ಮನಸ್ಸಿನಿಂದ ಅವರು ಚಿತ್ರಕಲೆಯನ್ನು ಕರಗತಗೊಳಿಸಿಕೊಳ್ಳಲು ಅದರ ಆರಾಧನೆಯನ್ನೇ ನಡೆಸುತ್ತಾ ಬಂದವರೆಂದರೆ ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಈ ಏಕಾಗ್ರತೆಯೇ ಅವರನ್ನು ಈ ರಂಗದಲ್ಲಿ ಮುನ್ನಡೆಸಿತು. ಅದರಲ್ಲಿ ಪರಿಪೂರ್ಣತೆಯನ್ನು ಪಡೆಯಲು, ಯಶಸ್ಸು ಸಾಧಿಸಲು ಅನುವು ಮಾಡಿಕೊಟ್ಟಿತು. ಆದರೆ ಇದಕ್ಕಾಗಿ ಅವರು ಅವಿರತವಾಗಿ ಪರಿಶ್ರಮಿಸಿದರು. ಬಿಡುವಿನ ಸಮಯವನ್ನು ಅವರೆಂದು ನಿರರ್ಥಕಗೊಳಿಸಲಿಲ್ಲವೆನ್ನುವುದನ್ನು ಇಲ್ಲಿ ಅವಶ್ಯವಾಗಿ ನೆನೆಯಬೇಕು. ಇಂಥ ಅವಕಾಶಗಳು ದೊರೆತಾಗ ಅವರು ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತಿತರ ಅನೇಕ ಕಲಾವೈಭವ ಮೆರೆದ ಸ್ಥಳಗಳನ್ನು ಸಂದರ್ಶಿಸಿ ಸೂಕ್ಷ್ಮ ಪರಿಶೀಲನೆ,ಅವಲೋಕನಗಳಿಂದ ಚಿತ್ರಕಲೆ ಅಧ್ಯಯನ ನಡೆಸುವುದು ಅವರಿಗೆ ರೂಢಿಯಾಗಿತ್ತು. ಅವರಿನ್ನು ವಿದ್ಯಾರ್ಥಿಯಾಗಿರುವಾಗಲೇ ಹಲವಾರು ಉತ್ತಮವಾದ ಕಲಾಕೃತಿಗಳು ಮೂಡಿಬರಲು ಅವರ ಈ ಆಳ ಅಧ್ಯಯನವು ಕಾರಣವಾಗಿ ಪರಿಣಮಿಸಿತೆನ್ನುವುದು ಅವರ ಸಾಧನೆಯ ದಿಸೆಯಲ್ಲಿ ಒಂದು ಮಹತ್ವದ ಅಂಶವೆನಿಸಿದೆ, ಹೀಗೆ ಅವರು ಚಿತ್ರರಂಗಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರೆನ್ನುವ ಮಾತು ವಿಧಿತವಾಗುವುದು. ವಿದ್ಯಾರ್ಥಿದೆಸೆಯಲ್ಲಿಯ ಸಾಮಾನ್ಯವಾದ ಹುಡುಗಾಟಿಕೆಗಳಿಂದಲೂ ಅವರು ದೂರವಾಗಿದ್ದರು. ಅಂತೆಯೇ ಅವರು ಚಿತ್ರಕಲೆಯಲ್ಲಿ ಚೆನ್ನಾಗಿ ಪಳಗುವುದು ಸಾಧ್ಯವಾಗಿ ಪರಿಣಮಿಸಿತು, ತಾವು ಸಂಚರಿಸಿದ ಸ್ಥಳಗಳಿಂದ ಅನೇಕ ಚಿತ್ರಗಳನ್ನು ಬರೆದು ತರುವುದು ಸಾಧ್ಯವಾಯಿತು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅವರು ತೋರಿದ ಈ ಏಕಾಗ್ರತೆ ತನ್ಮಯತೆಗಳು ಹುಸಿ ಹೋಗಲಿಲ್ಲ, ಆ ಕಾಲದಲ್ಲಿಯೇ ಅವರಿಗೆ ಹೆಸರು ಕೀರ್ತಿಗಳು ಲಭಿಸುವದರೊಂದಿಗೆ ಅನೇಕ ಉತ್ತಮವಾದ ಅವಕಾಶಗಳು ಕೂಡ ದೊರೆತವೆನ್ನುವುದು ಸಂತೋಷದ ಸಂಗತಿ.

ಕಲಾಶಿಕ್ಷಣದೊಂದಿಗೆ ಅವರ ಜೀವನವು ಅತ್ಯಂತ ಯಶಸ್ವಿಯಾಗಿದ್ದಿತು. ಯಾವ ಕ್ಲಾಸನಲ್ಲಿಯೂ ಅವರು ಹಿಂದುಳಿಯಲಿಲ್ಲ. ಪ್ರಥಮ ವರ್ಗದಲ್ಲಿಯೇ ಅವರು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾ ಬಂದರೆಂಬುದು ಗಮನಿಸಬೇಕಾದ ಮಾತು, ೧೯೨೯ ರಲ್ಲಿ ವರ್ಣ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದರು. ಈ ಪರೀಕ್ಷೆಯನ್ನು ಪ್ರಶಸ್ತಿ ಸಹಿತ ಪ್ರಥಮ ದರ್ಜೆಯಲ್ಲಿ ಪೂರೈಸಿದ್ದರು, ಅಂತಿಮ ವರುಷದ ಡಿಪ್ಲೋಮಾ ಪರೀಕ್ಷೆಗಾಗಿ ಅವರು ಆರಿಸಿಕೊಂಡು ಚಿತ್ರಿಸಿದ ಚಿತ್ರದ ವಿಷಯವು ತುಂಬಾ ಅಪೂರ್ವವಾದುದು.

ಗುಜರಾಥಿ ಸ್ತ್ರೀಯರು ಪವಿತ್ರ ಜಲ ತುಂಬಿದ ಕೊಡಗಳನ್ನು ಹಾಗೂ ಪವಿತ್ರ ಗ್ರಂಥಗಳನ್ನು ತಲೆಯ ಮೇಲೆ ಕೊಂಡ್ಯೊಯ್ಯುವ ಧಾರ್ಮಿಕ ಉತ್ಸವದ ಚಿತ್ರವು ಅದಾಗಿತ್ತು. ಮಿಣಜಗಿಯವರು ಎಳೆತನದಲ್ಲಿಯೇ ಎಷ್ಟು ಸೂಕ್ಷ್ಮವಾಗಿ ಪರಿಸರದ ಅವಲೋಕನ ಮಾಡುತ್ತಿದ್ದರು, ತಮ್ಮ ಸುತ್ತ ಮುತ್ತಲಿನ ಸಂಗತಿಗಳನ್ನು ಪರಿಗ್ರಹಿಸುತ್ತಿದ್ದರು ಎಂಬುವುದಕ್ಕೆ ಈ ಚಿತ್ರ ಉತ್ತಮ ಉದಾಹರಣೆಗೆ ಒಂದು ನಿದರ್ಶನವಾಗಿರುತ್ತದೆ. ಜೆ.ಜೆ. ಕಲಾಶಾಲೆಯಲ್ಲಿಯೇ ಆರ್ಟ ಮಾಸ್ಟರ ವ್ಯಾಸಂಗವನ್ನು ಕೂಡ ಪೂರ್ಣಗೊಳಿಸಿದರು. ಹೀಗೆ ಚಿತ್ರಕಲಾ ಶಿಕ್ಷಣದಲ್ಲಿ ಅವರು ಅತ್ಯುನ್ನತ ಪದವಿ ಪ್ರಶಸ್ತಿಗಳನ್ನು ಪಡೆಯುವದರೊಂದಿಗೆ ಅದರಲ್ಲಿ ನೂರ್ಪಡಿಯಾಗುತ್ತಿದ್ದರು. ಸ್ವಯಂ ಪ್ರತಿಭೆಯನ್ನು ಅವರು ತೋರಿಸುತ್ತಿದ್ದರು.

ಕರ್ನಾಟಕಕ್ಕೆ ಇದು ಬಹು ಹೆಮ್ಮೆಯ ವಿಷಯವೇ ಸರಿ ಇಲ್ಲಿರುವಾಗಲೇ ಒಂದು ವರುಷ ಡೆಕಾರೇಶನ್ ವರ್ಗದಲ್ಲಿ ಅಧ್ಯಯನ ಮಾಡಲು ಅವರಿಗೆ ಶಿಷ್ಯವೇತನ ಕೂಡಾ ದೊರಕಿತ್ತು ಎಂಬುದು ಗಣನೀಯವಾದ ಸಂಗತಿಯಾಗಿರುತ್ತದೆ.

ಮಡಿವಾಳಪ್ಪನವರು ಜೆ.ಜೆ. ಕಲಾಶಾಲೆಯಲ್ಲಿ ವಿದ್ಯಾರ್ಥಿಯಾಗಿರುವಾಗಲೇ ಅನೇಕ ಚಿತ್ರಕಲಾ

[illegible]



ಪ್ರದರ್ಶನಗಳಲ್ಲಿ ವಿವಿಧ ಬಗೆಯ ಚಿತ್ರಗಳ ನಿರ್ಮಾಣದಲ್ಲಿ ಭಾಗವಹಿಸಲು ಇವರಿಗೆ ಕರೆ ಬರುತ್ತಿದ್ದವೆಂಬುದು ಅವರು ಈ ಕಲೆಯಲ್ಲಿ ಎಷ್ಟು ಪಳಗಿದ್ದರು, ಪರಿಣತಿಯನ್ನು ಹೊಂದಿದ್ದರು ಎಂಬುದಕ್ಕೆ ತಕ್ಕ ನಿದರ್ಶನಗಳೆನಿಸಿವೆ.

ಇಂಗ್ಲೆಂಡದಲ್ಲಿಯ ವೆಂಬ್ಲಿ ಕಲಾಪ್ರದರ್ಶನಕ್ಕಾಗಿ (೧೯೨೪-೨೫) ಇವರು ತುಂಬಾ ಪರಿಶ್ರಮಿಸಿ ಚಿತ್ರಗಳನ್ನು ಬರೆದು ಕಳಿಸಿದರು. ಆ ಸಂದರ್ಭಕ್ಕಾಗಿ ರಚಿಸಿ ಕಳಿಸಿದ ವರ್ಣ ಚಿತ್ರಗಳು ಸೌಥ್ ಕನ್ನಿಂಗ್ಟನ್ ಮ್ಯೂಸಿಯಂ ಹಾಗೂ ವೆಂಬ್ಲಿ ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶಿತವಾಗಿ ತಮ್ಮ ಮೆರಗನ್ನು ತಂದು ಕೊಟ್ಟವು. ಅವರು ಚಿತ್ರಕಲೆಯಲ್ಲಿ ನಡೆಸಿದ ನಡೆಸುತ್ತಿರುವ ಆಳವಾದ ಅಧ್ಯಯನಕ್ಕೆ ಇವು ಉತ್ತಮ ನಿದರ್ಶನವೆನಿಸಿದವಲ್ಲದೆ ಮಿಣಜಗಿಯವರಿಗೆ ವಿದ್ಯಾರ್ಥಿ ದೆಸೆಯಲ್ಲಿ ಅನೇಕ ಪಾರಿತೋಷಕಗಳನು, ಪ್ರಶಸ್ತಿಗಳನ್ನು ತಂದುಕೊಟ್ಟವು. ಮಡಿವಾಳಪ್ಪನವರ ಕಲಾನೈಪುಣ್ಯತೆಗೆ ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಕೂಡ ಬಹುವಾಗಿ ಎದ್ದು ಕಾಣುವಂತಾಯಿತು. ಕಲಾಕ್ಷೇತ್ರದಲ್ಲಿ ಅವರು ಇನ್ನೂ ಹೆಚ್ಚು ಪಳಗಲು, ಬೆಳಗಲು ಇಂಥ ಅವಕಾಶ ತಮ್ಮ ಚಿತ್ರಕಲಾ ನೈಪುಣ್ಯವನ್ನು ತೋರಿಸಲು ಇದೊಂದು ಸದವಕಾಶ ಒದಗಿ ಬಂತು. ಆಗಿನ ವೈಸ್ ರೀಗಲ್ ಭವನದಲ್ಲಿ ಗೋಡೆಗಳನ್ನು ಅಲಂಕರಿಸುವ ಚಿತ್ರಗಳನ್ನು ನಿರ್ಮಿಸಲು ಈ ಸಂಸ್ಥೆಯ ಕೆಲ ವಿದ್ಯಾರ್ಥಿಗಳಿಗೆ ಒಪ್ಪಿಸಲಾಯಿತು. ಅವರಲ್ಲಿ ಮಿಣಜಗಿಯವರು ಇದ್ದರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ, ಅವರು ಆರಿಸಿಕೊಂಡಿರುವ ವಿಷಯ ಶಿಲ್ಪಶಾಸ್ತ್ರ ಎಂಟು ಅಡಿ ಆರು ಅಂಗುಲ ಅಗಲವಾಗಿದ್ದು ೪೬ ಅಡಿ ೩ ಅಂಗುಲ ಎತ್ತರವಿರುವ ಈ ಚಿತ್ರ ತುಂಬಾ ವಿಶಿಷ್ಟವಾದ ಶೈಲಿಯಲ್ಲಿ ರೂಪಗೊಂಡಿತು. ಮಹಮ್ಮದೀಯರ ಅಂತಃಪುರದ ಒಂದು ವಿಶಿಷ್ಟ ದೃಶ್ಯಾವಳಿಯನ್ನು ಅವರು ಅಲ್ಲಿ ಚಿತ್ರಿಸಿದ್ದರು.

ಗೋಳಗುಮ್ಮಟದ ಸಣ್ಣ ಪ್ರತಿ ಕೃತಿಯನ್ನು ಅಲ್ಲಿ ಮೂಡಿಸಲು ಅವರು ಮರೆತಿರಲಿಲ್ಲವೆಂಬುದನ್ನು ನೋಡಿದಾಗ ಬಿಜಾಪೂರದ ಐತಿಹಾಸಿಕ ಸಾಂಸ್ಕೃತಿಕ ಸೊಗಡಿನ ಹಿನ್ನೆಲೆಯಲ್ಲಿರುವ ಸೌಂದರ್ಯದ ಸೊಬಗನ್ನು ಬಿಂಬಿಸುವಲ್ಲಿ ಮಡಿವಾಳಪ್ಪವನರಿಗೆ ಅಗಾಧವಾದ ಪರಿಣಾಮವನ್ನು ಬೀರಿತ್ತೆಂಬುದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಲಂಡನ್‌ನಿನ ಕಲಾವಿಷಯಗಳಿಗೆ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದ ಹಾಗೂ ಅತಿ ವಿಶಿಷ್ಟತೆಯನ್ನು ಹೊಂದಿದ ಏಕೈಕ ಪತ್ರಿಕೆ ಅಪೊಲೊ ದಲ್ಲಿ ಈ ಚಿತ್ರವನ್ನು ಪ್ರಕಟಿಸಿದ್ದನ್ನು ಗಮನಿಸಬಹುದು.[೯] ಅದಲ್ಲದೇ ಡಬ್ಲ್ಯು. ಇ. ಗ್ಲಾಡಸ್ಟೋನ್ ಸೊಲೊಮನ್ (ಡಿ.ಇ.ಎಸ್) ಅವರ ಕೃತಿ 'Mural Painting at the Bombay School' ದಲ್ಲಿ ಈ ಚಿತ್ರ ಪ್ರಕಟವಾಗಿದೆ, ಇವರು ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟದ ಆಗಿನ ನಿರ್ದೇಶಕರು ಕೂಡಾ ಆಗಿದ್ದರು. ತಮ್ಮ ವಿದ್ಯಾರ್ಥಿಗಳ ಅಪೂರ್ವ ಚಿತ್ರಗಳನ್ನು ಅವರು ಆರಿಸಿದ್ದರು, ಅದರಲ್ಲಿ ಮಡಿವಾಳಪ್ಪ ಮಿಣಜಗಿಯವರ ಚಿತ್ರವು ಸ್ಥಾನವನ್ನು ಪಡೆದಿತ್ತು ಎಂಬುದು ಗಮನಿಸಬೇಕಾದ ಸಂಗತಿಯಾಗಿರುತ್ತದೆ.

ಸುಪ್ರಸಿದ್ಧ ನ್ಯಾಯವಾದಿ ಮತ್ತು ಹೆಸರಾಂತ ಬ್ಯಾರಿಸ್ಟರ ಜಯಕರ ಅವರ ಅರಮನೆಯಲ್ಲಿಯ ಗೋಡೆಗಳನ್ನು ಅಲಂಕರಿಸುವ ವರ್ಣಚಿತ್ರ ದೃಶ್ಯಾವಳಿಗಳನ್ನು ರೂಪಿಸುವ ಗೌರವ ಡಾ. ಮಡಿವಾಳಪ್ಪ ಮಿಣಜಗಿಯವರಿಗೆ ಲಭ್ಯವಾಗಿತ್ತೆಂಬುದುದನ್ನು ಇಲ್ಲಿ ಗಮನಿಸಲೇಬೇಕಾಗುತ್ತದೆ. ಅಲ್ಲದೇ ಅನೇಕ ಭಾರತೀಯ ಕಲಾ ಪತ್ರಿಕೆಗಳಲ್ಲಿ ಅವರ ಈ ಅಪರೂಪ ಚಿತ್ರಕಲೆಯೂ ಪ್ರಬುದ್ಧತೆಯನ್ನು ಪರಿಪೂರ್ಣತೆಯನ್ನು ಗಳಿಸಿಕೊಂಡಿತ್ತೆನ್ನುವುದಕ್ಕೆ ಉತ್ತಮ ನಿದರ್ಶನ ಅದರ ಜೊತೆಗೆ ಈ ಕಲಾವಿದ ತುಳಿವ ದಾರಿ ಯಾವುದು ?

---

೯. Rewansiddeshwar Hannerdumath : Minjagi Artists & the Man



ಯಾವ ದಿಸೆಯಲ್ಲಿ ಅವನ ಚಿತ್ರಕಲೆ ಪ್ರವರ್ಧಮಾನಕ್ಕೆ ಬರಬಹುದು ಎಂಬುದನ್ನು ತೋರ್ಪಡಿಸಿದವು. ಅವರು ಶ್ರೇಷ್ಠ ಚಿತ್ರಕಲಾವಿದರಾಗುವ ಸಲ್ಲಕ್ಷಣಗಳನ್ನು ಈ ಪ್ರತಿಯೊಂದು ಸಂಗತಿಯಲ್ಲಿಯೂ ನಾವು ಗುರುತಿಸಬಹುದು. ಅವರ ಹೆಚ್ಚಿನ ಅಧ್ಯಯನಕ್ಕೆ ಅವರ ಕಾರ್ಯಕ್ಷೇತ್ರದ ವಿಸ್ತರಣಕ್ಕೂ ಇವು ಒಳ್ಳೆಯ ಭೂಮಿಕೆಯಾಗಿ ಪರಿಣಮಿಸಿದವು. ತಮ್ಮ ವ್ಯಾಸಂಗವನ್ನು ಈ ಕ್ಷೇತ್ರ ಇನ್ನೂ ಮುಂದುವರೆಸಬೇಕು, ಉನ್ನತಗೊಳಿಸಿಕೊಳ್ಳಬೇಕು, ಎಂಬ ಮಹೋನ್ನತ ಧ್ಯೇಯವನ್ನು ಅವರು ಹೊಂದಿದ್ದರು. ಮುಂಬಯಿ ಕಲಾ ಸಂಸ್ಥೆಯ ಶಿಕ್ಷಣವು ಪರಿಪೂರ್ಣಗೊಂಡು ಅನೇಕ ಭಾರತೀಯ ಚಿತ್ರಕಲಾ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನು ದೊರಕಿಸಿಕೊಟ್ಟದ್ದರಿಂದ ಈ ಧ್ಯೇಯ ಸಾಧನೆಗೆ ಕಾಲವೂ ಆಗ ಪಕ್ವವಾಗಿತ್ತು.

ಕಲಾಶಾಲೆಯ ಅಧ್ಯಾಪಕ ವರ್ಗ ಬೋಧನಾ ಪದ್ಧತಿ :

ಸರ್ ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಾಪಕ ವರ್ಗ ಬ್ರಿಟಿಷ ಡೈರೆಕ್ಟರವರ ಕೆಳಗೆ ಪಳಗಿದಂಥವರರಾಗಿದ್ದರಿಂದ ಅದೇ ಶಿಸ್ತು, ಠೀವಿ, ಕಾರ್ಯ ನಿಷ್ಠೆ, ಯಾವುದೇ ಕಾರ್ಯಗಳಿರಲಿ ನಿಯಮ ಬದ್ಧವಾಗಿ ನಡೆಯಬೇಕು ಮತ್ತು ಅಹಿತಕರ ವಾತಾವರಣವನ್ನು ಎಂದು ಸಹಿಸುವಂಥವರಲ್ಲ. ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟನ ನಿಯಮಕ್ಕೆ ಅನುಗುಣವಾಗಿ ದೃಢವಾದ ಮನಸ್ಸಿಟ್ಟು ಅಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಇವರು ಅಧ್ಯಯನ ಮಾಡುತ್ತಿರುವಾಗ ದಿವಂಗತ ಅಗರಕರ, ತ್ರಿನಿದಾದಾ ರಾವ್ ಬಹಾದ್ದೂರ, ದುರಂಧರ, ಜಸಕರ, ಚುರ್ಡೇಕರ ಮೊದಲಾಗಿ ಪ್ರಸಿದ್ಧ ಕಲಾವಿದರ ಶಿಷ್ಯತ್ವವನ್ನು ವಹಿಸಿದ ಮಡಿವಾಳಪ್ಪ ಮಿಣಜಗಿಯವರಿಗೆ ಕಲಾಭಿಜ್ಞತೆಯ ಪರಿಚಯವಾಗಿ ತಮ್ಮ ಶಿಕ್ಷಣಕ್ಕೆ ಈ ಹಿರಿಯ ಕಲಾವಿದರ ಅನುಭವದ ಪ್ರಯೋಜನವನ್ನು ಮಾಡಿಕೊಳ್ಳಲು ಅನವು ದೊರೆತಿದ್ದು ಅವರ ಒಂದು ಭಾಗ್ಯ, ವಿಶೇಷವೆಂದೇ ಹೇಳಬೇಕು. ತಮ್ಮ ಈ ಗುರುವೃಂದದ ಬಗೆಗೆ ಮಿಣಜಗಿಯವರಿಗೆ ತುಂಬಾ ಅಭಿಮಾನ, ಅವರು ಹೆಮ್ಮೆಯಿಂದ ಯಾವಾಗಲೂ ಹೇಳಿಕೊಳ್ಳುತ್ತಿದ್ದರು.[೧೧] ಅವರ ಶಿಷ್ಯ ವಾತ್ಸಲ್ಯವನ್ನು , ಅವರ ಪ್ರೌಢವಾದ ಕಲಿಸುವಿಕೆಯ ರೀತಿ ನೀತಿಯನ್ನು ಅವರು ಹೆಮ್ಮೆಯಿಂದ ನುಡಿಯುತ್ತಾ ಅವರಲ್ಲಿರುವ ಕಲಿಸುವಿಕೆ ಅವರ ಮಾತುಗಳಲ್ಲಿಯ ಸ್ಫೂರ್ತಿ ಹುರುಪು ಹುಮ್ಮಸ್ಸುಗಳನ್ನು ತಾವೆಂದೂ ಮರೆಯಲಾರೆವೆಂದು ಅವರು ಹೇಳಿಕೊಳ್ಳುತ್ತಿದ್ದರು.

ಕಲಾಶಾಲೆಯ ನಿಯಮಕ್ಕೆ ಅನುಗುಣವಾಗಿ ಮಡಿವಾಳಪ್ಪನವರು ತಮ್ಮ ಏಕಾಗ್ರತೆಯಿಂದ ಕಲಾಕ್ರಿಯೆಯಲ್ಲಿ ತೊಡಗುತ್ತಿದ್ದರೆ, ಗುರುಗಳ ಜೊತೆಗೆ ಸದಾ ಒಡನಾಟದೊಂದಿಗೆ ತಮ್ಮ ಚಿತ್ರಗಳನ್ನು ತೋರಿಸುವುದು, ಇವುಗಳ ಜೊತೆಗೆ ಮಣ್ಣಿನಿಂದಸ ತಯಾರಿಸಿದ ಮೂರ್ತಿ ಶಿಲ್ಪಗಳನ್ನು ಎದುರಿಗಿಟ್ಟುಕೊಂಡು ಚಿತ್ರಿಸುವುದು. ಆ ಒಂದು ಚಿತ್ರ ಚಿತ್ರವನ್ನು ಬೇರೆ ಬೇರೆ ಆಯಾಮಗಳಲ್ಲಿ ಹತ್ತು ಹದಿನೈದು ಸಲವಾದರೂ ಚಿತ್ರಿಸಬೇಕಾಗುತ್ತಿತ್ತು. ರೇಖೆಯಿಂದ ಮೂರ್ತಿಯ ಹೊರಮೈಯನ್ನು ಚಿತ್ರಿಸುವುದು ಐದಾರು ಬಾರಿ ರೇಖೆಗಳಿಂದ ಚಿತ್ರಿಸಿದ ಮೇಲೆ ಸರಿಯೆಂದು ತೀರ್ಮಾನವಾದ ಬಳಿಕ ಅದರಲ್ಲಿ ಬೆಳಕು-ನೆರಳುಗಳನ್ನು ಮಾಡಲು ತಿಳಿಸುತ್ತಿದ್ದರು. ಹೀಗೆ ಇಲ್ಲಿ ಯಾವುದೇ ಚಿತ್ರವಿರಲಿ, ಚಿತ್ರಸಬೇಕಾದರೆ ಮೊದಲು ಅದರ ಗುಣಾತ್ಮಕ ಅಂಶಗಳನ್ನು ಗಮನಿಸಬೇಕು. ತಿಳಿದುಕೊಂಡ ನಂತರ ರಚನಾತ್ಮಕ ಕಲೆಗೆ ತೊಡಗಲು ಸಿದ್ಧರಾಗಬೇಕು ಎಂಬುದು ಗುರುಗಳ ಕಟ್ಟುನಿಟ್ಟಾದ ಆಜ್ಞೆಯಾಗಿತ್ತು. ಇದಲ್ಲದೆ ಕಲಾಶಾಲೆಯಲ್ಲಿ ರೇಖಾಚಿತ್ರ

---

೧೧. Rewansiddeshwar Hannerdumath : Minjagi Artists & the Man, Page - 7

[illegible]



ನಂತರ ಸಂಯೋಜನಾ ವಿಷಯಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಿದ್ದರು. ಸಂಯೋಜನೆ ಇಲ್ಲಿ ಪ್ರಧಾನ ವಿಷಯವಾಗಿತ್ತು. ಇದರಲ್ಲಿ ಆಂತರಿಕವಾಗಿ ಗಮನಿಸಲ್ಪಟ್ಟಾಗ ಹೆಚ್ಚಾಗಿ ಮನುಷ್ಯರ ಚಿತ್ರಗಳಿಂದ ಕೂಡಿದ ಚಿತ್ರಗಳನ್ನು ರಚನೆಗೆ ತೊಡುಗುತ್ತಿದ್ದರು, ಅಂದರೆ ಸಂಯೋಜನೆಯಲ್ಲಿ ಯಾವುದೇ ವಸ್ತುವನ್ನು ಅವುಗಳ ಆಧ್ಯತೆಯ ಅನುಗುಣವಾಗಿ ರಚನಾತ್ಮಕತೆಯಲ್ಲಿಹೇಳಿ ಕೊಡುತ್ತಿದ್ದರು. ಸಂಯೋಜನಾ ಚಿತ್ರವನ್ನು ಮೊದಲು ಪೆನ್ಸಿಲ್‌ನಿಂದ ಡ್ರಾಯಿಂಗ್ ಮಾಡಿಕೊಳ್ಳಬೇಕು, ಅನಂತರ ಬೆಳಕು-ನೆರಳಿನ ಭಾಗವನ್ನು ತೋರಿಸಿ ಒಂದು ಚಿತ್ರವನ್ನು ಮಾಡಿ ಆಮೇಲೆ ಜಲವರ್ಣದಲ್ಲಿ, ತೈಲವರ್ಣದಲ್ಲಿ ರಚಿಸುತ್ತಿದ್ದರು, ಇಲ್ಲಿ ಯಾವುದೇ ಪೆನ್ಸಿಲ್‌ನಿಂದ ರಚಿಸಿ ತೋರಿಸಬೇಕು, ಗುರುಗಳು ನೋಡಿದ ಮೇಲೆ ಯಾವ ಯಾವ ಭಾಗಕ್ಕೆ ಯಾವ ಯಾವ ಬಣ್ಣಗಳನ್ನು ಬಳಸಿಕೊಂಡು ಚಿತ್ರಸಬೇಕೆಂಬುದನ್ನು ಅವರು ತಿಳಿಸಿ ಕೊಡುತ್ತಿದ್ದರು. ಸ್ವತಃ ಗುರುಗಳೂ ಕೂಡಾ ವಿದ್ಯಾರ್ಥಿಗಳ ಜೊತೆ ಕುಳಿತುಕೊಂಡು ಕಲಾಕೃತಿ ರಚನೆ ಮಾಡುತ್ತಿದ್ದರು, ಇಂಥ ಒಂದು ಶಿಸ್ತಿನ ಭೋದನಾ ಕ್ರಮ ಅಲ್ಲಿತ್ತು.[೧೧]

ಭೋದನಾ ಕ್ರಮದಲ್ಲಿ ಅತ್ಯಂತ ಸರಳ ಹಾಗೂ ಪ್ರಭಾವಶಾಲಿಯಾಗಿ ಗುರುಗಳಾದ ಚುರ್ಡೇಕರ ಹೆಚ್ಚಾಗಿ ತೈಲವರ್ಣದಿಂದ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇವರು ಅಂದಿನ ಪ್ರಮುಖ ಕಲಾವಿದರಲ್ಲಿ ಒಬ್ಬರಾಗಿದ್ದರು. ಅವರು ಬೋಧನೆಯನ್ನು ಮಾಡುವಾಗ ಹೆಚ್ಚಾಗಿ ತೈಲವರ್ಣದ ಬಳಕೆಯ ಬಗ್ಗೆ ಹೇಳುತ್ತಿದ್ದರು, ಅಂತೆಯೇ ಜಸಕರ ಅವರು ಬೋಧನೆಯನ್ನು ಜಲವರ್ಣದ ಮೂಲಕ ಚಿತ್ರರಚನೆ ಮಾಡಿ ತದನಂತರ ಪೋಸ್ಟರ್ ವರ್ಣಗಳ ವಿಧಾನವನ್ನು ಬಹುಸರಳವಾಗಿ ತಿಳಿಸಿಕೊಡುತ್ತಿದ್ದರು. ಅವರಿಂದಲೇ ಇಂತಹ ನಿಸರ್ಗ ಚಿತ್ರಗಳನ್ನು ಅವುಗಳ ಯಥಾದರ್ಶನದ (Perspective) ಕಲ್ಪನೆ ಮೂಡುವಂತೆ ಚಿತ್ರಗಳಲ್ಲಿ ಕಾಣಿಸತೊಡಗುತ್ತಿದ್ದರು. ಯಾವ ಯಾವ ಚಿತ್ರಗಳಿಗೆ ಈ ಇಬ್ಬರು ಗುರುಗಳು ಯಾವ ಯಾವ ರೀತಿ ಬಣ್ಣಗಳನ್ನು ಬಳಸಿಕೊಂಡು ಚಿತ್ರಿಬೇಕು, ನಿಸರ್ಗ ಚಿತ್ರಣವಿದ್ದರೆ ದೃಶ್ಯದ ದೂರ-ಸಮೀಪಗಳನ್ನು ಸೂಚಿಸುವಂತೆ ಪಾರದರ್ಶಕತೆ ಹಾಗೂ ಅಪಾರದರ್ಶಕತೆಯ ಮೂಲಕ ಬಳಸಿ ಚಿತ್ರ ರಚಿಸಬೇಕು. ನಿಸರ್ಗದಲ್ಲಿರುವ ವಸ್ತುಗಳನ್ನು ಗಿಡ- ಮರ ಹೂ-ಬಳ್ಳಿ ಮೇಲಿನ ಆಕಾಶದ ಭಾಗದಲ್ಲಿ ತಾವೇ ಒಂದು ಚಿತ್ರದ ಮೂಲಕ ರಚನೆ ಮಾಡಿತೋರಿಸುತ್ತಿದ್ದರು.

ಮಡಿವಾಳಪ್ಪ ಮಿಣಜಗಿ ಮೊದಲಿನಿಂದ ನಿಸರ್ಗ ಚಿತ್ರ ಹಾಗೂ ಭಾವಚಿತ್ರಗಳಲ್ಲಿ ಒಲವು ಹೊಂದಿದವಾಗಿದ್ದರಿಂದ ಗುರುಗಳಾದ ಚುರ್ಡೇಕರ ನಿಸರ್ಗ ಚಿತ್ರದ ಬಗ್ಗೆ ಅದರ ಪ್ರತಿಯೊಂದು ಗುಣಾತ್ಮಕ ಅಂಶಗಳನ್ನು ಹಾಗೂ ಬಣ್ಣಗಳ ಬಳಸುವ ವಿಧಾನವನ್ನು ತೈಲವರ್ಣಗಳಲ್ಲಿ ಬರುವ ಅಂಶಗಳನ್ನು ಮಡಿವಾಳಪ್ಪನವರಿಗೆ ಹೇಳಿಕೊಟ್ಟಿದ್ದರಿಂದ ನಿಸರ್ಗಚಿತ್ರ ರಚನೆಯಲ್ಲಿ ತುಂಬಾ ಆಸಕ್ತಿ ಹೆಚ್ಚಾಯಿತು. ಅಂತೆಯೇ ಜಸಕರ ಅಗರಕರ ಗುರುಗಳ ಮಾರ್ಗದರ್ಶನದಲ್ಲಿ ಭಾವಚಿತ್ರದ ರಚನಾ ಪದ್ಧತಿ ಬಣ್ಣಗಳ ಸಮತೋಲನ ಹಾವ, ಭಾವಗಳ ಕುರಿತು ಬಣ್ಣಗಳಲ್ಲಿ ಸೃಷ್ಟಿಸುವ ಬಗೆಯನ್ನು ಭಾವಚಿತ್ರಗಳನ್ನು ರಚಿಸಿ ತೋರಿಸುವುದರ ಮುಖಾಂತರ ಮಡಿವಾಳಪ್ಪನವರಿಗೆ ಇನ್ನೂ ಹೆಚ್ಚಿನ ಚಿತ್ರಗಳ ರಚನೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಿದ್ದರು.

೧೧. ಶ್ರೀ ಪಿ. ಎಸ್. ಹಿರೇಮಠ : ಮಿಣಜಗಿ ಶಿಷ್ಯರಿದ್ದ ಸಂದರ್ಭದಲ್ಲಿ ಹೇಳುತ್ತಿದ್ದ ಮಾತುಗಳು.



ಸ್ನೇಹಿತರ ಬಳಗ :

ಕಲಾಶಾಲೆಯನ್ನು ಸೇರುವುದಕ್ಕಿಂತ ಮುಂಚೆಯೇ ತಮ್ಮ ಬಾಲ್ಯ ಸ್ನೇಹಿತರೂ ಆಗಿದ್ದ ಎ. ಎಂ. ಶೇಖ ಮುಂಬೈಯ ನಿವಾಸಿಯಾಗಿದ್ದರು. ಅಂತೆಯೇ ಅವರೊಂದಿಗೆ ತಮ್ಮ ಆಸಕ್ತಿಗಳನ್ನು ತೋಡಿಕೊಳ್ಳುತ್ತಿದ್ದರು. ಅವರು ಕೈಗೊಳ್ಳದ ಕಲೆಯೇ ಇರಲಿಲ್ಲವೆಂಬುದನ್ನು ಬಾಲ್ಯ ಸ್ನೇಹಿತ ಹಾಗೂ ಸಹಪಾಠಿಯೂ ಆದ ಶೇಖ ಅವರ ಹೇಳಿಕೆಯಾಗಿತ್ತು. ಇಂಥಹ ಸ್ನೇಹಿತರ ಬೆಂಬಲ ಸಹಕಾರಗಳು ಹೊರೆತದ್ದು ಸುದೈವ ಎಂಬುದು ಮಡಿವಾಳಪ್ಪನವರ ನಂಬಿಕೆಯಾಗಿತ್ತು. ಇದರ ಜೊತೆಗೆ ರಾವಬಹಾದ್ದೂರ ಹಳಕಟ್ಟಿ, ಕಿಣಗಿ ಬಸಪ್ಪನವರು, ಹಾನಗಲ್ಲಕುಮಾರ ಸ್ವಾಮಿಗಳು, ಇಳಕಲ್ಲದ ವಿಜಯ ಮಹಾಂತೇಶ ಮಹಾಸ್ವಾಮಿಗಳು, ಆರ್. ಎಂ. ಮಹಿಷಿ ವ.ಕೆ. ಭಕ್ಷ ಮೊದಲಾದವರು ಕಲೆಗೆ ಆ ದಿನಗಳಲ್ಲಿ ತುಂಬಾ ಪ್ರೋತ್ಸಾಹ ನೀಡಿದ್ದನ್ನು ಮಿಣಜಗಿಯವರು ಸದಾನೆನಯುತ್ತಿದ್ದರೆಂಬುದು ಇವರ ಬಗ್ಗೆ ಅವರಲ್ಲಿದ್ದ ಕೃತಜ್ಞತಾಭಾವಕ್ಕೆ ನಿದರ್ಶನವೆನಿಸುವುದು. ಇಂಥಹ ಸ್ನೇಹಿತ ಬಳಗದ ಕೃಪಾಶೀರ್ವಾದದಿಂದ ಇವರು ಹೆಚ್ಚಿನ ವ್ಯಾಸಂಗಕ್ಕೆ ಕೈ ಬಿಸಿ ಕರೆಯುವಂತಾಯಿತು, ಎಂದು ಮಿಣಜಗಿಯವರು ಸದಾ ನೆನಪಿಸಿಕೊಳ್ಳುತ್ತಿದ್ದರು. [೧೨]

ಲಂಡನ್ನದ ರಾಯಲ್ ಕಲಾ ಕಾಲೇಜ : ವ್ಯಾಸಂಗ

ಮಡಿವಾಳಪ್ಪ ಮಿಣಜಗಿಯವರಲ್ಲಿರುವ ಕಲಾತ್ಮಕ ಅಂಶಗಳನ್ನು ಗಮನಿಸಿ ಅವರ ಸೃಜನಶೀಲ ವ್ಯಕ್ತಿತ್ವವನ್ನು ಕಂಡು ಲಂಡನ್‌ದಲ್ಲಿಯ ರಾಯಲ್ ಸ್ಕೂಲ್ ಆಫ್ ಆರ್ಟ ಕಾಲೇಜು ಇವರನ್ನು ಕೈ ಬಿಸಿ ಕರೆಯತೊಡಗಿತು. ಉಚ್ಚ ಕಲಾವ್ಯಾಸಂಗಕ್ಕಾಗಿ ಮಡಿವಾಳಪ್ಪನವರಿಗೆ ತಕ್ಕ ಅವಕಾಶವಿದೆ ಎಂಬ ಅಂತರಂಗದ ಧ್ವನಿಯು ಅವರ ಕಿವಿಯೊಡಳಲ್ಲಿ ಕಂಪಿಸಿತು. ಆ ಕರೆಗೆ ಅವರು ಓಗೊಟ್ಟರು. ೧೯೩೦ ರಲ್ಲಿ ಅವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ತಮ್ಮ ಕಲಾವ್ಯಾಸಂಗವನ್ನು ಮುಂದುವರೆಸಲು ಲಂಡನ್‌ದಲ್ಲಿ ರಾಯಲ್ ಕಾಲೇಜನ್ನು ಸೇರಿದರು.

ಇಂಥಹ ಹಿರಿಯ ಅವಕಾಶವನ್ನು ಪಡೆದು ಉಪಯೋಗಿಸಿಕೊಂಡ ಮೊದಲ ಕನ್ನಡಿಗ ಕಲಾವಿದರು. ಡಾ. ಮಡಿವಾಳಪ್ಪ ಮಿಣಜಗಿಯವರೇ ಎಂದು ಹೇಳಿದರೆ ತಪ್ಪಾಗಲಾರದು. ಲಂಡನ್‌ದಲ್ಲಿ ಇವರು ವಾಸಿಸುವಾಗಲೇ ಚಿತ್ರಕಲೆ, ವರ್ಣ ಚಿತ್ರಕಲೆಗಳನ್ನು ರಾಯಲ್ ಕಲಾ ಕಾಲೇಜದಲ್ಲಿ ಇವರು ಅಧ್ಯಯನ ಮಾಡಿದರೆ, ಲಂಡನ್ ಕೌಂಟಿ ಕೌನ್ಸಿಲ್ ಸ್ಕೂಲ್‌ದಲ್ಲಿ ಫೋಟೊ ಎನ್‌ಗ್ರೇವಿಂಗ್ ಮತ್ತು ಲಿಥೋಗ್ರಾಫಿಕ್ ವಿಷಯಗಳ ಕುರಿತು ಆಳವಾದ ಅಧ್ಯಯನವನ್ನು ಆ ಸಂದರ್ಭದಲ್ಲಿಯೇ ಪೂರೈಸಿದರು. ಅಲ್ಲದೇ ಇನ್ನಿತರ ಅನೇಕ ವಿಷಯಗಳನ್ನು ಅರಿತುಕೊಳ್ಳಬೇಕು, ಅವುಗಳಲ್ಲಿ ಬಲ್ಲವರಾಗಬೇಕೆಂಬ ಅವರ ಕುತೂಹಲವೇ ಬಹುಶಃ ಇವನ್ನೆಲ್ಲ ಅಧ್ಯಯನ ಮಾಡಲು ಕಾರಣವೆನ್ನಬಹುದು. ಮಡಿವಾಳಪ್ಪನವರು ಯಾಗಾಲೂ ಸಿಕ್ಕ ಅವಕಾಶ, ವೇಳೆಯನ್ನು ವ್ಯರ್ಥಗೊಳಿಸದೆ ಒಂದಿಲ್ಲೊಂದು ಹೊಸ ಹೊಸಬಗೆಯ ಸಂಗತಿಯನ್ನು ಅರಿತುಕೊಳ್ಳಬೇಕೆಂಬ ಅವರ ಹಿರಿದಾದ ಕುತೂಹಲವೇ ಅವರನ್ನು ಇಂಥ ಕಾರ್ಯಗಳಲ್ಲಿ ತೊಡಗಿಸುತ್ತಿತ್ತು. ಅವರ ಅವಿರತ ಕ್ರಿಯಾತ್ಮಕ ಅಧ್ಯಯನಶೀಲತೆಯ ಹಂಬಲವನ್ನು ನಿದರ್ಶಿಸುವಂಥದು. ಲಂಡನ್‌ದಲ್ಲಿ ವಾಸ್ತವ್ಯವು ಅವರ ದೃಷ್ಟಿಕೋನವನ್ನು ಸಂಪೂರ್ಣವಾಗಿ ವಿಶಾಲಗೊಳಿಸಿತು. ಪಾಶ್ಚಿಮಾತ್ಯ ಸಾಂಪ್ರದಾಯಕ

---

೧೨. ಶ್ರೀ ಪಿ. ಎಸ್. ಹಿರೇಮಠ : ಸಂದರ್ಶನ ದಿನಾಂಕ ೮-೧೦-೨೦೦೪



ಕಲೆಯ ಜೊತೆಗೆ ಪೌರ್ವಾತ್ಯ ಕಲೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿ ಅರ್ಥೈಸಿಕೊಳ್ಳುವ ಅವಕಾಶವು ಅವರಿಗೆ ದೊರೆಯಿತು. ಕಲಾಕ್ಷೇತ್ರದಲ್ಲಿ ಗ್ರಾಫಿಕ್, ಎನ್‌ಗ್ರೇವಿಂಗ್, ಪೋಟೋ ಎಚ್ಚಿಂಗ್ ಅಂತಹ ನಾವಿನ್ಯವಾದ ಕಲೆಗಳನ್ನು ಸಾಧಿಸಲು ಅವಕಾಶ ಕಲ್ಪಿಸಿಕೊಟ್ಟಂತೆಯಾಯಿತು.
ರಾಯಲ್ ಕಲಾ ಕಾಲೇಜದಲ್ಲಿ ಉನ್ನತ ಶಿಕ್ಷಣದ ವ್ಯಾಸಂಗದಲ್ಲಿ ತೊಡಗಿದಾಗ ಸುಪ್ರಸಿದ್ಧ ಪಾಶ್ಚಿಮಾತ್ಯ ಕಲಾವಿದ ಸರ್ ವಿಲಿಯಂ ರೋಥೆನ್ ಸ್ಟೇನ್ ಅವರ ಶಿಷ್ಯತ್ವ ವಹಿಸುವ ಸುಯೋಗವು ಮಡಿವಾಳಪ್ಪ ವೀರಪ ಮಿಣಜಗಿಯವರದಾಗಿತ್ತು. ಸರ್ ರೋಥೆನ್ ಸ್ಟೇನ್‌ರು ಭಾರತದ ಸಾಂಸ್ಕೃತಿಕ ಸೊಗಡಿನ ಬಗ್ಗೆ ಆಳವಾದ ಅಧ್ಯಯನ ಮಾಡಿಕೊಂಡಿದ್ದರು. ಅಲ್ಲದೇ ಭಾರತದ ಸಾಂಸ್ಕೃತಿಕ ನೆಲೆಗಟ್ಟಿನ ಬಗ್ಗೆ ತುಂಬಾ ಅಭಿಮಾನಿಗಳು ಕೂಡ ಆಗಿದ್ದರು. ಆದ್ದರಿಂದ ಡಾ. ಮಡಿವಾಳಪ್ಪನವರಿಗೆ ಕ್ರಿಯಾತ್ಮಕ ಹಾಗೂ ಹೊಸ ನೆಲೆಗಳು ಕಂಡುಕೊಳ್ಳಲು ಕಲೆಯಲ್ಲಿ ಪ್ರ ಯೋಜನಕಾರಿಯಾಗಿ ಪರಿಣಮಿಸಿತಲ್ಲದೇ ಅನೇಕ ವಿಷಯಗಳಲ್ಲಿ ವಿವಿಧ ರಂಗಗಳಲ್ಲಿ ಅವರಿಗೆ ತುಂಬಾ ಮಾರ್ಗದರ್ಶನವು ಆಗಿ ಪರಿಣಮಿಸಿತು.

ಲಂಡನ್‌ದಲ್ಲಿ ವ್ಯಾಸಂಗ ಮಾಡುವಾಗ ಅಲ್ಲಿಯ ಪರಿಸರದ ಪ್ರಭಾವವೋ ಪ್ರೇರಣೆಯೋ ಏನೋ ಡಾ|| ಮಿಣಜಗಿಯವರು ಲಂಡನ್‌ದ ಪರಿಸರದ ಮೂರ್‍ನಾಲ್ಕು ಪಾಶ್ಚಿಮಾತ್ಯ ಚಿತ್ರಗಳ ಮಾದರಿಯನ್ನು ಕಲಾಕೃತಿಗಳಲ್ಲಿ ರೂಪಿಸಿಕೊಂಡು ಸರ್ ರೊಥೆನ್ ಸ್ಟೇನ್‌ರಿಗೆ ತೋರಿಸಿದಾಗ ಅವರು ತುಂಬಾ ಬೇಸರಗೊಂಡರಲ್ಲದೇ ಅಸಾಮಾಧಾನಗೊಂಡು ಮಡಿವಾಳಪ್ಪನವರಿಗೆ ನೀನು ಈ ಬಗೆಯ ಪ್ರಭಾವದಿಂದ ಮುಕ್ತನಾಗಬೇಕು, ಈ ಪರಿಸರ ನಿನ್ನ ಮೇಲೆ ಪರಿಣಾಮ ಬೀರಬೇಕು, ಅನುಕರಣೆ ಬೇಡ ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಲು ಪ್ರಯತ್ನಿಸಿಕೊಂಡು ಅಧ್ಯಯನ ಮಾಡಬೇಕೆ ಹೊರತು ಕೇವಲ ಪ್ರತಿ ಕೃತಿ ಮಾಡುವದಕ್ಕೆ ನೀನಿಲ್ಲ ಬಂದಿಲ್ಲ.[೧೩] ಎಂದು ಬಹು ಸ್ಪಷ್ಟವಾದ ಶಬ್ದಗಳಲ್ಲಿ ಶಿಷ್ಯನಿಗೆ ಛೀಮಾರಿ ಹಾಕಿದರು, ವಾಣಿಜ್ಯ ಕಲೆಯ ಚಿತ್ರದ ಅಭಿರುಚಿಯನ್ನು ಅನುಸರಿಸಬಾರದೆಂದು ಅದು ಸೃಜನಶೀಲ ಕಲಾವಿದನಿಗೆ ಮಾರಕವೆಂದೂ ರೊಥೆನ್ ಸ್ಟೆನ್‌ರು ಹೇಳಿದ್ದು ಮಿಣಜಗಿಯವರಿಗೆ ತುಂಬಾ ಪರಿಣಾಮ ಬೀರಿತು. ನಿನ್ನಲ್ಲಿ ಸ್ವಂತಿಕೆಯೆಂಬುದನ್ನು ಇದ್ದಾಗಲೇ ಅದು ನಿಜವಾದ ಕಲಾಕೃತಿಯಾಗಿರುತ್ತದೆ. ಅದುವೆ ಮಿಣಜಗಿ ಕಲಾಕೃತಿಯಾಗಿರುತ್ತದೆ. ಇಲ್ಲದೇ ಹೋದಲ್ಲಿ ಅದು ಮತ್ತೊಬ್ಬರ ಸೃಷ್ಟಿಯಾಗಿರುತ್ತದೆ. ನೀನು ವ್ಯಾಸಂಗ ಪೂರೈಸಿದ ನಂತರ ಸ್ವದೇಶಕ್ಕೆ ಹಿಂತಿರುಗುವಾಗ ಉತ್ತಮ ಕಲೆಯ ಸಂದೇಶವನ್ನು ಕೊಂಡು ಹೋಗು ಆಗಲೇ ನೀನು ಇಲ್ಲಿ ಕಲೆಯನ್ನು ವ್ಯಾಸಂಗ ಮಾಡಿಕೊಂಡಿರುವುದು ಸಾರ್ಥಕವಾದಂತೆ ಎಂಬ ಗುರುವಾಣಿಯು ಅವರಿಗೆ ಬಹು ಮಾರ್ಮಿಕವಾದುದೆನಿಸಿತು. ಅವರ ಅಂತರ್ಮುಖವನ್ನು ಕೆದಕಿತು. ಅವರಲ್ಲಿ ಭಾರತೀಯತೆಯನ್ನು ಬಡಿದೆಬ್ಬಿಸಿತು. ಡಾ.ಮಿಣಜಗಿಯವರು ತಲೆಕೊಡಹಿಕೊಂಡು ಆ ಪರಿಸರದಿಂದ ಮುಕ್ತವಾಗಲು ಗುರುಗಳ ಸಂದೇಶವಾಣಿ ಪ್ರೇರಣೆ ನೀಡಿತು.

ಇಂಗ್ಲೆಂಡದಲ್ಲಿ ವ್ಯಾಸಂಗ ಮಾಡಲು ಇರುವಾಗ ಇಂಥ ಸದಿಚ್ಛೆಯ ಅತಃಕರುಣೆ ಮತ್ತು ದಯಾಳುವಾದ ಗುರು ಮಿಣಜಗಿಯವರಿಗೆ ದೊರೆತದ್ದು ಅವರ ಸುದೈವವೇ ಎನ್ನಬಹುದು. ಬಹುಶಃ ಅಗಿನ ಜೆ.ಜೆ. ಕಲಾಶಾಲೆಯ ಪ್ರಾಚಾರ್ಯ ಡಬ್ಲ್ಯೂ. ಇ. ಗ್ಲಾಡಸ್ಟನ್ ಸೋಲೋಮನ್ (ಡಿ.ಇ.ಎಸ್) ಅವರು

೧೩. ಶ್ರೀ ಶಂಕರ ಪಾಟೀಲ ಕಲಾತಪಸ್ವಿ ಡಾ|| ಎಂ.ವ್ಹಿ. ಮಿಣಜಗಿ ಪುಟ : ೧೫.

[illegible]



ಭಾರತವು ವಿಶ್ವದಲ್ಲಿಯ ಒಂದು ವರ್ಣಪೆಟ್ಟಿಗೆ ಎಂದು ಹೇಳಿದರು. ಭಾರತದ ಸುಂದರ ನಿಸರ್ಗದ ಮಡಿಲನ್ನು ಈ ಕಲಾತ್ಮಕತೆಗೆ ಬಳಸಿಕೊಳ್ಳಬಹುದೆಂದು ಮಿಣಜಗಿಯವರಿಗೆ ಈಗ ಮನವರಿಕೆಯಾಗಿರಲು ಸಾಕು. ಅಂತೆಯೇ ಅವರು ಡಿಪ್ಲೋಮಾ ವ್ಯಾಸಂಗದ ಅಂತಿಮ ವರುಷದಲ್ಲಿ ಹೊಸದಾಗಿ ಮದುವೆಯಾಗಿ ಅತ್ತೆಯ ಮನೆಗೆ ಬರುವ ಸಂಭ್ರಮದ ಕಲಾಕೃತಿಯ ಚಿತ್ರಣವನ್ನು ಅತೀ ಅಚ್ಚುಕಟ್ಟಾಗಿ ಕಲಾತ್ಮಕವಾಗಿ ಚಿತ್ರಿಸಿದ್ದರು. ಆ ಕಲಾಕೃತಿಯಲ್ಲಿಮದುವೆಯಾದ ಮದುಮಗಳ ಮುಗ್ಧಮುಖದ ಲಾಸ್ಯ, ಅವಳ ಹಿಂದಿನಿಂದ ಬರುವ ಸೋದರ ಆ ಚಿತ್ರದ ಸೊಗಸನ್ನು ಬಹುವಾಗಿ ಹೆಚ್ಚಿಸಿದ್ದವು. ಹೀಗಾಗಿ ಈ ಚಿತ್ರವು ನೂರಾರು ಅಲ್ಲ ಸಾವಿರಾರು ಪಾಶ್ಚಿಮಾತ್ಯರನ್ನು ಆಕರ್ಷಿಸಿದ್ದು ಅಚ್ಚರಿಯ ವಿಷಯವೇನಲ್ಲ.

ಮಿಣಜಗಿಯವರು ಈ ಮೂಲಕ ಭಾರತೀಯತೆಯ ಕೆಚ್ಚನ್ನು ಮೆರೆದು ತೋರಿಸಿದ್ದು ಕನ್ನಡಿಗರಿಗೆ ಮಾತ್ರವಲ್ಲ ಭಾರತೀಯರಿಗೆ ಒಂದು ಹೆಮ್ಮೆಯ ವಿಷಯವು ಹೌದು ಅವರ ಇನ್ನೂ ಅನೇಕ ಕೃತಿಗಳನ್ನು ಪಾಶ್ಚಿಮಾತ್ಯ ಕಲಾವಿದರು ಕಲಾವಿಮರ್ಶಕರೂ ತುಂಬಾ ಮೆಚ್ಚಿಕೊಂಡುದು ಕೂಡ ಒಂದು ಸಂತೋಷದ ಸಂಗತಿ. ಸಂಡೆ ಟೈಮ್ಸ್ ಪತ್ರಿಕೆ ಅವರ ಕೃತಿಗಳನ್ನು ಬಹುವಾಗಿ ಮೆಚ್ಚಿಕೊಂಡು ಪ್ರಶಂಸಿಸಿದುದು ಭಾರತದ ಕೀರ್ತಿ ಪತಾಕೆಯನ್ನು ಇವರು ಲಂಡನ್‌ದಲ್ಲಿ ಹಾರಿಸಿದ್ದಕ್ಕೆ ಒಂದು ನಿದರ್ಶನವೇ ಸರಿ, ಕಲಾಜೀವನದಲ್ಲಿ ಇಂಥ ಒಂದು ಹಿರಿಮೆಯನ್ನು ಚಿಕ್ಕವಯಸ್ಸಿನಲ್ಲಿಅದು ವಿದ್ಯಾರ್ಥಿ ದೆಸೆಯಲ್ಲಿಸಾಧಿಸುವದು ಸಣ್ಣಮಾತೇನಲ್ಲ, ಕಲಾವಿಜ್ಞತೆಯೊಂದಿಗೆ ಸುದೈವ ಸೇರಿ ಯೋಗ್ಯವೆನಿಸಿರುವ ಮಾರ್ಗದರ್ಶನವೂ ದೊರೆತಾಗ ಇಂಥದೊಂದು ಯೋಗವು ಆ ವ್ಯಕ್ತಿಗೆ ಬಹುಶಃ ಪ್ರಾಪ್ತವಾಗುವದೇನೋ ! ಮಿಣಜಗಿಯವರು ಈ ಎಲ್ಲ ದೃಷ್ಟಿಯಿಂದಲೂ ಅತ್ಯಂತ ಸುದೈವಿ ವ್ಯಕ್ತಿಯಾಗಿ ಮೆರೆದು ತಮ್ಮ ಕಲಾವ್ಯಾಸಂಗವನ್ನು ಪಾಶ್ಚಿಮಾತ್ಯ ರಂಗದಲ್ಲಿ ಪೂರೈಸಲು ಅವಕಾಶ ಪೂರೈಸಿಕೊಂಡು ತಮ್ಮತನವನ್ನು ಮೆರೆದರು.

ತಮ್ಮ ವ್ಯಾಸಂಗವನ್ನು ಇಂಗ್ಲೆಂಡದಲ್ಲಿ ಮೂರು ವರ್ಷಗಳಲ್ಲಿ ಪೂರೈಸಬೇಕಾಗಿದ್ದ ಡಿಪ್ಲೋಮಾ ವ್ಯಾಸಂಗವನ್ನು ಎರಡೇ ವರುಷಗಳಲ್ಲಿ ಪೂರ್ಣಗೊಳಿಸಿದರು. ಇದು ಮಡಿವಾಳಪ್ಪನವರಲ್ಲಿರುವ ಅಧ್ಯಯನ ಶೀಲತೆಯನ್ನು ತೋರುವುದರೊಂದಿಗೆ ಅವರು ಅಭಿಜಾತ ಕಲಾವಿದರಾಗಿದ್ದರೆಂಬ ಅಂಶ ವನ್ನು ಸ್ಪಷ್ಟಪಡಿಸುತ್ತದೆ. ಇಂಗ್ಲೆಂಡಿದಲ್ಲಿರುವಾಗಲೇ ಜರ್ಮನಿ, ಸ್ವಿಝರ್‌ಲೆಂಡ್, ಪ್ರಾನ್ಸ್, ಇಟಲಿ ಮೊದಲಾದ ರಾಷ್ಟ್ರಗಳನ್ನು ಸಂದರ್ಶಿಸಿದರು. ಈ ಭೆಟ್ಟಿ ಕೇವಲ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನಕ್ಕಾಗಿ ಆಗಿರಲಿಲ್ಲ, ಅಲ್ಲಿಯ ಕಲಾಗ್ಯಾಲರಿಗಳನ್ನು ಅವರು ಪ್ರಮುಖವಾಗಿ ನಿರೀಕ್ಷಿಸುತ್ತಿದ್ದರು. ಅಲ್ಲಿರುವ ಕಲಾತ್ಮಕ ಹಾಗೂ ಗುಣಾತ್ಮಕ ಚಿತ್ರಗಳನ್ನು ಅಧ್ಯಯನಶೀಲರಾಗಿ ಗಮನಿಸಿದ್ದರು. ಇದು ಅವರಿಗೆ ಪಾಶ್ಚಿಮಾತ್ಯ ಕಲೆಯ ಪರಿಚಯ ಮಾಡಿಕೊಡುವಲ್ಲಿ ಬಹುಮಟ್ಟಿಗೆ ನೆರವು ನೀಡಿತು. ಮಿಣಜಗಿಯವರ ಈ ಸಂದರ್ಶನದ ಕಾಲಕ್ಕೆ ಅವರ ಮಿತ್ರ ಕ್ಯಾಂಬ್ರಿಜ್‌ದಲ್ಲಿ ಐ.ಸಿ.ಎಸ್. ಓದುತ್ತಿದ್ದು ಇವರಿಗೆ ಸಹಾಯಕರಾಗಿ ಇರುತ್ತಿದ್ದರು.

ಭಾರತದಿಂದ ಲಂಡನ್‌ದಲ್ಲಿ ಆಗ ವ್ಯಾಸಂಗ ಮಾಡುತ್ತಿರುವವರು ಕೇವಲ ಐದು ಜನ ಮಾತ್ರ. ಅದರಲ್ಲಿ ದಕ್ಷಿಣ ಭಾರತದಿಂದ ಬಂದವರು ಕೇವಲ ಮಿಣಜಗಿಯವರೊಬ್ಬರೇ ಮಾತ್ರ. ಕನ್ನಡಿಗರು ಇವರೊಬ್ಬರೇ ಎಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ ! ಕನ್ನಡದ ವರಪುತ್ರನೊಬ್ಬನಿಗೆ ಈ ಸೌಭಾಗ್ಯವು ದೊರಕಿದ್ದು ಕನ್ನಡಿಗರು ಹೆಮ್ಮೆ ಪಟ್ಟುಕೊಳ್ಳಬೇಕು. ಆಗ ಮಿಣಜಗಿಯವರ ಹುಟ್ಟಿ ಬೆಳೆದ ಪ್ರದೇಶಕ್ಕೆ ಬಾಂಬೆ ಪ್ರಾಂತಃ (ಬಾಂಬೆ ಕರ್ನಾಟಕ) ಎಂದು ಕರೆಯುತ್ತಿದ್ದರು. ಅವರ ಬಗೆಗೆ ಅಭಿಮಾನವನ್ನು ಹೊಂದಬೇಕು, ಎಂಬುದರಲ್ಲಿ ಎರಡು ಮಾತಿಲ್ಲ, ಇಂಥಹ ದುಸ್ತರವಾದ ಕಾರ್ಯವನ್ನು ಕೇವಲ ಅಲ್ಪಾವಧಿಯಲ್ಲಿ ಅವರು



ಪೂರೈಸಿದ್ದು ಕೂಡ ನಮಗೆಲ್ಲ ಹೆಮ್ಮೆಯ ವಿಷಯವೇ ಆಗಿದೆ. ಅವರ ಸಾಧನೆ ಎಷ್ಟು ಶ್ಲಾಘನೀಯ ಎಂಬುದನ್ನು ಇಂದಿನ ಯುವ ಪೀಳಿಗೆ ಸುಲಭವಾಗಿ ಅರಿಯುವುದು ಸಾಧ್ಯವಿಲ್ಲ. ಡಾ. ಮಿಣಜಗಿಯವರು ಇಲ್ಲಿ ಕಲಾಮಿಂಚಿನಂತೆ ಗೋಚರಿಸಿದರು ಎನ್ನುವ ಮಾತು ತಿಳಿದರೆ ಸಾಕು ಆ ಒಂದು ಸಂದರ್ಭದಲ್ಲಿ ಪಾಶ್ಚಿಮಾತ್ಯ ದೇಶದಲ್ಲಿ ಹೋಗಿ ವ್ಯಾಸಂಗ ಮಾಡುವುದು ಕಡಿಮೆ ಸಾಧನೆಯಲ್ಲ [೧೪]

ಮಿಣಜಗಿಯವರ ಕಲಾ ಪಿಪಾಸೆ ಇಷ್ಟರಿಂದಲೇ ಹಿಂಗಲಿಲ್ಲ. ಇನ್ನು ಅದರಲ್ಲೂ ಸರ್ ವಿಲಿಯಂ ರಾಥನ್ ಅವರಂಥವರ ಮೆಚ್ಚುಗೆ ಗಳಿಸುವುದೆಂದರೆ ಸಾಮಾನ್ಯ ಮಾತಲ್ಲ ಅವರು ಒಂದು ಮೆಚ್ಚುಗೆಯ ಮಾತನಾಡಿದರೆ ಇಡೀ ಜಗತ್ತೇ ಆ ಕಡೆಗೆ ನೋಡುತ್ತಿತ್ತು. ಆ ದೇಶದ ಅದ್ಭುತ ರಮಣೀಯ ದೃಶ್ಯಗಳನ್ನು ವಿಸ್ಮಯಕರವಾಗಿ ಕಣ್ಣು ಮನಸ್ಸುಗಳಲ್ಲಿ ತುಂಬುಕೊಂಡು ತಮ್ಮ ಕುಂಚದಿಂದ ಅವುಗಳಿಗೆ ಸಂಸ್ಕಾರ ನೀಡಿದರು, ಅಲ್ಲಿ ಕಂಡ ಕೆಲವು ಸಾಮಾನ್ಯ ವಸ್ತು, ಅನುಭವ ಅವರ ಪ್ರತಿಭಾ ಶಕ್ತಿಯಿಂದ ಅಸಮಾನ್ಯವಾದವು.

ಮಡಿವಾಳಪ್ಪನವರಿಗೆ ತಮ್ಮ ಗುರುಳಾದ ರೊಥೇನ್ ಸ್ಟೆನ್‌ರ ಬಗೆಗೆ ಅಪಾರ ಗೌರವ ಭಕ್ತಿಗಳು ಇದ್ದವು. ವಿಶೇಷವಾಗಿ ಅವರು ಪಾಶ್ಚಿಮಾತ್ಯ ಕಲಾ ಜಗತ್ತಿನಲ್ಲಿ ಗಳಿಸಿದ ಹೆಸರು, ಕೀರ್ತಿಗಳು ಇವರಿಗೆ ತುಂಬ ಮೆಚ್ಚಿಕೆಯಾಗಿದ್ದವು. ಸಾಮಾನ್ಯವಾಗಿ ರೊಥೇನ್ ಸ್ಟೇನ್‌ರು ಸಣ್ಣಪುಟ್ಟವರಿಗಾಗಿ ಕೃತಿಗಳನ್ನು ಎಂದಿಗೂ ರಚಿಸುತ್ತಿರಲಿಲ್ಲ. ಅದಕ್ಕಾಗಿ ಅವರ ಬಳಿ ಸಮಯವೂ ಇರುತ್ತಿರಲಿಲ್ಲ. ಪ್ರಥಮತಃ ಅವರನ್ನು ಕಾಣುವದಾಗಲಿ, ಮಾತನಾಡುವುದಾಗಲಿ ತುಂಬಾ ದುಸ್ತರವಾದ ಕಾರ್ಯವಾಗಿತ್ತು. ಜನಸಾಮಾನ್ಯರಲ್ಲಿ ಅವರು ಬೆರೆತುಕೊಳ್ಳುವದು ಅತೀ ಕಡಿಮೆ ಇದ್ದುದೇ ಅದಕ್ಕೆ ಕಾರಣವಾಗಿತ್ತು. ಹೀಗಾಗಿ ಅವರು ಯಾರಿಗಾಗಿಯಾದರೂ ಏನಾದರೊಂದು ಚಿತ್ರವನ್ನು ರಚಿಸಿಕೊಟ್ಟರೆ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿಯೆ? ಇರಬೇಕೆಂದು ಲಂಡನ್‌ದಲ್ಲಿ ಆಗ ಬಗೆಯಲಾಗುತ್ತಿತ್ತು. ಇದು ಮಿಣಜಗಿಯವರ ನಿದರ್ಶನಕ್ಕೂ ಬಂದಿತ್ತು. ಇಂಥ ಒಂದು ಅಪರೂಪವಾದ ಪ್ರಸಂಗವನ್ನು ಅವರು ತಮ್ಮ ಮಿತ್ರರಿಗೆ ವಿವರಿಸಿದ್ದನ್ನು ಇಲ್ಲಿ ಗಮನಿಸಬಹುದು, ರೊಥೇನ್ ಸ್ಟೇನ್‌ರು ಒಂದು ಸಲ ವಿಶ್ವಕವಿ ರವೀಂದ್ರನಾಥ ಠಾಕೂರರ ಹನ್ನೆರಡು ಚಿತ್ರಗಳನ್ನು ಸಿದ್ಧಪಡಿಸಿದ್ದರು. ವಿಶ್ವದ ತುಂಬೆಲ್ಲಾ ಇವುಗಳಿಗೆ ಬೇಡಿಕೆ ಬಂದಿತು. ಇವನ್ನು ಯಾರಿಗೆ ಕೊಡಬೇಕು ? ಯಾರಿಗೆ ಬಿಡಬೇಕು ಎಂಬುದು ಕಲಾವಿದರಿಗೆ ತುಂಬಾ ಸಮಸ್ಯೆಯೇ ಆಗಿ ಪರಿಣಮಿಸಿತು. ಕವಿ ರವಿಂದ್ರನಾಥ ಠಾಕೂರರಿಗೆ ಈ ಸಂಗತಿ ತಿಳಿದು ಬಹು ಸಂಭ್ರಮಗೊಂಡರು. ಒಬ್ಬ ಮಹಾನ್ ಚಿತ್ರಕಾರರು ತಮ್ಮ ಚಿತ್ರಗಳನ್ನು ತೆಗೆದುದು ಆ ಚಿತ್ರಗಳಿಗೆ ವಿಶೇಷ ಬೇಡಿಕೆ ಬಂದುದು ನಿಜವಾಗಿ ಸಂತೋಷದ ವಿಷಯವೇ ಸರಿ. ರವೀಂದ್ರರು ಕಲಾವಿದನ ಈ ಸೇವೆಗೆ ತಮ್ಮ ಮೆಚ್ಚುಗೆಯನ್ನು ಕೂಡಾ ಅರ್ಥಪೂರ್ಣವಾದ ರೀತಿಯಲ್ಲಿಯೇ ಸಲ್ಲಿಸಿದರು. ಅವರು ತಮ್ಮ ವಿಶ್ವಮಾನ್ಯ ಕೃತಿ ಗೀತಾಂಜಲಿ ಯನ್ನು ಈ ಮಹಾಕಲಾವಿದರಿಗೆ ಅರ್ಪಿಸಿದರು, ಇದು ಮಹಾತ್ಮರು ತಮ್ಮಂತೆಯೇ ಹಿರಿಯರಾದವರನ್ನು ಗೌರವಿಸುವ , ಅದರಿಸುವ ನೀತಿ ಅಲ್ಲವೇ, ಅವರಿಬ್ಬರೂ ನಂತರ ಒಳ್ಳೆಯ ಮಿತ್ರರೂ ಆದರು. ಈ ಮಹಾನ್ ಕಲಾಕಾರನ ಮುಖಾಂತರ ರವೀಂದ್ರರು ರೋಮನ್ ರೋಲಾಂಡ್.ಸಿ. ಎಸ್. ಆಂಡ್ರೂಸ್ ಅವರನ್ನು ಪರಿಚಯ ಮಾಡಿಕೊಂಡರು ಎನ್ನುವುದು ಇನ್ನೂ ಸೋಜಿಗದ ಆದರೆ ಅತ್ಯಂತ ಮಹತ್ವದ ವಿಷಯವೇಯಾಗಿತ್ತೆಂಬುದು ಗಮನಿಸಬೇಕಾದ ಅಂಶವಾಗಿರುತ್ತದೆ.

೧೪. ಶ್ರೀ ಎಸ್. ಎಂ. ಶಿರಹಟ್ಟಿ, ಚಿತ್ರಕಲಾ ಕೈದೀಪ : ಪುಟ : ೧೧೨.



ನಕ್ಷತ್ರಾರತಿಯಿಂದಲಿ ಹೂಗಳ
ಗೊಂಚಲನೆತ್ತಿರುವ
ಮಾವಿನ ಮರವಿದು ಮರವೋ ? ನಭದಲಿ
ಬರೆದರೂ ಚಿತ್ತರವ ![೧೫]

ಆ ಬೆರಗನ್ನು ಕಲ್ಪನೆಯ ಮಿರುಗಿನಲ್ಲಿ ತೆರೆದು ತೋರುವುದು ಇಲ್ಲಿನ ವಿಶೇಷತೆ, ಚಿತ್ರಕ ಶಕ್ತಿಯಿಂದ ಪ್ರತಿಮಾ ನಿರ್ಮಾಣದವರೆಗೆ ಈ ಕಲ್ಪನೆ ಅವರ ಸ್ನೇಹಿತರಿಗೆಲ್ಲ ಗೊತ್ತು, ಹೀಗಾಗಿ ಲಂಡನ್‌ದಲ್ಲಿರುವಾಗಲೇ ಚಿತ್ರ ಪ್ರದರ್ಶನವನ್ನು ನಡೆಸಲು ಅವರಿಗೆ ಇವರು ತುಂಬಾ ದುಂಬಾಲು ಬಿದ್ದರು. ಭಾರತ ಭವನದಲ್ಲಿ ಇಂಟಿರಿಯಲ್ ಆರ್ಟ ಗ್ಯಾಲರಿಯಲ್ಲಿ ಇವರಿಂದ ಚಿತ್ರಗಳ ಪ್ರದರ್ಶನ ನಡೆಯಿತಲ್ಲದೇ, ಯುರೋಪದ ಅನೇಕ ರಾಷ್ಟ್ರಗಳ ಆರ್ಟ ಗ್ಯಾಲರಿಗಳಲ್ಲಿ ಕೂಡ ಅವರ ಚಿತ್ರ ಪ್ರದರ್ಶನಗಳು ನಡೆದವೆಂಬುದು ಭಾರತೀಯರಿಗೆ ಕನ್ನಡಿಗರಿಗೆ ಅತೀ ಹೆಮ್ಮೆಯ ಮತ್ತು ಸಂತಸದ ಸಂಗತಿ, ಈ ಎಲ್ಲ ಪ್ರದರ್ಶನಗಳಿಗೆ ತುಂಬ ಉತ್ತೇಜನ ಪ್ರೋತ್ಸಾಹಗಳೂ ದೊರೆತವೆಂಬುದು ಕೂಡ ಗಮನಿಸಬೇಕಾದ ಸಂಗತಿಯೇ ಸರಿ, ಇಂಗ್ಲೆಂಡಿದಲ್ಲಿಯ ಅನೇಕ ಕಲಾಪತ್ರಿಕೆಗಳು ಇವರ ಚಿತ್ರಗಳನ್ನು ಪ್ರಕಟಿಸಿದ್ದಲ್ಲದೇ ಚಿತ್ರಗಳ ಜೊತೆಗೆ ಕಲಾವಿದನನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದರು, ಆಗಲೇ ಇವರ ಕೀರ್ತಿ ಭಾರತಕ್ಕೂ ತಲುಪಿತ್ತು. ಭಾರತದಲ್ಲಿಯೇ ಅನೇಕ ಕಲಾ ಪತ್ರಿಕೆಗಳು ಪ್ರಾಶಸ್ತ್ಯ ನೀಡಿ ಅವರ ಚಿತ್ರಗಳನ್ನು ಪ್ರಕಟಿಸಿದ್ದವಲ್ಲದೇ ಕಲಾವಿದನಿಗೆ ಅರ್ಹವಾದ ಗೌರವವನ್ನು ಸಲ್ಲಿಸಿದ್ದವು. ಹೀಗೆ ಅವರು ಅಧ್ಯಯನವನ್ನು ಪೂರ್ತಿಗೊಳಿಸುವ ಹೊತ್ತಿಗೆ ಅನೇಕ ಬಹುಮಾನಗಳನ್ನು ಪ್ರಶಸ್ತಿಗಳನ್ನು ಗಳಿಸಿಕೊಂಡಿದ್ದರು. ಇದು ಅರಳುತ್ತಿರುವ ಕಲಾವಿದನ ಜೀವನಕ್ಕೆ ಹಿರಿದಾದ ಮೆರುಗನ್ನು ನೀಡಿದ್ದಲ್ಲದೇ ಒಂದು ಆತ್ಮ ವಿಶ್ವಾಸ ಕೂಡ ಮೂಡಿ ನಿಲ್ಲುವಂತೆ ಮಾಡಿದ್ದು ಮಹತ್ವದ್ದಾಗಿತ್ತು.

ಭಾರತೀಯ ಕಲಾವಿದ ಡಾ. ಮಿಣಜಗಿಯವರು ಈ ಶತಮಾನದ ಮೂರನೇ ದಶಕದಲ್ಲಿ ಇಂಗ್ಲೆಂಡ, ಯುರೋಪ ರಾಷ್ಟ್ರಗಳಲ್ಲಿ ಉತ್ತಮ ಕಲಾವಿದನಾಗಿ ಮನ್ನಣೆ ಪಡೆದುದು ಮಾತ್ರವಲ್ಲ, ಭಾರತೀಯ ಕಲೆಯ ವಿಶೇಷ ಪರಿಚಯ ಮಾಡಿಕೊಟ್ಟುದು ; ಭಾರತೀಯ ಕಲಾಪರಂಪರೆಯ ಅರಿವು ಮೂಡಿಸಲು ಸಾಧ್ಯವಾದುದು ನಿಜವಾಗಿಯೂ ಅಭೂತಪೂರ್ವವಾದ ಸಂಗತಿ, ಈ ಭಾರತೀಯ ಕನ್ನಡಿಗನೆಂಬುದು ನಾವೆಲ್ಲ ಕನ್ನಡಿಗರಿಗೆ ಇನ್ನು ಹೆಚ್ಚು ಹೆಮ್ಮೆಯ ಮತ್ತು ಅಭಿಮಾನದ ಸಂಗತಿಯಾಗಿರುತ್ತದೆ.

ಮಿಣಜಗಿಯವರ ವೃತ್ತಿ ಜೀವನ :

ಇಂಗ್ಲೆಂಡ ರಾಜಧಾನಿ ಲಂಡನ್‌ನಲ್ಲಿ ಉನ್ನತ ವ್ಯಾಸಂಗವನ್ನು ಪೂರೈಸಿದ ಮಿಣಜಗಿಯವರು

ಎಲ್ಲಾದರೂ ಇರು ; ಎಂತಾದರೂ ಇರು ;
ಎಂದೆಂದಿಗೂ ನೀ ಕನ್ನಡಿಗವಾಗಿರು[೧೬]

ಎಂದ ಕುವೆಂಪು ಅವರ ಹಾಡಿನಂತೆ ಈ ಭಾಷಾ ಪ್ರೇಮ ತನ್ನ ಅಭಿವ್ಯಕ್ತಿಯನ್ನು ಪಡೆದು, ಈ ಹಾರೈಕೆಗಳ ಪರಿಣಾಮವಾಗಿ ಅನೇಕ ಪ್ರಶಸ್ತಿಗಳನ್ನು ಸಂಪಾದಿಸಿ ಕಲಾವಿದನ ಜೀವನಕ್ಕೆ ಅಣಿಗೊಂಡು ೧೯೩೯ ರಲ್ಲಿ ಭಾರತಕ್ಕೆ ಮರಳಿ ಬಂದರು. ಕರ್ನಾಟಕದಲ್ಲಿ ಆಗಿನ್ನು ಕಲಾ ಜೀವನಕ್ಕೆ ಸಾಕಷ್ಟು ಪ್ರೋತ್ಸಾಹ, ಅವಕಾಶವಿರದೆ ಇರುವುದನ್ನು ಕಂಡು ಮಿಣಜಗಿಯವರು ಮುಂಬೈಯಲ್ಲಿ ನೆಲೆಸುವುದು ಅವರಿಗೆ ಅನಿವಾರ್ಯವೆನಿಸಿತು. ಕಲಾ

೧೫. ಶ್ರೀನಿವಾಸ : ರಾಮನವಮಿ, ಪುಟ - ೧೩.
೧೬. ಕುವೆಂಪು : ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಪುಟ - ೩೩.

ಸೃಷ್ಟಿಗೆ ಅಂತರಂಗ ದ ಕಲಾ ವ್ಯಾಪ್ತಿ ಎಂದರೆ, ಈ ಚಿತ್ರವೆಂಬುದು ಒಂದು ನಿರಂತರ ಚಲನೆ. ಈ ಚಲನೆಯಲ್ಲಿ ಚಿತ್ರ ಬಹಿರಂಗ ಲೋಕದ ನಿರಂತರ ಚಲನೆಯೊಂದಿಗೆ ಸೇರಿ ಪ್ರತಿಕ್ಷಣವೂ ಬಗೆ ಬಗೆಯ ಅನುಭವಗಳನ್ನು ಪಡೆಯುತ್ತದೆ [೧೭] ಇಂಥ ಅನುಭವಗಳಿಂದ ಅವಶ್ಯವಾಗಿ ನೆಲೆ ನಿಲ್ಲುವುದು ಪರಿಣಮಿಸಿತು. ಆದರೆ ಇವರ ಕಲಾಗುರು ಸರ್ ವಿಲಿಯಂ ರೊಥೆನ್ ಸ್ಟೇನ್ ಮತ್ತು ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ದ ಪ್ರಾಚಾರ್ಯ ಸೊಲೊಮನ್ ಇವರಿಬ್ಬರ ನಡುವೆ ಅಂಥ ಸಾಮರಸ್ಯವಿಲ್ಲದ್ದರಿಂದ ಮಿಣಜಗಿಯವರಿಗೆ ಸೊಲೊಮನ್‌ರಿಂದ ತಕ್ಕಮಟ್ಟಿಗೆ ಸಹಾಯ, ಸಹಕಾರ ದೊರಕಲಿಲ್ಲ ಹೀಗಾಗಿ ಮಿಣಜಗಿಯವರು ಸ್ವತಂತ್ರವಾಗಿಯೇ ಕಲಾವಿದನ ಜೀವನವನ್ನು ನಡೆಸುವುದು ಅನಿವಾರ್ಯವೆನಸಿತು. ಇವರ ದೈವವೂ ಬಹುಶಃ ಹಾಗೆಯೇ ಈ ವಿಷಯದಲ್ಲಿ ನಿರ್ಣಯವೆನಿಸಿತ್ತೋ ಏನೋ ! ಸ್ವತಂತ್ರವಾಗಿ ಕಲಾವಿದನ ಜೀವನವನ್ನು ಕೈಕೊಳ್ಳಲು ಮಡಿವಾಳಪ್ಪನವರು ನಿರ್ಧರಿಸಿದರು. ಹೀಗೆ ಕಲೆಯನ್ನು ಉಪಜೀವನಕ್ಕಾಗಿ ಅವಲಂಬಿಸುವುದು ಕಠಿಣವೆನಿಸಿದ್ದರೂ ಅವರು ಬಹುದಿಟ್ಟತನದಿಂದ

ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಜಗ್ಗದೆಯ ಕುಗ್ಗದೆಯ
ಹಿಗ್ಗಿ ನಡೆ ಮುಂದೆ [೧೮]

ಎಂಬ ಯೋಧವಾಣಿಯಂತೆ ಆಧಿಶಕ್ತಿಯಾಗಿ ಕೈಗೊಂಡರು. ಅವರ ನಿರ್ಣಯ ಅದೆಷ್ಟು ಜಾಣತನದ್ದಾಗಿತ್ತು ಎಂಬುದು ಕೆಲವು ಈ ಹೊಸ ಕಲಾವಿದನ ಕೀರ್ತಿಯನ್ನು ಕೇಳಿದ್ದ ಮುಂಬಯಿ ಜನರು ನಾನಾ ಬಗೆಯ ಕಲಾಸಾಮಗ್ರಿಗಾಗಿ ಅವರನ್ನು ಮುಕ್ಕರಿದರು. ಮುಂಬಯಿಯ ಅವರ ಈ ವಾಸ್ತವ್ಯವು ಅವಿರತ ಕೆಲಸದಿಂದ ತುಂಬಿ ಹೋಗಿತ್ತೆಂದು ಹೇಳಿದರೆ ಅದರಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲ, ಆದರೆ ಈ ಕೆಲಸವನ್ನೆಲ್ಲವನ್ನು ಅವರು ತುಂಬ ಚಾಕಚಕ್ಯತೆಯಿಂದ ನಿರ್ವಹಿಸಿಕೊಂಡು ಬಂದರು. ಅದೇ ಕಾಲಕ್ಕೆ ಕಲೆಗೆ ಯಾವ ಕಾಲಕ್ಕೂ ಯಾವುದೇ ರೀತಿಯಲ್ಲಿ ಅಪಚಾರವಾಗದಂತೆಯೇ ಅವರು ನಡೆದುಕೊಂಡು ಬಂದರೆಂಬುದೂ ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ಪ್ರಾರಂಭದಲ್ಲಿ ಕೆಲವು ದಿನಗಳಲ್ಲಿ ಮಡಿವಾಳಪ್ಪನವರು ಮಲಬಾರ ಹಿಲ್‌ಗೆ ಸ್ಥಳಾಂತರಗೊಂಡರು. ಮುಂಬೈಯಿಂದ ಹೊರಬೀಳುವವರೆಗೂ ಇಲ್ಲಿಯೇ ಅವರು ವಾಸ್ತವ್ಯ ಹೂಡಿದ್ದರು. ಅನಂತರ ದೀರ್ಘಕಾಲದವರೆಗೂ ಈ ವಸತಿ ಕಲಾವಿದನ ವಸತಿಗೃಹ ಕಲಾಮಂದಿರವಾಗಿ ಪರಿಣಮಿಸಿತು. ಅಲ್ಲದೇ ಸ್ಟುಡಿಯೋ ಎಂಬ ಕೀರ್ತಿಗೆ ಪಾತ್ರವಾಗಿ ಹೆಸರು ಗಳಿಸಿತ್ತು.

ಡಾ. ಮಿಣಜಗಿಯವರು ಮುಂಬೈನಲ್ಲಿರುವಾಗ ಆಗಿನ್ನು ರಾಷ್ಟ್ರೀಯ ಆಂದೋಲನದ ಸಮಯ, ಅನೇಕ ರಾಷ್ಟ್ರೀಯ ನಾಯಕರ ಚಿತ್ರಗಳನ್ನು ಇವರು ಆಗ ಸಿದ್ಧಪಡಿಸಿದರು. ಪಂಡಿತ ಮದನ್‌ಮೋಹನ ಮಾನವೀಯರದು, ಬಹುಮುಖ್ಯವಾದುದು ಎಂದು ಹೇಳಬೇಕು [೧೯] ಬ್ಯಾರಿಸ್ಟರ್ ಜಿನ್ನಾ, ಎಂ.ಎ. ಸರ್. ಸಿದ್ದಪ್ಪ ಕಂಬಳಿ, ಸರ್ ಎಂ. ವಿಶ್ವೇಶರಯ್ಯ, ಕರ್ನಲ್ ಬಾಟಿಯಾ ಈ ಮೊದಲಾದ ಇನ್ನೂ ಅನೇಕ ಚಿತ್ರಗಳನ್ನು

---

೧೭. ಜಿ. ಎಸ್. ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ, ಪುಟ - ೧೩೪.
೧೮. ಕುವೆಂಪು ಪಾಂಚಜನ್ಯ, ಪುಟ - ೭.
೧೯. ಶ್ರೀ ಪಿ. ಎಸ್. ಹಿರೇಮಠ : ನವನಾಡು ಸಾಪ್ತಾಹಿಕ ಸಮೀಚೀನ : ದಿ. ೩೧-೧-೧೯೮೮ ಪುಟ - ೧



ಮಡಿವಾಳಪ್ಪನವರು ಮುಂಬೈಯ ತಮ್ಮ ಸ್ಟುಡಿಯೋದಲ್ಲಿ ಕುಂಚಗಳಿಂದ ಮಹಾನ್ ವ್ಯಕ್ತಿಗಳ ಭಾವಚಿತ್ರಗಳನ್ನು ರಚಿಸಿದರು. ಜಗದ್ಗುರು ಮೂರುಸಾವಿರ ಮಠದ ಶ್ರೀ ಗುರುಸಿದ್ಧರಾಜಯೋಗಿಂದ್ರ ಮಹಾಸ್ವಾಮಿಗಳವರ ವರ್ಣಚಿತ್ರಗಳನ್ನು ಕೂಡ ಇವರು ತೈಲವರ್ಣದಲ್ಲಿ ಚಿತ್ರಿಸಿ ರಚಿಸಿಕೊಟ್ಟಿದ್ದಾರೆ. ಇದಲ್ಲದೇ ಪೌರಾಣಿಕ ಐತಿಹಾಸಿಕ, ಧಾರ್ಮಿಕ ವಿಷಯಗಳ ಕುರಿತು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವರ್ಣ ಚಿತ್ರಗಳನ್ನು ಸೃಷ್ಟಿಸಿದ್ದಾರೆ. ಧಾರವಾಡದ ಲಿಂಗಾಯತ ಸಮಾಜದವರು ಅನೇಕ ಪ್ರಸಿದ್ಧ ಕಲಾವಿದರಿಂದ ಧಾರ್ಮಿಕ ವಿಷಯಗಳ ಕುರಿತಂತೆ ಕಲಾಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಕಾಮದಹನ, ಜಲಂಧರ, ನಾಮಕರಣ ಇವು ಪೌರಾಣಿಕ ವರ್ಗಕ್ಕೆ ಸೇರಿದ ಚಿತ್ರಗಳಾದರೆ ಸಿದ್ಧರಾಮನ ಲಿಂಗಧಾರಣೆ, ಬಿಜ್ಜಳನ ಅರಮನೆಯಲ್ಲಿ ದೊರೆತ ಪತ್ರವನ್ನು ಓದುವ ಬಸವಣ್ಣನವರು, ಚಿತ್ರದಲ್ಲಿ ಬಸವಣ್ಣನ ಹಾವಭಾವ ಅಲ್ಲಿ ಅಕ್ಕಪಕ್ಕದ ಸನ್ನಿವೇಶಗಳ ಬಗ್ಗೆ ಅತ್ಯಂತ ಸೂಕ್ಷ್ಮ ಕಲ್ಪನೆಗಳ ಮುಖಾಂತರ ಮಿಣಜಗಿಯವರು ಕಲಾಕೃತಿ ರಚಿಸಿದ್ದನ್ನು ಗಮನಿಸಬಹುದಾಗಿದೆ. ಇದೇ ರೀತಿಯಲ್ಲಿ ಐತಿಹಾಸಿಕ ಹಾಗೂ ಧಾರ್ಮಿಕ ವಿಷಯದಲ್ಲಿ ಚಿತ್ರಗಳು ಕಂಡು ಬರುತ್ತವೆ. ಉಮರ ಖಯ್ಯಾಮನ ಬಗೆಗೆ ಅವರು ಚಿತ್ರಿಸಿದ ಮೂರು ಕಲಾಕೃತಿಗಳು ಅತ್ಯುತ್ತಮ ಹೆಸರು ತರುವಲ್ಲಿ ಮುಖ್ಯ ಪಾತ್ರವಹಿಸಿದವು. ಇದೇ ಅವಧಿಯಲ್ಲಿ ರಚಿಸಿದ ಕಲಾಕೃತಿಗಳು ಅವರ ಕಲಾತ್ಮಕ ಜೀವನಕ್ಕೆ ಹೆಸರು ಕೀರ್ತಿ ತರುವುದರೊಂದಿಗೆ ಅವರ ನಿತ್ಯ ಜೀವನಕ್ಕೂ ತುಂಬಾ ಸಹಾಯಕವಾಗಿ ನಿಂತವು.[೨೦]

ಮಡಿವಾಳಪ್ಪನವರ ವಿವಾಹವು ಈ ಮೊದಲೇಯಾಗಿದ್ದರಿಂದ ಕುಟುಂಬವು ನಡೆಸುವ ಹೊಣೆ ಎದುರಿಸಬೇಕಾಯಿತು. ಆಗ ಚಿಕ್ಕ ವಯಸ್ಸಿನಲ್ಲಿಯೇ ವಿವಾಹ ಮಾಡುವದು ರೂಢಿಯಲ್ಲಿದ್ದಿತ್ತು ಹೀಗಾಗಿ ಇವರು ಮಾಧ್ಯಮಿಕ ಶಿಕ್ಷಣ ವ್ಯಾಸಂ ಗ ಮಾಡುತ್ತಿರುವಾಗಲೇ ಮನೆತನದ ಹಿರಿಯರು ಸೇರಿ ತಮ್ಮ ಮನೆತನದ ಕನ್ಯೆಯನ್ನು ನೋಡಿ ಮಡಿವಾಳಪ್ಪನವರಿಗೆ ವಿವಾಹ ನೆರವೇರಿಸಿಬಿಟ್ಟರು. ಇವರ ಪತ್ನಿಯ ಹೆಸರು ಸರಸ್ವತಿ. ಕಲಾಜೀವನದೊಂದಿಗೆ ಸಾಂಸಾರಿಕ ಜೀವನವನ್ನು ಅವರು ಎದುರಿಬೇಕಾಗಿ ಬಂದಿತು. ಆದರೆ ಅಭಿಜಾತ ಕಲಾವಿದರೆನಿಸಿದ ಮಡಿವಾಳಪ್ಪನವರಿಗೆ ಇವೆರಡನ್ನು ಸರಿದೂಗಿಸಿಕೊಂಡು ಹೋಗುವುದರಲ್ಲಿ ಯಾವುದೇ ಅಂಥಹ ತೊಂದರೆಯಾಗಲಿಲ್ಲ. ಇದೇ ಸಂದರ್ಭದಲ್ಲಿ ತಮ್ಮದೇ ಆದ ವರ್ಣಚಿತ್ರಗಳ ಮೂಲಕ ಚಿತ್ರಕಲಾ ಕ್ಷೇತ್ರದಲ್ಲಿ ಅವರು ಅಪೂರ್ವ ಸಾಧನೆಗೈದಿದ್ದರೆಂಬುದು ಯಾರಾದರೂ ಮೆಚ್ಚಿಕೊಳ್ಳವಂತಹದೇ ಸರಿ.

ಮುಂಬೈಯಲ್ಲಿ ಕಲಾಕೃತಿಗಳ ಪ್ರದರ್ಶನವನ್ನು ಡಾ. ಆರ್ ರಾವ್ ಅವರ ನಿವಾಸದಲ್ಲಿ ಈ ನೆರವೇರಿಸಿದರು. ಫೈಜ ರಹಮಾನರ ಪತ್ನಿ ಶ್ರೀಮತಿ ಭಗಲಾ ಅಮುರೂ ಬೇಗಂ ಅವರು ಈ ಕಲಾಪ್ರದರ್ಶನವನ್ನು ಉದ್ಘಾಟಿಸಿದರು. ಚಿತ್ರಕಲೆಯ ಬಗೆಗೆ ತುಂಬಾ ಉದ್ಬೋಧಕವಾದ ಭಾಷಣ ಮಾಡಿದರು. ಡಾ. ಪನ್ನಾಲಾಲ, ಐ.ಸಿ.ಎಸ್. ಹಾಗೂ ಫೈಜಿ ರಹಮಾನ ಈ ಮೊದಲಾಗಿ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಮಿಣಜಗಿಯವರ ಈ ಪ್ರಥಮ ಕಲಾಪ್ರದರ್ಶನವನ್ನು ಸಂದರ್ಶಿಸಿ ಕಲಾವಿದನ ಹಿರಿದಾದ ಸಾಧನೆಯ ಬಗೆಗೆ ಬಹು ಸಂತಸವನ್ನು ವ್ಯಕ್ತಪಡಿಸಿದರು. ಡಾ. ಮಿಣಜಗಿಯವರ ಕಲಾ ಜೀವನದ ಹಿರಿಮೆಗೆ ಇದು ನಾಂದಿಯಾಗಿ ಪರಿಣಮಿಸಿತು.

---

೨೦. ಶ್ರೀ ಶಂಕರ ಪಾಟೀಲ : ಕಲಾತಪಸ್ವಿ ಡಾ. ಎಂ.ವ್ಹಿ. ಮಿಣಜಗಿ, ಪುಟ - ೨೪.



ಮಿಣಜಗಿಯವರು ಸುಮಾರು ೧೫-೧೬ ವರ್ಷಗಳ ಕಾಲ ಮುಂಬೈ ಜೀವನವನ್ನು ಅವಲೋಕಿಸಿದಾಗ ಸಾಹಸ, ಧೈರ್ಯ, ಧೀರ್ಘಶ್ರಮ ಎದ್ದು ಕಾಣುತ್ತದೆ. ನಿರಂತರ ಕಲಾ ಸೇವೆ ಅವರ ಬೆಳವಣಿಗೆಯ ಜೀವಂತಿಕೆಯ ಲಕ್ಷಣಗಳಾದವು. ಮನುಷ್ಯ ಕ್ಷೇತ್ರದಲ್ಲಿಸಾಧಿಸಬೇಕೆಂಬ ಇಚ್ಚೆ ಬಲವಾದಾಗ ಎಲ್ಲವನ್ನುಮರೆತು ನಿಷ್ಠೆಯಿಂದ ದುಡಿಯುತ್ತಾನೆ. ಅದೇ ಸತ್ ಕರ್ಮ, ಅದೇ ಕಾಯಕ ನಿಷ್ಠೆ, ಅದೇ ಪ್ರಗತಿಯ ಮಾರ್ಗ, ಈ ಪ್ರಗತಿಯಿಂದ ಅವನಿಗೆ ಎಲ್ಲಿಲ್ಲದ ಆನಂದವಾದಂತೆ, ಕಲಾವಿದನ ಜೀವನ ಸುಖದ ಸಂತೃಪ್ತಿಯಲ್ಲ. ಮುಳ್ಳಿನ ಹಾಸಿಗೆ ಎಂಬುದನ್ನು ಅರಿತಿದ್ದರೂ ಮಿಣಜಗಿಯವರು ಅದರಲ್ಲಿ ಹಿಂದೆಟು ಹಾಕಲಿಲ್ಲವೆಂಬುದು ಅತ್ಯಂತ ಪ್ರಮುಖವಾದ ಸಂಗತಿಯೆನ್ನಬಹುದಾಗಿದೆ.

ಮಿಣಜಗಿಯವರ ಏಕೈಕ ಕಲಾ ಪ್ರದರ್ಶನವು ಮುಂಬೈಯಲ್ಲಿ ನೆರವೇರಿದ್ದರಿಂದ ಅವರ ಕೀರ್ತಿ ರಾಜ್ಯ ಹಾಗೂ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದವರೆಗೆ ಇದರ ಹೆಸರು ಪಸರಿಸಿತು. ಅಲ್ಲದೇ ದೇಶ, ವಿದೇಶದ ಪತ್ರಿಕೆಗಳು ಇವರು ರಚಿಸಿದ ಅತ್ಯಂತ ವೈಶಿಷ್ಟ್ಯತೆಯ ಕಲಾಕೃತಿಗಳನ್ನು ಮುಖವಾಣಿಯಲ್ಲಿ ಪ್ರಕಟಿಸಿದವು. ಮಿಣಜಗಿಯವರ ಸಂಯೋಜನೆ ಶೈಲಿ ಅತ್ಯಂತ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದ ಗುಣಗಳಿಂದ, ವಿಶೇಷತೆಯ ಸೊಬಗನ್ನು ಮರೆಯುವಲ್ಲಿ ಪ್ರಮುಖ ಪಾತ್ರ ವಹಿಸುವಂತೆ, ತೋರ್ಪಡಿಸುತ್ತಿದ್ದರು ಅಂತೆಯೇ ಮಿಣಜಗಿಯವರು ಬಿಡುವಿಲ್ಲದೇ ಶ್ರಮ ವಹಿಸಿ ಈ ಸಾಧನೆ ಗೈಯಲು ಸಾಧ್ಯವಾಯಿತು.

ಚಿತ್ರಕಲೆ ಜೀವನ ಕೈಗನ್ನಡಿಯಷ್ಟೆ ಅಲ್ಲ ಅದು ನಮ್ಮ ಬದುಕಿನ ಮುನ್ನಡೆಗೂ ಕಾರಣವಾಗಬಹುದು, ಒಂದು ರೀತಿಯಲ್ಲಿ ಜೀವನದ ಪ್ರತಿಬಿಂಬವು ಹೌದು ಅಷ್ಟೆ ಅಲ್ಲ ಅದು ಗತಿ ಬಿಂಬವೂ ಸಹ ಹೌದು. ಜನಸಾಮಾನ್ಯರಿಗೆ ಸುಲಭವಾಗಿ ಅನುಭವವಾಗಬಲ್ಲ ಕಲಾ ಮಾಧ್ಯಮದಲ್ಲಿ ಚಿತ್ರಕಲೆ ಪ್ರಮುಖವಾದದ್ದು ಇದಕ್ಕೆ ಕಾಲ ದೇಶ, ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿ ಇದೆ. ಹೀಗಾಗಿ ಚಿತ್ರಕಲೆಯನ್ನು ಅಂತರಾಷ್ಟ್ರೀಯ ಭಾಷೆಯೆಂದು ಕರೆಯಲಾಗುತ್ತಿದೆ. ಚಿತ್ರಕಲೆ ಇಲ್ಲದ ಶಿಕ್ಷಣವು ಕಿಟಕಿಗಳಿಲ್ಲದ ಮನೆಯ ಹಾಗೆ ಎಂಬ ಮಾತು, ಚಿತ್ರಕಲೆ ಹಾಗೂ ಶಿಕ್ಷಣದ ಸಾಮರಸ್ಯದ ಕುರಿತಾದ ಮಾತಾಗಿದೆ. ಬರ್ನಾಡ ಶಾ ಹೇಳವಂತೆ ನೋಯಿಸದೇ ವಿದ್ಯೆಯನ್ನು ನೀಡಬಲ್ಲ ಶಿಕ್ಷಕನೆಂದರೆ ಕಲೆಯು ಮಾತ್ರ ಎಂಬುದರಲ್ಲಿ ಔಚಿತ್ಯವಿದೆ. ಕಲೆಯು ಮಾನವರನ್ನು ಅತಿಮಾನವನನ್ನಾಗಿ ಮಾಡುವ ಸಾಧನವಾಗಿದೆ. ಹೀಗಾಗಿ ಅದೊಂದು ದೃಶ್ಯ ಕಾವ್ಯ ಎನ್ನಬಹುದು.[೨೧] ಇಂಥ ಒಂದು ಚಿತ್ರಕಲಾ ಶಿಕ್ಷಣವನ್ನು ನೀಡುವ ದೆಸೆಯಿಂದ ಡಾ|| ಮಿಣಜಗಿಯವರು ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡರು. ಕಲಾವಿದನಾದರೆ ನಾವು ನಮ್ಮ ಒಂದು ಚೌಕಟ್ಟಿನೊಳಗೆ ಇರುತ್ತೇವೆ. ಬರೀ ಕಲಾಕೃತಿಗಳನ್ನು ಮಾಡುವುದು. ಕಲಾಪ್ರದರ್ಶನಗಳನ್ನು ಮಾಡುವುದು ನಮ್ಮ ಹಿತಕ್ಕಾಗಿ, ನಮಗಾಗಿಯೇ ಮಾಡುವುದಾಗುತ್ತದೆ, ಆದರೆ ಕಲಾಶಿಕ್ಷಕನಾದರೆ ತಾನು ಇನ್ನೊಬ್ಬರಿಗೆ ಹೇಳುವ ಒಂದು ಅವಕಾಶವು ಸಿಕ್ಕಂತಾಗುತ್ತದೆ ಎಂದು ಶಿಕ್ಷಕನಾಗುವ ಕನಸು ಕಾಣುತ್ತಾರೆ ಮತ್ತು ಅದನ್ನು ಸಾಕಾರಗೊಳಿಸುತ್ತಾರೆ. ಮಿಣಜಗಿಯವರು ಕಲೆಯ ಬಗ್ಗೆ ತರಬೇತಿಯನ್ನು ನೀಡುವ ದೃಷ್ಟಿಯಿಂದ ಮುಂಬೈಯನ್ನು ತೊಲಗಿ ಕರ್ನಾಟಕದ ವಾಣಿಜ್ಯ ನಗರವೆಂದು ಹೆಸರಾದ ಉತ್ತರ ಕರ್ನಾಟಕದ ಹುಬ್ಬಳ್ಳಿಗೆ ಬಂದು ನೆಲೆಸಿದರು. ಮಿಣಜಗಿಯವರನ್ನು ಕಂಡು ಕನ್ನಡದ ಶ್ರೇಷ್ಠ ಕವಿ ಡಿ.ಎಸ್.ಕರ್ಕಿ ಅವರನ್ನು ಕುಂಚ ಬ್ರಹ್ಮ ಎಂದು ಕರೆದುದು ತುಂಬಾ ಔಚಿತ್ಯಪೂರ್ಣವಾದ ವಿಚಾರ ಎಂಬುದನ್ನು ನಾವು ಅವಲೋಕಿಸಬೇಕಾಗುತ್ತದೆ.

★★★★★

---

೨೧. ಡಾ. ಎಸ್.ಸಿ. ಪಾಟೀಲ (ಸಂ) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ - ೧೧೬.



ಅಧ್ಯಾಯ : ನಾಲ್ಕು

ಡಾ. ಎಂ.ವ್ಹಿ. ಮಿಣಜಗಿ : ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಸ್ನೇಹ ಶೀಲರೊಂದಿಗೆ ಬದುಕು

..............ವಿಶ್ವಚೇತನದಾ
ಸ್ಪಂದನವೆ ಸೌಂದರ್ಯ : ಅದುವೆ ಜೀವನದ ಮೂಲ
ಬಂಧುರತೆ ಬೊಮ್ಮನದು.[1]

ಸೌಂದರ್ಯ ವಿಶ್ವಚೇತನದ ಸ್ಪಂದನ, ನಮ್ಮ ಜೀವನಕ್ಕೆ ಅದೇ ಮೂಲ ಸೌಂದರ್ಯದಿಂದಾಗುವ ಈ ಬಂಧುರತೆ ಬೊಮ್ಮನದು ಎಂಬಂತೆ. ಡಾ. ಮಿಣಜಗಿಯವರ ಕಲಾತ್ಮಕ ಬದುಕನ್ನು ಹೊತ್ತುಕೊಂಡು ಕನ್ನಡದ ನಾಡಿನ ಜನತೆಗೆ ನನ್ನ ಈ ಕಲೆಯ ಗುಣಾತ್ಮಕ ಅಂಶಗಳನ್ನಾದರೂ ತಿಳಿಸಿಕೊಡಬೇಕೆಂದು ಮುಂಬೈಯಿಂದ ತಾಯ್ನಾಡಿಗೆ ಬಂದು ಕಲೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕೆಂಬುದು ಇವರ ಆಶೆಯಾಗಿತ್ತು. ಡಾ. ಮಡಿವಾಳಪ್ಪನವರು ಚಿತ್ರಕಲೆಯಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಪಡೆದು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದು ಉತ್ತುಂಗ ಶಿಖರವನ್ನು ಏರಿ ರಾರಾಜಿಸುತ್ತಿರುವಾಗ ಅವರಲ್ಲಿ ಒಂದು ಹಂಬಲ ಸದಾ ಕೊರೆಯತೊಡಗಿತು. ಆದರೆ, ನಾನೇನು ತುಂಬ ತೊಂದರೆಪಟ್ಟು ಚಿತ್ರಕಲಾ ಶಿಕ್ಷಣ ವ್ಯಾಸಂಗವನ್ನು ಉತ್ತಮ ಗುರುಗಳ ಸಹಾಯದಿಂದ ಉತ್ತಮ ಪರಿಣಿತಿಯನ್ನು ಇಂದು ಚಿತ್ರಕಲಾ ಕ್ಷೇತ್ರದಲ್ಲಿ ನಾಡಿನಲ್ಲಿ ಮೆರೆಯುವಂತೆ ಮಾಡಿತು. ಆದರೆ ಕರ್ನಾಟಕದಲ್ಲಿ ಕಲಾಶಿಕ್ಷಣದ ಬಗ್ಗೆ ತರಬೇತಿಯನು ನೀಡುವ ಸಂಸ್ಥೆಗಳು ಇನ್ನು ಅಷ್ಟು ಗಂಭೀರವಾದ ಅಧ್ಯಯನವನ್ನು ಮಾಡಿಸುವಂತಹ, ಹಾಗೂ ಮಾಹಿತಿಗಳನ್ನು ತಿಳಿಸಿಕೊಡುವ ಕೇಂದ್ರಗಳಾಗಲಿ ಕಂಡು ಬರುತ್ತಿರಲಿಲ್ಲ, ಆದರೆ ಮಿಣಜಗಿಯವರು ಈ ದಿಶೆಯಲ್ಲಿ ಚಿತ್ತಿಸುತ್ತಾ ಕರ್ನಾಟಕದಲ್ಲಿ ಎಷ್ಟೋ ಜನ ಬಡ ವಿದ್ಯಾರ್ಥಿಗಳಿಗೆ ಈ ಬಗೆಯ ಸೌಕರ್ಯ ದೊರೆಯಲು ಸಾಧ್ಯ?[2] ಎಂಬ ಕೊರಗು ಡಾ.ಮಿಣಜಗಿಯವರಲ್ಲಿ ಸದಾ ಇತ್ತು. ಕರ್ನಾಟಕದಲ್ಲಿ ಕಲಾಶಿಕ್ಷಣ ಪಡೆಯುವದು ಕೇವಲ

೧. ಡಿ.ವಿ.ಜಿ : ಮಂಕುತಿಮ್ಮನ ಕಗ್ಗ, ಪುಟ -೧೦೬.
೨. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೪೯.



ಬಡಜನಾಂಗದ ಮಕ್ಕಳು ಎಂಬ ವಾಡಿಕೆ ಇತ್ತು ಇಂಥಹ ಬಡ ವಿದ್ಯಾರ್ಥಿಗಳು ದೂರದ ಮುಂಬೈನಗರಕ್ಕೆ ಹೋಗಿ ಅಲ್ಲಿ ವಾಸಸ್ಥಾನ ಮಾಡುವುದಾಗಲಿ ಹೇಗೆ ಸಾಧ್ಯ ಎಂಬುದಾಗಿತ್ತು. ಅಲ್ಲಿಯ ಮಹಾನ್ ಜೆ.ಜೆ.ಕಲಾಶಾಲೆಯಲ್ಲಿ ಶಿಕ್ಷಣ ಪಡೆಯುವದು ಸುಲಭ ಹಾಗೂ ಸರಳವಾಗಿ ವ್ಯಾಸಂಗ ಮಾಡುವದು ನೆರವೇರುವದಾದರು ಹೇಗೆ ಸಾಧ್ಯವಾಗುತ್ತಿದೆ ?

ಜನತೆಯ ಸಂಸ್ಕಾರ ಇಲ್ಲವೇ ರಾಷ್ಟ್ರೀಯ ಹಿತರಕ್ಷಣೆಯ ದಿಶೆಯಲ್ಲಿ ನೀತಿರೂಪಣೆಗೆ ಕೈಯಿಕ್ಕುವ ಕಲಾವಿದನು 'ನೀತಿ' ಗೆ ಅತ್ಯಂತ ವ್ಯಾಪಕವಾದ ಅರ್ಥವನ್ನಿಟ್ಟುಕೊಳ್ಳಬೇಕಾಗುವುದು[೩] ಪ್ರಾಯಶಃ ಜೀವನದಷ್ಟು ವಿಶಾಲವಾದ ಅರ್ಥವನ್ನು ಅದಕ್ಕಿಟ್ಟುಕೊಳ್ಳಬೇಕೆಂದು ತೋರುತ್ತದೆ. ಮ್ಯಾಥ್ಯೂ ಅರ್ನಾಲ್ಡ್ ಹೇಳುವಂತೆ ಅದನ್ನು ಜೀವಿಸುವ ಕಲೆ ಎಂದು ಹೆಸರಿಸಬಹುದು. ಸಮಗ್ರವಾದ ಜೀವನ ಕಲೆಯನ್ನು ಭೋಧಿಸುವಂತ ಗುರಿಪ್ರೇರಿತವಾದ ಕಲಾಸಾಹಿತ್ಯಕ್ಕೆ ದೇಶ, ಕಲಾದಿ ವಿಶಿಷ್ಟ್ಯತೆ ಹಾಗೂ ಸಂಕುಚಿತತೆಗಳು ಬಾರದೆನ್ನಬಹುದು,

ಡಾ. ಮಿಣಜಗಿಯವರ ಕಲಾಸೇವೆಗೆ ಅನೇಕರು ಗಣ್ಯರು, ಮಹಾನ್ ವ್ಯಕ್ತಿಗಳು, ದಾನಿಗಳು , ನೆರವಾಗಿ ನಿಂತರು, ಇಂಥ ನೆರವು ದೊರೆಯುವದು ಸುಲಭದ ಮಾತಲ್ಲ ಎಂಬುದು ಗಮನಿಸಿ ಅವಲೋಕಿಸುವದು ಪ್ರಮುಖವಾಗಿದೆ. ಈ ಕುರಿತಂತೆ, ಅದರಲ್ಲಿರುವ ಗುಣಾತ್ಮಕ ಅಂಶಗಳೇ ಇದಕ್ಕೆ ಸಾಕ್ಷಿಯಂತಿವೆ. ಇದಕ್ಕಾಗಿ ಅವರು ಸದಾಕ್ರೀಯಾಶೀಲರಾಗಿ ಅಭಿವೃದ್ದಿಯತ್ತ ಸ್ಮೃತಿ ಪಟಲದಲ್ಲಿ ಯೋಚಿಸುತ್ತಿದ್ದರು.ಇಂತಹ ಶಿಕ್ಷಣದ ಸೌಲಭ್ಯ ಕರ್ನಾಟಕದ ವಿದ್ಯಾರ್ಥಿಗಳಿಗೆ ಕರ್ನಾಟಕದ ಮಧ್ಯವರ್ತಿಸ್ಥಳದಲ್ಲಿಯೇ ಏಕೆ ಲಭಿಸಬಾರದು? ಆಗಲೇ ಮುಂಬೈಯಲ್ಲಿ ಅವರು ಕಲಾವೃತ್ತಿಯನ್ನು ಆರಿಸಿಕೊಂಡು ಜೀವನವು ಎರಡು ದಶಕಗಳ ಸಮೀಪಕ್ಕೆ ಬಂದಿತ್ತು, ಅಲ್ಲದೇ ಆ ಜೀವನವು ಸಾಗಿಸುತ್ತಿದ್ದುದು ಅವರಿಗೆ ಅತ್ಯಂತ ತೃಪ್ತಿದಾಯಕವಾಗಿ ನೀಡಿತ್ತು.ತಮ್ಮ ಈ ವೃತ್ತಿ ಜೀವನ ಅನುಭವ ಹಾಗೂ ಕಲೆಯ ಅನುಭವ, ಪರಿಣತಿಯ ಲಾಭವು ಕನ್ನಡಿಗರಿಗೆ ಅದರಲ್ಲಿಯೂ ಚಿತ್ರಕಲಾ ಜೀವನ ಪ್ರವೇಶ ಬಯುಸುವವರಿಗೆ ಹಾಗೂ ತರುಣ ಕಲಾಭಿಸಕ್ತರಿಗೆ ಲಭ್ಯವಾಗಬೇಕೆಂದು, ಅವರ ಮನಸ್ಸು ತುಂಬ ಹಾತೊರೆಯುತ್ತಿತ್ತು.

ಲೋಕದ ಈ ಸುಂದರವಾದ ಆವರಣದಲ್ಲಿ ಈ ಜೀವ ಜನ್ಮ ಜನ್ಮಾಂತರಗಳಿಂದಲೂ ಹರಿದು ಬರುತ್ತದೆ, ಈ ಕಾರಣದಿಂದ ಲೋಕದ ವಸ್ತುಗಳಿಗೂ ಈ ಜೀವಕ್ಕೂ ಜನನಾಂತರ ಸಹೃದಯವಿದೆ, ಆದ್ದರಿಂದಲೇ ಸುಂದರವಾದ ಗಾನವನ್ನಾಲಿಸಿದಾಗ, ಸುಂದರ ನೋಟವನ್ನು ನೋಡಿದಾಗ ನಮ್ಮಲ್ಲಿ ಒಂದು ಬಗೆಯ ತನ್ಮಯತೆ ಅಪೂರ್ವವಾದ ಬಾಂಧವ್ಯದ ಅನುಭವ ಉಂಟಾಗುತ್ತದೆ. ವಸ್ತುವೊಂದು ಸುಂದರವಾಗಿದೆ ಎಂದು ತೋರುವುದು ಅದರ ವರ್ಣದಿಂದ, ಸೌಂದರ್ಯದ ಮುಖ್ಯ ಲಕ್ಷಣವಾದ ಈ ವರ್ಣ ವಿಲಾಸವನ್ನು ಕಾಳಿದಾಸ ಮತ್ತು ಬಾಣ ಇವರಿಬ್ಬರು ಗುರುತಿರುವಷ್ಟು ಉಳಿದವರಾರು ಗುರುತಿಸಿಲ್ಲವೆನ್ನಬಹುದು.

ಮಡಿವಾಳಪ್ಪನವರ ಈ ಬಗೆಯ ಭಾವನೆಗಳು ಮೂಡುತ್ತಿರುವಾಗ ಇಂಥ ಹಿರಿಯ ಕಲಾವಿದ ಕರ್ನಾಟಕದಲ್ಲಿ ನೆಲೆನಿಲ್ಲದೆ ಮುಂಬೈಯಂಥ ಮಹಾನಗರದಲ್ಲಿ ಇರಬೇಕೆ! ಅವರ ಅನುಭವದ ಲಾಭವು ಅವರ ಅಪಾರ ಜ್ಞಾನದ ಬಂಡಾರವು ಕನ್ನಡಿಗರಿಗೆ ಪ್ರಯೋಜನ ಆಗಬೇಕೆಂಬ ಆಶೆಯಿಂದ, ಕಲಾವಿಧ್ಯಾರ್ಥಿ ಅದು ಮಿಗಿಲಾಗಿ ಕನ್ನಡದ ವಿಧ್ಯಾರ್ಥಿಗಳಿಗೆ ಆಗಬೇಕೆಂದು ಆಗ ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರ ಮಠದ ಮಹಾಸ್ವಾಮಿಗಳಾಗಿದ್ದ ಶ್ರೀಮನ್ಮಹರಾಜ ಶ್ರೀ ಗುರುಸಿದ್ಧ ಮಹಾ ಸ್ವಾಮಿಗಳ ವರಿಗೆ ಅನಿಸುತ್ತಿತ್ತು. ಆಗಲೇ ಮಹಾಸ್ವಾಮಿಗಳವರು ಅನೇಕ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಈ ಮೂಲಕ ಶಿಕ್ಷಣ

---

೩. ಡಾ. ಬಿ.ಬಿ. ಹೆಂಡಿ : ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆ, ಪುಟ -೮೮.

[illegible]



ಪ್ರಸಾರದಂತ ಉದಾತ್ತ ಕಾರ್ಯದಲ್ಲಿ ತೊಡಗಿದ್ದರು. ಕಲಾವಿದ ಡಾ, ಮಿಣಜಗಿಯವರು ಆಗಲೇ ಮುಂಬೈಯನ್ನು ಬಿಟ್ಟು ಹುಬ್ಬಳ್ಳಿಗೆ ಬರಬೇಕೆಂದು ನಿರ್ಧರಿಸಿದರು. ಹುಬ್ಬಳ್ಳಿಯಲ್ಲಿ ಒಂದು ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿ ಆ ಮೂಲಕ ಕನ್ನಡ ಕಲಾ ವಿದ್ಯಾರ್ಥಿಗಳಿಗೆ ಕಲೆಯ ಆಳವಾದ ಜ್ಞಾನ-ದಾನದ ಮೂಲಕ ಮಾಡಬೇಕೆಂದು ಕೇಳಿಕೊಂಡರು, ಈ ವಿಚಾರವನ್ನು ಡಾ. ಮಿಣಜಗಿಯವರು ಗಮನಿಸಿ 1950ರ ಹೊತ್ತಿಗೆ ಮುಂಬೈಯ ವಾಸ್ತವ್ಯವನ್ನು ತೊರೆದು ಹುಬ್ಬಳ್ಳಿಗೆ ಬಂದು ನೆಲಸಿದರು.

ಜಗದ್ಗುರು ಮೂರುಸಾವಿರ ಮಠದ ಶ್ರೀ ಗುರುಸಿದ್ಧಮಹಾಸ್ವಾಮಿಗಳು ಹಾಗೂ ಕೆ,ಎಲ್.ಇ ಸಂಸ್ಥೆಯ ಸಂಸ್ಥಾಪಕ ಎಚ್.ಎಫ್.ಕಟ್ಟಿಮನಿ ಅವರ ನೆರವಿನಿಂದ ಹುಬ್ಬಳ್ಳಿಯಲ್ಲಿ ಅವರು ಕರ್ನಾಟಕ ಫೈನ್ ಆರ್ಟ ಸೊಸಾಯಿಟಿ[4] ಎಂಬ ನೊಂದಾಯಿತ ಸಂಸ್ಥೆಯು[5] ಆಶ್ರಯ ಪಡೆದು 1950ರಲ್ಲಿ ಲಲಿತಕಲಾ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು.[6]

ಹುಬ್ಬಳ್ಳಿಯಲ್ಲಿ ಮಧ್ಯವರ್ತಿ ಸ್ಥಳವೆನಿಸಿದ್ದ ರಾದಾಕೃಷ್ಣಗಲ್ಲಿ[7] ಅಟ್ಟದ ಮೇಲೆ ಪ್ರಾರಂಭವಾಗಿದ್ದ ಈ ಲಲಿತ ಕಲಾ ಮಹಾವಿದ್ಯಾಲಯವು ನಂತರ ಕಟ್ಟಡದ ಸಮಸ್ಯೆಯಿಂದ ನಂತರ ಸರಾಫಗಟ್ಟಿಗೆ[8] ವರ್ಗಾವಣೆಗೊಂಡಿತು. ಕನ್ನಡ ನಾಡಿನ ಕರ್ನಾಟಕದಲ್ಲಿಯ ಕಲಾಪ್ರೇಮಿ ವಿದ್ಯಾರ್ಥಿಗಳಿಗೆ ಇದು ತುಂಬ ಪ್ರಯೋಜನಕರವಾಗಿ ಪರಿಣಮಿಸಿತು. ಡಾ.ಮಿಣಜಗಿಯವರು ಕಲಾಮಂದಿರದಲ್ಲಿ, ನಿರ್ದೇಶಕರಾಗಿ,[10] ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ತರಬೇತಿ ನೀಡತೊಡಗಿದರು. ಮಿಣಜಗಿಯವರು ತಮ್ಮ ಕಾರ್ಯದಲ್ಲಿ ನಿಷ್ಠೆ ಹಾಗೂ ಶ್ರದ್ಧಾ ಭಾವನೆಗಳಿಂದ ತೊಡಗಿದ್ದರು. ಹೀಗಾಗಿ ಈ ಲಲಿತ ಕಲಾ ಮಹಾವಿದ್ಯಾಲಯವು ಕರ್ನಾಟಕದ ಹಲವಾರು ನಗರ ಪ್ರದೇಶಗಳಿಂದ ಮಿಣಜಗಿಯವರ ಉತ್ತಮ ಮಾರ್ಗದರ್ಶನ ಕಂಡು ವಿದ್ಯಾರ್ಥಿಗಳು ಕಲಾಶಿಕ್ಷಣ ಪಡೆಯಲು ಇಲ್ಲಿಗೆ ಬರತೊಡಗಿದರು.

ಬಣ್ಣವನ್ನು ಪ್ರದರ್ಶಿಸುವದರಲ್ಲಿ ಕವಿಗೆ ಎಷ್ಟು ಆನಂದ! ಅವನಿಗೆ ಆಯಾಸವಾಗಲಿ, ತೃಪ್ತಿಯಾಗಲಿ ಇರುವುದಿಲ್ಲ. ಆ ಬಣ್ಣ ಕೇವಲ ಚಿತ್ರಪಟದ ಬಣ್ಣವಲ್ಲ; ಅದರಲ್ಲಿ ಕವಿತ್ವದ, ಎಂದರೆ ಭಾವದ ಬಣ್ಣವಿದೆ...... ಇಂತಹ ವರ್ಣ ಸೌಂದರ್ಯವಿಕಾಸ ಶಕ್ತಿಯನ್ನು ಮತ್ತಾವ ಸಂಸ್ಕೃತ ಕವಿಯೂ ತೋರಿಸಿಲ್ಲ.[11] ಅಂತೆಯೇ ಮಿಣಜಗಿಯವರು ತಮ್ಮ ವಿದ್ಯಾರ್ಥಿಗಳಿಗೆ ಅವರ ಎಲ್ಲ ಬಗೆಯ ಅವಕಾಶ ಹಾಗೂ ಅನುಕೂಲತೆಗಳನ್ನು ಒದಗಿಸಿಕೊಟ್ಟರು, ತಮ್ಮ ಶಿಷ್ಯರ ಪ್ರಗತಿಯನ್ನು ಅತ್ಯಂತ ಕೂತುಹಲದಿಂದಲೇ ಮಿಣಜಗಿಯವರು ನಿರೀಕ್ಷಿಸುತ್ತಿದ್ದರು. ವಿದ್ಯಾರ್ಥಿಗಳುಕೂಡಾ ಉತ್ತಮ ಕಲಾವಿದರಾಗಿ ನಾಡಿನ ತುಂಬೆಲ್ಲಾ ಕೀರ್ತಿಗೆ ಪಾತ್ರರಾಗಬೇಕು, ಕಲಾರಂಗದಲ್ಲಿ ತಮ್ಮತನವನ್ನು ಪ್ರದರ್ಶಿಸಿ ಹಿರಿಮೆ ಪಡೆಯಬೇಕು, ಅದಲ್ಲದೇ ನನ್ನಂತೆ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಕಲಾವಾತಾವರಣದಲ್ಲಿ ವಿದ್ಯಾರ್ಥಿಗಳು ಬೆಳೆಯಬೇಕು ಎಂಬ ಹಿರಿದಾಶೆ ಮಿಣಜಗಿಯವರದಾಗಿತ್ತು,

---

೪. ಡಾ. ಎಸ್. ಸಿ. ಪಾಟೀಲ (ಸಂ) : ವರ್ಣ ಸಂಚಯ, ಪುಟ - ೧೦೧.
೫. Dr. D.V. Halbhavi : My Contemporary Artists Page-6
೬. ಶ್ರೀ ಪಿ.ಆರ್. ತಿಪ್ಪೆಸ್ವಾಮಿ : ಪ್ರಶಸ್ತಿ ಪಡೆದ ಕಲಾವಿದರು, ಪುಟ - ೬.
೭. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೪೯.
೮. ಡಾ. ಎಸ್. ಸಿ. ಪಾಟೀಲ(ಸಂ) : ವರ್ಣ ಸಂಚಯ , ಪುಟ -೧೦೧.
೯. ಮರಿಶಾಮಾಚಾರ : ಕಲಾಚೇತನ, ಪುಟ -೩೬.
೧೦. ಶ್ರೀ ಗವೀಶ ಹಿರೇಮಠ : ಎಂ.ವ್ಹಿ. ಮಿಣಜಗಿ, ಪುಟ.-೭.
೧೧. ರವೀಂದ್ರನಾಥ ಠಾಕೂರ್ (ಸಂ) : ಟಿ.ಎಸ್. ವೆಂಕಣ್ಣಯ್ಯ (ಅನು) : ಪ್ರಾಚೀನ ಸಾಹಿತ್ಯ, ಪುಟ - ೭೨,೭೩.

[illegible]

[illegible]

[illegible]

[illegible]



ವ್ಯಕ್ತಿ, ಸಮಾಜ, ಮನುಷ್ಯ ಜೀವನದ ಯಾವುದೇ ಭಾಗವನ್ನು ಕಲಾತ್ಮಕ ರೀತಿಯಿಂದ ಸಿದ್ದಪಡಿಸಬಹುದು, ಮತ್ತು ಕಲಾತ್ಮಕವಲ್ಲದ ರೀತಿಯಲ್ಲೂ ಆದನ್ನು ಸೃಷ್ಟಿಸಬಹುದು. ಅದರಲ್ಲಿ ನಮಗೆ ಸೃಜನಶೀಲತೆಯ ಅಭಾವ ಕಂಡು ಬರುತ್ತದೆ, ಅಥವಾ ಕಲೆಯಲ್ಲಿ ಕಂಡು ಬರುತ್ತಿರುವ ಸೌಂದರ್ಯವು ಕಲಾವಿದನು ರಚಿಸಿದ್ದಲ್ಲ; ಅದು ಆ ವಸ್ತುವಿನ ಸ್ವಾಭಾವಿಕ ಗುಣವಾಗಿದೆ. ಅದನ್ನು ಕಲಾವಿದನು ಕೇವಲ ಪ್ರದರ್ಶಿಸುತ್ತಾನೆ; ಒಂದು ಹೂವೂ, ನದಿ ಅಥವಾ ಪರ್ವತವು ಸುಂದರ ಇದೆ ಎಂಬುದನ್ನು ಅವನು ಜ್ಞಾಪಿಸುತ್ತಾನೆ; ಆ ವಸ್ತುಗಳ ಬಗೆಗೆ ನಮಗೆ ಮೊದಲ ಇದ್ದ ಅನುಭವ ಅಥವಾ ಜ್ಞಾನಕ್ಕಿಂತ ಹೆಚ್ಚಿಗೆ ಹೊಸದೇನನ್ನು ಅವನು ಹೇಳುತ್ತಿಲ್ಲ; ಸುಂದರ ಅಥವಾ ಅಸುಂದರ ಎಂಬ ಬಗ್ಗೆ ತನ್ನ ಸೌಂದರ್ಯದ ವಿಷಯವಾಗಿ ಅಥವಾ ಜೀವನದ ವಿಷಯವಾಗಿ ನಮಗೆ ವಿಶಿಷ್ಟ ಅನುಭವವನ್ನು ಕಲಾವಿದನು ನೀಡುತ್ತಾನೆ. ಎನಿಸಬಹುದು, ಇಂದು ಆಧುನಿಕತೆಯ ಅನೇಕ ಉದಾಹರಣೆಗಳಿವೆ, ಭಾರತೀಯತೆ, ಸಮಕಾಲೀನತೆ, ಸಾಮಾಜಿಕತೆ ಮುಂತಾದವುಗಳಿಗೆ ಕಲೆಯಲ್ಲಿ ನಾವು ಯಾವ ಅರ್ಥ ಕೊಡುತ್ತೇವೆ ಎಂಬುದು ಇಂದು ನಮ್ಮ ಜೀವನದಲ್ಲಿ ಇವುಗಳಿಗೆ ಅರ್ಥವಿದೆ. ಎಂಬುದು ಅವಲಂಬಿಸಿದೆ. ಈ ಮಾತನ್ನು ಮಿಣಜಗಿಯವರಿಗೆ ಸದಾ ನೆನಪಿನಲ್ಲೂ ಬರುತ್ತದೆ. ಗುರುಗಳು ಆಧುನಿಕ ಕೃತಿಯನ್ನು ಪ್ರಕೃತಿಯ ಮೂಲಕ ತೋರಿಸಿದಾಗ ರೊಥೆನ್‌ಸ್ಟೈನ್ ಇವರಿಗೆ ಹೇಳಿದ ವಿಚಾರವೇ ಸದಾ ವಿದ್ಯಾರ್ಥಿಗಳಿಗೆ ತಿಳಿಸಿ ಕೊಡುತ್ತಿದ್ದರು.

ಶಿಷ್ಯರು ಕೂಡಾ ತಮ್ಮ ಗುರುವಿನ ಬಯಕೆಗೆ ತಕ್ಕಂತೆ ಪಳಗಿದರು. ಇದರ ಪರಿಣಾಮವೇ ಈ ಕಲಾ ಮಹಾ ವಿದ್ಯಾಲಯ ಪ್ರಾರಂಭವಾಗಿ ಕೇವಲ ಎರಡು ವರ್ಷಗಳಲ್ಲಿಯೇ ಮಿಣಜಗಿಯವರ ಶಿಷ್ಯರ ಕಲಾಕೃತಿಗಳ ಒಂದು ಪ್ರದರ್ಶವೇ ಹುಬ್ಬಳ್ಳಿಯಲ್ಲಿ ನಡೆಯಿತೆನ್ನುವ ಮಾತು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಇಷ್ಟೇ ಅವಧಿಯಲ್ಲಿ ಈ ಕಲಾವಿದ್ಯಾಲಯ ಸಾಧಿಸಿದ ಸಾಧನೆಅಪ್ರತಿಮವಾದದ್ದಾಗಿದೆ. ಹಲವಾರು ವರುಷಗಳ ನಂತರವೂ ಕೆಲ ವಿದ್ಯಾಲಯಗಳು ತೋರುವ ಪ್ರಗತಿಯನ್ನು ಇದು ಇಷ್ಟು ಬೇಗ ಸಾಧಿಸಿದ್ದು ಹೇಗೆ? ಡಾ.ಮಡಿವಾಳಪ್ಪನವರ ಸತತವಾದ ಕಲಾಶಕ್ತಿಯ ಬೋಧನೆಯಲ್ಲಿ ಇರುವ ಪರಿಶ್ರಮ, ಶಿಕ್ಷಣದ ಬಗೆಗೆ ಅವರಲ್ಲಿದ್ದ ಅಪಾರವಾದ ಶ್ರದ್ಧೆ ಆಸಕ್ತಿ ನಿಷ್ಠೆಗಳೇ ಅದಕ್ಕೆ ಕಾರಣವೆನ್ನಬೇಕು. ವಿದ್ಯಾರ್ಥಿಗಳ ಕಲಾಕೃತಿಗಳ ಈ ಪ್ರದರ್ಶನವು ಸಾರ್ವಜನಿಕರಲ್ಲಿ ತುಂಬ ಅಚ್ಚರಿಯೊಂದಿಗೆ ವ್ಯಾಪಕವಾದ ಪರಿಣಾಮವನ್ನು ಜೀರಿತು. ಈ ಸಂಸ್ಥೆಯ ಬಗೆಗೆ ಸ್ವಾಭಾವಿಕವಾಗಿ ಅವರಲ್ಲಿ ಇಚ್ಛೆ ಹಾಗೂ ಆಸಕ್ತಿ ಕುದರಿತು. ಡಾ.ಮಿಣಜಗಿಯವರ ಹೆಸರನ್ನು ಅವರ ಕಲಾಕೃತಿಗಳ ಬಗೆಗೆ ಕೇಳಿಬಲ್ಲವರಿಗೆ ಇದು ಅಚ್ಚರಿಯ ವಿಷಯವೆನಿಸಲಿಲ್ಲ, ಆದರೆ ಇನ್ನಿತರರಿಗೆ ಮಾತ್ರ ಈ ಸಾಧನೆ ಅತ್ಯದ್ಭುತವೆಂದೇ ಅನಿಸಿತು. ಹಾಗೇ ಅವರು ಅಂದುಕೊಳ್ಳುವದು ಕೂಡಾ ಸ್ವಾಭಾವಿಕವೇ ಆಗಿತ್ತು. ಡಾ.ಮಿಣಜಗಿಯವರ ಜೀವನವೇ ಒಂದು ಕಲೆ, ಮತ್ತು ಕಲಾ ಪೂರ್ಣಿಮೆಯಂದುದು ಅನುಭವದ ಸಾಣೆ ಹಿಡಿದಿರಬೇಕು, ಹಾಗೂ ಅನುಭಾವದ ಮೆರಗು ಲೇಪಿಸಿರಬೇಕು; ಪ್ರಸಾದವಾಗಿ ದೊರಕಿರಬೇಕು. ಆಗ ಒಂದು ಆನಂದದಸೊಡರು ಸೊಂಕುವದು. ಇದಕ್ಕೆ ದೇವದೇಣಿಗೆಯೂಬೇಕು; ಮತ್ತು ಕಲಾಪರಿಣತರ ಸತ್ಸಂಗತಿಯೂ, ಫಲಪ್ರಾಪ್ತಿಯಾ ಸಂದಬೇಕು. ಇದೊಂದು ದಿವ್ಯಜ್ಞಾನವಾಗಿ ಆನಂದ ಜೀವನವಾಗಿ ಪರಿಣಮಿಸುವದು. ಈ ಕಲೆಯ ಜಡ ಸೂಕ್ಷ್ಮಗಳಿಂದ ಇಬ್ಬಗೆಯಾಗಿದೆ. ತಾಕಿಕ ಪಾರಮಾರ್ಥಿಕಗಳೆರಡಕ್ಕೂ ಸಮಾಧಾನವನ್ನೀಯುವದು, ಹೀಗಾಗಿ ತೃಪ್ತಿಭಾವವು ಬೆಳೆದು ಬರುವದು ಸಂತಮೀರಾಬಾಯಿಗೆ ಗಾನ-ನೃತ್ಯಗಳಿದ್ದಂತೆ, ಸಮಾಜವು ಸಂಗೀತ, ಚಿತ್ರಶಿಲ್ಪ, ಮುಂತಾದ ಕಲಾತ್ಮಕ ವಿದ್ಯೆ-ಸಂಸ್ಕೃತಿಗಳನ್ನು ಜೀವನ ಜೊತೆಗೆ ತಳಕಿಸಿಕೊಂಡು, ಅನು-ತನು-ಭಾವಗಳಿಗೆ ಹೊಂದಿಸಿಕೊಂಡರು ಅಂತೆಯೇ ಬುನಾದಿಯಿಂದ ಮಾನವನ ಸಮಾಜವು ಯಾವುದೇ ಜನಾಂಗ-ವರ್ಣ ಭಾಷೆ ವೃತ್ತಿಗಳಿಗೆ ಸಂಬಂಧಿಸಿದವನಿರಲು ಈ ಕಲೆಗಳನ್ನು



ಜೀವ ಪೋಷಣೆಗೆ ತೋಲಾಗಿಟ್ಟುಕೊಂಡರು, ಮತ್ತು ಲಹರವಾಗಿಸಿಕೊಂಡರು.


ಪ್ರಾರಂಭದಲ್ಲಿ ಈ ಕಲಾಶಾಲೆಯು ಅತೀಸಣ್ಣ ಕಟ್ಟಡದಲ್ಲಿ ಪ್ರಾರಂಭವಾಗಿ ತದನಂತರ ಸರಾಫಗಟ್ಟಿಯ ದೊಡ್ಡ ಕಟ್ಟಡದಲ್ಲಿ ಸ್ಥಳಾಂತರಿಸಿದರು ಕಾಲಕ್ರಮೇಣ ಮಿಣಜಗಿಯವರ ಶಿಷ್ಯತ್ವವನ್ನು ಆರಿಸಿಕೊಂಡು ನಾಡಿನ ಅನೇಕ ವಿದ್ಯಾರ್ಥಿಗಳು ಈ ಕಲಾಶಾಲೆಗೆ ಬರತೊಡಗಿದರು ತದನಂತರ ಈ ಕಟ್ಟಡವು ವಿದ್ಯಾರ್ಥಿಗಳ ದೃಷ್ಟಿಯಿಂದ ಬಹುಚಿಕ್ಕದಾಗಿ ಕಾಣಿಸತೊಡಗಿತು. ಈ ವಿದ್ಯಾಲಯಕ್ಕೆ ಸ್ವತಂತ್ರ ಕಟ್ಟಡವಾಗಿಯಾದರೂ ಬೇಕಲ್ಲವೇ? ಎಂಬ ಆಶಯವನ್ನು ಮಿಣಜಗಿಯವರು ಸದಾ ಹಂಬಲಿಸುತ್ತಿದ್ದರು, ಆದರೆ ಈ ಕನಸು ನನಸಾಗಲು ಹಲವಾರು ವರುಷಗಳೇ ಗತಿಸಿದವು. ಪ್ರಾರಂಭದಲ್ಲಿ ಮಿಣಜಗಿಯವರು ಮುಂಬೈಯಿಂದ ಬಂದ ಹೊಸದರಲ್ಲಿ ಬಂದು ಸ್ಥಾಪಿಸಿದಾಗ ಕೇವಲ ಬೆರಳಣಿಕೆಯಷ್ಟು ಇದ್ದ ವಿದ್ಯಾರ್ಥಿಗಳು ಇಂದು ನೂರಾರು ವಿದ್ಯಾರ್ಥಿಗಳನ್ನು ಹೊಂದಿ ಕಲಾಶಿಕ್ಷಣ ನೀಡುತ್ತಿದೆ.

1960ರ ಹೊತ್ತಿಗೆ ಮಿಣಜಗಿಯವರಿಗೆ ಈ ಕಲಾಶಾಲೆಯು ನಡೆಸುವದು ಕಠಿಣವೆನಿಸುತ್ತಾ ಬಂದಿರುವದರಿಂದ, ಮುಂದೆ ಮೂರುಸಾವಿರಮಠದ ಜಗದ್ಗುರುಗಳು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು [12] ಡಾ.ಮಿಣಜಗಿಯವರಿಗೆ ದೇಣಿಗೆ ನೀಡಿ ಆಶೀರ್ವದಿಸಿದ ನಂತರ ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ[13] ಎಂದು ನಾಮಕರಣಗೊಂಡು ಇನ್ನು ಹೆಚ್ಚಿನ ಶಿಕ್ಷಣ ಸೇವೆಗೆ ಪ್ರಾಪ್ತವಾಯಿತು.[14] ಆದರೆ ಇಂದು ಮಹಾನಗರದ ಮಧ್ಯವರ್ತಿಸ್ಥಳದಲ್ಲಿ ಸುಸಜ್ಜಿತವಾದ, ಭವ್ಯಕಟ್ಟಡದಲ್ಲಿ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣ ವ್ಯಾಸಂಗ ನಡೆಯುತ್ತಿದೆ, ಡಾ.ಮಿಣಜಗಿಯವರ ಕಠಿಣ ಪರಿಶ್ರಮದ ಧ್ಯೋತ್ಯಕವಾಗಿ, ಶ್ರದ್ಧೆ ನಿಷ್ಠೆಗಳ ದುಡಿತನದ ಪರಿಣಾಮವೇ ಇಂದು ಈ ಉನ್ನತ ಮಟ್ಟಕ್ಕೆ ಏರಿದುವುದನ್ನು ಗಮನಿಸಬೇಕಾಗಿರುತ್ತದೆ.

ಮಿಣಜಗಿಯವರು 1960ರಲ್ಲಿ ಮೂರುಸಾವಿರ ಮಠದ ಜಗದ್ಗುರುಗಳ ಸಾನಿಧ್ಯದಲ್ಲಿ ಅಂದಿನ ಶಿಕ್ಷಣ ಮಂತ್ರಿ★ ಶ್ರೀ ಅಣ್ಣಾರಾವ್ ಗಣಮುಖಿ [15] ಹಾಗೂ ಮಾನ್ಯ ವಿಧಾನ ಸಭಾಧ್ಯಕ್ಷ★ : ಎಸ್. ಆರ್. ಕಂಠಿ[16]ಯವರ ಅಧ್ಯಕ್ಷತೆಯಲ್ಲಿ ಈ ಕಲಾಶಾಲೆಗೆ ನಾಮಕರಣ ಮಾಡಿ ನೆರವೇರಿಸಿಕೊಟ್ಟರು. ಈ ಕಲಾ ಮಹಾವಿದ್ಯಾಲಯವು ಇನ್ನೂ ಹೆಚ್ಚಿನ ಪ್ರಗತಿ ಹೊಂದಲು ಅನುವು ಮಾಡಿಕೊಟ್ಟಿತು.[17] ಕಲಾವಿದ ಮಡಿವಾಳಪ್ಪನವರ ಈ ಕಲಾ ಸೇವೆಗೆ ಇದು ಒಳ್ಳೆಯ ಗೌರವವೆಂದೆನಿಸಿತು. [18] ಕರ್ನಾಟಕ ಲಲಿತಕಲಾಶಿಕ್ಷಣ ಸಂಸ್ಥೆಯು ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ಕಲಾವಿದ್ಯಾಲಯಕ್ಕೆ 25 ಸಾವಿರ ರೂಪಾಯಿಗಳ ದೇಣಿಗೆಯನ್ನು ನೀಡುವುದಾಗಿ ಸಾನಿಧ್ಯವಹಿಸಿದಶ್ರೀ ಮನ್ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಇಂದು★ ಉದ್ಘೋಷಿಸಿದರು. ಜಗದ್ಗುರುಗಳು ಮಹಾವಿದ್ಯಾಲಯಕ್ಕೆ ಆಶೀರ್ವಾದ

---

೧೨. ಶ್ರೀ ಗವೀಶ ಹಿರೇಮಠ : ಎಂ.ವ್ಹಿ. ಮಿಣಜಗಿ, ಪುಟ -೭.
೧೩. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೩.
೧೪. ಶ್ರೀ ಎಸ್. ಎಂ. ಶಿರಹಟ್ಟಿ : ಚಿತ್ರಕಲಾ ಕೈ ದೀಪ, ಪುಟ -೧೧೨.
★ ಸಂಯುಕ್ತ ಕರ್ನಾಟಕ ವರದಿ : ದಿನಾಂಕ : ೩೦-೬-೧೯೬೦. : ಸಂಗ್ರಹ : ಕಲಾ ಮಂದಿರ, ಹುಬ್ಬಳ್ಳಿ
೧೫. Rewansiddhayya Hannerdumath : Minajigi Artists & The Man Page-12
★ ಗವೀಶ ಹಿರೇಮಠ : ಎಂ. ವ್ಹಿ. ಮಿಣಜಗಿ, ಪುಟ - ೮.
೧೬. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೩.
೧೭. ಶ್ರೀ ಪಿ.ಆರ್. ತಿಪ್ಪೆಸ್ವಾಮಿ : ಪ್ರಶಸ್ತಿ ಪಡೆದ ಕಲಾವಿದರು, ಪುಟ-೬
೧೮. ಶ್ರೀ ಪಿ.ಎಸ್. ಹಿರೇಮಠ : ನವನಾಡು : ಸಾಪ್ತಾಹಿಕ ಸಮೀಚೀನ : ದಿ. ೨.೧-೧-೧೯೮೮
★ ಸಂಯುಕ್ತ ಕರ್ನಾಟಕ ಪತ್ರಿಕಾ ವರದಿ ದಿ. ೩.೦ ಜೂನ ೧೯೬೦ , ಪುಟ -೧,೨..



ಪೂರ್ವಕ ಅಪ್ಪಣೆ ಕೊಡಿಸುತ್ತ ಲಲಿತ ಕಲಾಕಾರರಿಗೆ ಕನ್ನಡಿಗರ ನಾಡಿನಲ್ಲಿಯ ಅಭಿಮಾನವಿದೆ. ಕರ್ನಾಟಕದ ಅನೇಕ ಕಲಾಕಾರರಿಗೆ ಕನ್ನಡದ ಅರಸು ಜನತೆ ಬೆಂಬಲ ಕೊಟ್ಟಿದ್ದಾರೆ, ಇದರಿಂದಾಗಿ ನಮ್ಮ ಕನ್ನಡ ನಾಡಿನಲ್ಲಿ ಕಲಾಕಾರರ ಒಂದು ದೊಡ್ಡ ಪರಿವಾರವೇ ಬೆಳೆದಂತಿದೆ. ಲಲಿತ ಕಲೆಗಳನ್ನು ಬೆಳಸಿ ಕರ್ನಾಟಕ ದಿವ್ಯ ಸಂಸ್ಕೃತಿಯ ದವಳ ಕೀರ್ತಿಯನ್ನು ಉಳಿಸಿಕೊಳ್ಳಲು ಕನ್ನಡದ ಜನತೆ ಹಾಗೂ ಸಹಕಾರ ಸಹಾಯ ಮಾಡಬೇಕು. ಲಲಿತ ಕಲೆಗಳು ಮನಸ್ಸಿನ ಸದ್ಭಾವನೆಯ ಪ್ರತೀಕವಾಗಬೇಕು ಎಂದರು. ಅಂದರೆ ಅದೇ ಕಲಾದೇವತೆಯ ಪೂಜೆಯಂತಾಗುತ್ತದೆ. ಈ ಲಲಿತಕಲಾ ಮಹಾವಿದ್ಯಾಲಯಕ್ಕೆ ಇಂದಿನ ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯವೆಂದು ಹೆಸರಿಟ್ಟಿದ್ದು, ನನಗೆ ಆನಂದವಾಗಿದೆ, ಶಿವಯೋಗ ಮಂದಿರದ ಸ್ಥಾಪನೆಗಾಗಿ ಯತ್ನಿಸಿ, ಕರ್ನಾಟಕ ಸಂಸ್ಕೃತಿಯ ರಕ್ಷಣೆ ಮಾಡಿದ ಶ್ರೀ ವಿಜಯ ಮಹಾಂತಸ್ವಾಮಿಗಳ ಹೆಸರು ಚಿರಾಯುವಾಗಿದೆ. ಆ ಹೆಸರನ್ನೊಳಗೊಂಡ ಈ ವಿದ್ಯಾಲಯವು ಉತ್ತರೋತ್ತರ ಬೆಳೆಯಲೆಂದು ಹಾರೈಸಿದರು. [19]

ಕಲಾವಿದ ಡಾ. ಎಂ.ವ್ಹಿ.ಮಿಣಜಗಿಯವರಿಗೆ ಸದಾಕಾರ್ಯದಲ್ಲಿ ಮಗ್ನರಾಗುವ ಬಯಕೆ ಸದಾ ಹಂಬಲಿಸುತ್ತಿತ್ತು. ಅಂತೆಯೇ ಅವರು ಹುಬ್ಬಳ್ಳಿಯಲ್ಲಿ ಕಲಾಶಾಲೆಯನ್ನು ಸ್ಥಾಪಿಸಿದ್ದು. ಇದಲ್ಲದೇ ಇಷ್ಟಕ್ಕೆ ಸಮಾಧಾನ ತರಲಿಲ್ಲ. ಇದರಿಂದ ಕರ್ನಾಟಕದ ರಾಜಧಾನಿ ಸ್ಥಳದಲ್ಲಿ ಒಂದು ಕಲಾಶಾಲೆ ಪ್ರಾರಂಭಿಸಬೇಕು ಎಂಬ ಹಂಬಲದಿಂದ ಬೆಂಗಳೂರಿನಲ್ಲಿ 1962 ಜನೇವರಿಯಲ್ಲಿ ಶ್ರೀ ಬಿ. ಬಸವಲಿಂಗಪ್ಪ ★ಗೃಹಮಂತ್ರಿಗಳ ಆಧ್ಯಕ್ಷತೆಯಲ್ಲಿ ಶಿಕ್ಷಕರ ತರಬೇತಿ ವರ್ಗಗಳನ್ನು ಮಾರ್ಪಾಟು ಮಾಡಿ ಉದ್ಘಾಟಿಸಿದರು. [20] ಅವರ ಶಿಷ್ಯರಾದ ಆರ್. ಎಂ. ಹಡಪದರಂತಹ ಕ್ರಿಯಾತ್ಮಕ ಚಟುವಟಿಕೆಯುಳ್ಳ ಕಲಾಶಿಕ್ಷಕರನ್ನು ಆಯ್ಕೆ ಮಾಡಿದರೆನ್ನಬಹುದು. [21] ಈ ಶಿಕ್ಷಣ ರಂಗದಲ್ಲಿ ಸಾಧಿಸಿದ ಹಿರಿಮೆಗೆ ಇದೊಂದು ಉತ್ತಮ ನಿದರ್ಶನ. [22] ಲಲಿತ ಕಲಾ ಶಿಕ್ಷಣವು ಸಾಂತಾಯನರು ಹೇಳುವಂತೆ ಒಂದು ಬಾಹುಲ್ಯದ ಏಕತೆ [23] (Unity of a manifold) ಯನ್ನು ಅಥವಾ ವೈವಿಧ್ಯವನ್ನು ಒಂದು ಗೂಡಿಸುವ ನಿಯಮವೇ ಆಕಾರ, ಒಂದು ಕಲಾಕೃತಿಯ ಎಲ್ಲ ಅಂಶಗಳಲ್ಲಿಯೂ ನಿಹಿತವಾಗಿ ಅವುಗಳನ್ನು ಒಂದು ಗೂಡಿಸುವ ಆಧಾರ ನಿಯಮವೇ ಅದು.

ಸಂಗೀತದಂತೆ ನಾಟಕದಲ್ಲಿಯೂ ಆಕಾರವು ನೇರವಾಗಿ ಕಾಲದಲ್ಲಿ ಅಭಿವ್ಯಕ್ತವಾಗುತ್ತದೆ. ಆದರೆ ಚಿತ್ರ, ಶಿಲ್ಪ, ವಾಸ್ತುಶಿಲ್ಪ ಮೊದಲಾದ ಕಲೆಗಳಲ್ಲಿ ಆಕಾರವೆಂಬ ಪ್ರತ್ಯಯದ ಅರ್ಥವೇನು ? ಇಲ್ಲಿಯೂ ಸಹ ಬಂಧವು ಅಭಿವ್ಯಕ್ತವಾಗಿರುವ ರೀತಿಯಾಗಲಿ ಅಂಶಗಳಾಗಲಿ ಬಂಧದ ಮೂಲೋದ್ದೇಶದೊಡನೆ ಒಂದಾಗಿರುವ ವಿಧಾನಕ್ಕೆ ಆಕಾರವೆಂದು ಹೆಸರು. ಬಂಧಕ್ಕೆ ವ್ಯತ್ಯಯವನ್ನುಂಟು ಮಾಡದೇ ಯಾವುದನ್ನು ವಿಚ್ಛೇಧಿಸುವುದು ಸಾಧ್ಯವಿಲ್ಲವೋ ಅದೇ ಅಂಶ ಎಂದು ಅರಿಸ್ಟಾಟಲ್‌ನು ಬಂಧಕ್ಕೂ ಅಂಶಗಳಿಗೂ ಇರುವ ಸಂಬಂಧವನ್ನು ವರ್ಣಿಸುತ್ತಾನೆ.

---

೧೯. ಶ್ರೀ ಪಿ.ಎಸ್. ಹಿರೇಮಠ : ನವನಾಡು : ಸಾಪ್ತಾಹಿಕ ಸಮೀಚೀನ : ದಿ. ೩೧-೧-೧೯೮೮
★ ಸಂಯುಕ್ತ ಕರ್ನಾಟಕ ಪತ್ರಿಕಾ ವರದಿ ದಿ. ೩೦ ಜೂನ ೧೯೬೦, ಪುಟ -೧,೩.
೨೦. Indian Exp. News : Date 11 Jan. 1962 : Bangalore.
೨೧. ಶ್ರೀ ಪಿ.ಎಸ್. ಹಿರೇಮಠ : ಸಂದರ್ಶನ, ದಿನಾಂಕ ೬-೧೦-೨೦೦೪
೨೨. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್. ಎಂ. ಹಡಪದ ಒಂದು ಅಧ್ಯಯನ. ಪಿ.ಎಚ್.ಡಿ. ಅಪ್ರಕಟಿತ ಗ್ರಂಥ.
೨೩.. Sence of Beauty : Page - 73.

[illegible]



ಭಾರತೀಯ ಪರಂಪರೆಯಲ್ಲಿ ಸಂಗೀತವನ್ನು ನಾದಬ್ರಹ್ಮವೆಂದೂ, ಸಾಹಿತ್ಯವನ್ನು ಶಬ್ದಬ್ರಹ್ಮವೆಂದು ಕರೆಯುತ್ತಾರೆ. ಹಾಗೆಯೇ ಕಲೆ ಇತರ ಪ್ರಕಾರಗಳನ್ನು ಅವುಗಳ ಮಾಧ್ಯಮಕ್ಕೆ ಅನ್ವಯಿಸಿ ಬ್ರಹ್ಮವೆಂದು ಕರೆಯುವುದು, ಹೀಗೆ. ಸಾರ್ವಜನಿಕ ರಂಗದಲ್ಲಿ ವ್ಯಾಪಕವಾಗಿ ಬೆಳೆದು ಪ್ರಚಾರ ಮಾಧ್ಯಮದಿಂದ ಕಲಾವಾತಾವರಣ ವ್ಯಾಪಕವಾಗಿರಬೇಕೆಂಬ ಆಶೆ ಡಾ. ಎಂ.ವ್ಹಿ. ಮಿಣಜಗಿಯವರ ಹೆಬ್ಬಯಕೆಯಾಗಿತ್ತು. ಇಂಥಹ ಪರಿಶ್ರಮದಿಂದ ಕಲಾವಾತಾವರಣವು ಹಬ್ಬುವಂತೆ ಮಾಡಲು ಎಂಥಹ ತ್ಯಾಗಕ್ಕೂ ಮಡಿವಾಳಪ್ಪನವರು ಸಿದ್ಧ ಹಸ್ತರಂತೆ ಅಣಿಯಾಗುತ್ತಿರುವುದನ್ನು ಅವರ ಸಾಧನಯೇ ಸಾಕ್ಷಿಯಂತಿದೆ.

ಡಾ. ಮಿಣಜಗಿಯವರ ಸೇವಾಜೀವನವನ್ನು ಕಂಡು ಮುಕ್ತ ಕಂಠದಿಂದ ಹಿಂದಿನ ರಾಷ್ಟ್ರಪತಿಗಳಾದ ಡಾ.ಸರ್ವಪಲ್ಲಿ ರಾಧಾಕೃಷ್ಣನ್, [24] ಡಾ.ಬಾಬು ರಾಜೇಂದ್ರಪ್ರಸಾದರವರು [25] ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯವನ್ನು ಸಂದರ್ಶಿಸಿದ ವಿದ್ವಾಂಸ ಮುತ್ಸದಿಗಳು ಭೇಟಿ ಇತ್ತು ಈ ಸಂಸ್ಥೆಯಚಿತ್ರಕಲಾ ಶಿಕ್ಷಣ ರಂಗದಲ್ಲಿ ಸಲ್ಲಿಸಿರುವ ಅನುಪಮ ಸಾಧನೆಯನ್ನು ಮೆಚ್ಚಿ ಮುಕ್ತ ಕಂಠದಿಂದ ಪ್ರಶಂಸಿದ್ದಾರೆ. [26] ಡಾ. ಮಿಣಜಗಿಯವರು ಏರ್ಪಡಿಸಿದ ಕಲಾಪ್ರದರ್ಶನಕ್ಕೆ ಈ ಮುತ್ಸದಿ ನಾಯಕರು ಸಂದರ್ಶಿಸಿದ್ದಲ್ಲದೇ ತಮ್ಮ ಮೆಚ್ಚುಗೆಯ ಮಾತುಗಳನ್ನು ಇಲ್ಲಿ ದಾಖಲಿಸಲಾಗಿದೆ.[27]

ರಾಜ್ಯದಲ್ಲಿ ಕಲಾವಿದನ ಸೇವೆಯನ್ನು ಕಂಡು ದೇವನ ಸೃಷ್ಟಿ ಎಲ್ಲವೂ ಸಂದೇಶ ಅದನ್ನು ಎಷ್ಟು ವರ್ಣಿಸಿದರೂ ಸಾಲದು ಎನ್ನುವ ಮಿಣಜಗಿಯವರ ಪ್ರಕೃತಿಯ ಮಡಿಲಲ್ಲಿ ಕುಳಿತು ನಿಸರ್ಗ ಚಿತ್ರ ರಚನೆಯಲ್ಲಿ ತಲ್ಲೀನರಾಗುತ್ತಿದ್ದರು. ಇಂತಹ ಸಂತೋಷ ಮತ್ತೆಲ್ಲಿಯೂ ಸಿಗದು ಎಂದು ಹೇಳುತ್ತಿದ್ದರು. ಇವರಲ್ಲಿರುವ ಕಲಾತ್ಮಕ ಅಂಶಗಳು ಹಾಗೂ ಬೆಳೆಯುತ್ತಿರುವ ಕಲಾಶಾಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ರಾಜ್ಯದ ಗಣ್ಯವ್ಯಕ್ತಿಗಳಾಗಿದ್ದ ಎಸ್. ಆರ್. ಕಂಠಿ, ಬಿ.ಡಿ. ಜತ್ತಿ, ಎಸ್. ನಿಜಲಿಂಗಪ್ಪ, ಕಡಿದಾಳ ಮಂಜಪ್ಪ, ಕೆ.ಎಂ. ಕರಿಯಪ್ಪ, ರಾಮಕೃಷ್ಣ ಹೆಗಡೆ ಮುಂತಾದ ಗಣ್ಯರು ಸಂದರ್ಶನ ನೀಡಿದ್ದಾರೆ. [28] ಇಂಥಹ ಗಣ್ಯ ವ್ಯಕ್ತಿಗಳ ಸಂಪರ್ಕವನ್ನು ಲಂಡನ್‌ದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದ ಮೇಲೆ ಮುಂಬೈಯಲ್ಲಿ ವಾಸಿಸುತ್ತಿರುವಾಗ ಸರ್. ಸಿದ್ಧಪ್ಪ ಕಂಬಳಿಯವರ ನಿಕಟವರ್ತಿಗಳಾಗಿ ಭಾರತದ ಹಿರಿಯ ಮುಖಂಡರ ಸಂಪರ್ಕ ಬೆಳೆಸಿಕೊಂಡರು. [29]

ಡಾ.ಎಂ. ವ್ಹಿ. ಮಿಣಜಗಿಯವರು ಸಂಗೀತದಂತೆ ಸಾಹಿತ್ಯದ ಅಭಿರುಚಿ ಹೊಂದಿದ್ದರು. ಅಂತೆಯೇ ಅ.ನ.ಕೃ.[30] ರಂತೂ ಹುಬ್ಬಳ್ಳಿಗೆ ಬಂದಾಗೊಮ್ಮೆ ಡಾ. ಮಿಣಜಗಿಯವರನ್ನು ಅವರ ಸಂಸ್ಥೆಯನ್ನು ಕಾಣದೇ ಹೋಗುತ್ತಿರಲಿಲ್ಲ [31] ತ.ರಾ. ಸುಬ್ಬರಾವ್ ಹಾಗೂ ತಮ್ಮ ಪತ್ನಿಯೊಂದಿಗೆ ಮಹಾವಿದ್ಯಾಲಯಕ್ಕೆ ಬಂದು ಮಿಣಜಗಿಯವರ ಶ್ರೇಯಸ್ಸು ಕಲಾ ಸೇವೆಯನ್ನು ಕಂಡು ಮುಗ್ಧರಾಗಿದ್ದರು. [32] ಡಾ. ವಿ. ಕೃ. ಗೋಕಾಕ, [33]

---

೨೪. Rewansiddhayya Hannerdumath : Minajigi Artists & The Man, Page -33.
೨೫. Rewansiddhayya Hannerdumath : Minajigi Artists & The Man, Page -33.
೨೬. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩.೧-೫-೧೯೮೭.
೨೭. ಸರ್ವಪಲ್ಲಿ ರಾಧಾಕೃಷ್ಣನ್ : ಸಂದರ್ಶನ ಬರಹ : ದಿನಾಂಕ ೮-೧-೧೯೫೪
೨೮. ಪ್ರಾ. ಪಿ. ಎಸ್. ಹಿರೇಮಠ : ನವನಾಡು : ಸಾಪ್ತಾಹಿಕ ಸಮೀಚೀನ ದಿ. ೩.೧-೧-೧೯೮೮.
೨೯. ಕನ್ನಡಿಗ ಪತ್ರಿಕೆ : ಸಂಪಾದಕರು (ಸಂಚಿಕೆ೨೭-೨೮) ದಿ. ೧೮-೫-೧೯೮೭
೩೦. ನವನಾಡು ದಿನಪತ್ರಿಕೆ ವರದಿ : ಪಿ. ಎಸ್.ಹಿರೇಮಠ ದಿ. ೩.೧-೧-೧೯೮೮.
೩೧. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೫.
೩೨. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ , ಪುಟ -೫೫.
೩೩. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ, ೩.೧-೫-೧೯೮೭.



ಡಾ. ದ.ರಾ. ಬೇಂದ್ರೆ, [34] ಗ್ರೇಸ್ ಠಕ್ಕರರಂಥ [35] ಶಿಕ್ಷಣ ತಜ್ಞರ ಪ್ರಶಂಸೆಗೂ ಪಾತ್ರವಾಗಿದ್ದರೆಂದು ಗಮನಿಸಬೇಕಾಗಿದೆ.

ಕಲಾವಿದ ಮಿಣಜಗಿಯವರು ಚಿತ್ರಕಲಾ ಶಿಕ್ಷಣ ರಂಗಕ್ಕೆ ಅವರು ಕೇವಲ ಕಲಾವಿದರಾಗಿ ಮಾತ್ರ ಸೇವೆ ಸಲ್ಲಿಸದೇ ಕಲಾಶಿಕ್ಷಕರಾಗಿಯೂ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಇವುಗಳಲ್ಲಿ ಅತೀ ಮುಖ್ಯವಾದುದು ರಾಜ್ಯ ಸರ್ಕಾರ ಪ್ರಾರಂಭಿಸಬೇಕೆಂದಿದ್ದ ಕಲಾ ಮತ್ತು ಕೈಗಾರಿಕೆ ಶಾಲೆಯು ರಾಜ್ಯದ ಮಧ್ಯವರ್ತಿಯ ನಿಕಟ ಮಧ್ಯವರ್ತಿ ಸ್ಥಳವೆನಿಸಿದಲ್ಲಿ ಅಂತೆಯೇ 1965 ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭವಾದ ಚಿತ್ರಕಲಾ ಹಾಗೂ ಕೈಗಾರಿಕಾ ಕಲಾಶಾಲೆಯ ಸ್ಥಾಪನೆಯಲ್ಲಿಯೂ ಮಿಣಜಗಿಯವರ ಪಾತ್ರ ಪ್ರಮುಖವಾಯಿತು. [36] ಸ್ಥಾಪಿಸಲು ಅನೇಕ ಒತ್ತಡಗಳನ್ನು ಎದುರಿಸಿ ಈ ಕಾರ್ಯವನ್ನು ನಿರ್ವಹಿಸಬೇಕಾಗಿ ಬಂದಾಗಲೂ ತಮ್ಮ ಈ ನಿಲುವಿಗೆ ದೃಢವಾಗಿ ಅವರು ಅಂಟಿಕೊಂಡು ಉಳಿದರು. ಹೀಗಾಗಿ ಉತ್ತರ ಕರ್ನಾಟಕಕ್ಕೆ ಸಮೀಪವಾಗಿ ಸರಕಾರಿ ಕಲಾಶಾಲೆಯೊಂದು ತೆರೆಯಲು ಸಾಧ್ಯವಾಯಿತು. ಮಿಣಜಗಿಯವರು ಈ ಕಲಾಶಾಲೆಗೆ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರಾಗಿಯೂ ನೇಮಕಗೊಂಡರು. ಕರ್ನಾಟಕ ರಾಜ್ಯದ ಉನ್ನತ ಚಿತ್ರಕಲಾ ಶಿಕ್ಷಣದ ಪಠ್ಯಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಈ ಸಮಿತಿಯ ಕಾರ್ಯ ನಿರ್ವಹಿಸಿ ಯೋಗ್ಯ ಪಠ್ಯರೂಪಗೊಳ್ಳುವುದಕ್ಕೆ ಮಾರ್ಗದರ್ಶನ ನೀಡಿರುತ್ತಾರೆ. [37] ಚಿತ್ರಕಲಾ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿಯೂ ಸಹಿತ ರಾಜ್ಯದಲ್ಲಿ ಉತ್ತಮ ರೀತಿಯಲ್ಲಿ ಪರೀಕ್ಷಾ ಪದ್ಧತಿ ಏರ್ಪಾಡಾಗುವಂತೆ ಮಾಡಿರುವರು. [38] ಕರ್ನಾಟಕ ರಾಜ್ಯ ಕಲಾಶಿಕ್ಷಣ ಮಂಡಳದ ಸದಸ್ಯತ್ವವು ಕೂಡ ಪಡೆದುಕೊಂಡಿದ್ದರು. [39] ಅದೇ ಸಂದರ್ಭದಲ್ಲಿ ಪ್ರಾಥಮಿಕ, ಮಾಧ್ಯಮಿಕ ಕಲಾಶಿಕ್ಷಣದ ಅಭಿವೃದ್ಧಿಗಾಗಿ ಅವರು ಅನೇಕ ಪರಿಶ್ರಮಪಟ್ಟರು. [40] ಅದಲ್ಲದೇ ವಿಶ್ವವಿದ್ಯಾಲಯ ಪದವಿ ಪರೀಕ್ಷೆಗಳಲ್ಲಿ ಚಿತ್ರಕಲಾ ಶಿಕ್ಷಣವನ್ನು ಸೂಕ್ತವಾಗಿ ಅಳವಡಿಸುವ ಬಗೆಗೆ ಅವರು ತಮ್ಮ ಅನುಭವದ ಪ್ರಯೋಜನವನ್ನು ವಿಶ್ವವಿದ್ಯಾಲಯದ ಅಧ್ಯಯನ ಶೀಲ ಮಂಡಳಕ್ಕೆ ಮಾಡಿಕೊಟ್ಟಿರುವರು.[41] ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉನ್ನತ ಚಿತ್ರಕಲಾ ವ್ಯಾಸಂಗವನ್ನು ಪರೀಕ್ಷೆಗಳಿಗೆ ಅಳವಡಿಸುವುದಕ್ಕಾಗಿ ನೇಮಕಗೊಂಡ ಸಮಿತಿಯ ಅಧ್ಯಕ್ಷರಾಗಿ [42] ಸೂಕ್ತವಾಗಿ ಸಲಹೆಗಳನ್ನು ನೀಡಲು ನೆರವಾದರಲ್ಲದೆ ಈ ವ್ಯಾಸಂಗಕ್ಕೆ

---

೩೪. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧.
೩೫. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ , ಪುಟ -೫೫.
೩೬. ಶ್ರೀ ಎಂ.ವ್ಹಿ. ಮಿಣಜಗಿ : ಗವೀಶ ಹಿರೇಮಠ, ಪುಟ - ೮.
೩೭. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧
೩೮. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧
೩೯. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧
೪೦. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧
೪೧. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧
೪೨. Rewansiddhayya Hannerdumath : Minajigi Artists & The Man, Page-33,34
★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -. ೧



ಉಚಿತವಾದ ಪಠ್ಯಪುಸ್ತಕಗಳನ್ನು ರೂಪಿಸುವ ಸಮಿತಿಯ ಅಧ್ಯಕ್ಷರಾಗಿ [43] ಈ ಕೆಲಸವನ್ನು ಕೂಡ ತುಂಬಾ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದರು. ಆ ಮೂಲಕ ಕರ್ನಾಟಕದಲ್ಲಿ ಪದವಿ ಪರೀಕ್ಷೆಗಳಿಗೂ ಚಿತ್ರಕಲೆಯ ವ್ಯಾಸಂಗದ ಅನುಕೂಲವನ್ನು ಅವರು ಕಲ್ಪಿಸಿಕೊಡಲು ತುಂಬಾ ಪ್ರೇರಣೆ ನೀಡಿ ನೆರವಾದರು.

ರಾಜ್ಯದಲ್ಲಿ ಚಿತ್ರಕಲೆಗಾಗಿ ಮುಂಬೈಯಲ್ಲಿ ಇರುವಂತೆ ನಿರ್ದೇಶಕ ಮಂಡಳಿಯನ್ನಾದರು ರಚಿಸಿ ಚಿತ್ರಕಲೆಯ ಏಳ್ಗೆಗಾಗಿ ಪರಿಶ್ರಮ ಪಡುವಂತೆ ಮಾಡುವುದು ಇವರ ಗುರಿಯಾಗಿತ್ತು. ಆದರೆ ಇದು ಸಮಂಜಸವಾದ ಗುರಿಯನ್ನೇ ತಲುಪದೇ ಇರುವದರಿಂದ ಕರ್ನಾಟಕ ರಾಜ್ಯದಲ್ಲಿ ಲಲಿತ ಕಲಾ ಅಕಾಡೆಮಿ ಸ್ಥಾಪಿಸಿ ಸದಸ್ಯರಾಗಿ [44] ಈ ಸಂಸ್ಥೆಯು ಚಿತ್ರಕಲಾ ರಂಗದಲ್ಲಿ ಮುನ್ನಡೆ ಸಾಧಿಸಲು ತಮ್ಮ ಅನುಭವಪೂರ್ಣ ಸಲಹೆ ಸೂಚನೆ ನೀಡಿದರು. ಅಕಾಡೆಮಿ ಈ ಕ್ಷೇತ್ರದಲ್ಲಿ ವಿವಿಧ ಹೊಸ ಹೊಸ ಹೆಜ್ಜೆಗಳನ್ನು ಇಡುವಂತೆ ಮಾಡಿದ್ದಲ್ಲದೆ, ಅವು ಯಶಸ್ವಿಯಾಗಿ ಅನುಷ್ಠಾನಕ್ಕೆ ಬರುವಂತೆ ಮಾಡಿದವರೂ ಡಾ. ಎಂ.ವ್ಹಿ.ಮಿಣಜಗಿಯವರು. ಕಲಾವಿದರನ್ನು ಗೌರವಿಸಿ ಸತ್ಕರಿಸುವ ಉತ್ತೇಜನಪೂರ್ವಕ ಪರಂಪರೆಯನ್ನು ಈ ಮೂಲಕವಾಗಿ ರೂಢಿಗೊಂಡಿತು. ರಾಜ್ಯ ಸಂಗೀತ ನಾಟಕ ಅಕಾಡಮಿಯ [45] ಉಪಾಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಕೂಡ ಅವಿಸ್ಮರಣಿಯವಾದುದು. ಮಿಣಜಗಿಯವರು ಕಲಾವಿದರಲ್ಲದೇ ಸಂಗೀತದ ವಿದ್ವಾಂಸರಾಗಿಯೂ ಅನೇಕ ರಂಗದಲ್ಲಿ ಅಕಾಡೆಮಿಯ ವಿಶಿಷ್ಟತೆಯಲ್ಲಿ ಸೇವೆ ಸಲ್ಲಿಸುವಂತೆ ಮಾಡಿದ್ದನ್ನು ನಾವು ಗಮನಿಸಬಹುದು [46] ಕರ್ನಾಟಕ ಲಲಿತಕಲಾ ಅಕಾಡೆಮಿಯ ಪರವಾಗಿ ಹುಬ್ಬಳ್ಳಿ, ದಾವಣಗೆರೆಯಲ್ಲಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿ ಉದ್ಘಾಟಿಸಿದವರು ಡಾ. ಮಿಣಜಗಿಯವರು. [47] ಅಲ್ಲದೇ ಲಲಿತ ಕಲಾ ಅಕಾಡೆಮಿಯು ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದ್ದಲ್ಲದೇ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮಿಣಜಗಿಯವರು ಸುವ್ಯವಸ್ಥೆಯಾಗಿ ಚಿತ್ರಕಲಾ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡಿದ್ದು ಗಮನಾರ್ಹ. ಒಂದು ಸತ್ಪರಂಪರೆಯಲ್ಲಿ ಅಕಾಡೆಮಿ ಕೆಲಸ ಮಾಡುವಂತಾದುದು ಎಲ್ಲರಿಗೂ ಸಮಾಧಾನವನ್ನುಂಟುಮಾಡಿತು ಆರಂಭದಲ್ಲಿಯೇ ಅತ್ಯಂತ ಒಳ್ಳೆ ಮಾರ್ಗದರ್ಶನ ದೊರೆಯಿತು. ಇದೊಂದು ನಿಜವಾಗಿಯೂ ಸಂತೋಷದ ಸಂಗತಿಯೇ ಸರಿ. ಅದಕ್ಕಿಂತ ಮಿಗಿಲಾಗಿ ಅಕಾಡೆಮಿಗೆ ಉನ್ನತ ಗುರಿ ಆದರ್ಶಗಳನ್ನು ಡಾ. ಮಡಿವಾಳಪ್ಪನವರು ಹಾಕಿಕೊಟ್ಟಿರುವದರಿಂದ ಅದು ಆ ದಿಸೆಯಲ್ಲಿ ಕೆಲಸ ಮಾಡುತ್ತ ಹೋಗಲು ಅನುಕೂಲವಾಗಿ ಪರಿಣಮಿಸಿತೆಂಬುದು ಅಕಾಡೆಮಿಯ ಇತಿಹಾಸದಲ್ಲಿಯೂ ಕೂಡ ಒಂದು ಮರೆಯಲಾರದ ಅಂಶವೇ ಎನ್ನಬಹುದಾಗಿದೆ.

೪೩.. Rewansiddhayya Hannerdumath : Minajigi Artists & The Man, Page-34,35

★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧

೪೪. Rewansiddhayya Hannerdumath : Minajigi Artists & The Man, Page-34,35

★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧

೪೫. Rewansiddhayya Hannerdumath : Minajigi Artists & The Man, Page-34,35

★ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ -೧

೪೬. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೬.

೪೭. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೬.



ಮೈಸೂರು ದಸರಾ ಪ್ರದರ್ಶನದ ಸಮಿತಿ [48] ಸದಸ್ಯರಾಗಿಯೂ ಅಲ್ಲಿ ಸೂಕ್ತ ಏರ್ಪಾಡುಗಳು ಆಗುವಂತೆ ಸಂಯೋಜಿತವಾಗಿ ಕಾರ್ಯ ನಿರ್ವಹಣೆಯಾಗುವಂತೆ ಡಾ. ಮಿಣಜಗಿಯವರು ನೋಡಿಕೊಂಡರು. ಡಾ. ಮಿಣಜಗಿಯವರು ಒಂದು ರೀತಿಯಲ್ಲಿ ಶಿಸ್ತಿನ ಸಿಪಾಯಿಯೂ ಹೌದು. ಆಗಬೇಕಾದ ಕೆಲಸ ಸರಿಯಾದ ಸಮಯದಲ್ಲಿ ಸೂಕ್ತ ರೀತಿಯಲ್ಲಿ ಆಗಲೇಬೇಕೆಂಬುದು ಅವರ ವಿಚಾರ. ಎಷ್ಟು ಪರಿಶ್ರಮವಾದರೂ ಅವರು ಅದನ್ನು ಪರಿಗಣಿಸುತ್ತಿರಲಿಲ್ಲವೆನ್ನುವುದು ಅವರೊಂದಿಗೆ ಜೊತೆಗೂಡಿ ಕೆಲಸ ಮಾಡಿದ ಕಲಾವಿದರಿಗೆ ಅಧಿಕಾರಿಗಳಿಗೆ ಶಿಷ್ಯರಿಗೆ ಬಹು ಚೆನ್ನಾಗಿ ಗೊತ್ತು. ಹೀಗಾಗಿ ಅವರು ನಿರ್ವಹಿಸಿದ ಯಾವುದೇ ಕೆಲಸವಿರಲಿ ಅದು ಅತ್ಯಂತ ಅಚ್ಚುಕಟ್ಟಾಗಿ ಕೆಲಸ, ಕಾರ್ಯಗಳು ನೆರವೇರುವಲ್ಲಿ ತುಂಬಾ ಶ್ರಮವಹಿಸುತ್ತಿರುವುದನ್ನು ನಾನು ಕಂಡಿರುತ್ತೇನೆ. [49]

ಡಾ. ಮಿಣಜಗಿಯವರು ರಾಜ್ಯ ಲಲಿತ ಕಲಾ ಅಕಾಡೆಮಿಯಲ್ಲದೇ ಕೇಂದ್ರ ಲಲಿತ ಕಲಾ ಅಕಾಡಮಿಯ ಸದಸ್ಯರಾಗಿ[50] ಕೂಡ ಕಲಾರಂಗದ ಬೆಳವಣಿಗೆಗೆ ಪರಿಶ್ರಮಿಸಿದ್ದಾರೆ * ಇಲ್ಲಿ ಕಾರ್ಯಕಾರಿ ಮಂಡಳದ ನಿರ್ಣಾಯಕರ ಸಮಿತಿಯ ಸದಸ್ಯರಾಗಿದ್ದಲ್ಲದೇ, ಯುನೆಸ್ಕೊ [51] (ಪ್ಯಾರಿಸ್) ಅಂತರಾಷ್ಟ್ರೀಯ ಕಲಾ ಸಂಘದ ಭಾರತೀಯ ರಾಷ್ಟ್ರೀಯ ಸಮಿತಿ ಸದಸ್ಯರೂ ಆಗಿದ್ದರು. [54] ಜಪಾನದ [55] 1966 ರಲ್ಲಿ ಟೋಕಿಯೋ ಪಟ್ಟಣದಲ್ಲಿ ನಡೆದ ಜಗತ್ತಿನ ಐದನೇಯ ಕಲಾ ಸಮ್ಮೇಳನದಲ್ಲಿ ಏಶಿಯಾ ಖಂಡದಿಂದಲೇ ಪ್ರತಿನಿಧಿಯಾಗಿ ಭಾಗವಹಿಸಿದ ಕೀರ್ತಿ ಮಿಣಜಗಿಯವರಿಗೆ ಸಲ್ಲುತ್ತದೆ. [56] ಪೌರಾತ್ಯ ಕಲೆಯ ಪ್ರಾತಿನಿಧಿಕ ಅತಿಥಿ ಕಲಾವಿದರಾಗಿ ಕೂಡ ಈ ಕಾಂಗ್ರೇಸ್‌ದಲ್ಲಿ ಅವರು ಪಾಲ್ಗೊಳ್ಳಬೇಕಾಯಿತು. [57] ಭಾರತದಿಂದ ಮಾತ್ರವಲ್ಲ ದಕ್ಷಿಣ ಏಶಿಯಾವನ್ನು ಅವರು ಇಲ್ಲಿ ಪ್ರತಿನಿಧಿಸಿದ್ದು ಒಂದು ವಿಶೇಷ, ಅವರ ಕಲಾಭಿವ್ಯಕ್ತಿಯನ್ನು ಈ ಕಾಂಗ್ರೇಸ್ ಗಮನಿಸಿ ಮುಕ್ತ ಕಂಠದಿಂದ ಕಲಾಸೇವೆಯನ್ನು ಪ್ರಶಂಸಿಸಿದೆ, ಇದು ಕನ್ನಡಿಗರಿಗೆ ಮಾತ್ರವಲ್ಲ, ಭಾರತೀಯರಿಗೆಲ್ಲ ತುಂಬ ಹೆಮ್ಮೆಯ ವಿಷಯವೇ ಸರಿ. ಈ ಬಗೆಯಲ್ಲಿ ಡಾ. ಮಿಣಜಗಿಯವರ ಕಲಾ ಪ್ರತಿಭೆಯನ್ನು ಗಮನಿಸಿದಾಗ ಅವರಿಗೆ ಇಂಥ ಇನ್ನು ಹೆಚ್ಚಿನ ಅವಕಾಶಗಳು ದೊರೆಯಬೇಕಾಗಿತ್ತು. ಎಂದೆನಿಸದಿರದು ಆದರೂ ಅವರು ತಮಗೆ ದೊರೆತ ಅವಕಾಶಗಳೆಲ್ಲವನ್ನೂ ಸಂಪೂರ್ಣವಾಗಿ ಸದುಪಯೋಗ ಪಡಿಸಿಕೊಂಡರು ಎಂಬುದು ಮಾತ್ರ ಸಮಾಧಾನದ ವಿಷಯವೇ ಆಗಿರುತ್ತದೆ.

ಚಿತ್ರಕಲೆಯನ್ನು ಬೆಳವಣಿಗೆ ಮಾಡುವುದಲ್ಲದೇ ಕಲಾವಿದರ ಸೇವೆಯನ್ನು ಕಂಡು ಅವರ ಕುರಿತಂತೆ ಆತ್ಮಾವಲೋಕನ ಮಾಡುತ್ತಾ ಕಲೆಯ ಏಳ್ಗೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರಲ್ಲದೇ ಚಿತ್ರಕಲಾ ಶಿಕ್ಷಕರ ಸಂಘದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಚಿತ್ರಕಲಾ ಶಿಕ್ಷಕರ ಸಮಸ್ಯೆಗಳನ್ನು ದೂರ

---

೪೮. Rewansiddhayya Hannerdumath : Minajigi Artists & The Man Page No. 34-35.
ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ : ೧.

೪೯. ಶ್ರೀ ಪಿ. ಎಸ್. ಹಿರೇಮಠ : ಸಂದರ್ಶನ ದಿನಾಂಕ ೮-೧೦-೨೦೦೪

೫೦. Rewansiddhayya Hannerdumath : Minajigi Artists & The Man Page No. 34-35.

೫೧. ಮನೋರಮ : ಚಿಂತನ - ಮಂಥನ : ಪುಟ : ೧೪ : ದಿನಾಂಕ ೫ ಆಗಸ್ಟ ೧೯೬೪.

೫೨. Rewansiddhayya Hannerdumath : Minajigi Artists & The Man Page No. 34-35.

೫೩. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ : ೧.

೫೪. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩೧-೫-೧೯೮೭. ಪುಟ : ೧.

೫೫. ಶ್ರೀ ಗವೀಶ ಹಿರೇಮಠ : ಎಂ. ವ್ಹಿ. ಮಿಣಜಗಿ, ಪುಟ - ೫೫.

೫೬. ಕನ್ನಡಿಗ ಪತ್ರಿಕೆ ಸಂಪಾದಕರು : ಸಂಚಿಕೆ ೨೭-೨೮ : ದಿ. ೧೮-೫-೧೯೮೭.

೫೭. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೫೮.



ಮಾಡುವುದರಲ್ಲಿ ಮಾತ್ರವಲ್ಲ ; ಅವರಿಗೆ ಸೂಕ್ತ ಮಾರ್ಗದರ್ಶನ ಯೋಗ್ಯ ಅವಕಾಶಗಳು ದೊರೆಯುವಂತೆಯೂ ಈ ಸಂದರ್ಭದಲ್ಲಿ ವಿಶೇಷವಾಗಿ ಆಸಕ್ತಿವಹಿಸಿದ್ದರು. ಮಹಾರಾಷ್ಟ್ರದ ಮುಂಬೈ ನಗರದ ಚಿತ್ರಕಲಾ ಸಂಸ್ಥೆಗಳ ಮಹಾಮಂಡಳದ ಸದಸ್ಯತ್ವವನ್ನು ಪಡೆದು ಕೆಲಸ ಮಾಡಿದರು. ಭಾರತೀಯ ಕಲಾಕ್ಷೇತ್ರಕ್ಕೆ ಕಲಾಸೇವೆಯನ್ನು ಸಲ್ಲಿಸಲು ದೊರೆತ ಅವಕಾಶವನ್ನು ಅವರು ಕಳೆದುಕೊಳ್ಳಲಿಲ್ಲ. ಕಲಾಕ್ಷೇತ್ರದಲ್ಲಿ ಹೀಗೆ ಅವರ ಹೆಸರು ಕರ್ನಾಟಕದಲ್ಲಿ ಮಾತ್ರವಲ್ಲದೇ ಭಾರತದ ಇನ್ನಿತರ ಅನೇಕ ರಾಷ್ಟ್ರಗಳಲ್ಲಿ ಕೇಳಿಬರುತ್ತಿತ್ತು. ಅವರ ಸಾಧನೆ, ತಪಸ್ಸು, ಯಶಸ್ವಿಗೆ ಒಂದು ಉತ್ತಮ ಉದಾಹರಣೆಗೆ ನಿದರ್ಶನ ಕೈಗನ್ನಡಿ ಹಿಡಿದಂತೆ, ಹಾಗೇ ನೋಡಿದರೆ ಲಂಡನ್ನದ ಚಿತ್ರಕಲಾ ಶಿಕ್ಷಣ ಪೂರೈಸಿ ಬಂದೊಡನೆ ಅಗಿನ ಮುಂಬೈ ಪ್ರಾಂತದ ಚಿತ್ರಕಲಾ ಇಲಾಖೆಯ ನಿರ್ದೇಶಕರಾಗಬೇಕಿತ್ತು. ಲಂಡನ್‌ನಿಂದ ಬರುವುದು ತುಂಬಾ ವಿಳಂಬವಾಗಿದ್ದರಿಂದ ಅದು ಕೈ ತಪ್ಪುವಂತಾಯಿತು. ಹಾಗಾದುದೇ ತುಂಬಾ ಸರಿಯಾದ ಮತ್ತು ಒಳ್ಳೆಯ ಸಂಗತಿಯೆನೋ ! ಅವರು ಅಧಿಕಾರಿಯಾಗಿ ಆಡಳಿತದಲ್ಲಿ ಮಾತ್ರ ತೊಡಗಿಬಿಡುತ್ತಿದ್ದರು. ಅಲ್ಲಿಂದ ನಿವೃತ್ತರಾಗುವವರೆಗೂ ಆಡಳಿತದಲ್ಲಿ ಬೇರಾವುದಕ್ಕೂ ಅವರಿಗೆ ವ್ಯವಧಾನವಿರುತ್ತಿರಲಿಲ್ಲವೆನೋ ! ಬಹಳವಾದರೆ ಆಗೀಗ ಹಲವಾರು ವರ್ಣಚಿತ್ರಗಳನ್ನು ರಚಿಸಬಹುದಾಗಿತ್ತು. ಈಗಿನಂತೆ ಚಿತ್ರಕಲಾ ರಂಗದಲ್ಲಿ ಮಿಂಚುತ್ತಿರಲಿಲ್ಲ. ಕರ್ನಾಟಕಕ್ಕೆ ಹೆಮ್ಮೆಯ ಸ್ಥಾನವನ್ನು ತಂದು ಕೊಡುವುದು ಆಗುತ್ತಿರಲಿಲ್ಲ. ಎಂಥ ಅವಕಾಶವನ್ನು ನೀನು ಕಳೆದುಕೊಂಡೆಯಲ್ಲ ಎಂದು ಆಗ ಹಳಹಳಿಸಿದ ಅವರ ಮಿತ್ರರು ಕೂಡ ಮುಂದೆ ಡಾ. ಮಿಣಜಗಿ ಹೀಗೆ ಮಿಂಚಿದಾಗ ಹೀಗಾದುದೇ ತುಂಬಾ ಸರಿಹೋಯ್ತು ಎಂದು ಉದ್ಗರಿಸಿದ್ದುಂಟು ಇದು ಕನ್ನಡಿಗರಿಗೆ ಕರ್ನಾಟಕಕ್ಕೆ ಆಗಿರುವ ಒಂದು ವಿಶೇಷವಾದ ಲಾಭವೇ ಎನಿಸಿದೆ.

ಡಾ. ಮಿಣಜಗಿಯವರು ಹುಬ್ಬಳ್ಳಿ-ಬೆಂಗಳೂರು ನಗರಗಳಲ್ಲಿ ಕಲಾ ಪ್ರದರ್ಶನವನ್ನು ಹಮ್ಮಿಕೊಂಡಿದ್ದರು. ಇದಲ್ಲದೇ ಉತ್ತರ ಕರ್ನಾಟಕದ ಚಿಕ್ಕಪುಟ್ಟ ಗ್ರಾಮಗಳಲ್ಲಿಯೂ ಕೂಡ ಚಿತ್ರಕಲಾ ಪ್ರದರ್ಶನ ಏರ್ಪಡಿಸುವ ಸಾಹಸ ಅವರು ನಡೆಸಿದ್ದಾರೆ. ಇವುಗಳಿಗೆ ನಾಡಿನ ಗಣ್ಯವ್ಯಕ್ತಿಗಳಾದ ರಾಜ್ಯದ ಮುಖ್ಯಮಂತ್ರಿಗಳು, ಮಂತ್ರಿಗಳು, ಸಾಹಿತಿಗಳು ಇವರ ಕಲೆಯನ್ನು ಕೊಂಡಾಡಿದ್ದಾರೆ. ಅದಲ್ಲದೇ 1959 [58] ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಪ್ರದರ್ಶನ ಉದ್ಘಾಟನೆಯನ್ನು ಆಗಿನ ರಾಷ್ಟ್ರಪತಿ [59]ಡಾ. ಬಾಬು ರಾಜೇಂದ್ರ ಪ್ರಸಾದರು ನೆರವೇರಿಸಿದ್ದರು. [60] ಈ ಪೂರ್ವದಲ್ಲಿ ನಡೆದ ಇನ್ನೊಂದು ಚಿತ್ರಕಲಾ ಪ್ರದರ್ಶನವನ್ನು ಆಗಿನ ಉಪರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಉದ್ಘಾಟಿಸಿ ಹೊಗಳಿಕೆಯನ್ನಿತ್ತು ಮುಕ್ತಕಂಠದಿಂದ ಡಾ. ಮಿಣಜಗಿಯವರನ್ನು ಕುರಿತು ತಮ್ಮ ಸ್ವಹಸ್ತಾಕ್ಷರದಿಂದ ಉಲ್ಲೇಖಿಸಿದ್ದಾರೆ. [61] ಅದರಂತೆ ಮಿಣಜಗಿಯವರ ಶಿಷ್ಯ ಹಾಗೂ ಶ್ರೀ ವಿಜಯಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯದ ಮಾಜಿ ನಿವೃತ್ತ ಪ್ರಾಚಾರ್ಯರಾದ ಶ್ರೀ ಪಿ. ಎಸ್. ಹಿರೇಮಠ ಅವರ ನೆರವಿನಿಂದ ಕಿತ್ತೂರಿನಲ್ಲಿ ವೀರ ರಾಣಿ ಚೆನ್ನಮ್ಮ ಸ್ಮಾರಕ ವಸ್ತು ಸಂಗ್ರಹಾಲಯವನ್ನು ಸಂಘಟಿಸಿದ್ದರು. ಈ ವಸ್ತು ಸಂಗ್ರಹಾಲಯವನ್ನು ಆಗಿನ ಪ್ರಧಾನ ಮಂತ್ರಿಗಳು


---

೫೮. ಶ್ರೀ ಪಿ.ಎಸ್. ಹಿರೇಮಠ : ಸಂದರ್ಶನ ದಿನಾಂಕ ೮-೧೦-೨೦೦೪

೫೯. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೧೩.

೬೦. ಹುಣಸಿವಾಡ ರಾಜನ್ : ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ : ೩.೧-೫-೧೯೮೭. ಪುಟ : ೧.

೬೧. ಸ್ವಹಸ್ತಾಕ್ಷರ : ಡಾ. ಸರ್ವಪಲ್ಲಿ ರಾಧಾಕೃಷ್ಣನ್ : ಸಂಗ್ರಹ : ಶ್ರೀ. ವಿ.ಮ.ಲ.ಕ. ಹುಬ್ಬಳ್ಳಿ.



ಹಾಗೂ ರಾಜ್ಯದ ರಾಜ್ಯಪಾಲರಾದ ಜಿ.ಎಸ್. ಪಾಠಕ ಈ ವಸ್ತು ಸಂಗ್ರಹಾಲಯ ಪ್ರಾರಂಭೋತ್ಸವ ನೆರವೇರಿಸಿದ್ದರು.[62] ಡಾ. ಮಿಣಜಗಿಯವರು ಸಂಶೋಧನ ಮುಖವಾದ ಕಲಾ ಸೇವೆ, ಈ ವಸ್ತು ಸಂಗ್ರಹಾಲಯ ಇಂದಿಗೂ ಇತಿಹಾಸ ಶೋಧಕರಿಗೆ ಅಪೂರ್ವ ಸಂಪತ್ತಾಗಿ ಉಳಿದಿರುವುದನ್ನು ಗಮನಿಸಿದಾಗ ಅವರ ಸಾಹಸಿ ಪ್ರವೃತ್ತಿಯ ಜೊತೆಗೆನೆ ಅವರ ಬಹುಮುಖವಾದ ಕಲಾ ಸೇವಾ ಜೀವನವೂ ನಮ್ಮ ಕಣ್ಮುಂದೆ ಸುಳಿದು ಹೋಗುವುದು.[63] ಡಾ. ಮಿಣಜಗಿಯವರ ವಿಶಾಲದೃಷ್ಟಿಕೋನದಿಂದ ಸದಾಕಾಲ ಕೆಲಸ ಮಾಡುತ್ತಿದ್ದರೆಂಬುದಕ್ಕೆ ಈ ಮಹಿನೀಯರ ಮಾತುಗಳೇ ಒಳ್ಳೆ ನಿದರ್ಶನವಾಗಿ ನಿಂತಿವೆ.

ಮಿಣಜಗಿಯವರು ಇತರ ಕಲಾವಿದರೊಂದಿಗೆ ಸೌಹಾರ್ದ ಭಾವದಿಂದಲೇ ನಡೆದುಕೊಳ್ಳುತ್ತಿದ್ದರು. ತಮ್ಮ ಸಮಕಾಲೀನ ಹಿರಿಯ ಕಲಾವಿದರು ಮಾತ್ರವಲ್ಲ ಅನೇಕ ಕಿರಿಯ ಕಲಾವಿದರೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು, ಚಿತ್ರಕಲೆಯ ವಿವಿಧ ಪದ್ಧತಿಗಳನ್ನು ಅವರು ಒಂದೇ ಭಾವದಿಂದ ನೋಡುತ್ತಿದ್ದರು. ಅವರ ಸಮಭಾವದ ದೃಷ್ಟಿಕೋನದಿಂದಾಗಿ ಹಿರಿಯ ಹಾಗೂ ಕಿರಿಯ ಕಲಾವಿದರ ಬಗೆಗೆ ಅವರು ಉದಾತ್ತ ಭಾವದಿಂದ ಮಾತನಾಡುತ್ತಿದ್ದರು. ಚಿತ್ರಕಲೆ ಯಾವುದೇ ಪದ್ಧತಿಯದಿರಲಿ, ಅದು ಚಿತ್ರಕಲೆಯೇ ಅಲ್ಲವೇ ? ಕಲೆ ಒಂದು ಪ್ರವಾಹ ಇದ್ದಂತೆ, ಅದು ಮುನ್ನುಗ್ಗುತ್ತಲೇ ಇರುವುದು ಪ್ರವಾಹದಲ್ಲಿ ಹೊಸ ನೀರು ಸೇರಿಕೊಳ್ಳುವಂತೆ, ಹೊಸ ಹೊಸ ಪದ್ಧತಿಗಳು ಅದರಲ್ಲಿ ಸೇರಿಕೊಳ್ಳಬಹುದು. ಆದರೆ ಮುಖ್ಯ ಪ್ರವಾಹವು ಒಂದೇ ಆಗಿರುವಂತೆ ಅವೆಲ್ಲ ಚಿತ್ರಕಲೆಯಲ್ಲಿಯೇ ಸೇರಿಕೊಂಡಿರುವವು. ಅದು ಆಧುನಿಕವೆಂದು ಕರೆಯಬಹುದು, ನವ್ಯವೆಂದು ಕರೆಯಬಹುದು. ಅವೆಲ್ಲವೂ ಚಿತ್ರಕಲೆಗಳೇ ಆಗಿವೆ, ಕಲಾವಿದರು ಅದರಲ್ಲಿಯೂ ಕಿರಿಯ ಕಲಾವಿದರು ಯಾವುದೇ ಪದ್ಧತಿಯನ್ನು ಆರಿಸಿಕೊಳ್ಳಲಿ, ಅದು ಅವರಿಗೆ ಸೇರಿದ್ದು, ತುಂಬ ಶ್ರದ್ಧೆ ಆಸಕ್ತಿಗಳಿಂದ ಕೆಲಸ ಮಾಡಬೇಕು, ಪರಿಶ್ರಮಿಸಬೇಕು, ಸತತ ಸಾಧನೆಗೈಯಬೇಕು, ಆಗ ಅವರಿಗೆ ಯಶಸ್ಸು ನಿಶ್ಚಿತವಾಗಿ ದೊರೆಯುವದು. ಅರೇ ಮನಸ್ಸಿನಿಂದ ಮಾತ್ರ ಯಾವುದೇ ಕೆಲಸವನ್ನು ಮಾಡಬಾರದು. ಕೈಗೆತ್ತಿಕೊಳ್ಳಬಾರದು, ತಾವು ಪರಿಶ್ರಮಿಸದೇ ಇರುವಾಗ ಇನ್ನೊಬ್ಬರನ್ನು ಆಡಿಕೊಳ್ಳಬಾರದು [64] ಇದು ಮಿಣಜಗಿಯವರು ಚಿತ್ರಕಲಾ ವಿಧಾನ ಅಧ್ಯಯನ ಬಗೆಗೆ ಇರಿಸಿಕೊಂಡಿದ್ದ ಸ್ಪಷ್ಟವಾದ ಅಭಿರುಚಿ, ಅಭಿಪ್ರಾಯ ಅವರೇ ಪ್ರಾಂಜಲವಾದ ಮಾತುಗಳು ಇದಕ್ಕೆ ಬಹು ಸ್ಪಷ್ಟವಾದ ನಿದರ್ಶನವನ್ನು ಒದಗಿಸುತ್ತದೆ. ಅದೇ ಕಾಲಕ್ಕೆ ಅವರ ಹಿರಿಮೆಯು ಕೂಡ ಅಡಗಿರುವುದು ಇಲ್ಲಿ ಎಂಬುದು ಒಡೆದು ಕಾಣುತ್ತದೆ.

ಕಲಾವಿದ ಮಿಣಜಗಿಯವರು ನಾಡಿನ ಗಣ್ಯವ್ಯಕ್ತಿಗಳ ಸಂಪರ್ಕ ಹಾಗೂ ಒಡನಾಟದೊಂದಿಗೆ ವಿವಿಧ ಚಿತ್ರಕಲಾಪ್ರದರ್ಶನ ಹಾಗೂ ಚಿತ್ರಕಲಾ ಮಂದಿರಗಳನ್ನು ಸಂದರ್ಶಿಸಿದ ಗಣ್ಯ ಮಾನ್ಯ ವ್ಯಕ್ತಿಗಳು ತಮ್ಮದೇ ಆದ ಅಭಿಪ್ರಾಯಗಳನ್ನು ಗಮನಾರ್ಹವಾಗಿವೆ, ಅವರು ತಮ್ಮ ಸಂತಸವನ್ನು ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಇವರಲ್ಲಿ ಮೂವರ ಅಭಿಪ್ರಾಯಗಳನ್ನು ಇಲ್ಲಿ ತಿಳಿಯಬಹುದಾಗಿದೆ.

ಭಾರತದ ಉಪರಾಷ್ಟ್ರಪತಿಗಳಾಗಿ ಇವರ ಚಿತ್ರಕಲಾ ಪ್ರದರ್ಶನ ಸಂದರ್ಶಿಸಿದ ಡಾ. ಎಸ್. ರಾಧಾಕೃಷ್ಣನ್ ಹೇಳಿರುವ ಮಾತುಗಳು ಕಲಾ ಮಂದಿರದ ಅಧಿಕಾರಿಗಳು ಏರ್ಪಡಿಸಿದ ಚಿತ್ರಕಲಾ ಪ್ರದರ್ಶನವನ್ನು ಸಂದರ್ಶಿಸಲು ನನಗೆ ತುಂಬಾ ಸಂತೋಷವೆನಿಸುತ್ತದೆ. ಇಲ್ಲಿರುವ ಕಲಾಕೃತಿಗಳು ತುಂಬಾ

---

೬೨. ಶ್ರೀ ಪಿ.ಎಸ್. ಹಿರೇಮಠ ಸಂದರ್ಶನ, ದಿನಾಂಕ ೬-೧೦-೨೦೦೪
೬೩. ಶ್ರೀ ಪಿ.ಎಸ್. ಹಿರೇಮಠ ಸಂದರ್ಶನ, ದಿನಾಂಕ ೬-೧೦-೨೦೦೪
೬೪. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ-೧೪

[illegible]



ಸೊಗಸಾದವು. ಆಕರ್ಷಕವಾದವು ಈ ಸಂಸ್ಥೆ ಮುಂದಿನ ವರುಷಗಳಲ್ಲಿತುಂಬಾ ಅಭಿವೃದ್ಧಿಹೊಂದುವದೆಂದು ನಾನು ಆಶಿಸುವೆ.[65]

ಸರ್. ಜೆ.ಜೆ.ಸ್ಕೂಲ್ ಆಫ್ ಆರ್ಟದ ಡೀನರಾಗಿದ್ದಶ್ರೀ ಜಿ.ಡಿ. ಗೋಂದಕರ ಹೇಳಿರುವ ಮಾತುಗಳು "ನಿಮ್ಮ ವಿದ್ಯಾರ್ಥಿಗಳ ಕಲಾಕೃತಿಗಳ ಬಗೆಗೆ ನನಗೆ ಆನಂದವಾಗಿದೆ. ಈ ಕಲಾ ಶಿಕ್ಷಣ ಪ್ರಸಾರದ ಅದ್ಭುತ ಕಾರ್ಯದಲ್ಲಿನಿಮಗೆ ಸಂಪೂರ್ಣ ಯಶಸ್ಸು ದೊರೆಯಲಿ" ಎಂದು ಹಾರೈಸಿದ ಮಾತುಗಳಾಗಿವೆ.[66]

ಭಾರತದ ಮಹಾದಂಡಾಧಿಪತಿ ಜನರಲ್ ಕೆ.ಎಂ.ಕಾರಿಯಪ್ಪ ವ್ಯಕ್ತಪಡಿಸಿದ ಅಭಿಪ್ರಾಯವೂ ಕೂಡ ತುಂಬ ಮನೋಜ್ಞವಾಗಿವೆ. ನಿಮ್ಮ ಕಲಾ ಮಂದಿರಕ್ಕೆ ಭವ್ಯ ಸುಸಜ್ಜಿತ ಕಟ್ಟಡ ಒದಗುವಂತೆ ಸಂಸ್ಥೆ ಇದಾಗಿ ರೂಪಗೊಳ್ಳಲಿ ಎಂದು ನಾನು ಹಾರೈಸುವೆ.[67]

ಈ ಮೂವರ ಅಭಿಪ್ರಾಯಗಳೇ ಡಾ. ಮಿಣಜಗಿಯವರ ಚಿತ್ರಕಲಾ ಮಂದಿರ ನಾಡಿನ ಹೆಸರು ಪಡೆದಿರುವುದರ ದ್ಯೋತಕವಾಗಿರುವಂತೆಯೇ ಪ್ರಮುಖರಲ್ಲಿ ಈ ಬಗೆಗೆ ಸಂಪೂರ್ಣವಾಗಿ ಸದಭಿಪ್ರಾಯವಿರುವುದನ್ನು ತೋರಿಸುತ್ತದೆ. ಇಂಥಹ ಹಿನ್ನೆಲೆ ದೊರಕಿರುವದು ಈ ಸಂಸ್ಥೆಯ ಪುಣ್ಯ ವಿಶೇಷವೇ ಎನ್ನ ಬಹುದಾಗಿದೆ.

ಡಾ. ಎಂ.ವ್ಹಿ. ಮಿಣಜಗಿಯವರ ಕಲಾ ಸೇವೆಯ ಸಾರ್ಥಕ ಬದುಕಿನೊಂದಿಗೆ ಈ ಕಲಾಶಾಲೆಯು ನಾಡಿನಲ್ಲಿತನ್ನದೇ ಆದ ವ್ಯಕ್ತಿತ್ವವನ್ನು ಗಳಿಸಿಕೊಂಡಿರುತ್ತದೆ. ಇದಕ್ಕೆ ಇನ್ನಿತರ ಪ್ರಾಚಾರ್ಯರಲ್ಲಿರುವ ಕಲಾ ಪ್ರಜ್ಞೆಯ ಮುಖಾಂತರ ನಡೆದು ಬಂದ ಕಲಾವಿದ, ಪ್ರಾಚಾರ್ಯರ ಕುರಿತು ಗಮನಿಸಬೇಕಾಗುತ್ತದೆ.

ಡಾ. ಮಿಣಜಗಿ ನಿವೃತ್ತಿನಂತರದ ಕಲಾವಿದ ಪ್ರಾಚಾರ್ಯರು

ಬಸವರಾಜ ಹಳಿಜೋಳ ಇವರು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ದೇಶನೂರ ಗ್ರಾಮದಲ್ಲಿ 1934 ಡಿಸೆಂಬರ 13 ರಂದು ಜನಿಸಿದರು. ಬಸವರಾಜರ ತಂದೆ ಮಡಿವಾಳಪ್ಪ ತಾಯಿ ಭಾಗಿರಥಿ ಇವರು ನೇಕಾರ ವೃತ್ತಿಯನ್ನು ಅವಲಂಬಿಸಿದ್ದರು, ಅನೇಕ ಬಣ್ಣದ ನೂಲು ಸೇರಿ ಒಂದು ಸುಂದರ ಬಟ್ಟೆ ಸಿದ್ಧವಾಗುವಂತೆ ಬಸವರಾಜರ ಪ್ರಾಥಮಿಕ ಶಿಕ್ಷಣವು ವಿವಿಧ ಹಂತಗಳಲ್ಲಿ ಆಗಿರುವುದನ್ನು ಕಾಣುತ್ತೇವೆ. ಕೇವಲ ಮೂರನೇ ತರಗತಿಯ ಶಿಕ್ಷಣ ಪೂರೈಸಿ ಅರ್ಧಕ್ಕೆ ನಿಲ್ಲಿಸಿದ ಬಸವರಾಜರು ಚಿತ್ರಕಲೆಯ ಅಭಿರುಚಿಯಿಂದ ಹುಬ್ಬಳ್ಳಿಯಲ್ಲಿ ಎಚ್.ಎನ್. ಅದ್ವಾನಿ ಮಾಲೀಕರು ನ್ಯಾಷನಲ್ ಸ್ಟುಡಿಯೋದಲ್ಲಿ ಕಲಾವಿದನಾಗಿ ಕೆಲಸವನ್ನು ಪ್ರಾರಂಭಿಸಿದರು. ತದನಂತರ ಈ ಸ್ಟುಡಿಯೋದ ಮಾಲೀಕರೊಡನೆ ಮನಃಸ್ತಾಪವಾದ ನೆಪಕ್ಕೆ ಮುಂಬೈಗೆ ಹೋದರು. ಬಸವರಾಜರ ಕಲಾಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾ ನೀಡಿದವರು ಹುಬ್ಬಳ್ಳಿಯವರೇ ಆಗಿದ್ದ ನಿರ್ದೇಶಕ ವ್ಹಿ. ಶಾಂತಾರಾಮ ಹಳಿಜೋಳರ ಬದುಕಿನ ಈ ಘಟ್ಟ ಹೊಸ ತಿರುವು ಪಡೆದು ಹೊಸ ಜಗತ್ತನ್ನು ಪ್ರವೇಶಿಸಿದಂತಾಯಿತು.[68]

೬೫. ಸ್ವಹಸ್ತಾಕ್ಷರ : ಡಾ. ಸರ್ವಪಲ್ಲಿ ರಾಧಾಕೃಷ್ಣನ್ (ಸಂಗ್ರಹ) ಶ್ರೀ. ವಿ.ಮ.ಲ.ಕ. ಹುಬ್ಬಳ್ಳಿ. ನೆರವು, ಶ್ರೀ ಪಿ. ಎಸ್. ಹಿರೇಮಠ

೬೬. ಶ್ರೀ ಜಿ.ಡಿ. ಗೋಂದೇಕರ ಹಸ್ತಾಕ್ಷರ (ಸಂಗ್ರಹ) ಶ್ರೀ. ವಿ.ಮ.ಲ.ಕ. ಹುಬ್ಬಳ್ಳಿ. ನೆರವು, ಶ್ರೀ ಪಿ. ಎಸ್. ಹಿರೇಮಠ

೬೭. ಜನರಲ್ ಕೆ.ಎಂ.ಕಾರ್ಯಪ್ಪ ಹಸ್ತಾಕ್ಷರ, ಸರಾಫಗಟ್ಟಿಯಲ್ಲಿ ಕಲಾಮಂದಿರ ಇರುವ ಸಂದರ್ಭದಲ್ಲಿ ಭೆಟ್ಟಿ ಇತ್ತ ವೇಳೆಯಲ್ಲಿಯ ಹಸ್ತಾಕ್ಷರ ಸಂಗ್ರಹ : ಶ್ರೀ. ವಿ.ಮ.ಲ.ಕ. ಹುಬ್ಬಳ್ಳಿ.

೬೮. ಶ್ರೀ ಆರ್.ಜಿ. ರಾಯ್ಕರ : ಬಸವರಾಜ ಹಳಿಜೋಳ (ಪ್ರ) ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಪುಟ-೬

[illegible]



ಬಸವರಾಜರಿಗೆ ತಾನು ಗುರುಮುಖದಿಂದ ಚಿತ್ರಕಲೆಯ ಅಭ್ಯಾಸ ಮಾಡಬೇಕೆಂಬ ಒಂದೇ ಜಿಜ್ಞಾಸೆ ಕಾಡುತ್ತಿತ್ತು, ಚಿತ್ರಕಲೆಯ ಬಗೆಗಿನ ತೀವ್ರವಾದ ಆಸಕ್ತಿಯಿಂದ ಮುಂಬೈಯ ಕಲಾಶಾಲೆಗೆ ಸೇರಬೇಕೆಂದು ಬಯಸಿದರು. ಅದು ಕೂಡಿ ಬಂದಿತು. ಇದೇ ಸಮಯದಲ್ಲಿ ಭಾರತದ ಮಹೋನ್ನತ ಕಲಾವಿದ ಡಾ. ಮಿಣಜಗಿ ಹುಬ್ಬಳ್ಳಿಗೆ ಬಂದು ಕಲಾ ಮಂದಿರವನ್ನು ಸರಾಫಗಟ್ಟಿಯ ಸಿಂಧಗಿಯವರ [69] ಕಟ್ಟಡದ ಅಟ್ಟದ ಮೇಲೆ ಆರಂಭಿಸಿದ್ದರು, 1955 ರಲ್ಲಿ ಬಸವರಾಜರನ್ನು ಕಲಾಮಂದಿರದಲ್ಲಿಯೇ ಉಪನ್ಯಾಸಕರಾಗಿ ನೇಮಕರಾದರು. ಮಿಣಜಗಿಯವರ ನೆರವಿನಿಂದ ಬಸವರಾಜರು ಮುಂಬೈಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್‌ದಲ್ಲಿ ಪೇಂಟಿಂಗ್ ಪದವಿಯನ್ನು 1974 ರಲ್ಲಿ ಪೂರೈಸಿದರು. [70] ಡಾ. ಮಿಣಜಗಿಯವರ ಶೈಲಿಯನ್ನು ಅಳವಡಿಸಿಕೊಂಡು ಕಲಾಶಾಲೆಗಾಗಿ, ವಿದ್ಯಾರ್ಥಿಗಳಿಗಾಗಿ ಪ್ರಶಂಸನೀಯ ಕಾರ್ಯ ಮಾಡುತ್ತಿದ್ದಂತೆ ಅವರ ದೈವಿದತ್ತವಾದ ಕಲೆಯು ಅವರ ಬದುಕಿನ ಅವಿಭಾಜ್ಯ ಅಂಗವಾಯಿತು. ಡಾ. ಮಿಣಜಗಿಯವರು ಕಲಾ ಮಂದಿರದ ಪ್ರಾಚಾರ್ಯ ಸ್ಥಾನದಿಂದ ನಿವೃತ್ತರಾಗಿ ತಮ್ಮ ಶಿಷ್ಯ ಬಸವರಾಜ ಹಳಿಜೋಳ ಅವರಿಗೆ 1965 ಸಪ್ಟೆಂಬರ 30 ರಂದು ಪ್ರಾಚಾರ್ಯರಾಗಿ ಬಡ್ತಿಯನ್ನು ನೀಡಿದರು. ಅವರು ಈ ಹುದ್ದೆ ವಹಿಸಿಕೊಂಡ ಮೇಲೆ ಕಲೆಗೂ ಬದುಕಿಗೂ ಒಂದು ನಿಶ್ಚಿತ ಸ್ಥಾನ ಹಾಗೂ ರೂಪಗಳು ಬಂದವು. ಹಿರಿಯ ಹುದ್ದೆಗೆ ಬಂದ ಮೇಲೆ ಕಲಾವಿದರ ಸ್ನೇಹವು ಬೆಳೆಯಿತು. ಆದೊಂದು ಪರಂಪರೆಯೇ ನಿರ್ಮಾಣವಾಯಿತು. ಇದೇ ಕಲಾಮಂದಿರ ಇಂದು ಶ್ರೀ ವಿಜಯಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯವಾಗಿ ಮಾರ್ಪಟ್ಟಿದೆ. ಚಿಟಗುಪ್ಪಿ ಆಸ್ಪತ್ರೆಯ ಆವರಣದಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿದೆ. ಇಂದು ಡಾ. ಮಿಣಜಗಿಯವರ ಮಹಾವಿದ್ಯಾಲಯ ಈ ಸ್ಥಿತಿಗೆ ಕಾರಣರಾದವರು ಶ್ರೀ ಬಸವರಾಜ ಹಳಿಜೋಳ ಪ್ರಾಚಾರ್ಯರು, ಇದೇ ಶಾಲೆಯ ಶಿಷ್ಯ ಗುರು ಹಾಗೂ ಪ್ರಾಚಾರ್ಯರು ಯಾವ ಪ್ರಚಾರ-ಆಡಂಬರಗಳಿಗೆ ಮಾರು ಹೋಗದೇ ಪ್ರಚಾರ ಮಾಧ್ಯಮದಿಂದ, ಕಲೆಗಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದರು.

ಈ ಸಂಸ್ಥೆಯ ಶ್ರೇಯೋಭಿವೃದ್ದಿಗೆ ಶ್ರೀ ಬಸವರಾಜ ಹಳಿಜೋಳ ಅವರ ಕೊಡುಗೆ ಅಪಾರ ವಾದದ್ದು ಇದೇ ಕಲಾ ಮಂದಿರದಲ್ಲಿ 34 ವರ್ಷ ಸೇವೆ ಸಲ್ಲಿಸಿದ ಅವರು 14 ವರ್ಷಗಳು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು 1979 ಜುಲೈ 3 ರಂದು ಪ್ರಾಚಾರ್ಯ ಹುದ್ದೆಯಿಂದ ನಿವೃತ್ತರಾದರು. ಡಾ. ಮಿಣಜಗಿ ಕಲಾ ಮಂದಿರವನ್ನು 1967 ರಲ್ಲಿ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸಲು ಹಗಲಿರುಳು ದುಡಿದು ತಮ್ಮ ಕನಸನ್ನು ನನಸಾಗಿ ಮಾಡಿದರು. 1982 ಜನೇವರಿ 14 ರಂದು ನಿಧನಹೊಂದಿದರು.

ಬಸವರಾಜ ಹಳಿಜೋಳ ಕಲಾ ನೈಪುಣ್ಯತೆ ಕುರಿತು ಹೇಳುವುದಾದರೆ ಅವರ ಚಿತ್ರ ರಚನೆಯಲ್ಲಿ ಯಾವಾಗಲೂ ವೈವಿಧ್ಯತೆ ಸಂಯೋಜನಾ ಚತುರತೆ ಪ್ರಮುಖ ಪಾತ್ರ ವಹಿಸಿದರೆ, ರೇಖಾ ಚಿತ್ರ, ಸ್ಮರಣ ಚಿತ್ರ, ತೈಲ ಚಿತ್ರ, ಜಲವರ್ಣ ಹಾಗೂ ಪೆನ್ಸಿಲ್ ಮಾಧ್ಯಮ ನಿಸರ್ಗ ಚಿತ್ರಗಳ ರಚನೆಯಲ್ಲಿ ಅವರು ಪ್ರಭುತ್ವವನ್ನು ಅವರ ಕಲಾ ಜೀವನಕ್ಕೆ ಮೆರಗು ನೀಡಿದ ಅವರ ಮೇರು ಕೃತಿಗಳೆಲ್ಲಾ ವೈಶಿಷ್ಯಪೂರ್ಣವಾಗಿದ್ದು ಮೊದಲ ನೋಟಕ್ಕೆ ಮನಸೂರೆಗೊಳ್ಳುವ ಶಕ್ತಿ ಸಾಕ್ಷಾತ್ಕಾರತೇ ಪಡೆದಿವೆ.

---

೬೯. ಶ್ರೀ ಆರ್.ಜಿ. ರಾಯ್ಕರ : ಬಸವರಾಜ ಹಳಿಜೋಳ (ಪ್ರ) : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಪುಟ -೦೬.

೭೦. ಶ್ರೀ ಆರ್.ಜಿ. ರಾಯ್ಕರ : ಬಸವರಾಜ ಹಳಿಜೋಳ (ಪ್ರ) : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಪುಟ -೦೬.



ಕಂಟೆಪ್ಪಗೌಡರ

ಚಿತ್ರಕಾರನಿಗೆ ಪದಗಳು ಬೇಕಿಲ್ಲ ! ಆತನಿಗೆ ಬೇಕಾದುದು ಸೂಕ್ಷ್ಮ ದೃಷ್ಟಿಯ ವಿಮರ್ಶನಾ ಶಕ್ತಿ ಪ್ರಕೃತಿಯಲ್ಲಿ ಕಂಡುಬರುವ ವರ್ಣ, ರೂಪ ಮತ್ತು ಪ್ರಮಾಣಗಳನ್ನು ವ್ಯಕ್ತಗೊಳಿಸುವುದು ಮಾತ್ರವಲ್ಲದೇ ತನ್ನ ಮನದೊಳಗೆ ಮಾಡಿದ ಉತ್ತಮ ಧ್ಯೇಯಗಳನ್ನು ಕೂಡ ಧ್ಯೋತಗೊಳಿಸುವುದು. ಕವಿಯು ಸುಲಲಿತ ಛಂದೋಬದ್ಧವಾದ ಮಾತುಗಳ ಜೋಡಿಕೆಯಿಂದ ಇಂಥ ಸೊಬಗಿನ ಸೃಷ್ಟಿ ಮಾಡಿದರೆ ಕಲಾವಿದನು ತನ್ನ ರೇಖೆಗಳಿಂದ ಬಣ್ಣಗಳಿಂದ ಆ ಅತಿಶಯ ಸನ್ನಿವೇಶವನ್ನು ಕಲ್ಪಿಸಿ ಆನಂದವನ್ನು ಮೂರ್ತಗೊಳಿಸುವನು. ಇಂಥಹ ವ್ಯಕ್ತಿತ್ವವನ್ನು ಕಂಡುಕೊಂಡ ಕಂಟೆಪ್ಪಗೌಡರು ಹುಬ್ಬಳ್ಳಿ ತಾಲೂಕಿನ ಅದರಗುಂಚಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಅದರಗುಂಚಿಯಲ್ಲಿ ಮುಗಿಸಿ ಪ್ರೌಢ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪೂರೈಸಿದರು. ಅಂತೆಯೇ ಬಾಲ್ಯದಲ್ಲಿಯೇ ಕಲೆಯ ಆಸಕ್ತಿಯನ್ನು ಹೊಂದಿದ್ದ ಕಂಟೆಪ್ಪಗೌಡರು ಹುಬ್ಬಳ್ಳಿಯಲ್ಲಿಯೇ ಮಹಾನ್ ಕಲಾವಿದನಿಂದ ಸ್ಥಾಪಿತವಾಗಿದ್ದ ಈ ಕಲಾ ಮಂದಿರದಲ್ಲಿ ಡಾ. ಮಿಣಜಗಿಯವರ ಶಿಷ್ಯತ್ವವನ್ನು ಪಡೆದು ಆರ್ಟ ಮಾಸ್ಟರ ಹಾಗೂ ಚಿತ್ರಕಲೆಯಲ್ಲಿ ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ಪೂರೈಸಿದರು. ಚಿತ್ರಕಲಾ ಶಿಕ್ಷಣವನ್ನು ಪೂರೈಸಿದ ನಂತರ ಡಾ. ಮಿಣಜಗಿಯವರ ಆದೇಶದಂತೆ ಅ. ನ. ಸುಬ್ಬರಾವ ಸ್ಥಾಪಿಸಿದ ಕಲಾ ಮಂದಿರದಲ್ಲಿ ಉಪನ್ಯಾಸ ವೃತ್ತಿಯನ್ನು ಪ್ರಾರಂಭಿಸಿದರು. ಸರಕಾರಿ ಆರ್ಟ ಆ್ಯಂಡ ಕ್ರಾಫ್ಟ ಕಲಾ ಶಾಲೆಯು 1965 ರಲ್ಲಿ ಡಾವಣಗೆರೆಯಲ್ಲಿ ಪ್ರಾರಂಭಗೊಂಡಿತು. ಆಗ ಬೆಂಗಳೂರಿನಿಂದ ಡಾವಣಗೆರೆಗೆ ತಮ್ಮ ಸೇವೆಯನ್ನು ನೀಡಲು ಡಾ. ಮಿಣಜಗಿಯವರ ಮಾತಿನಂತೆ ಬಂದು ನೆಲೆಸಿದರು. ತದನಂತರ ಸರಕಾರದ ನಿಯಮಾವಳಿಗನುಸಾರವಾಗಿ ಇವರನ್ನು ಇಲ್ಲಿ ಪೂರ್ಣ ಸೇವೆಗೆ ಬಳಸಿಕೊಳ್ಳದೇ ಇವರುವದರಿಂದ ಪುನಃ ಅ.ನ. ಸುಬ್ಬರಾವ ಕಲಾ ಮಂದಿರದ ಸೇವೆಗೆ ನಿಯುಕ್ತಗೊಳಿಸಿದರು. ಆಗಲೇ ಮಿಣಜಗಿಯವರು ಸ್ಥಾಪಿಸಿದ ಹುಬ್ಬಳ್ಳಿಯ ಕಲಾಶಾಲೆಯಲ್ಲಿ ಅದೇ ತಾನೇ ಬಸವರಾಜ ಹಳಿಜೋಳ ಪ್ರಾಚಾರ್ಯ ಸ್ಥಾನದಿಂದ ನಿವೃತ್ತಿಯಾಗಿದ್ದರು. ಇಂಥಹ ಸಂದರ್ಭದಲ್ಲಿ ಪ್ರಾಚಾರ್ಯರ ನೇಮಕಾತಿಯು ಗೊಂದಲಮಯವಾಗಿದ್ದರಿಂದ ಇಲ್ಲಿಯ ಉಪನ್ಯಾಸಕರಿಗೆ ಬಡ್ತಿ ನೀಡದೇ ಬೆಂಗಳೂರಿನಿಂದ ಶ್ರೀ ಕಂಟೆಪ್ಪಗೌಡರ ಇವರನ್ನು ಕರೆಯಿಸಿ ಪ್ರಾಚಾರ್ಯ ಹುದ್ದೆಯನ್ನು ನೀಡಿ ಸೇವೆ ಸಲ್ಲಿಸಲು ಡಾ. ಮಿಣಜಗಿಯವರು ಅವಕಾಶ ಕಲ್ಪಿಸಿಕೊಟ್ಟರು. ಇವರೊಬ್ಬರು ಅಚ್ಚುಕಟ್ಟಿನ ವ್ಯಕ್ತಿತ್ವವುಳ್ಳವರಾಗಿದ್ದರು ಸಂಗೀತ ಮತ್ತು ನಾಟಕದ ಅಭಿರುಚಿವುಳ್ಳವರಾಗಿದ್ದರು. ಇವರು ರಚಿಸಿದ ರೇಖಾ ಚಿತ್ರಗಳು ಗಾಂಧಿಜಿಯವರನ್ನು ಕುರಿತು ರಚಿಸಿದ್ದಾರೆ. ಅಂತೆಯೇ ನಮ್ಮ ಭಾರತ ಭೂಮಿಯ ಪರಕೀಯರ ನಾಗರೀಕತೆಯ ಪ್ರವಾಹಕ್ಕೆ ಸಿಕ್ಕಿ ನುಚ್ಚುನೂರಾಗಿ ಹೋಗಿದೆ. ಇದರಿಂದ ನಮ್ಮ ಸಂಸ್ಕೃತಿಗೂ, ಕಲೆಗೂ ದೊಡ್ಡ ಆಘಾತವಾಗಿ ನಮ್ಮ ಅಸ್ತಿತ್ವವು ನಾಶವಾಗುತ್ತಾ ಬಂದಿದೆ. ಇದು ಕಲಾಭಿವೃದ್ಧಿಯ ದೃಷ್ಟಿಯಿಂದ ಕಾರ್ಯ ಮಾಡಬೇಕಾದವರು ಕಲಾಸೌಧವನ್ನು ಕಟ್ಟುವುದಕ್ಕೆ ಮೊದಲು ಅಡಿಪಾಯವನ್ನು ಭದ್ರಪಡಿಸಬೇಕು. ಮಕ್ಕಳಲ್ಲಿರುವ ಕಲಾಂಕುರಗಳನ್ನು ಉತ್ತಮ ರೀತಿಯಲ್ಲಿ ಬೆಳೆಸಿ, ಅದರ ಕ್ರಿಯಾ ಶಕ್ತಿಯನ್ನು ಅಭಿವೃದ್ಧಿಗೊಳಿಸಬೇಕು ಜನರಲ್ಲಿನ ಕಲಾಭಿಮಾನವನ್ನು ಬೆಳೆಸಿ ನಾನಾ ಬಗೆಯ ಕಲಾಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳುವುದು ಅಗತ್ಯದ ಕಾರ್ಯ ನಮ್ಮ ಪ್ರಾಚೀನ ಕಲೆಯ ಮಾದರಿಗಳನ್ನು ಕಾಯ್ದುಕೊಳ್ಳುವುದಕ್ಕೂ ಅಹರ್ನಿಶಃ ಪ್ರಯತ್ನಿಸಬೇಕಾಗಿದೆ. ಅಳಿಸಿಹೋಗಿರುವ ಭಾರತೀಯ ಕಲೆಯ ಪುನರುದ್ಧಾರ ಕಾರ್ಯವಾದರೂ ಅಲಕ್ಷ್ಯ ಮಾಡತಕ್ಕುದಲ್ಲ.[71]

---

೭೧. ಡಾ. ಶಿವರಾಂ ಕಾರಂತ (ಸಂ) : ಕಲಾಪ್ರಪಂಚ, ಸಂ. ೧, ಪುಟ -೧೯. ೧೯೩೦. ಫೆಬ್ರುವರಿ.

[illegible]



ಡಾ. ಮಿಣಜಗಿಯವರ ಹೆಸರಿಗೆ ಅಗೌರವ ತೋರಿಸದೇ ಅತ್ಯಂತ ಜಾಣಾಕ್ಷತನದಿಂದ ತಮ್ಮ ಸೇವೆಯನ್ನು ಸಲ್ಲಿಸಿದರು. 1986 ರಲ್ಲಿ ತಮ್ಮ ಕೊನೆಯುಸಿರನ್ನು ಎಳೆದರು. ಅವರು ರಚಿಸಿದ ರೇಖಾ ಚಿತ್ರಗಳು ಈಗಲೂ ಕಲಾಮಂದಿರದ ಸಂಗ್ರಹದಲ್ಲಿವೆ.

ಶ್ರೀ ಪಿ. ಎಸ್. ಹಿರೇಮಠ

"ಇದುವರೆಗೂ ನೀ ನನ್ನ ಕೈಹಿಡಿದು ನಡೆಸಿರುವೆ
ಇನ್ನಾದರೂ ನನ್ನ ಕೈ ಬಿಡದಿರು [72]

ಎಂದು ಕವಿ ಮಾಡುವುದು ಈ ಕೋರಿಕೆ ಬೇರೆಯದೇ ರೀತಿಯದು, ತನ್ನ ಬಾಳಿನಲ್ಲಿ ಬೇರೊಂದು ಶಕ್ತಿ ಕೃಪೆಗೈದು ತನ್ನನ್ನು ಮೇಲಕ್ಕೆತ್ತಿದ ಅನುಭವನ್ನು ಕುರಿತಾಗಿ ತಿಳಿದುಕೊಂಡಾಗ, ಪಿ. ಎಸ್. ಹಿರೇಮಠ ಇವರಿಗೆ ಪ್ರಾಚಾರ್ಯ ಸೇವೆಯು ಕಂಟೆಪ್ಪಗೌಡರ ಸಮಯದ ಸ್ಥಾನದಲ್ಲಿಯೇ ಲಭಿಸಬೇಕಾಗಿತ್ತು. ಆದರೆ ಮಿಣಜಗಿಯವರ ಭಾವನೆಯಂತೆ ಇವರ ಸೇವೆ ಆ ಒಂದು ಸಂದರ್ಭದಿಂದ ಮುಂದುಡಲ್ಪಟ್ಟಿತ್ತು. ಶ್ರೀಯುತ ಪಿ.ಎಸ್. ಹಿರೇಮಠ ಹುಬ್ಬಳ್ಳಿ ತಾಲೂಕಿನ ಬ್ಯಾಹಟ್ಟಿ ಗ್ರಾಮದಲ್ಲಿ 1940 ರಲ್ಲಿ ಜನಿಸಿದರು. ಇವರು ಬಾಲ್ಯ ಶಿಕ್ಷಣ ಬ್ಯಾಹಟ್ಟಿಯಲ್ಲಿ ಪೂರೈಸಿದರು. ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಕಿತ್ತೂರಲ್ಲಿ ನೆರವೇರಿತು. ಚಿತ್ರಕಲಾ ಶಿಕ್ಷಣದ ಸದಾಅಭಿರುಚಿವುಳ್ಳ ಇವರು ಪ್ರೌಢ ಶಾಲೆಯ ನಂತರ ಚಿತ್ರಕಲಾ ವ್ಯಾಸಂಗವನ್ನು ಡಾ. ಮಿಣಜಗಿಯವರು ಸ್ಥಾಪಿಸಿದ ಹಳೇಯ ಸರಾಫಗಟ್ಟಿಯ ಕಲಾ ಮಂದಿರದಲ್ಲಿ ಮಿಣಜಗಿಯವರ ಶಿಷ್ಯರಾಗಿ ಕಲೆಯಲ್ಲಿ ಆರ್ಟಮಾಸ್ಟರ್ ಹಾಗೂ ಡಿಪ್ಲೋಮಾ ಪೇಂಟಿಂಗ್ ಶಿಕ್ಷಣವನ್ನು ಪಡೆದರು. ಶಿಕ್ಷಣ ಪಡೆದ ನಂತರ ಇದೇ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಕಂಟೆಪ್ಪಗೌಡರ ನಿಧನದ ನಂತರ ಬಡ್ತಿ ಹೊಂದಿ ಪ್ರಾಚಾರ್ಯರಾಗಿ ಕಲಾಶಾಲೆಯ ಶ್ರೇಯಸ್ಸಿಗೆ ಕಂಕಣ ಬದ್ಧರಾಗಿ ನಿಂತರು.

"ಸರ್ವರಿಗೂ ಕಲೆಯಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸುವುದಾಗಲಿ, ಕಲಾವೃತ್ತಿಯನ್ನು ಅವಲಂಬಿಸುವುದಾಗಲಿ ಸಾಧ್ಯವಾಗದಿರಬಹುದು ಅದು ಅನವಶ್ಯಕವಾಗಿ ಕಾಣಬಹುದು ಆದರೆ ಕಲೆಯ ಗಂಧವಿಲ್ಲ, ಕಲೆಯನ್ನರಿಯುವ ಸಾಮರ್ಥ್ಯವಿಲ್ಲ ಎನ್ನಲು ಅವಕಾಶವಿಲ್ಲ, ಕಲೆಯು ಜನಸಾಮಾನ್ಯರ ಆಸ್ತಿ ಇದನ್ನು ಅವರವರ ಇಚ್ಛೆ ಮತ್ತು ಉಪಾಸನೆಗನುಸಾರವಾಗಿ ಉಪಯೋಗಿಸಬಹುದು. ಈ ಅಧಿಕಾರ ಸರ್ವರಿಗೂ ಉಂಟು" [73] ಅಂಥವರಲ್ಲಿ ಕೆಲವರು ಕಲಾವಿದರಾಗಿ ಎತ್ತರಕ್ಕೆ ಬೆಳೆಯುತ್ತಾರೆ. ಮತ್ತೇ ಕೆಲವರು ಕಲಾವಿದರನ್ನು ಬೆಳೆಸುತ್ತಾರೆ. ಪಿ. ಎಸ್. ಹಿರೇಮಠರವರು ತಾವು ಕಲಾವಿದರಾಗಿ ಬೆಳೆದರು, ಹಲವಾರು ಕಲಾವಿದರನ್ನು ಬೆಳೆಸಿದರು. ಕಲಾ ಮಂದಿರದಲ್ಲಿ ಮೂರು ದಶಕಗಳ ಕಾಲಾವಧಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ, ಮತ್ತು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಜನಸಾಮಾನ್ಯರಲ್ಲಿ ಚಿತ್ರಕಲೆಯ ಕುರಿತು ಅಭಿರುಚಿ ಬೆಳೆಯುವಲ್ಲಿ ಹಲವು ಕಾರ್ಯಕ್ರಮುಗಳನ್ನು ಸುವ್ಯವಸ್ಥಿತವಾಗಿ ನಡೆಸಿದ್ದಾರೆ. ಕಲಾಮಂದಿರ ನಿರ್ಮಾಣದಲ್ಲಿ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದ್ದಾರೆ. [74] ರಾಜ್ಯದ ಚಿತ್ರಕಲಾ ಶಿಕ್ಷಕರ ಒಳಿತಿಗಾಗಿ ಶ್ರೀ ಪಿ.ಎಸ್. ಹಿರೇಮಠರವರು ಮಾಡಿದ ಕೆಲಸಗಳು ಹಲವು. ರಾಜ್ಯ ಚಿತ್ರಕಲಾ ಮಹಾವಿದ್ಯಾಲಯ ಸಿಬ್ಬಂದಿ ಸಂಘವನ್ನು ಸಂಘಟಿಸಿ ಅದರ ಅಧ್ಯಕ್ಷತೆಯನ್ನು ವಹಿಸಿಕೊಂಡು ರಾಜ್ಯದ ಎಲ್ಲ ಕಲಾಶಾಲೆಗಳ ಸಿಬ್ಬಂದಿಗಳಿಗೆ ಪ್ರತಿಶತ

---

೭೨. ಕುವೆಂಪು : ಅಗ್ನಿ ಹಂಸ , ಪುಟ - ೦೬.
೭೩.. ಕಲಾ ಸು. ೬.. ಸಂ. ೩.. ಪುಟ -೮೩.. ೧೯೩.೧ ಸಪ್ಟೆಂಬರ.
೭೪. ಪ್ರಶಸ್ತಿ ಪ್ರದಾನ ಸಮಾರಂಭ -೨೦೦೨ : ಕರ್ನಾಟಕ ಲಲಿತ ಕಲಾ ಅಕಾಡೆಮಿ. ಬೆಂಗಳೂರು



100 % ವೇತನ ದೊರಕಿಸಿ, ಸರಿಯಾದ ವೇತನ ಶ್ರೇಣಿ ಲಭಿಸುವಂತೆ ಹೋರಾಟ ಮಾಡಿದ್ದು ಇವುಗಳಲ್ಲಿ ಅತ್ಯಂತ ಪ್ರಮುಖವಾದವು.ಅಂತೆಯೇ ಇಂದು ನಿವೃತ್ತಿಯಾದವರು ಕೂಡ ನಿವೃತ್ತಿ ವೇತನ ಪಡೆಯುತ್ತಿದ್ದು ಗಮನಾರ್ಹವಾದ ಸಂಗತಿಯಾಗಿದೆ.

ಇವರ ಅಧ್ಯಕ್ಷತೆಯ ಸಂದರ್ಭದಲ್ಲಿಯೇ ರಾಜ್ಯ ಮಟ್ಟದ ಜಲವರ್ಣ ಕಲಾಶಿಬಿರವನ್ನು ಹಂಪೆಯಲ್ಲಿ ಎರಡು ಬಾರಿ ಅತ್ಯಂತ ಯಶಸ್ವಿಯಾಗಿ ಸಂಘಟಿಸಿದ್ದು ಬಹು ಮುಖ್ಯವಾಗಿದೆ. ಕಲಾಶಾಲೆಗಳು ನಡೆಸುವ ಪರೀಕ್ಷೆ ಪದ್ಧತಿಯು ಪರೀಕ್ಷಾ ಮಂಡಳಿಯಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದರೆ ವಿದ್ಯಾರ್ಥಿಗಳ ದೃಷ್ಟಿಯಿಂದ ತುಂಬಾ ಶ್ರೇಷ್ಠ ಮಟ್ಟದ್ದಾಗಿರುತ್ತದೆ ಎಂಬ ಕನಸು ಹೊಂದಿದ್ದರು. ಅಂತೆಯೇ ಕನ್ನಡ ವಿಶ್ವವಿದ್ಯಾಲಯದ ಸಂವಿಧಾನದ ಕರ್ತೃ ಡಾ. ಒಡೆಯರ ಅವರನ್ನು ಕೂಡ ಸಂದರ್ಶಿಸಿ ಸಮಸ್ಯೆಯ ಬಗ್ಗೆ ತಿಳಿಸಲ್ಪಟ್ಟಿದ್ದರು ಎಂಬುದು ಗಮನಿಸಲ್ಪಡುವ ಅಂಶವೇ ಆಗಿದೆ. ಶ್ರೀ ಪಿ. ಎಸ್. ಹಿರೇಮಠರವರು 1998 ರಲ್ಲಿ ತಮ್ಮ ಸೇವೆಯಿಂದ ನಿವೃತ್ತಿಯಾದರು.

ಶ್ರೀಮತಿ ಲತಾರಾಣಿ ವ್ಹಿ. ಮಲ್ಹಾರ

ಯಾವುದೇ ಅಡಿಪಾಯ ಭವ್ಯ ಮಹಡಿಯನ್ನು ಸದೃಢಗೊಳಿಸುತ್ತದೆ. ಅಡಿಪಾಯಕ್ಕೆ ಮಹಡಿಯ ಭವ್ಯತೆ ಶರಣು ಎನ್ನುತ್ತದೆ ಹಾಗೆಯೇ ಇಲ್ಲಿ ಕಲಾ ಶಿಕ್ಷಣದ ಅಡಿಪಾಯಕ್ಕೆ ಚಿತ್ರಕಲೆ ಚೆತೋಹಾರಿಯಾಗಿದೆ. ಪ್ರಾರಂಭದಲ್ಲಿ ಕಲಾಶಾಲೆಯನ್ನು ಡಾ. ಮಿಣಜಗಿಯವರು ಸದೃಢಗೊಳಿಸಿದರೆ, ಬಸವರಾಜ ಹಳಿಜೋಳ, ಕಂಟೆಪ್ಪಗೌಡರ ಹಾಗೂ ಪಿ.ಎಸ್. ಹಿರೇಮಠ ರವರು ಅದಕ್ಕೆ ಭವ್ಯತೆ ನೀಡಿದ್ದಾರೆ. ಅಂತೆಯೇ ಅದನ್ನು ಮುಂದುವರೆಸುವ ಹೊಣೆಯನ್ನು ಲತಾರಾಣಿ ಮಲ್ಹಾರ ಜವಾಬ್ದಾರಿಯುತವಾಗಿ ಮುಂದುವರೆಸಿದ್ದಾರೆ. ಶ್ರೀಮತಿ ಲತಾರಾಣಿ ಮಲ್ಹಾರ ಅವರು 1956 ಜುಲೈ 26 ರಂದು ದಾಂಡೇಲಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಮಾಧ್ಯಮಿಕ ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿದರು. ಸಂಗೀತ ಹಾಗೂ ನೃತ್ಯಕಲೆಗಳಲ್ಲದೇ ಚಿತ್ರಕಲೆಯ ಬಗ್ಗೆ ಸದಭಿರುಚಿಯನ್ನು ಹೊಂದಿದ್ದರು. ಚಿತ್ರಕಲಾ ಶಿಕ್ಷಣವನ್ನು 1979 ರಲ್ಲಿ ಆರ್ಟ ಮಾಸ್ಟರ್ ಹಾಗೂ 1985 ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೋಮಾವನ್ನು ಪೂರೈಸಿದರು. 1978 ರಲ್ಲಿ ಹಿಂದಿ ಪ್ರವೀಣ, 1975 ರಲ್ಲಿ ನೃತ್ಯ ವಿಶಾರದ ವ್ಯಾಸಂಗವನ್ನು ಪೂರೈಸಿದರು.[75] 1986 ರಲ್ಲಿ ಶ್ರೀ ವಿಜಯಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆಗೆ ಹಾಜರಾದರು. ಇದಕ್ಕಿಂತ ಪೂರ್ವದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಹುಬ್ಬಳ್ಳಿಯಲ್ಲಿಯೇ ಕಾರ್ಯ ನಿರತರಾಗಿದ್ದರು. 1995 ರಿಂದ 1998 ರ ವರೆಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅಂತೆಯೇ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಮೂರು ವರ್ಷ ಸೇವೆ ಸಲ್ಲಿಸಿದ್ದಾರೆ. ಅದರಂತೆ ಸಿನಿಮಾದಲ್ಲಿ ನಟನೆ ಮಾಡಿದ್ದು, ಕನ್ನಡದಲ್ಲಿ ಕಿತಾಪತಿ, ಹಿಂದಿಯಲ್ಲಿ ಜಿದ್ದಗಳಲ್ಲಿ ಪಾತ್ರವನ್ನು ಅಭಿನಯದ ಮೂಲಕ ತಮ್ಮತನವನ್ನು ಗುರುತಿಸಿದ್ದಾರೆ. ಸುರೇಶ ಹೆಬ್ಳೀಕರ ನಿರ್ದೇಶನದ ಚಮತ್ಕಾರ ಚಿತ್ರದಲ್ಲಿ ನಟಿಸಿದ್ದಾರೆ. 1990 ರಲ್ಲಿ ಹಾಗೂ 2000 ನೇ ಮೇದಲ್ಲಿ ಜರುಗಿದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಕ್ಕಾಗಿ ಜರ್ಮನ್ ದೇಶಕ್ಕೆ ಭೇಟಿ ಇತ್ತು

---

೭೫. ಕರ್ನಾಟಕ ಕಲಾವಿದರ ಪರಿಚಯಾವಳಿ : ಕರ್ನಾಟಕ ಲಲಿತ ಕಲಾ ಅಕಾಡೆಮಿ : ಪುಟ ೧೨೨. ಬೆಂಗಳೂರು.



ಕಾರ್ಯಕ್ರಮ ನೀಡಿದ್ದಾರೆ. ತಮ್ಮ ಆಘಾದ ಅನುಭದದಿಂದ ಮಹಾವಿದ್ಯಾಲಯದ ಏಳ್ಗೆಗಾಗಿ ಕಟ್ಟಡದ ನೆರವಿಗಾಗಿ ಎರಡು ಲಕ್ಷ ರೂ. ದೇಣಿಗೆ ರೂಪದಲ್ಲಿಯೂ ಸಹಿತ ದಾನಿಗಳನ್ನು ಕೊಡಮಾಡಿದ್ದಾರೆ. 1998 ರಲ್ಲಿ ಶ್ರೀ ಪಿ. ಎಸ್. ಹಿರೇಮಠ ಅವರ ನಿವೃತ್ತಿಯ ನಂತರ ಆ ಸ್ಥಾನವನ್ನು ವಹಿಸಿಕೊಂಡು ಮಹಾವಿದ್ಯಾಲಯದಲ್ಲಿ ಸದಾ ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಅದರಂತೆ ಸಂಸ್ಥೆಯ ಜಗದ್ಗುರುಗಳು, ಗೌರವ ಕಾರ್ಯಾಧ್ಯಕ್ಷರು, ಸದಸ್ಯರು ಹಾಗೂ ವ್ಯವಸ್ಥಾಪಕರು, ಪ್ರಾಚಾರ್ಯರಿಗೆ ಸದಾ ಬೆನ್ನೆಲುಬಿನಂತೆ ನಿಂತು ಯಶಸ್ಸಿಗೆ ಪ್ರಮುಖ ಪಾತ್ರ ವಹಿಸಿದ್ದನ್ನು ಗಮನಿಸಬಹುದಾಗಿದೆ. ಅಲ್ಲದೇ ಇಲ್ಲಿಯ ಸಿಬ್ಬಂದಿ ವರ್ಗವೂ ಕೂಡ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಖ್ಯಾತಿಯನ್ನು ಗಳಿಸಿದವರಾಗಿದ್ದಾರೆ. ವಿದ್ಯಾರ್ಥಿಗಳು ಕೂಡ ಅನೇಕ ಪಠ್ಯೇತರ ಚಟುವಟಿಕೆಗಳಲ್ಲಿ ಪಾತ್ರ ವಹಿಸಿದ್ದಲ್ಲದೇ ಕಲಾಶಿಬಿರ, ಕಲಾ ಉಪನ್ಯಾಸ, ಕಲಾ ಪ್ರದರ್ಶನಗಳನ್ನು ನೆರವೇರಿಸಿ ಮಹಾವಿದ್ಯಾಲಯದ ಕೀರ್ತಿಗೆ ಪಾತ್ರರಾಗಿದ್ದಾರೆ.

ಸ್ನೇಹಶೀಲರೊಂದಿಗೆ ಮಿಣಜಗಿಯವರ ಬದುಕು :


ಮಿಣಜಗಿಯವರು ಕಲಾ ಶಾಲೆಯ ಅವಧಿಯ ನಂತರ ತಮ್ಮ ಅತ್ಯಂತ ಹೆಚ್ಚಿನ ಸಮಯವನ್ನು ಸ್ನೇಹಿತರ ಕೂಡ ಕಳೆಯುತ್ತಿದ್ದರು. ಒಬ್ಬರೇ ಇದ್ದು ಅಡ್ಡಾಡಿರುವುದು ಗೊತ್ತೇ ಇರಲಿಲ್ಲವೆಂದರೂ ಅತಿಶಯೋಕ್ತಿಯೇನಲ್ಲ. ಅವರು ಅತ್ಯಂತ ಸ್ನೇಹಿಶೀಲರಾಗಿದ್ದುದ್ದೇ ಇದಕ್ಕೆ ಕಾರಣವಾಗಿದ್ದಿತು. ದಿ. ಅ.ನ.ಕೃಷ್ಣರಾಯರು, ಡಾ. ಮಿಣಜಗಿಯವರು ಅತ್ಯಂತ ನಿಕಟವಾಗಿದ್ದರು. ಕೃಷ್ಣರಾಯರು ಕೂಡ ಸ್ವಭಾವತಃ ಸ್ನೇಹ ಜೀವಿಗಳು, ಸಂಗೀತ ಚಿತ್ರಕಲೆ ಹೀಗೆ ವಿವಿಧ ವಿಷಯಗಳಲ್ಲಿ ಪರಿಣಿತರು ರವೀಂದ್ರರ ಶಾಂತಿನಿಕೇತನದಲ್ಲಿ ಓದಿ ಬಂದವರು ತುಂಬಾ ನಿಸರ್ಗ ಪ್ರೀಯರು ಹೀಗಾಗಿ ಮಿಣಜಗಿಯವರ ಸ್ವಭಾವದೊಂದಿಗೆ ಅವರ ಸ್ವಭಾವ ಸರಿಹೋಗಿತ್ತು ಇಬ್ಬರೂ ಜಿಜ್ಞಾಸುಗಳು ಚಿತ್ರಕಲೆಯ ಬಗೆಗೆ ಪರಸ್ಪರ ಮಾತನಾಡತೊಡಗಿದರೆ ಉಳಿದ ಸ್ನೇಹಿತರು ಲಕ್ಷ್ಯಗೊಟ್ಟು ಅದನ್ನು ಆಲಿಸುತ್ತಿದ್ದರು. ಅವರ ಈ ಮಾತುಗಳನ್ನು ಕೇಳುವುದೇ ಒಂದು ಸೊಗಸು ಎಂಬ ಭಾವನೆ ಅವರ ಅನೇಕ ಮಿತ್ರರಲ್ಲಿದ್ದಿತು. ಸಂಗೀತದ ವಿಷಯ ಬಂದಾಗಲೂ ಕೂಡ ಅದೇ ಬಗೆಯ ತದೇಕಚಿತ್ತದಿಂದ ಇಬ್ಬರೂ ಸೇರಿ ಚರ್ಚಿಸುತ್ತಿ ದ್ದರು. ಅ.ನ.ಕೃಷ್ಣರಾಯಗು ಹುಬ್ಬಳ್ಳಿಗೆ ಬಂದಾಗಲೆ ಡಾ. ಮಿಣಜಗಿಯವರ ಚಿತ್ರಕಲಾ ಶಾಲೆಗೆ ದಾವಿಸುತ್ತಿದ್ದರು. ಅಲ್ಲಿಪ್ರಾರಂಭವಾದ ಮಾತುಕತೆ ಅವರು ಮನೆ ಸೇರಿದ ನಂತರ ಮುಂದುವರೆಯಬೇಕು ಮರಳಿ ಅ.ನ.ಕೃಷ್ಣರಾಯರ ವಾಸ್ತವ್ಯ ಸ್ಥಾನದಲ್ಲಿ ಸಾಗಬೇಕು ಇಂಥ ಅನ್ಯೋನ್ಯತೆಯನ್ನು ಅವರಿಬ್ಬರೂ ಹೊಂದಿದ್ದರು ಎಂಬುದನ್ನು ಕಂಡಾಗ ಅವರ ಮಿತ್ರರಿಗೆಲ್ಲ ಸೋಜಿಗವೆನಿಸುತ್ತಿತ್ತು. ಡಾ. ಮಿಣಜಗಿಯವರು ಬೆಂಗಳೂರಿಗೆ ಹೋದಾಗಲೂ ಕೂಡ ಅ.ನ.ಕೃ ಅವರನ್ನು ಕಾಣುವುದು ಘಂಟೆಗಟ್ಟಲೆ ಮಾತನಾಡುವುದು ಸಾಗುತ್ತಿತ್ತು. ಇವರಿಬ್ಬರ ಮಿತ್ರರು ಈ ಸಂದರ್ಶನದ ಅಪರೂಪತೆಯನ್ನು ಸೊಗಸುಗಾರಿಕೆಯನ್ನು ಈಗಲೂ ಬಣ್ಣಿಸಿ ಹೇಳುವಾಗ ತುಂಬಾ ಸಂತೋಷವೆನಿಸುತ್ತದೆ ಇಂತಹ ಗಾಢವಾದ ಮೈತ್ರಿಯನ್ನು ಡಾ. ಮಿಣಜಗಿಯವರು ತಮ್ಮ ಜೀವನದಲ್ಲಿ ಅನೇಕರೊಂದಿಗೆ ಸಾಧಿಸಿದ್ದರು.

ಅ.ನ.ಕೃಷ್ಣರಾಯರು ಹುಬ್ಬಳ್ಳಿಗೆ ಹೊಸಬರಾಗಿ ಕಂಡುಬರಲೇ ಇಲ್ಲ ಶ್ರೀ ಗಂಗಪ್ಪ ವಾಲಿ, ಸರ್ ಸಿದ್ಧಪ್ಪ ಕಂಬಳಿ, ಶ್ರೀ ಅಳಗುಂಡಿಗಿ, ಶ್ರೀ ಎಸ್.ಎನ್. ಮಾಟಲದಿನ್ನಿ, ಶ್ರೀ ಎಚ್. ಎಫ್ ಕಟ್ಟಿಮನಿ, ಶ್ರೀ ಎಸ್. ಎಸ್. ಬೇವೂರ, ಡಾ. ಪಾಟೀಲ ಪುಟ್ಟಪ್ಪ ಹೀ ಗೆ ಅನೇಕರು ಅವರ ಸನ್ಮಿತ್ರರಾದರು. ಸರ್ ಸಿದ್ಧಪ್ಪ ಕಂಬಳಿ

[illegible]

[illegible]

[illegible]



ವಲ್ಲಿರುವಾಲೇ ಆಗಿದ್ದಿತು. ಮಿಣಜಗಿಯವರು ಭಾರತಕ್ಕೆ ಮರಳಿ
ಚಯ ಗಾಢವಾಯಿತು. ಇಬ್ಬರು ಒಳ್ಳೆಯ ಮಿತ್ರರಾಗಿದ್ದರು. ಈ
ಮುಂದುವರೆಯಿತು. ಮಿಣಜಗಿಯವರ ಮಾತುಗಾರಿಕೆಯಲ್ಲಿ ಒಂದು
ವರ ಬಳಿ ಬರಲಿ ಅಪರಿಚಿತರಿರಲಿ, ಪರಿಚಿತರಿರಲಿ ಯಾವುದೊಂದು
ಮಾತನಾಡುತ್ತಿದ್ದರು, ಇಂಥಹ ಹಿರಿಯ ಕಲಾವಿದರನ್ನು ಕಾಣುವುದಕ್ಕೆ
ನ್ನು ಗೊತ್ತು ಪಡಿಸಿಕೊಳ್ಳಬೇಕು. ಇಂತಿಷ್ಟೆ ಅವಧಿ ಎಂದು ನಿರ್ಧಿಷ್ಟ
ಕ್ಷಿದಾಗ ಮಿಣಜಗಿಯವರನ್ನು ಯಾರು ಯಾವಾಗಲೂ ಸರಳವಾಗಿ
ಹೋಗಿ ಪರಿಚಯ ಮಾಡಿಕೊಂಡು ಮಾತನಾಡಬಹುದಿತ್ತು.
ಕುಳಿತು ಊಟ, ಚಹ ಕುಡಿದು ಗೊತ್ತೆ ಇರಲಿಲ್ಲವೆಂದು ಹಿರಿಯ
ಡುಬರುವುದು. ಹುಬ್ಬಳ್ಳಿಯಲ್ಲಿ ನಗರ ಮಧ್ಯದಲ್ಲಿ ಮನೆಯನ್ನು ಖಾಲಿ
ರೂಮ್ ಮಾಡಿಕೊಂಡು ವಾಸಿಸುತ್ತಿದ್ದರು, [76] ಇಲ್ಲಿಯೂ ಅವರ
ರುತ್ತಿರಲಿಲ್ಲವಂತೆ. ಸ್ನೇಹಿತರ ಬಳಗದ ಸದಸ್ಯರು ಅಲ್ಲಿಗೆ ಬಂದು
ಕೊಡುತ್ತಾ ಹೋಗಬೇಕು, ಬಂದವರೊಡನೆ ಹರಟೆ ಹೊಡೆಯುತ್ತಾ
ದಿನನಿತ್ಯದ ರೂಢಿಯಾಗಿತ್ತು, ಮಿಣಜಗಿಯವರ ಸುತ್ತಲೂ ಸದಾ
ರು ಹಾಸ್ಯದ ಚಟಾಕಿಗಳನ್ನು ಹಾರಿಸುವಲ್ಲಿ ಎತ್ತಿದ ಕೈ ಎನಿಸಿದ್ದರು.
ತ ವಿದ್ವತ್ತಿನ ಬಗೆಗೆ ಎಷ್ಟು ಗಂಭೀರವಾಗಿ ಧೀಮಂತವಾಗಿ
ದ್ದರೋ ಅಷ್ಟೆ ಸುಲಭವಾಗಿ ಹಾಸ್ಯದಿಂದ ತಮ್ಮ ಮಿತ್ರರನ್ನು
ಆಗರಗಳು ಆಗಿದ್ದರೆಂಬುದನ್ನು ನಾವು ಮರೆಯುವಂತಿಲ್ಲ. ಈ
ನ್ನು ನಿರೂಪಿಸುತ್ತ ಹೋದಂತೆ ಮಿತ್ರರಿಗೆಲ್ಲ ರಸಾನುಭವವಾಗುತ್ತಿತ್ತು.
ಕರ ಕೂಟದಂತಾಗುತ್ತಿತ್ತು. ಈ ಮಾತುಕತೆಯ ಮಧ್ಯೆ ಮಧ್ಯೆ ಚಹಾದ
ತಾಂಬೂಲ ಸೇವನೆಯೂ ನಡೆಯಬೇಕು. ಈ ರಸಕವಳ ಎಷ್ಟು
ಬರುತ್ತಿರಲಿಲ್ಲ, ಅವರು ಕೂಡ ಇವರನ್ನು ಹುಡುಕಿಕೊಂಡು
ು ? ಈ ಮಿತ್ರ ಕೂಟ ಅವರ ಜೀವನದ ಪ್ರಾರಂಭದಲ್ಲಿ ಮಾತ್ರವಲ್ಲ,
ರುತ್ತಿತ್ತು.

ಂತೆ ಸಮಾಜದ ಜೀವಿಯೂ ಆಗಿದ್ದರೆಂಬುದನ್ನು ಗಮನಿಸುತ್ತೇವೆ.
ಅವರು ಬಲವಾಗಿ ಅಲ್ಲಗಳೆಯುತ್ತಿದ್ದರು, ಜೀವಿಸುವ ಮಟ್ಟಿಗೆ ಮಾತ್ರ
ದೇ ಪರಮ ಉದ್ದೇಶವೂ ಅಲ್ಲ ಎಂಬುವುದನ್ನು ಚೆನ್ನಾಗಿ ಅರಿತಿದ್ದರು.
ಕಿಂಟುವರಲ್ಲ. ಅದಕ್ಕಾಗಿ ಹಪಾಹಪಿಸಿದವರೂ ಅಲ್ಲ. ಹಣಗಳಿಕೆ
ಕಾರ್ಯವನ್ನು ಕೂಡ ನಿರ್ವಹಿಸಲಿಲ್ಲವೆಂಬುದು ಕೂಡ ಅಷ್ಟೆ
ಷ್ಠ ದರ್ಜೆಯ ಕಲಾವಿದರು. ಮನಸ್ಸು ಮಾಡಿದ್ದರೆ ಬೇಕಾದಷ್ಟು




ಹಣವನ್ನು ಸಂಗ್ರಹಿಸಬಹುದಾಗಿತ್ತು. ಹಣ ಸಂಗ್ರಹಿಸಿದರು ಬಂದ ರೀತಿಯಲ್ಲಿ ಅದು ಹೋಗುತ್ತಿತ್ತು. ಬಡ ವಿದ್ಯಾರ್ಥಿಗಳಿಗಾಗಿ ವಿನಿಯೋಗ ವಾಗುತ್ತಿತ್ತು. ಮಿತ್ರರಿಗಾಗಿ ವೆಚ್ಚವಾಗುತ್ತಿತ್ತು. ಸಾಮಾಜಿಕ ಕೆಲಸ, ಕಾರ್ಯಗಳಿಗೆ ವಿನಿಯೋಗವಾಗುತ್ತಿತ್ತು. ಹಾಗೇ ನೋಡಿದರೆ ಮುಂಬೈಯಿಂದ ಬಂದು ಕರ್ನಾಟಕದಲ್ಲಿ ಕಲಾ ಶಾಲೆಯನ್ನು ನಡೆಸಬೇಕಾಗಿರಲಿಲ್ಲ. ಮುಂಬೈಯಲ್ಲಿ ಇನ್ನೂ ಹೆಚ್ಚಿನ ಕೀರ್ತಿಯನ್ನು ಅದರ ಜೊತೆಗೆ ಹಣವನ್ನು ಸಂಪಾದಿಸಬಹುದಾಗಿತ್ತು.

ಬ್ಯಾರಿಸ್ಟರ ಜಿನ್ನಾ ಡಾ ಮಿಣಜಗಿಯವರ ತೀರ ನಿಕಟ ಮಿತ್ರರಾಗಿದ್ದರು. ಜಿನ್ನಾರವರು ಲಂಡನ್‌ದಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ಇವರಿಬ್ಬರ ನಿಕಟವಾದ ಸ್ನೇಹವು ಮೂಡಿತು. ಪರಸ್ಪರರನ್ನು ಆಗಾಗ ಸಂಧಿಸುತ್ತಲೆ ಇದ್ದರು. ಪಾಕಿಸ್ತಾನದ ನಿರ್ಮಾಣದ ಕಾಲದಲ್ಲಿ ಅವರೇ ಸ್ವತಃ ಡಾ ಮಿಣಜಗಿಯವರಿಗೆ ನೀನು ಪಾಕಿಸ್ತಾನಕ್ಕೆ ನನ್ನೊಂದಿಗೆ ಬಂದುಬಿಡು ಇಲ್ಲಿಯ ಈ ದರಿದ್ರ ಜೀವನ ಸಾಕು. ನಿನ್ನನ್ನು ರಾಜನಂತೆ ಇಡುತ್ತೇನೆ.” ಎಂದು ಆಮಂತ್ರಿಸಿದ್ದರಂತೆ, ಆದರೆ ಸಮಾಜ ಸೇವೆ ಡಾ ಮಿಣಜಗಿಯವರನ್ನು ಕೈ ಮಾಡಿ ಕರೆಯುತ್ತಿತ್ತು. ಮಿತ್ರರ ಈ ಆಮಂತ್ರಣವನ್ನು ಸವಿನಯವಾಗಿ ನಿರಾಕರಿಸಿದರು. ಮುಂಬೈಯ ಶ್ರೀಮಂತ ವಸಾಹತುವೆನಿಸಿದ ಮಲಬಾರ್ ಹಿಲ್ಸ್ ಪ್ರದೇಶದ ಜೀವನವನ್ನು ಕೂಡ ಬಿಟ್ಟುಕೊಟ್ಟು ಕರ್ನಾಟಕಕ್ಕೆ ಬಂದರು. ಇಲ್ಲಿ ಶಿಕ್ಷಣ ನೀಡಲು ಪರದಾಡಿದರು. ಶಿಕ್ಷಣ ರಂಗಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡು ದುಡಿದುದರಿಂದಲೇ ಉತ್ತರ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣಕ್ಕೆ ಪ್ರಾಮುಖ್ಯತೆ ದೊರೆಯಿತು. ಹಳ್ಳಿ ಹಳ್ಳಿಗೆ ಚಿತ್ರಕಲಾ ಪ್ರದರ್ಶನಗಳನ್ನು ಕೊಂಡೊಯ್ಯುವಾಗಲೂ ನಮ್ಮ ಗ್ರಾಮೀಣ ಪ್ರದೇಶದ ಜನರಿಗೆ ಭಾರತೀಯ ಸಂಸ್ಕೃತಿಯನ್ನು ಆಧರಿಸಿದ ಚಿತ್ರಕಲೆಯ ಪರಿಚಯವಾಗಬೇಕು, ಆ ಮೂಲಕ ಆಸಕ್ತಿ ಬೆಳೆಯಬೇಕು, ಎಂಬುದು ಅವರ ಪ್ರಬಲವಾದ ಆಸೆಯಾಗಿತ್ತು. ಅದಕ್ಕಾಗಿ ಪರಿಶ್ರಮಿಸಿದ್ದು ಅಷ್ಟಿಷ್ಟಲ್ಲವೆಂಬುದು ಎಲ್ಲರಿಗೂ ಗೊತ್ತು ; ಅಷ್ಟೇ ಏಕೆ ಇದಕ್ಕಾಗಿ ತಮ್ಮನ್ನು ತಾವು ಮರೆತಿದ್ದರೆಂದರೂ ಅತಿಶಯೋಕ್ತಿಯೇನಲ್ಲ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ನಾವು ಅವಶ್ಯವಾಗಿ ವಿಚಾರಿಸಬೇಕು, ಯಾವ ಸ್ಥಾನಮಾನದ ಅಪೇಕ್ಷೆ ಇಲ್ಲದೇ ಎಲ್ಲದಕ್ಕಾಗಿ ಶ್ರಮಿಸಿದರು. ಅವರ ಮಿತ್ರರಲ್ಲಿ ಹಿರಿಯ ರಾಜಕಾರಣಿಗಳೂ ಇದ್ದರು, ಮಂತ್ರಿಗಳೂ ಇದ್ದರು, ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದವರೂ ಇದ್ದರು, ಅವರಿಂದ ಇವರು ಯಾವ ಉನ್ನತ ಸ್ಥಾನವನ್ನು ಅಪೇಕ್ಷಿಸಲಿಲ್ಲ. ಸಮಾಜ ಸೇವೆಗೆ ಅವಶ್ಯವಿರುವ ನೆರವನ್ನು ಮಾತ್ರ ಪಡೆಯಲು ಮುಂದಾದರು, ಸಾಮಾಜಿಕ ಸೇವೆಯ ವಿಷಯದಲ್ಲಿ ಅವರದು ಹೀಗೆ ಸಂಪೂರ್ಣ ಪ್ರಾಮಾಣಿಕ ಮತ್ತು ಬದ್ದ ಜೀವನವಾಗಿತ್ತೆಂಬುದನ್ನು ಹಲವಾರು ನಿದರ್ಶಗಳಿಂದ ಕಾಣುತ್ತೇವೆ.

'ಸತ್ಯಂ ಶಿವಂ ಸುಂದರಂ' ಎಂದು ಕಲೆಯ ಬಗ್ಗೆ ಹೇಳಿರುವ ಮಾತನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕೂಡ ಸೌಂದರ್ಯವನ್ನು ಕಂಡುಕೊಂಡು ಆನಂದಿಸಿದರು. ಎಂಥವರಲ್ಲಿಯೂ ಅವರು ಸತ್ಯಾರಾಧನೆಯನ್ನು ನಡೆಸಿದರು. ಹೀಗಾಗಿ ಕರ್ನಾಟಕದ ಉದಾತ್ತ ಸಂಸ್ಕೃತಿಕ ಸೌರಭವನ್ನು ಸೂಸಲು ಸಾಧ್ಯವಾಗಿ ಪರಿಣಮಿಸಿತು. ಜೀವನದ ಉದಾತ್ತತೆಯು ಕೂಡ ಇಲ್ಲಿ ಅಡಗಿರುವುದು. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ತತ್ವವನ್ನು ಅಕ್ಷರಶಃ ಪಾಲಿಸಿದವರು. ಡಾ ಮಿಣಜಗಿಯವರು ಅವರ ಕಾಯಕ ಸೇವೆ ಕೇವಲ ಸ್ವಂತಕ್ಕಾಗಿ ಮಾತ್ರವಿರಲಿಲ್ಲ. ಸಮಾಜಕ್ಕೆ ವಿಸ್ತರಿತವಾಗಿತ್ತು. ನಾಡಿಗಾಗಿ ಮೀಸಲಾಗಿತ್ತು, ಇದುವೇ ಜೀವನದ ಹಿರಿಮೆ ಎನಿಸಿತು. ತಮ್ಮ ಬಾಳಿನುದ್ದಕ್ಕೂ ಈ ರೀತಿ ನಡೆದು

೭೭. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ-೧೭

[illegible]



ತೋರಿದರು ಎಂಬುದನ್ನು ನೆನೆದಾಗ ಯಾರ ಮನವೂ ಮುದಗೊಳ್ಳುವದು, ಅರಳಿನಿಲ್ಲುವದು.

ಡಾ ಮಿಣಜಗಿಯವರ ಸಮಾಜ ಸೇವೆಯ ಒಂದು ಮುಖ ಕಲಾಶಿಕ್ಷಣ ವಿದ್ಯಾರ್ಥಿಗಳ ಮುನ್ನಡೆಯ ಚಿಂತನೆ ಎನಿಸಿದರೆ, ಸಾರ್ವಜನಿಕರಿಗೂ ಅದರ ಪರಿಚಿತವಾಗುವುದು. ಇನ್ನೊಂದು ಮುಖವೆನಿಸಿದ್ದಿತು. ಇದರ ಜೊತೆಗೆ ಸೇವಾ ಜೀವನದ ಇನ್ನೊಂದು ಮುಖವನ್ನು ಕಾಣಬಹುದು. ಕಲೆ ಹೆಚ್ಚು ಹೆಚ್ಚು ಜನರಿಗೆ ಪ್ರಯೋಜನಕಾರಿಯಾಗಿ ನೀಡಬೇಕೆನ್ನುವದೇ ಅದು. ತಾವು ಮಾತ್ರವಲ್ಲದೇ ಇನ್ನಿತರರನ್ನು ಅದರಲ್ಲಿ ತೊಡಗಿಸಲು ಮುಂದಾಗುತ್ತಿದ್ದರೆನ್ನುವದು ಗಮನಾರ್ಹವೆನಿಸಿದೆ. ನಮ್ಮ ರಾಜ್ಯ ಅದೀಗ ಪ್ರಾದುರ್ಭವಿಸಿದ ಸಮಯ, ಮೈಸೂರು ರಾಜ್ಯ ಎಂಬ ಹೆಸರು ಪಡೆದು ಕರ್ನಾಟಕ ರಾಜ್ಯವು ನಿರ್ಮಾಣಗೊಂಡಿತ್ತು. ಕರ್ನಾಟಕದ ಹಿರಿಯ ಹೋರಾಟಗಾರರೆನಿಸಿದ ಶ್ರೀ ನಿಜಲಿಂಗಪ್ಪನವರು ಈ ಹೊಸ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಡಾ ಮಿಣಜಗಿಯವರಿಗೂ, ನಿಜಲಿಂಗಪ್ಪನವರಿಗೂ ತುಂಬಾ ನಿಕಟವಾದ ಸ್ನೇಹವಿತ್ತು.[78] ಅವರ ನೆರವಿನಿಂದ ಜವಾನರ ನಿಧಿಗೆ ತುಂಬ ಹಣವನ್ನು ಸಂಗ್ರಹಿಸುವ ಯೋಜನೆ ಡಾ ಮಿಣಜಗಿಯವರದು. ಇದರಲ್ಲಿ ಕಲಾವಿದರ ಪಾಲು ಮಹತ್ವದ್ದಾಗಿರಬೇಕು. ಎಂದು ಮಿಣಜಗಿಯವರ ಅಪೇಕ್ಷೆಯಾಗಿದ್ದಿತು.ಅದಕ್ಕಾಗಿ ಶ್ರೀ ನಿಜಲಿಂಗಪ್ಪನವರಿಗೆ ವಿಧಾನಸೌಧದಲ್ಲಿ ಸಂಗ್ರಹಿತವಾದ ಕಲಾಕೃತಿಗಳ ಲಿಲಾವು ಮಾಡಿಸಲು ಸೂಚಿಸಿದರು. ಅವುಗಳ ಜೊತೆಗೆ ತಮ್ಮ ಮೂಲ ಕಲಾಕೃತಿಗಳನ್ನು ಸೇರಿಸಿದರು. ಹಣ ಶೇಖರಿಸಿದ್ದರಿಂದ ಜವಾನರ ನಿಧಿಗೆ ಜಮೆ ಮಾಡಲಾಯಿತು. ಇಂತಹ ಸಾರ್ವಜನಿಕ ಸೇವಾ ಜೀವನಕ್ಕೆ ಮಿಣಜಗಿಯವರ ಜೀವ ಮಿಡಿಯುತ್ತಿತ್ತು,[79] ಈ ಕೆಲಸಗಳನ್ನು ಕೂಡಾ ಸದ್ದು ಗದ್ದಲವಿಲ್ಲದೆ ನೆರವೇರಿಸುತ್ತಿದ್ದರು, ಅರ್ಥಾತ್ ತಮಗೆ ಹೆಸರು ಬರಬೇಕೆಂಬ ಹಂಬಲ ಅವರಿಗಿರಲಿಲ್ಲ. ಅದಕ್ಕಾಗಿ ಅವರು ಹಪಾಹಪಿಸುತ್ತಿರಲೂ ಇಲ್ಲವೆಂಬುದು ಸರ್ವವಿದಿತವೂ ಆಗಿದೆ.

ಮಿಣಜಗಿಯವರು ತಮ್ಮ ಸಾಧನೆಗಳನ್ನು ಬಹಳವಾಗಿ ಕೊಚ್ಚಿಕೊಳ್ಳುತ್ತಿರಲಿಲ್ಲ.[80] ಹೇಳಿಕೊಳ್ಳುತ್ತಿರಲಿಲ್ಲ. ಅಂಥ ಅವಶ್ಯಕ ಪ್ರಸಂಗ ಬಂದಾಗ ಮಾತ್ರ ಅವನ್ನು ಬಿಚ್ಚಿ ಇಡುತ್ತಿದ್ದರು. ಹಳೇ ಮೈಸೂರಿನ ಹೆಸರಾಂತ ಕಲಾವಿದರಾದ ವೆಂಕಟಪ್ಪನವರನ್ನು ಒಂದು ಸಂದರ್ಭದಲ್ಲಿ ಡಾ. ಮಿಣಜಗಿಯ ವರು ಕಂಡಾಗ ತುಂಬ ಮೋಜಿನದಾದ ಘಟನೆಯೊಂದು ನಡೆಯಿತು. ಬೆಂಗಳೂರಲ್ಲಿ ವೆಂಕಟಪ್ಪನವರಿಗೆ ಡಾ. ಮಿಣಜಗಿಯವರ ಪರಿಚಯ ಮಾಡಿಕೊಟ್ಟ ಅವರೂ ಶ್ರೇಷ್ಠ ಕಲಾವಿದರೆಂದು ಹೇಳಿದ್ದರೂ ವೆಂಕಟಪ್ಪನವರು ಅವರ ಹೆಸರು ಕೇಳದಿಲ್ಲವೂ, ಅಥವಾ ಅಷ್ಟು ಗಂಭೀರವಾಗಿ ಪರಿಗಣಿಸಲಿಲ್ಲವೂ ತಮ್ಮ ಹಲವಾರು ಕಲಾಕೃತಿಗಳನ್ನು ಅವರಿಗೆ ತೋರಿಸುವಲ್ಲಿಯೇ ಮಗ್ನರಾದರು. ಡಾ.ಮಿಣಜಗಿಯವರು ಸಹಜ ಕೂತೂಹಲದಿಂದ ಕಲಾವಿದನ ದೃಷ್ಟಿಯಿಂದ ಅವನ್ನು ಪರಿಶೀಲಿಸುತ್ತಿದ್ದರು. ವೆಂಕಟಪ್ಪನವರು ತಮ್ಮ ಚಿತ್ರಗಳನ್ನು ತೋರಿಸುವುದನ್ನು ಮುಗಿಸಿದ ನಂತರ, ರೊಥೆನ್‌ಸ್ಟೆನ್‌ರು ಚಿತ್ರಿಸಿದ ರವೀಂದ್ರನಾಥ ಠಾಕೂರರ ಹನ್ನೆರಡು ಕಲಾಕೃತಿಗಳನ್ನು ತೋರಿಸಿ ಆ ಬಗೆಗೆ ಮತ್ತು ಚಿತ್ರಕಲಾವಿದನ ಬಗೆಗೆ ವಿವರಿಸತೊಡಗಿದಾಗ ಡಾ. ಮಿಣಜಗಿಯವರು ಈ ಚಿತ್ರಗಳನ್ನು ತಾವು ಬಹಳ ಹಿಂದೆಯೇ ನೋಡಿರುವದಾಗಿಯೂ ಅವುಗಳ ನಿಕಟವಾದ ಪರಿಚಯ ತಮಗಿರುವುದಾಗಿಯೂ ಹೇಳಿದಾಗ ವೆಂಕಟಪ್ಪನವರು ಬೆರಗಾದರು ನಿಮಗೆ ಹೇಗೆ ಇವುಗಳ

---

೭೮. ಶ್ರೀ ಪಿ.ಎಸ್. ಹಿರೇಮಠ : ಸಂದರ್ಶನ ದಿನಾಂಕ ೮-೧೦-೨೦೦೪

೭೯. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೭೩.

೮೦. ಶ್ರೀ ಪಿ.ಎಸ್. ಹಿರೇಮಠ ಸಂದರ್ಶನ ದಿನಾಂಕ ೮-೧೦-೨೦೦೪



ನಿಕಟವಾದ ಪರಿಚಯ ? [81] ಎಂದು ಕೇಳಿದರು. ಡಾ. ಮಿಣಜಗಿಯವರು ಆಗ ತಮ್ಮ ಬಗೆಗೆ ಹೇಳಿಕೊಳ್ಳಬೇಕಲ್ಲ ಎಂದು ನಿರುಪಾಯರಾಗಿ ಇವೆಲ್ಲನನ್ನ ಕಲಾಗುರುಗಳಾದ ರೊಥೆನ ಸ್ಪೇನ್ [82] ಚಿತ್ರಗಳು ಅವರು ಚಿತ್ರಸಿದಾಗ ನಾನು ಕಂಡದ್ದು ಎಂದು ತಿಳಿಸಿ ಅವು ಜನಪ್ರೀಯತೆಯನ್ನು ಪಡೆದ ಬಗೆಯನ್ನು ವಿವರಿಸಿದರು. ವೆಂಕಟಪ್ಪನವರು ಮೂಕವಿಸ್ಮಿತರಾದರು. ಇಂಥ ಹಿರಿಯ ಕಲಾವಿದನ ಬಗೆಗೆ ಅರಿಯದೇ ಹೋದೆನಲ್ಲ ಎಂದು ವ್ಯಥೆ ವ್ಯಕ್ತಪಡಿಸಿದರಲ್ಲದೇ ತಮ್ಮ ಈ ಅಜ್ಞಾನಕ್ಕಾಗಿ ಡಾ. ಮಿಣಜಗಿಯವರಲ್ಲಿ ಕ್ಷಮೆ ಕೇಳಿದರು. ಡಾ. ಮಿಣಜಗಿಯವರ ಬಗೆಗೆ ಅವರು ಗೌರವ ತಾಳಿದರು.

ಸರಳ ಆಡಂಬರವಿಲ್ಲದ ಜೀವನವನ್ನು ಡಾ. ಮಿಣಜಗಿಯವರು ನಡೆಸುತ್ತಿದ್ದುದ್ದು ಕಾಣಬಹುದಾಗಿತ್ತು, ಎಲ್ಲರಲ್ಲೂ ಸುಲಭವಾಗಿ ಸೇರಿಕೊಂಡು ಮಾತನಾಡುತ್ತಿದ್ದರು. ತಮ್ಮ ಬಗೆಗೆ ಪ್ರಚಾರಕ್ಕೆ ಆಸ್ಪದ ಕೊಡದಿದ್ದುದು, ಹೀಗೆ ಹತ್ತು ಪಲವಾರು ಕಾರಣಗಳಿಂದ ಅವರನ್ನು ಅನೇಕರು ಅರಿಯದೇ ಹೋಗುತ್ತಿದ್ದರು. ಕಲಾ ಪ್ರೌಡಿಮೆಯ ಬಗೆಗೆ ಅನೇಕರಲ್ಲಿ ಅಜ್ಞಾನವು ಮನೆ ಮಾಡಿರುತ್ತಿತ್ತು. ಎಂಬುದಕ್ಕೆ ಈ ದೃಷ್ಟಾಂತವು ಬಹು ಸೂಕ್ಷ್ಮವಾದ ಉದಾಹರಣೆಯಾಗಿದೆ. ಇಂಥ ಪ್ರಸಂಗಗಳನ್ನು ಡಾ. ಮಿಣಜಗಿಯವರು ಹೆಚ್ಚಾಗಿ ತಮ್ಮಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ಇತರರೆದುರು ಹೇಳುತ್ತಿರಲೇ ಇಲ್ಲ. ಹೀಗೆ ಹೇಳುವಾಗ ತಮ್ಮ ಬಗೆಗೂ ಹೇಳಿಕೊಳ್ಳುವ ಪ್ರಸಂಗಗಳು ಬರಲಿಲ್ಲವಲ್ಲ ಎಂಬ ಸಂಕೋಚವು ಅವರನ್ನು ಕಾಡುತ್ತಿತ್ತು. ಕೇವಲ ಆತ್ಮೀಯ ಸ್ನೇಹಿತರು ಸೇರಿದಾಗ ಏನಾದರೊಂದು ವಿಶಿಷ್ಟ ಬಗೆಯ ಪ್ರಸಂಗ ಬಂದಾಗ ಹರಟೆಯ ಮಧ್ಯದಲ್ಲಿ ಇವು ತೂರಿಕೊಂಡು ಬರಬೇಕು. ಮಿತ್ರರಿಗೆ ನಿಜ ಸಂಗತಿಗಳು ಅರಿಕೆಯಾಗಬೇಕು. ಆದರೆ ಅವರು ಮಾತ್ರ ಯಾವಾಗಲೂ ನಗುನಗುತ್ತಲೇ ಆನಂದದಿಂದಲೇ ಇರುತ್ತಿದ್ದರು. ತಮ್ಮ ದುಃಖ ದುಮ್ಮಾನವನ್ನು ತೋಡಿಕೊಂಡುದೇ ಇಲ್ಲ. ಈ ಬಗೆಯ ಅಪರೂಪದ ವ್ಯಕ್ತಿತ್ವವನ್ನು ಹೊಂದಿರುವ ವ್ಯಕ್ತಿಯನ್ನು ಅದರಲ್ಲಿಯೂ ಕಲಾಕ್ಷೇತ್ರದಲ್ಲಿ ಕಾಣುವದು ತೀರ ವಿರಳ. ಡಾ. ಮಿಣಜಗಿಯವರು ಸಾಮಾನ್ಯವಾದ ಜೀವನಕ್ಕೆ ತುಂಬ ಅಪವಾದಾತ್ಮಕವಾಗಿ ಜೀವಿಸಿದ್ದರು ಎಂಬುದು ಅವರ ಮಿತ್ರರು ಕಂಡ ಸತ್ಯ : ಅನುಭವ.

★★★★★

೮೧. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ - ೭೪.
೮೨. ಶ್ರೀ ಶಂಕರ ಪಾಟೀಲ : ಕಲಾ ತಪಸ್ವಿ ಡಾ. ಮಿಣಜಗಿ, ಪುಟ -೭೪.





ದಿ. ಶ್ರೀ ಬಸವರಾಜ ಹಳಿಜೋಳ
ನಿವೃತ್ತ ಪ್ರಾಚಾರ್ಯರು



ಭಾವಚಿತ್ರ



ಭಾವಚಿತ್ರ





ಮಿಣಜಗಿಯವರ ಭಾವಚಿತ್ರ



ಭಾವಚಿತ್ರ





ನಿಸರ್ಗ ಚಿತ್ರ



ಸಂಯೋಜಿಸಾ ದೃಶ್ಯ





ನಿವೃತ್ತ ಪ್ರಾಚಾರ್ಯರು



ರೇಖಾ ಚಿತ್ರ ಸಂಗ್ರಹ : ಶ್ರೀ ವಿಜಯಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ



ಗಾಂಧಿಜಿಯವರ ರೇಖಾ ಚಿತ್ರ ಸಂಗ್ರಹ : ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ





ಗಾಂಧೀಜಿಯವರ ರೇಖಾ ಚಿತ್ರ
ಸಂಗ್ರಹ : ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ



[illegible] ದೃಶ್ಯ ಸಂಗ್ರಹ : ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ



ಶ್ರೀ ಪಿ. ಎಸ್. ಹಿರೇಮಠ
ನಿವೃತ್ತ ಪ್ರಾಚಾರ್ಯರು





ಸಂಗೀತಗಾರರ ದೃಶ್ಯ





ಶ್ರೀಮತಿ ಲತಾರಾಣಿ ವ್ಹಿ. ಮಲ್ದಾರ
ಪ್ರಸ್ತುತ ಸೇವೆಯಲ್ಲಿರುವ ಪ್ರಾಚಾರ್ಯರು



ಶಿವಲಿಂಗು



ಗಣೇಶ



ಅಧ್ಯಾಯ - ಐದು

ಡಾ. ಎಂ.ವ್ಹಿ. ಮಿಣಜಗಿ : ಕಲಾಕೃತಿಗಳು

ಕಲಾವಿದ ಎಂ .ವ್ಹಿ. ಮಿಣಜಗಿಯವರು ರಚಿಸಿದ ಹಲವು ಕಲಾಕೃತಿಗಳನ್ನು ಇಲ್ಲಿ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಇನ್ನು ಅವರ ಸಮಗ್ರ ಕಲಾಕೃತಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಪರಂಪರೆ ಇಲ್ಲದೆ ಯಾವ ಕಲೆ, ಶಿಲ್ಪ, ಸಾಹಿತ್ಯ, ಬೆಳೆಯುವದಿಲ್ಲ, ಪರಂಪರೆ ಎನ್ನುವದು ಕಟ್ಟಡಕ್ಕಿರುವ ಭದ್ರ ತಳಹದಿಯಂತೆ, ಎಂಬುದು ಮಿಣಜಗಿಯವರ ಮಾತಾಗಿತ್ತು. ಇಂದು ಇಡೀ ವಿಶ್ವದ ಸಂದರ್ಭ ಬಹುತೇಕ ಒಂದೇ ಆಗಿದೆ. ಸಂಕೀರ್ಣ ಗೊಂದಲಮಯ ಅಶಾಂತ ವಾತಾವರಣ ಎಲ್ಲ ಕಡೆ ಇದೆ. ನಮ್ಮ ಬದುಕು ನಮ್ಮ ಪರಂಪರೆಯ ಜೊತೆಗೆ ಅಂತರಾಷ್ಟ್ರೀಯ ಅಲಂಕಾರಗಳನ್ನು ಹೊಂದಿಸಿ ಕೊಂಡಿದೆ. ಒಬ್ಬರಂತೆ ಇನ್ನೊಬ್ಬರಿರಲು, ಸ್ವಂತಿಕೆಯಿಲ್ಲ ಐತಿಕ ಸುಃಖವನ್ನು ಪಡೆಯಲು ವಿಶ್ವದ ಎಲ್ಲ ಸಮಾಜಗಳೂ ತಹ ತೂಗಿಸುತ್ತಿವೆ ಹತ್ತಿರವಾಗುತ್ತಿವೆ. ಬದುಕು ವ್ಯಾಪಾರಿ ಮನೋಭಾವದಿಂದ ಕೂಡಿದೆ. ಬಾಹ್ಯ ನಡುವಳಿಕೆಗಳು ಕೃತಜ್ಞತೆಯಿಂದ ಕೂಡಿವೆ. ಹೀಗೆ ವಿಶ್ವದ ಎಲ್ಲ ಜನರ ಹೊರನೋಟದ ಗಲಾಟೆಯ ಆಡಂಬರ ಒಂದೇ ಆಗಿದೆ.

ವಿಶಾಲವಾದ ವಿಶ್ವ ಇಂದು ದಿನದಿನಕ್ಕೆ ಚಿಕ್ಕದಾಗುತ್ತಿದೆ. ಹಲವು ಸಮಸ್ಯೆಗಳ ಅಶಾಂತಿಯ ತವರೂ ಆಗುತ್ತಿದೆ. ಇಂಥ ಸಂದರ್ಭದ ವಿಶ್ವದ ಎಲ್ಲ ರಾಷ್ಟ್ರಗಳ ಕಲಾಭಿವ್ಯಕ್ತಿಯಲ್ಲಿ ಬಹಳ ವ್ಯತ್ಯಾಸಗಳನ್ನು ಇಂದು ಕಾಣಲಾಗುತ್ತಿಲ್ಲ. ಮಾಧ್ಯಮ ತಂತ್ರಗಳದ್ದೇ ಮೇಲಾಟ, ಬಹುತೇಕ ಅಭಿವ್ಯಕ್ತಿಗಳು ಕೊಳ್ಳುವವರೊಂದಿಗೆ ರಾಜಿ ಮಾಡಿಕೊಂಡಿರುವಂತೆ ಅವರನ್ನು ಗಮನದಲ್ಲಿಟ್ಟುಕೊಂಡು ಸೃಷ್ಟಿಸುತ್ತಿರುವಂತೆ ಕಾಣುತ್ತೇವೆ. ಇಂದಿನ ಮೌಲ್ಯಗಳಿರಬಹುದು. ಆದರೆ ಈ ಎಲ್ಲದರ ನಡುವೆ ಹಲವಾದರೂ ನಮ್ಮ ಇಂದ್ರಿಯ ಗ್ರಹಿಕೆಗಳೊಂದಿಗೆ ಆಟವಾಡುತ್ತವೆ., ಹತ್ತಿರದ ಸುಂದರ ಅನುಭವಗಳನ್ನು ತಂದುಕೊಡುತ್ತವೆ. ಬಿರು ಬೇಸಿಗೆಯಲ್ಲಿ ಬಸವಳಿದ ವಿಶ್ವಕ್ಕೆ ತಂಗಾಳಿಯ ತಂಪನ್ನು ಎರೆಯುತ್ತವೆ. ಬದುಕಿನಲ್ಲಿ ಆಸೆಗಳನ್ನು ಮಹತ್ವಾಕಾಂಕ್ಷೆಗಳನ್ನು ಚಿಗುರಿಸುತ್ತವೆ. ತಮ್ಮ ಅನುಭವಕ್ಕೆ ದಕ್ಕಿದ ಸ್ವೋಪಜ್ಞ ಅಭಿವ್ಯಕ್ತಿಗೆ ಹಲವರಾದರೂ ಕಾರಣರಾಗುತ್ತಿದ್ದಾರೆ. ಕಲಾಕೃತಿಯೊಂದು

[illegible]



ಕಲಾವಿದನೊಬ್ಬನ ಒಟ್ಟು ನಾಗರಿಕತೆಯ ಫಲವಾಗಿ ಮೂಡಿದ ಒಂದು ನಿರ್ಧಿಷ್ಟ ಸಂದರ್ಭದ ಇಂದ್ರೀಯ ಗ್ರಹಿಕೆಗಳ ತೀವ್ರ ಅಭಿವ್ಯಕ್ತಿಯಾಗಿರಬೇಕು. ಅದು ಕಲಾ ವ್ಯಾಕರಣ ಬದ್ಧವಾಗಿರಬಹುದು. ಅಥವಾ ಇಲ್ಲದೆ ವಿಕೃತಿ ಅವಲಕ್ಷಣಗಳಿಂದಲೂ ಕೂಡಿರಬಹುದು. ಆದರೆ ಅದು ತಂದು ಕೊಡಬಹುದಾದ ವಿಶಿಷ್ಟ ಹೊಸ ಅನುಭವ ಇಲ್ಲಿ ಮುಖ್ಯ.

ಆ ಕಾಲದ ಚಿತ್ರಕಲಾ ಶೈಲಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆಂದರೆ ಹಿನ್ನೆಲೆಯಾಗಿ ವಿಜಯನಗರ ಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅಲ್ಲಿ ಬೆಳೆದು ಬಂದ ಕಲಾಧೋರಣೆಯನ್ನು ಗಮನಿಸಬೇಕು. ವಿಜಯನಗರ ಸಾಮ್ರಾಜ್ಯ ಮಣ್ಣುಗೂಡಿದ ಮೇಲೆ ಈ ಧೋರಣೆ ಕೆಲವು ಮಾರ್ಪಾಟುಗಳನ್ನು ತಳೆದು ದಕ್ಖಣಿ ಶೈಲಿ, ಮೈಸೂರು ಶೈಲಿ, ತಂಜಾವೂರ ಶೈಲಿಗಳಾಗಿ ಮೈದಳೆದುದನ್ನು ಪರಿಶೀಲಿಸಬೇಕು. ವಿಜಯನಗರದ ಕಲಾಶೈಲಿಯ ಒಳಗೊಂಡ ಪರ್ಶಿಯನ್, ಮೊಗಲ್, ಅವಧ, ಬಿಜಾಪೂರ ಶೈಲಿಗಳ ಪ್ರಭಾವವನ್ನಾಗಲಿ ಮರೆಯುವಂತಿಲ್ಲ. ಇದಕ್ಕೆ ಹಿಂದಿನ ಇತಿಹಾಸದ ಹಲವು ಹಾಳೆಗಳ ಮೇಲೆ ಕಣ್ಣಾಡಿಸುವ ಅಗತ್ಯವಿದೆ. ಹಿಂದಿನವರ ಜಾಡನ್ನು ಹಿಡಿದೆ ತಾನೆ ಮುಂದಿನವರ ನಡಿಗೆ ?

ಮುಮ್ಮುಡಿಯವರ ಅಶ್ರಯದಲ್ಲಿ ಮೈದಳೆದ ಚಿತ್ರಕಲಾ ಪ್ರಕಾರವು ಯಾವೊಂದು ನಿರ್ದಿಷ್ಟ ಶೈಲಿಯ ಒಂದು ಘಟ್ಟವೆಂದಾಗಲಿ, ಫಲವೆಂದಾಗಲಿ ಹೇಳುವಂತಿಲ್ಲ; ಇದಕ್ಕಿದ್ದಂತೆ ಯಾವ ಪೂರ್ವೋತ್ತರವೂ ಇರದೇ ಕಾಣಿಸಿಕೊಂಡದ್ದೂ ಅಲ್ಲ, ಆಗ ಸಿದ್ಧವಾಗಿ ಈಗ ಉಳಿದು ಬಂದಿರುವ ಕಲಾಕೃತಿಗಳನ್ನು ಪರಿಶೀಲಿಸಿದರೆ ಕೆಲವು ವಿವರಗಳು ಸ್ಪಷ್ಟವಾಗುತ್ತವೆ. ರಾಜಸ್ಥಾನ ಕಲಾಸಂಪ್ರದಾಯದಲಿದ್ದಂತೆ (16-17 ಶತಮಾನಗಳಲ್ಲಿ ಮೊದಲಾಗಿ 18ನೇ ಶತಮಾನದಲ್ಲಿ ಬಸ್ಸೊಲಿ, ಗುಲೇರ್, ಕಾಂಗಡಾ, ಘರ್ವಾಲ್ ಮೊದಲಾದ ಉಪಪ್ರಕಾರಗಳಾದ ಸಂಪ್ರದಾಯ) ಇಲ್ಲಿಯೂ

1. ಮಹಾ ಭಾರತ ರಾಮಾಯಣ, ಕೃಷ್ಣ ಲೀಲೆ.

2. ರಾಗ-ರಾಗಿಣಿ ಚಿತ್ರಗಳು

3 ಶೃಂಗಾರ ಪ್ರಧಾನವಾದ ಚಿತ್ರಗಳು

ಇವುಗಳಲ್ಲದೆ ಇಲ್ಲಿ ಸ್ವತಂತ್ರವಾದ ದೇವತಾ ಚಿತ್ರಗಳು (ವಿಷ್ಣುವಿನ ಅವತಾರಗಳು, ಶಿವನ ಲೀಲಾ ಮೂರ್ತಿಗಳು, ದೇವಿಯ ರೂಪಗಳು ಇತ್ಯಾದಿ) ಚಿತ್ರಕಲೆಗೆ ಅಲ್ಲಿದ್ದಂತೆ ಇಲ್ಲಿಯೂ ಭಿತ್ತಿ ಚಿತ್ರಗಳ ಪ್ರೇರಣೆಯ, ಸ್ವಭಾವವನ್ನೆ ಅಳವಡಿಸಿಕೊಂಡು ಕಿರು ಚಿತ್ರಗಳು ಸಿದ್ಧವಾದವು. ಚಿತ್ರಗಳ ಸ್ವಾರಸ್ಯ ಇರುವುದು ನೈಜನಿರೂಪಣೆಯಲ್ಲಲ್ಲ. ಭಾವದ್ಯೋತಕವಾದ ಸ್ವರೂಪದಲ್ಲಿ, ಅವೇನು ಮೆದುಳಿಗೆಂದು ಮೈದಳೆದವಲ್ಲ; ಹೃದಯ ಸಂವಾದ ಅವುಗಳ ಗುರಿ, ಮುಂದೆ ಮೊಗಲಾಯಿ ಸಂಪ್ರದಾಯದ ಪ್ರಭಾವದಿಂದ ರಾಜಸ್ಥಾನದ ಸಂದರ್ಭದಲ್ಲಿ ಕಾಣಿಸಿಕೊಂಡಂತೆ ಇಲ್ಲಿಯೂ ಸೇರಿಕೊಂಡವು. ಮುಮ್ಮುಡಿಯವರು ತಮ್ಮ ತಮ್ಮ ಪರಿವಾರದವರ, ತಮ್ಮ ಗುರು-ಹಿರಿಯರ ವ್ಯಕ್ತಿ ಚಿತ್ರಣಗಳನ್ನೆಲ್ಲ ಕಿರು ಪ್ರಮಾಣದಲ್ಲಿ ಮಾಡಿಸಿಟ್ಟುದನ್ನು ಈಗಾಗಲೇ ಅರಿತುಕೊಂಡಿದ್ದೇವೆ. ಇದು ಮೊಗಲಾಯಿ ಸಂಪ್ರದಾಯದ ಪರಿಚಯದ ಫಲವೆ.

ಚಿತ್ರಕಲೆಗೆ ಡಾ. ಮಿಣಜಗಿಯವರು ನೀಡಿದ ಅಪರೂಪದ ದೇಣಿಗೆ ಬಹು ಸೂಕ್ಷ್ಮವಾಗಿ ವಿಚಾರಿಸಿ ಸಂಯೋಜಿಸಿದ ರಾಗ-ಮಾಲಾ ಚಿತ್ರಗಳು, ತಮ್ಮ ಕಲಾ ಜೀವನದಲ್ಲಿಯೇ ತುಂಬ ತೃಪ್ತಿ ಪಟ್ಟುಕೊಂಡು ಚಿತ್ರಗಳಿವು. ಅವರು ಅಸಂಖ್ಯ ಚಿತ್ರಗಳನ್ನು ತಮ್ಮ ಕಲಾ ಜೀವನದಲ್ಲಿ ರಚಿಸಿದರು. ಭಾವಚಿತ್ರಗಳು, ಚಾಲುಕ್ಯ ಅರಸರ ಭಿತ್ತಿ ಚಿತ್ರಗಳು, ಬಾದಾಮಿ ಭಿತ್ತಿ ಚಿತ್ರಗಳು, ಶರಣ ಸಾಹಿತ್ಯದ ದೃಶ್ಯಾವಳಿ, ರೇಖಾ ಚಿತ್ರಗಳು ಪಹಾಡಿ ಚಿತ್ರಗಳು ಹೀಗೆ ಅವರು ರೂಪಿಸಿದ ಚಿತ್ರಗಳಲ್ಲಿ ವೈವಿಧ್ಯತೆಯ ಅಪಾರ ಅನುಭವ ಜ್ಞಾನವನ್ನು ಕಲ್ಪಕತೆಯ

[illegible]



ಚಿಂತೆಯನ್ನು ಕಾಣುವುದರ ಜೊತೆ ಜೊತೆಗೆ ಅವರಲ್ಲಿ ಹುದುಗಿದ್ದ ಬಹು ವ್ಯಾಪಕವಾದ ಕಲ್ಪಕತೆಯನ್ನು ನಾವು ಗುರುತಿಸಬಹುದಾಗಿದೆ. ರಾಗಮಾಲಾ ಚಿತ್ರಗಳು ಅವರ ಚಿಂತನ ಶೀಲತೆ ಹಾಗೂ ಅಪೂರ್ವವಾದ ಕಲ್ಪಕತೆಗೆ ನಿದರ್ಶನವೆನ್ನಬೇಕು. ಸಾಮಾನ್ಯವಾಗಿ ಕಲಾವಿದರು ಒಂದೊಂದು ಅಭಿವ್ಯಕ್ತಿಯಲ್ಲಿ ನೈಪುಣ್ಯವನ್ನು ಸಂಪಾದಿಸುವುದು ಒಂದುವಾಡಿಕೆಯಾಗಿರುವುದು. ಅದನ್ನು ತಮ್ಮ ವೈಶಿಷ್ಟ್ಯದ ಶೈಲಿಯಾಗಿ ಅವರು ರೂಪಿಸಿಕೊಂಡು,ಬೆಳೆಸಿಕೊಂಡು ಬರುವರು. ಆದರೆ ಮಿಣಜಗಿಯವರ ವಿಷಯದಲ್ಲಿ ವೈವಿಧ್ಯತೆಯನ್ನು ರೂಡಿಸಿಕೊಂಡಿದ್ದರೆನ್ನುದಕ್ಕಿಂತ ಜನ್ಮ ಜಾತಕ ಅದು ಅವರಲ್ಲಿ ಮೂಡಿಬಂದಿತ್ತು. ಆದ್ದರಿಂದ ಈ ವಿವಿಧತೆಯಲ್ಲಿಯೇ 'ರಾಗಮಾಲಾ ' ಚಿತ್ರಣ ಅವರು ನೀಡಿರುವ ಒಂದು ವಿಶಿಷ್ಟವಾದ ಕೊಡುಗೆ. ಇಲ್ಲಿ ಮಿಣಜಗಿಯವರ ಅಪೂರ್ವವಾದ ವ್ಯಕ್ತಿತ್ವದ ದರ್ಶನವೂ ಇದೆ ; ಅವರ ಸಂಯೋಜನೆಯ ಜ್ಞಾನದ ಅಘಾದತೆಯು ವ್ಯಕ್ತವಾಗಿದೆ. ಅಂತೆಯೇ ಇನ್ನಿತರ ಎಲ್ಲ ಚಿತ್ರಗಳಿಗಿಂತಲೂ ಒಂದು ವಿಭಿನ್ನವಾದ ಸ್ಥಾನವನ್ನು ಈ ಚಿತ್ರಗಳು ಪಡೆಯುತ್ತಿವೆಯೆಂದು ಹೇಳಬೇಕು.

"ರಾಗಮಾಲಾ"

'ರಾಗಮಾಲಾ' ಎಂದರೆ ರಾಗಗಳಿಂದ ಕೂಡಿದ ಮಾಲೆ ; ಹಲವಾರು ರಾಗಗಳನ್ನು ಯಾವುದಾದರೂ ಒಂದು ದೃಷ್ಟಿಯನ್ನಿರಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ವರ್ಗೀಕರಣ ಮಾಡಿ ಒಟ್ಟುಗೂಡಿಸುವುದು. ರಾಗಗಳಲ್ಲಿ ಪ್ರಧಾನ-ಅಪ್ರಧಾನ, ಸಂಪೂರ್ಣ-ಅಸಂಪೂರ್ಣ, ಜನಕ-ಜನ್ಯ, ಪ್ರಾಚೀನ-ಅರ್ವಾಚೀನ, ಘನ-ನಯ, ಮಾರ್ಗಿ-ದೇಶಿ, ಮೇಳಕರ್ತ-ಮೇಳಾಂತರ್ಗತ, ಎಂದು ಮೊದಲಾಗಿ ಹಲವು ವಿಂಗಡಣೆಗಳಾಗಿವೆಯಷ್ಟೆ. ಇವುಗಳಲ್ಲಿ ರಾಗ-ರಾಗಿಣಿ ವರ್ಗೀಕರಣವು ಒಂದು. ಕೆಲವು ರಾಗಗಳನ್ನು ಗಂಡು ಮತ್ತೆ ಹೆಣ್ಣು ಎಂದು ಹೇಳುವಾಗ ರಾಗ-ರಾಗಿಣಿ ಎಂದಾಯಿತು. ಎರಡು ಅಲ್ಲದ ನಪುಂಸಕ ರಾಗಗಳು ಇವೆಯೆನ್ನ ; ಹೆಣ್ಣು-ಗಂಡು ಗಳಿಂದ ಮೇಲೆ ಪುತ್ರ ರಾಗಗಳು ಇರಬೇಕಲ್ಲವೇ ? ಕಲ್ಪನೆಗೆ ಕಾಲಿರದ ಮೇಲೆ ಸೊಸೆ ರಾಗಗಳು, ದಾಸಿ ರಾಗಗಳು ಕಾಣಿಸಿಕೊಂಡವು ! ರಾಗ-ಕುಟುಂಬದ ಹರವು ಏನೇ ಇರಲಿ ರಾಗ-ರಾಗಿಣಿ ಎಂಬ ವಿಭಾಗ ಮಾತ್ರ ಗಟ್ಟಿಯಾಗಿ ನಿಂತಿತು.

ರಾಗವೆನ್ನುವ ಮಾತಿಗೆ ರಂಜಕತ್ವ ಗುಣವುಳ್ಳ ಸ್ವರಗಳ ಸಮುದಾಯ ಎಂದರ್ಥ. ರಂಜಕತ್ವವೆಂದರೆ ಮನಸ್ಸಿಗೆ ಸಂತೋಷವನ್ನುಂಟು ಮಾಡುವ ಶಕ್ತಿ. ರಾಗದಲ್ಲಿ ಹಾಸುಹೊಕ್ಕಾಗಿ ಸೇರಿಬರುವ ಸ್ವರ ಸಂಚಾರಕ್ಕೆ ಭಾವಾಭಿ ವ್ಯಂಜಕ ಸಾಮರ್ಥ್ಯವಿರುತ್ತದೆ. ಒಂದೊಂದು ರಾಗಕ್ಕೆ ಒಂದೊಂದು ಬಗೆಯ ರಂಜಕತ್ವ ; ಒಂದು ಬಗೆಯ ಭಾವವನ್ನು ಹೊರಹೊಮ್ಮಿಸುವ ಶಕ್ತಿ ಸ್ವರ ಸಂಖ್ಯೆ, ಸ್ವರ ಪ್ರಬೇಧ, ಸ್ವರ ಕ್ರಮ, ವರ್ಜ್ಯ ಸ್ವರ, ಅಂಶ ಸ್ವರ, ಅನ್ಯ ಸ್ವರ ಸಮಾವೇಶ ಮೊದಲಾದ ಲಕ್ಷಣಗಳನ್ನು ಗಮನಿಸಿ ರಾಗ ನಿರ್ದೇಶನ ವಾಗುತ್ತದೆ. ವ ಇವನ್ನೆಲ್ಲ ಮೀರಿ ರಾಗದಿಂದ ತೋರಿಕೊಳ್ಳುವ ಭಾವವೂ ಮುಖ್ಯವಲ್ಲವೆ ? ಈ ದೃಷ್ಟಿಯಿಂದ ರಾಗವೊಂದಕ್ಕೆ ನಿರ್ಧಿಷ್ಟ ರಸವೂ ಇದ್ದಿತು ಎಂದು ನಂಬುವವರಿದ್ದಾರೆ. ಮೋಹನದಲ್ಲಿ ಹರ್ಷ, ಅಠಾಣದಲ್ಲಿ ರೌದ್ರ, ಭೈರವಿಯಲ್ಲಿ ಕರುಣ, ದೇವಗಾಂಧಾರಿಯಲ್ಲಿ ವೀರ, ಕಾಂಬೋಜಿಯಲ್ಲಿ ಶೃಂಗಾರ, ಬೇಹಾಗಿನಲ್ಲಿ ಹಾಸ್ಯ, ತೋಡಿಯಲ್ಲಿ ಭಯಾನಕ, ನೀಲಾಂಬರಿಯಲ್ಲಿ ವಾತ್ಸಲ್ಯ, ಕಾನಡದಲ್ಲಿ ದೈನ್ಯ, ಧನ್ಯಾಸಿಯಲ್ಲಿ ಶಾಂತ, ಹೀಗೆ.

"ಭರತಶಾಸ್ತ್ರ" ವೆಂಬ ಗ್ರಂಥದಲ್ಲಿ ಸ್ವರಗಳೇ ರಸಗಳನ್ನು ಹೇಳಿದ್ದಾರೆ. ಷಡ್ಜಕ್ಕೆ ಕರುಣ, ವೃಷಭಕ್ಕೆ ವೀರ, ಗಾಂಧಾರಕ್ಕೆ ರೌದ್ರ, ಮಧ್ಯಮಕ್ಕೆ ಭೀಭತ್ಸ, ಪಂಚಮಕ್ಕೆ ಭಯಾನಕ, ದೈವತಕ್ಕೆ ಹಾಸ್ಯ, ನಿಷಾದಕ್ಕೆ



ಶೃಂಗಾರ ಈ ಪಟ್ಟಿ ಅಲ್ಲಿ ಬರುತ್ತದೆ. ಸ್ವರಗಳಿಗೆ ಹೀಗೆ ರಸಯೋಗವಿದ್ದ ಮೇಲೆ ಸ್ವರ ಸಂಯೋಗದಿಂದಾದ ರಾಗಕ್ಕೆ ಇರಬೇಡವೇ ? ರಾಗಮಾಲಾ ಚಿತ್ರಗಳಿಗೆ ಈ ಬಗೆಯ ರಸಾಭಿನಿವೇಶವೆ ಆಸರೆ.

ಡಾ. ಮಿಣಜಗಿಯವರಿಗೆ ಸಂಗೀತದ ಮೇಲೆ ಆಸಕ್ತಿ ಇದ್ದಿತು. ಅವರು ಸಂಗೀತಗಾರರಾಗಿಯೂ ಕೂಡ ಜನಪ್ರೀಯತೆಯನ್ನು ಗಳಿಸಿದ್ದರು. ಆದ್ದರಿಂದ ಸಂಗೀತಕ್ಕೆ ಸಾಹಿತ್ಯದ ಒತ್ತಾಸೆ ಇದ್ದದ್ದೇ ತಾನೆ ? ರಾಗದ ಅಭಿವ್ಯಕ್ತಿಯಾಗುವುದು ಹಾಡುವಾಗ ಹಾಡಿನಲ್ಲಿ ಸಾಹಿತ್ಯವಿದ್ದಾಗ ಭಾವ ಸ್ಪಷ್ಟವಾದೀತು. ರಾಗಮಾಲಾ ಚಿತ್ರಗಳ ಹಿನ್ನೆಲೆಯಲ್ಲಿ 'ಗೀತಗೋವಿಂದ' 'ರಸಿಕ ಪ್ರೀಯ' 'ಭಾಗವತ' ಮೊದಲಾದ ಕೃಷ್ಣಪರವಾದ ಗ್ರಂಥಗಳಿದ್ದವು ; ಪ್ರಸಂಗಗಳನ್ನು ಚಿತ್ರಕಾರರು ಅವುಗಳಿಂದ ಆಯ್ದುಕೊಂಡಿರುವುದುಂಟು. ನಾಯಕ-ನಾಯಿಕಾ ಬೇಧ, ಅಷ್ಟ ನಾಯಿಕೆಯರು, ಶೃಂಗಾರದ ಅವಸ್ಥಾವಿ ಶೇಷಗಳು, ಋತುವೈವಿಧ್ಯ ('ಬಾರಾಮಾಸ' ಮುಂತಾದ ಚಿತ್ರಗಳು) ಇವುಗಳಿಂದಲೇ ಸಾಮಗ್ರಿಗಳನ್ನು ಪಡೆದುಕೊಂಡು ರಾಗದ ರಸಾಭಿವ್ಯಕ್ತಿಗೆ ಚಿತ್ರಗಾರ ಯತ್ನಿಸುತ್ತಾನೆ.

ಯಾವುದಾದರೊಂದು ಕ್ರಮವರಿತು ರಾಗಗಳ ಸಂಖ್ಯೆಯನ್ನು ಗೊತ್ತುಮಾಡಿಕೊಂಡು ಅವಕ್ಕೆಲ್ಲ ಚಿತ್ರಗಳನ್ನು ಸಿದ್ಧಪಡಿಸುವ ಪದ್ಧತಿ 'ರಾಗಮಾಲಾ' ಎನಿಸಿಕೊಂಡಿತು. ಹಲವಾರು ರಾಗಚಿತ್ರಗಳು ಕೂಡಿಕೊಂಡರೆ ರಾಗಮಾಲೆ ಇದರಲ್ಲಿ ಮುಖ್ಯವಾದ ರಾಗವಿಭಜನೆಯೆಂದರೆ ವೀರ್ಯ, ಉತ್ಸಾಹ, ಸಾಹಸ ಮೊದಲಾದ ಪುರುಷ ಸಹಜವಾದ ಭಾವಗಳನ್ನು ತೋರಿಸುವ ಗಂಡು ರಾಗಗಳು, ಮಾರ್ದವ, ಕೋಮಲತೆ, ರತಿ ಮೊದಲಾದ ಸ್ತ್ರೀ ಸಹಜವಾದ ಭಾವಗಳನ್ನು ತೋರಿಸುವ ರಾಗಿಣಿಯರು ರಾಗಮಾಲಾ ಚಿತ್ರಗಳಿಗೆ ರಾಗ-ರಾಗಿಣಿ ಚಿತ್ರಗಳೆಂದು ಹೆಸರು ಬಂದಿರುವುದು ಹೀಗೆ. ರಾಗಮಾಲಾ ಚಿತ್ರಗಳ ನೆಲೆಯನ್ನು ಅರಿತುಕೊಳ್ಳಬೇಕೆಂದರೆ ರಾಗ-ರಾಗಿಣಿ ವಿಭಜನೆ ಗೊತ್ತುಗುರಿಯನ್ನು ಕೊಂಚ ತಿಳಿದುಕೊಳ್ಳಬೇಕಾಗುತ್ತದೆ. ಬಳಕೆಯಲ್ಲಿರುವ ರಾಗಗಳನ್ನು ವರ್ಗೀಕರಣ ಮಾಡುವ ಅಗತ್ಯವನ್ನು ನಮ್ಮ ದೇಶದಲ್ಲಿ ತುಂಬ ಹಿಂದೆಯೇ ಕಂಡುಕೊಂಡರು. ವರ್ಗೀಕರಣದಲ್ಲಿ ಮುಖ್ಯವಾಗಿ ಅವರು ಹಿಡಿದದ್ದು ಎರಡು ದಾರಿಗಳು-ರಾಗಗಳಲ್ಲಿರುವ ಸ್ವರ ಸಾಮಗ್ರಿಯನ್ನು ಗಮನಿಸಿ ಸಾದೃಶ್ಯವಿರುವ ರಾಗಗಳೆಲ್ಲ ಒಂದು ಗುಂಪು ಎಂಬುದು ಒಂದು ದಾರಿ ; ರಾಗಗಳು ತೋರಿಸುವ ಭಾವಗಳನ್ನು ಹಿಡಿದು ಭಾವ, ಸಾದೃಶ್ಯ ಇರುವ ರಾಗಗಳೆಲ್ಲ ಒಂದು ಗುಂಪು ಎಂಬುದು ಇನ್ನೊಂದು ದಾರಿ. ನಮ್ಮ ಸಂಪ್ರದಾಯದಲ್ಲಿ ಮೊದಲನೆಯ ದಾರಿಯೇ ಹೆಚ್ಚು ಬಳಕೆಗೆ ಬಂದದ್ದು. ದಕ್ಷಿಣಾದಿ ಸಂಗೀತವು ಇದೇ ದಾರಿಯನ್ನು ಹಿಡಿದು ಬಂದಿದೆ.

ಪರ್ಷಿಯನ್ ಸಂಗೀತದಲ್ಲಿ ಹದಿಮೂರನೆಯ ಶತಕದ ವೇಳೆಗೆ ರಾಗ ವಿಭಜನೆ ನಡೆದಿತ್ತು. ಜ್ಯೋತಿಷ್ಯದ ಹನ್ನೆರಡು ರಾಶಿಗಳನ್ನು ಹೆಸರಿಸಿ ಹನ್ನೆರಡು ಮುಖ್ಯ ರಾಗಗಳನ್ನು (ಮಕಾಮ್ ಅಥವಾ ಪರದಗಳು) ನಿರ್ದೇಶಿಸಿದ್ದರು. ಸಫಿ ಅಲ್ಲ-ದಿನ್-ಅಬ್ದುಲ್ ಮೊಯಿನ್ ಎಂಬುವವನು 12.4 ರಲ್ಲಿ ಬರೆದ 'ರಿಸಾಲತ್ ಅಲ್ ಶರಫೀಯಾ' ಎಂಬ ಗ್ರಂಥದಲ್ಲಿ ರಾಗಗಳ ಭಾವದೃಶ್ಯವನ್ನೆ ಹಿಡಿದು ಮಾಡಿದ ರಾಗ ವಿಭಜನೆ ಇದೆ ಎಂದು ಬಲ್ಲವರಿಂದ ಕೇಳಿದ್ದೇನೆ. ಮುಂದಿನ ಶತಕದೊಳಗೆ ಒಂದೊಂದು ಮುಖ್ಯ ರಾಗಕ್ಕೂ ಎರಡೆರಡು ಉಪರಾಗಗಳು, (ಶುಬರ್‌ಗಳು) ಸಿದ್ಧವಾದವು ; ಎಂದರೆ ಇಪ್ಪತ್ನಾಲ್ಕು ರಾಗಗಳಾದವು. ಬರಬರುತ್ತಾ ಪ್ರತಿ ಪರದದಲ್ಲೂ ನಾಲ್ಕು ಗುಶಾಹ್‌ಗಳೆಂಬ ಉಪರಾಗಗಳು, ಅವಾಜ್‌ಗಳೆಂಬ ಇತರ ರಾಗಗಳು ಕೂಡಿಕೊಂಡವು. ಪುಂಡರೀಕನ 'ರಾಗಮಂಜರಿ' ಯಲ್ಲಿ 'ಅನ್ಯೇಪಿ ಪಾರಸೀಕೆಯ ರಾಗಃ ಪರದನಾಮಕಾಃ ' ಎಂಬ ಉಲ್ಲೇಖ ಬರುವುದಲ್ಲದೇ ಪರ್ಶಿಯನ್ ಪರದಗಳ ಸಮಾನಚ್ಛಾಯೆಯುಳ್ಳ ರಾಗಗಳೇ ಇಲ್ಲಿಯೂ ಬಳಕೆಗೆ ಬಂದವು. ಭೈರವ (ಜ್ಸುಲುಪ್) ದೇಶಿಕಾರ (ಬಾಖ್‌ರೇಜ್ಸ್) ರಾಮಕ್ರಿಯ (ಮುಸಿಲೀಕ್), ಸೈಂಧವಿ (ಹಿಜ್ಸೇಜ್ಸ್),

[illegible]

ವೇಲಾವಲಿ (ಸರಪರದಾ), ಮಲ್ಹಾರ (ಬಾರಾ), ಕೇದಾರ (ಸುಹವಾ), ಧನ್ಯಾಸಿ (ಇರಾಖ್) ಸಾರಂಗ (ಮಾಹುರ್) ಬಂಗಾಳ (ಜ್ಹುಂಗೂಲ್) ಇತ್ಯಾದಿ ಸೊಮನಾಥನ್ 'ರಾಗವಿಭೋಧ' ದಲ್ಲೂ ಪರ್ಶಿಯನ್ ರಾಗಗಳ ಉಲ್ಲೇಖವಿದೆ. (1906) ಇದನ್ನೆಲ್ಲಾ ಗಮನಿಸಿದರೆ ಪರ್ಶಿಯನ್ನರು ರಾಗಭಾವವನ್ನು ಹಿಡಿದು ಮಾಡಿದ ವಿಂಗಡಣೆಯೇ ಭಾರತೀಯ ಸಂಗೀತದಲ್ಲೂ ಮೊಗಲಾಯಿ ಸಂಸ್ಕೃತಿ ಹರಡಿದ್ದಡೆ ಬಳಕೆಗೆ ಬಂದದ್ದು ಮನವರಿಕೆಯಾಗುತ್ತದೆ.

ಸಂಗೀತ ಪ್ರೀಯನು ಚಿತ್ರಗಾರನು ಆಗಿದ್ದ ಇಬ್ರಾಹಿಂ [1] (ಇಮ್ಮಡಿ) ಆದಿಲ್-ಶಾ ಬಿಜಾಪೂರ ಸಂಸ್ಥಾನವನ್ನು ಆಳುತ್ತಿರುವಾಗ (1558-1580) ಅಲ್ಲಿ (ಎಂದರೆ ದಕ್ಖಣಿ ಕಲಾಶೈಲಿಯಲ್ಲಿ) ಸಿದ್ಧವಾದ ಧನಾಶ್ರೀ ರಾಗಿಣಿಯ ಚಿತ್ರವೊಂದು ಉಳಿದು ಬಂದಿದೆ.[2] ಭಾರತೀಯ ವಸ್ತುವಿನ ಆದರೆ ಪರ್ಶಿಯನ್ ಮಾದರಿಯ ಈ ನಿರೂಪಣೆಯಲ್ಲಿ ಸೀರೆಯುಟ್ಟ ಸ್ತ್ರೀ ಯೊಬ್ಬಳು ತನ್ನ ಅಳಲನ್ನು ತೋಡಿಕೊಂಡು ಓಲೆಯೊಂದನ್ನು ಬರೆಯುತ್ತಿದ್ದಾಳೆ ; ಎಡಭಾಗದಲ್ಲಿ ಸೇವಕಿಯೊಬ್ಬಳು ಕುಳಿತಿದ್ದಾಳೆ, ಮತ್ತೊಬ್ಬಳು ಗಾಳಿ ಬೀಸುತ್ತಿದ್ದಾಳೆ, ನವಿಲೊಂದು ಪ್ರೇಮದ ಸಂದರ್ಭವೆಂದು ಸೂಚಿಸುತ್ತದೆ. ಅಹ್ಮದ್ ನಗರ ಸುಲ್ತಾನ್ ಹುಸ್ಸೇನ್ ನಿಜಾಂ-ಶಾ [3] ಕಾಲದಲ್ಲಿ ಸಿದ್ಧವಾದ ಮತ್ತೊಂದು ರಾಗಚಿತ್ರ (1575) ವಸಂತರಾಗದ್ದು. ರಾಗಮಾಲಾ ಚಿತ್ರ ಪದ್ಧತಿಯು ಬಿಜಾಪೂರದಲ್ಲೇ ಆರಂಭವಾಗಿತ್ತೆನ್ನುವ ಅಭಿಪ್ರಾಯವಿದೆ. [4]

ರಾಗಮಾಲಾ ಚಿತ್ರಕ್ಕೆ ಪ್ರೇರಣೆ :

ರಾಗಮಾಲಾ ಚಿತ್ರ ಪ್ರಕಾರಕ್ಕೆ ಪರ್ಶಿಯದ ಪ್ರೇರಣೆ ಇರಲಿ ಆದರೆ ಅದು ದಕ್ಖಣಿ ಕಲಾಪ್ರಕಾರದ ವಿವರವಾಗಿ ಮೈದಳೆದೆಂದು ಪರ್ಶಿಯದ ಮಕಾಂಗಳು ಅದರ ದೃಷ್ಟಿಯಲ್ಲಿರಲಿಲ್ಲ, ನಮ್ಮ ರಾಗಲಕ್ಷಣದ ರಾಗ- ಭಾವನಿರೂಪಣೆಯಂತೂ ನಮ್ಮ, ಸಂಗೀತ ಶಾಸ್ತ್ರಕ್ಕೆ ಅನುಸಾರವಾದುದೇ ದಾಮೋದರ-ಮಿಶ್ರನ 'ಸಂಗೀತ ದರ್ಪಣ' ವು ರಾಗ -ರಾಗಿಣಿಯರ ಧ್ಯೇಯ ಮೂರ್ತಿಗಳನ್ನು ಹೇಳಿದುದು ಬಿಜಾಪೂರದ ಚಿತ್ರಗಾರರು ರಾಗಮಾಲಾ ಚಿತ್ರಗಳನ್ನು ರಚಿಸಿದ ಮೇಲೆ ದಿಟ. ಆದರೆ ಸಂಗೀತ-ದರ್ಪಣವು ಪ್ರಮುಖವಾಗಿ ಒಂದು ಸಂಕಲನ ; ಹಲವು ಆಕರಳಿಂದ ವಿವರಗಳನ್ನೆಲ್ಲ ಎತ್ತುಕೊಂಡು ಮಿಶ್ರನು ಹಳೆಯ ಬರಹವೊಂದನ್ನವಲಂಬಿಸಿರಬಹುದು ; ಅದೇ ಬರಹವು ಬಿಜಾಪೂರ ಚಿತ್ರಕಾರರಿಗೆ ಸಾಮಗ್ರಿಯನ್ನು ಒದಗಿಸಿರಬಹುದು. ಬಿಜಾಪೂರದ ಸುಲ್ತಾನನು ಕಿತಾಬ್-ಇ-ಸೌರಸ್ ಗ್ರಂಥವನ್ನು ಸಿದ್ಧಪಡಿಸುವಾಗ ಹಲವಾರು ಈ ಬಗೆಯ ಬರಹಗಳನ್ನು ನೋಡಿದ್ದಾನೆ. ಅವನ ಸಂಗೀತ ಪ್ರೀತಿಯಲ್ಲಿ ರಾಗರಸಾಭಿನಿವೇಶವಿದ್ದುದು ಸ್ಪಷ್ಟವಾಗಿದೆ. ಅವನೂ ರಾಗ- ರಾಗಿಣಿಯರ ಧ್ಯೇಯ ರೂಪಗಳನ್ನು ಬಣ್ಣಿಸಿದ್ದಾನೆ.

---

೧. SHRIPAD BHANDOPADHYAY : The Magic of India, Page - 163
೨. ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್ (ಸಂ) : ಶ್ರೀ ತತ್ವ ನಿಧಿ ಪುಟ - ೬೦.
೩. ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್ (ಸಂ) : ಶ್ರೀ ತತ್ವ ನಿಧಿ ಪುಟ - ೬೦.
೪. ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್ (ಸಂ) : ಶ್ರೀ ತತ್ವ ನಿಧಿ ಪುಟ - ೬೦.



ಹೆರ್ಮನ್ ಗೋ ಏಟ್ಸ್ ದಕ್ಖಣಿ ಕಲಾಪ್ರಕಾರದಲ್ಲಿ ದಕ್ಷಿಣ ಪರ್ಶಿಯಾ, ಅರೇಬಿಯಾ, ಒಟ್ಟೋಮನ್ ಪ್ರಭಾವಗಳು ಇದ್ದುದನ್ನು ಎತ್ತಿಹೇಳುತ್ತಾನೆ.[5] ಆದರೆ ಭಾರತೀಯ ಪ್ರಭಾವವೇನಿದ್ದಿತೆಂದು ಆತ ವಿಚಾರಿಸಲಿಲ್ಲ. ಬಿಜಾಪೂರದ ಸುಲ್ತಾನನು 'ಕಿತಾಬ್-ಇ-ನೌರಸ್' ಬರೆಯುವಾಗ ಗಣಪತಿ ವಂದನ, ಸರಸ್ವತಿ ಸ್ತುತಿಗಳಿಂದಲೇ ಆರಂಭಿಸಿದ್ದು ಯಾವ ಪ್ರಭಾವದಿಂದ ? ಬಿಜಾಪೂರ, ಅಹ್ಮದ್ ನಗರಗಳ ರಾಗಮಾಲಾ ಚಿತ್ರಗಳಲ್ಲಿ ಕಂಡುಬರುವ ಸ್ತ್ರೀಯರ ವೇಷ-ಭೂಷಣಗಳು, ನಿಸರ್ಗದ ವೈಶಿಷ್ಯ, ಋತು ವೈಚಿತ್ರ್ಯ, ಶೃಂಗಾರ ಸಂದರ್ಭ ಇವೆಲ್ಲ ಪರ್ಶಿಯನ್, ಅರೆಬಿಯನ್ ಒಟ್ಟೋಮನ್ ಮೂಲದನಲ್ಲವಲ್ಲ ? ಕಿತಾಬ್-ಇ-ನೌರಸ್‌ದಲ್ಲಿ ಬರುವ ರಾಗನಿರೂಪಣೆ ಶುದ್ಧಾಂಗವಾಗಿ ನಮ್ಮ ಶಾಸ್ತ್ರವನ್ನನ್ನಿರಿಸಿಯೇ ಇದೆ. ಅಲ್ಲಿನ ಗೌರಿರಾಗ ಪಾರ್ವತಿಯೆ, ಭೈರವರಾಗ ಚಂದ್ರಚೂಡನಾದ ಶಿವನೆ, ಮಲ್ಹಾರ ರಾಗದಲ್ಲಿ ನಮ್ಮ ವರ್ಷಾಕಾಲದ ವರ್ಣನೆಯ ಇರುವುದು. ಮೇವಾಡದ ಸಾಹಿಬ್‌ದೀನನೆ ಬರೆದ ವಸಂತಾ ರಾಗಿಣಿ ಚಿತ್ರದಲ್ಲಿ (1628) ಕೃಷ್ಣನು ಮೂವರು ಗೋಪಿಯರೊಡನೆ ಇರುವುದೇ ಸಂದರ್ಭ ಬುಂಡಿಯ ಭೈರವಿ ರಾಗಿಣಿಯ ಚಿತ್ರದಲ್ಲಿ (1625-1640) ಹೆಂಗಳೆಯೊಬ್ಬಳು ಶಿವಲಿಂಗವನ್ನು ಪೂಜಿಸುತ್ತಿರುವುದಿದೆ.

ಈ ನಡುವೆ ಜೋಧವೆಂಬ ಕವಿ 1583 ರಲ್ಲಿ ಸಂಸ್ಕೃತದಲ್ಲಿ ಮಾಧವನಲ ಮತ್ತು ಕಾಮಕಂದಲೆಯರ ಶೃಂಗಾರ ಚೇಷ್ಟೆಗಳನ್ನು ಕುರಿತಾದ ಕಾವ್ಯವನ್ನು ಬರೆದು ಅದರಲ್ಲಿ ಪುರುಷ ಮತ್ತು ಸ್ತ್ರೀ ರಾಗಗಳ ವರ್ಣನೆಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದನು. ಇದನ್ನು ಹಿಂದಿಗೆ ಅನುವಾದ ಮಾಡಿದ ಅಲಂ ಎಂಬ ಕವಿಯು ಶಿಖರ ಗುರು ಗೋವಿಂದಸಿಂಹರವರ ಓಲಗದಲ್ಲಿದ್ದವನು. ಪುರುಷ -ಸ್ತ್ರೀ ರಾಗಗಳ ವಿಭಜನೆ ಆ ವೇಳೆಗಾಗಲೆ ಜನಪ್ರೀಯವಾಗಿದ್ದಿತೆಂದು ತೋರುತ್ತದೆ. ಶಿಖರ ಧರ್ಮಗ್ರಂಥವಾದ "ಗುರು ಗ್ರಂಥ ಸಾಹಿಬ" ದಲ್ಲಿಯೂ ಕಡೆಯಲ್ಲಿ ರಾಗಮಾಲೆಯ ಉಲ್ಲೇಖವಿದೆ. ಗುರು ಅರ್ಜುನ ದೇವನು 1604 ರಲ್ಲಿ ಇದರ ಸಂಕಲನವನ್ನು ಮಾಡಿದನೆಂದು ಪ್ರತೀತಿ ; ಅವನು ಅಕಬರನ ಕಾಲದಲ್ಲಿದ್ದವನು. ಅಲ್ಲಿನ ರಾಗಮಾಲೆಯ ಪಟ್ಟಿಯಲ್ಲಿ ರಾಗಿಣಿ ಎಂಬ ಹೆಸರೇನೋ ಕಾಣುವದಿಲ್ಲ. ಸ್ತ್ರೀರಾಗಗಳಿಗೆ ರಾಗಿಣಿಯರೆಂಬ ಹೆಸರು ಅನಂತರ ಬಳಕೆಗೆ ಬಂದಿತೋ ಏನೋ.

ರಾಗ ಚಿತ್ರಣಕ್ಕೆ ನೆರವಾಗುವ ಇನ್ನು ಒಂದು ಅಂಶವಿದೆ. ರಾಗಮಾಲೆಯ ಆರು ರಾಗಗಳಿಗೂ ಉತ್ತರ ದೇಶದಲ್ಲಿ ಕಂಡು ಬರುವ ಆರು ಋತುಗಳಿಗೂ ಸಂಬಂಧವಿದೆ. ಭೈರವ ಶರದೃತುವನ್ನು ಪ್ರತಿನಿಧಿಸುವುದಂತೆ ಪೈರಿಲ್ಲ ಬೆಳೆದು ನಿಂತು ಕಟಾವಿಗೆ ಅಣಿಯಾಗಿರುವ ಕಾಲ ಅದು ; ಗಾಳಿಯಲ್ಲಿ ಧೂಳಾಗಲಿ ನಸುಕಾಗಲಿ ಇರದೆ ತಿಳಿಯಾಗಿರುತ್ತದೆ. ಆಗ ತಾನೆ ಕುಯಿಲು ಮಾಡಿ ತಂದ ಧಾನ್ಯವನ್ನು ಶಿವನಿಗೆ ಸಮರ್ಪಿಸುವುದು ವಾಡಿಕೆ. ಆದುದರಿಂದಲೇ ರಾಗದ ಹೆಸರು ಭೈರವ ; ಅದರ ಮೂರ್ತಿ ಶಿವನೆ ಮಾಳವರಾಗ (ಮಾಲಖೌಸ್) ಹೇಮಂತ ಋತುವಿಗೆ ತಕ್ಕದ್ದು ; ಆಗ ಪ್ರಣಯಿಗಳು ಕೈ ತೆಕ್ಕೆಗಳಲ್ಲಿ ಹೆಣೆದುಕೊಂಡು ಮಲಗುವರು. ಶ್ರೀರಾಗ ಶಿಶಿರ ಋತುವಿಗೆ ಹೇಳಿದ್ದು ; ಬೆಟ್ಟದ ಮೇಲೆ ಮಂಜು, ಬಯಲಲ್ಲಿ ಇಬ್ಬನಿ ; ಪ್ರಣಯಿಗಳು ಹಚ್ಚಡದೊಳಗೆ ಬೆಚ್ಚನೆ ಮಲಗುವರು. ಹಿಂದೋಲಕ್ಕೋ ವಸಂತಕ್ಕೂ ಗಂಟು ; ಮಾವಿನ ಮರದಲ್ಲಿ ಚಿಗುರೊಡೆದು ಸುತ್ತ ಕಂಪು ಕೋಗಿಲೆಗಳು ಹಾಡುತ್ತಾ ಬರುವವು ; ಮುತ್ತುಗದ ಮರದಲ್ಲಿ ಕೆಂಪು ಹೂಗಳು ತಲೆಯೆತ್ತುವುವು. ದೀಪಕರಾಗ ಗ್ರೀಷ್ಮ ಋತುವಿನದು; ಬೇಸಿಗೆಯ ಬೇಗೆಯಿಂದ ನೆಲವೆಲ್ಲ ಕಾದು, ವಾತಾವರಣದಲ್ಲಿ ಧೂಳು

೫. ಲ ಪೇಂತೂರ : ಇಂಡಿಯನ್ ಗೆಜೆಟ್, ದಿ ಬೋ ಆರ್, ೧೩.೬, ಸ ಪುಟ -೨೭೭



ಕವಿಯುವುದು. ಮೇಘರಾಗ ವರ್ಷಾಕಾಲಕ್ಕೆ ಸರಿಯಾದುದು ; ಮಳೆಯಿಂದ ನೆಲವೂ ತೊಯ್ದುಗಾಳಿಯಲ್ಲಿ ತೇವ ಹಚ್ಚಿತಣ್ಣಗೆ ಬೀಸುತ್ತ ಇರುವಾಗ ಮಲ್ಲಿಗೆ ಹೂಗಳು ಅರಳುವುವು.

ರಾಗ ಚಿತ್ರಗಳಲ್ಲಿ ಬಳಸಿಕೊಳ್ಳುವ ಮತ್ತೊಂದು ವಿವರವೆಂದರೆ ರಾಗವನ್ನು ಹಾಡಲು ಸರಿಯಾದ ಕಾಲ ಆ ಕಾಲವನ್ನು ಚಿತ್ರಕಾರನು ಕಾಣಿಸಲು ಯತ್ನಿಸುತ್ತಾನೆ. ಭೈರವರಾಗವಾದರೆ ಮುಂಜಾನೆಗೂ ಮೊದಲು ರಾಮಕಲಿಯಾದರೆ ಮುಂಜಾನೆ (ಅರುಣೋದಯ) ವಿಲಾವಲಿಯಾದರೆ ಸೂರ್ಯೋದಯದ ಸಮಯ ಸಾರಂಗವಾದರೆ ನಡು ಹಗಲು (ಮಧ್ಯಾಹ್ನ) ನಟ ಅಥವಾ ಮಾಳವ ಎಂದಾದರೆ ಅಪರಾಹ್ನ, ಗೌಡಿಯಾದರೆ ಸಂಜೆ, ಕಲ್ಯಾಣವಾದರೆ ರಾತ್ರಿಯ ಮೊದಲಭಾಗ, ಕೇದಾರವಾದರೆ ರಾತ್ರಿ ಸರಿಹೊತ್ತು.

ನಾಯಕ-ನಾಯಿಕೆಯರ ಕಲ್ಪನೆಯೂ ಚಿತ್ರಣದಲ್ಲಿ ಸೇರಿಕೊಳ್ಳುತ್ತದೆ. ಅಷ್ಟ ನಾಯಿಕೆಯರನ್ನು ಪ್ರತ್ಯೇಕವಾಗಿಯೇ ಚಿತ್ರಿಸುವುದುಂಟು, ಅದರಲ್ಲಿಯೂ ಅಭಿಸಾರಿಕೆ, ವಾಸವಜ್ಜಿಕೆ, ವೀರಹೋತಂಠಿಕೆ, ಕಲಹಾಂತರಿತೆ ಇವರ ಚಿತ್ರಣ ಹೆಚ್ಚು ನಾಯಕರಲ್ಲಿಯೂ ಬಗೆ ಬಗೆಗಳನ್ನು ಕಾಣಿಸುವುದೂ ಇದೆ. ಭರತನ ಒಕ್ಕಣಿಗೆ ಅನುಗುಣವಾಗಿ ಅಲ್ಲದಿದ್ದರೂ ರಾಗ ಸಂದರ್ಭಕ್ಕೆ ತಕ್ಕಂತೆ ನಾಯಕ-ನಾಯಿಕೆಯರ ಪಾತ್ರ ರಾಗ ಚಿತ್ರಣದಲ್ಲಿ ಒದಗಿಬರುತ್ತದೆ. ಹದಿನಾರನೆಯ ಶತಮಾನದಿಂದ ಹಿಂದಿ ಭಾಷೆಯಲ್ಲೂ ಅದಕ್ಕೆ ಸೇರಿದ ಇತರ ಉಪಭಾಷೆಗಳಲ್ಲೂ ನಾಯಿಕೆಯರನ್ನು ಕುರಿತಂತೆ ಅನೇಕ ಕವಿತೆಗಳು ಮೂಡಿ ಬಂದವು. ಇವುಗಳಲ್ಲಿ ಕೆಲವು ರಾಗಮಾಲಾ ಚಿತ್ರಕಾರರ ಆಸಕ್ತಿಯನ್ನು ಸೆಳೆದವು.

ರಾಗ ಮಾಲಾ ಚಿತ್ರಗಳನ್ನು ಡಾ. ಮಿಣಜಗಿಯವರು ಬಹುವಾಗಿ ಮೆಚ್ಚಿಕೊಂಡಿದ್ದು ಅವರ ಮಾತುಗಳಿಂದಲೇ ಸ್ಪಷ್ಟವಾಗುವುದು.[6] ಈ ಚಿತ್ರಗಳು ರೂಪಿತವಾದುದು ಇಂಗ್ಲೆಂಡದಲ್ಲಿ ವ್ಯಾಸಂಗ ಪೂರೈಸಿ ಬಂದ ನಂತರ, ಆದ್ದರಿಂದ ಬಹು ಜನರ ಈ ಚಿತ್ರಗಳಿಗೆ ಆ ಶಿಕ್ಷಣದ ಪ್ರಭಾವವಾಗಿರಬೇಕು. ಅಲ್ಲಿಯ ಪರಿಣಾಮ ಬೀರಿರಬೇಕು ಎಂದು ಭಾವಿಸುತ್ತಾರೆ. ಅದನ್ನು ಮಿಣಜಗಿಯವರು ಕೂಡ ಒಪ್ಪಿಕೊಳ್ಳುತ್ತಾರೆ. ಈ ಬಗೆಯ ಚಿತ್ರರಚನೆಯನ್ನು ಕೈಕೊಳ್ಳಲು ನಾನಲ್ಲಿ ಪಡೆದ ವಿಭಿನ್ನವಾದ ಶಿಕ್ಷಣ ಬಹುಮಟ್ಟಿಗೆ ಕಾರಣ ಎಂದವರು ಒಪ್ಪಕೊಳ್ಳುವರಾದರೂ ಅದು ಇಂತಹುದೇ ಪರಿಣಾಮ ಎಂಬುದನ್ನು ಹೇಳಲು ತಮಗೆ ಸಾಧ್ಯವಿಲ್ಲ ಎಂದವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[7] ಲಂಡನ್‌ದಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ತಮ್ಮ ಕಲಾ ಗುರು ರೊಥೆನ್ ಸ್ಟೆನ್‌ರು ತುಂಬ ಪ್ರಭಾವಿ ರೀತಿಯಲ್ಲಿ ಬಹುವಾಗಿ ಮೂಡಿ ಬರುತ್ತಿದ್ದಾಗ ಇಂಥದರಲ್ಲಿಯೂ ಹೊಸದನ್ನೆನಾದರೂ ಮಾಡಬೇಕೆಂಬ ವಿಚಾರ ಅವರನ್ನು ಕಾಡುತ್ತಿರುವಾಗಲೇ ಅವರ ಸಂಗೀತ ಜ್ಞಾನವು ಅವರ ನೆರವಿಗೆ ಬಂದಿತು. ರಾವ್ ಬಹಾದ್ದೂರ ಸರೂಪ ಅವರು ಬರೆದ ಗ್ರಂಥದಲ್ಲಿ ಯಾವ ಯಾವ ರಾಗವು ಯಾವ ಯಾವ ಭಾಗವನ್ನು ಸೂಚಿಸುತ್ತದೆ ಎಂಬುದರ ವಿಶೇಷ ವಿವರಣೆಯನ್ನು ಗಮನಿಸಿದರು. ಇಂಥದೊಂದು ವಿಷಯವನ್ನು ತಾವು ಚಿತ್ರಗಳಿಗೆ ಏಕೆ ಆರಿಸಿಕೊಳ್ಳಬಾರದು ? ಅವುಗಳಲ್ಲಿ ಹೊಸತನವು ಸಂಪೂರ್ಣ ಭಾರತೀಯತೆಯೂ ಇರುವದರಿಂದ ಮತ್ತು ಮನದ ಇಂಗಿತವನ್ನು ಕೂಡ ವ್ಯಕ್ತಪಡಿಸಲು ಅವಕಾಶವಾಗುವದರಿಂದ ಇದು ಸರಿ ಹೋಗಬಹುದೆಂದು ಅವರಿಗೆ ಅನಿಸಿತು. ಇದನ್ನು ಹೇಗೆ ಸಾಧಿಸಬೇಕು ಎಂದವರು ವಿಚಾರಿಸತೊಡಗಿದರು. ಅದಕ್ಕನುಸಾರವಾಗಿ ಅವರು ಮುಂಬೈಯಲ್ಲಿಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಜಿಯಂದಲ್ಲಿ ಈ ವಿಷಯದ ಬಗೆಗೆ ವಿಶೇಷ ಅಧ್ಯಯನವನ್ನು ನಡೆಸಿದರು. ಅವರಿಗೆ ಸಹಾಯಕವಾಗುವ

---

೬. ಶ್ರೀ ಶಂಕರ ಪಾಟೀಲ: ಕಲಾತಪಸ್ವಿ ಮಿಣಜಗಿ, ಪುಟ-೨೯.
೭. ಶ್ರೀ ಶಂಕರ ಪಾಟೀಲ: ಕಲಾತಪಸ್ವಿ ಮಿಣಜಗಿ, ಪುಟ-೨೯.



ಸಾಮಗ್ರಿ ಅಲ್ಲಿ ದೊರೆತುದ್ದರಿಂದ ಮನಸ್ಸಿಗೆ ಸಮಾಧಾನವೆನಿಸಿತು. ಮೊಗಲ್ ಮತ್ತು ರಜಪೂತ ಶೈಲಿಗಳು ಮಿಣಜಗಿಯವರ ಕಣ್ಣ ಮುಂದೆ ಇದ್ದವು. ಅಲ್ಲಿ ಭಕ್ತಿ ಸಂಗೀತ ಮತ್ತು ಪೌರಾಣಿಕ ದೃಶ್ಯಗಳು ಬಹುಮಟ್ಟಿಗೆ ರೂಪಿತವಾಗಿದ್ದವೆಂಬುದನ್ನು ಅವರು ಗಮನಿಸಿದ್ದರು. ಮೂಲತಃ ಪರ್ಶಿಯಾದ ಶೈಲಿಯೆನಿಸಿದ ಮೊಗಲ್ ಶೈಲಿ, ರಜಪೂತ ಶೈಲಿಯ ಮೇಲೆ ಪ್ರಭಾವ ಬೀರಿದ್ದರೂ ಜಯದೇವ ಚಂಡಿದೇವ, ವಿದ್ಯಾಪತಿ, ಸೂರದಾಸ, ಮೀರಾಬಾಯಿ ವೊದಲಾಗಿ ಸಂತ ಭಕ್ತ ಕವಿಗಳ ಗೀತಗಳ ದೃಶ್ಯಣದಿಂದ ರಜಪೂತನಾ ಶೈಲಿ ಭಾರತೀಯತೆಯನ್ನು ಸ್ಪಷ್ಟವಾಗಿ ಪಡೆದು ನಿಂತಿತ್ತು.

ಡಾ. ಮಿಣಜಗಿಯವರು ತಮ್ಮ 'ರಾಗಮಾಲಾ' ಚಿತ್ರ ಮಾಲಿಕೆಯಲ್ಲಿ ರೂಪಿಸಿದ್ದು ರಾಗತೋಡಿ, ಮಾಲಕಂಸ, ಮೇಘ ಮಲ್ಹಾರ, ಗುರ್ಜರಿ, ಹಂಸಗತಿ, ಭರತನಾಟ್ಯ, ಮಾಲಾ, ಜೋಗಿಯೂ ಆಸವರಿ, ಭೋಪಾಲಿ, ಸೌರಾಷ್ಟ್ರ ಭೈರವಿ, ಈ ವೊದಲಾದವು ಅವರು ರೂಪಿಸಿದ 15 ಚಿತ್ರಗಳಲ್ಲಿ ಬಹುಮುಖ್ಯವಾದವೆಂದು ಹೇಳಬೇಕು. ತೋಡಿರಾಗದ ಅವರ ವರ್ಣಚಿತ್ರವು ಸಂಗೀತಗಾರರಲ್ಲಿ ತುಂಬ ಜನಪ್ರೀಯ ರಾಗ.

ತೋಡಿಯು ಹಳೆಯ ಸುಪ್ರಸಿದ್ಧ, ಜನಪ್ರೀಯ ರಾಗ ಮೇಳವೆಂದು (ಸಂಪೂರ್ಣ) ಪ್ರಾಚೀನವಾದ ಎಣಿಕೆ ! ರಾಗಮಾಲಾಕಾರನು ತೋಡಿಯಲ್ಲಿ ತುರುಷ್ಕ ತೋಡಿಯೆಂಬ ಇನ್ನೊಂದು ರಾಗವನ್ನು ಹೇಳಿ ಅವು ಹಿಂದೋಳದ ಪತ್ನಿಯರೆಂದು ನಿರ್ದೇಶಿಸಿದ್ದಾನೆ.[8]

ತೋಡಿ ರಾಗ ಸ್ವರೂಪ

ತುಷಾರ ಕಂಠೋಜ್ವಲದೆಹಯಷ್ಟಿಃ।
ಕಾಶ್ಮೀರ ಕರ್ಪೂರ ವಿಲಿಪ್ತದೆಹಃ।
ವಿನೋದಯಂತೀ ಹರಿಣಾನ್[1] ವನಾಂತೇ।
ವೀಣಾಧರಾ ರಾಜತಿ ತೋಡಿಕಾಖ್ಯಾ[2] ॥
ಯಿರಾಗ ಲಕ್ಷಣ ॥
ಮಧ್ಯಾಂಶಗ್ರಹನ್ಯಾಸಾ ಸೌವ್ವೀರೀ ಮಾರ್ಛನಾ ಮತಾ।
ಸಂಪೂರ್ಣ ಕಥಿತಾ ತಜ್ಞ್ಯೈಸ್ತೋಡೀ ಸ್ತ್ರೀ ಕೌಶಿಕೀ ಮತಾ ॥
ಗ್ರಹಾಂಶೌನ್ಯಾಸಷಡ್ಜಾಶ್ಚ ಕೆಚಿದತ್ರ ಸಮೂಚಿರೇ ॥
(ಮೂರ್ಛನಾ ॥)
ಮಪಧನಿಸರಿಗಮ ॥

1 ಹರಿಣೆ
2 ತೋಡಿಕೇಯಂ ॥)

ಅನೇಕ ಪ್ರಸಿದ್ಧ ಸಂಗೀತಗಾರರು ಕೂಡ ಅದನ್ನು ಮೆಚ್ಚಿಕೊಂಡರು. ಮುಂಬೈ ಹೈದರಾಬಾದ,

---

೮. ರತಾನ್ ಜನಕರ ಮತ್ತು ಬರ್ವೆ (ಸಂ) : ಪುಂಡರೀಕ ವಿಠಲ (ಅನು) : ರಾಗ ಮಾಲಾ , ಪುಟ-೧೩.೫



ಲಖನೌ,[9] ಆರ್ಟ ಗ್ಯಾಲರಿಗಳಲ್ಲಿ ಮಾತ್ರವಲ್ಲ. ಬೋಸ್ಟನ್‌ದ ಆರ್ಟ ಗ್ಯಾಲರಿಯಲ್ಲಿ [10] ಕೂಡ ಇವರ ಮೂಲ ವರ್ಣ ಚಿತ್ರಗಳು ಪ್ರದರ್ಶಿತವಾದವು.[11] ಈ ಜನಪ್ರೀಯತೆಗೆ ಒಂದು ನಿದರ್ಶನವೆಂದೇ ಹೇಳಬೇಕು,ಬಹುಶಃ ಮಿಣಜಗಿಯವರು ಈ ಸಂಗೀತವನ್ನು ಆಲಿಸುತ್ತಲೇ ಈ ವಿಶಿಷ್ಟವಾದ ಪೂರ್ಣವಾದ, ಬಹು ಆಕರ್ಷಕವಾದ ವರ್ಣ ಚಿತ್ರವನ್ನು ರೂಪಿಸಿದ್ದಕ್ಕೆ ಅವರ ಇಂಥ ಒಂದು ವಿಶೇಷತೆಗೆ ಮುಖ್ಯವಾದ ಕಾರಣವಾಗಿರಬೇಕು. ಅದೇನೆ ಇದ್ದರೂ ರಾಗಮಾಲಾ ಚಿತ್ರಣದಲ್ಲಿ ಮಿಣಜಗಿಯವರು ಅದ್ವಿತೀಯ ಯಶವನ್ನು ಪಡೆದರೆಂಬುದು ಐತಿಹಾಸಿಕ ಸತ್ಯ. ಇಲ್ಲಿ ರಾಗಗಳನ್ನು ತಮ್ಮ ಕಲ್ಪನೆಯಲ್ಲಿ ಸೆರೆ ಹಿಡಿದು ಕುಂಚದಿಂದ ವಿಶಿಷ್ಟತೆಯಿಂದ ಮೂಡಿಸಿದ್ದನ್ನು ಕಾಣಬಹುದು. ಅಲ್ಲಿಯ ವರ್ಣ ಸಂಯೋಜನೆ ಕೂಡ ತುಂಬ ಪರಿಪೂರ್ಣ ವಾದುದು. ಅಸಾಧಾರಣ ಕಲಾವಿದನೇ ಇಂಥ ಅಪೂರ್ವ ಚಿತ್ರಗಳನ್ನು ರೂಪಿಸುವುದು ಸಾಧ್ಯವೆಂಬುದನ್ನು ಯಾರು ಒಪ್ಪುವರು. ಅವರ ಅಗಾಧವಾದ ಪ್ರತಿಭೆಗೆ ಈ ರಾಗಮಾಲಾ ಚಿತ್ರಗಳು ಸಾಕ್ಷಿಭೂತವಾಗಿ ಎಂದೆಂದಿಗೂ ನಿಲ್ಲುವವು ಎಂಬ ಮಾತನ್ನು ನಿಸ್ಸಂದಿಗ್ಧವಾಗಿ ಹೇಳಬಹುದು. ಅವರು ನಮ್ಮ ಮಧ್ಯದಲ್ಲಿಲ್ಲ, ಆದರೆ ಈ ಚಿತ್ರಗಳಿಂದ ಅವರು ನಮ್ಮ ಮಧ್ಯದಲ್ಲಿ ಮನದಲ್ಲಿ ಶಾಶ್ವತವಾಗಿ ನೆಲನಿಂತಿದ್ದಾರೆಂಬುದನ್ನು ನೆನೆದಾಗ ಕಲಾವಿದನಿಗೆ, ಕಲಾವಿಮರ್ಶಕರಿಗೆಲ್ಲ ಅನಿರ್ವಚನೀಯವಾದ ಆನಂದವೆನಿಸುವುದು. ಅಂತಹ ಅದ್ಭುತವಾದ ಕಲಾಸೃಷ್ಟಿ ಮಿಣಜಗಿಯವರದು. ಡಾ. ಮಿಣಜಗಿ ಸಂಗೀತದಲ್ಲೂ ಅಗಾಧವಾದ ಜ್ಞಾನ ಪಡೆದವರು. ಪಾಂಡಿತ್ಯವನ್ನು ಸಂಪಾದಿಸಿದವರು. ಮಿಣಜಗಿ ಚಿತ್ರಕಲಾವಿದರಾದರು ಸಂಗೀತಗಾರನನ್ನು ಅಂತರ್ಯದಲ್ಲಿ ಹುದುಗಿಸಿ ಮೇಲುಗೈ ಪಡೆದವರು ಎಂಬುದಕ್ಕೆ ರಾಗಮಾಲಾ ಚಿತ್ರಗಳು ಎಂದೆಂದಿಗೂ ನಿದರ್ಶನವಾಗಿವೆ. ಅವರ ಕಲಾನೈಪುಣ್ಯಕ್ಕೆ ಸಾಕ್ಷಿಯಾಗಿ ನಿಂತಿರುವ ಈ ಚಿತ್ರಗಳು ಆ ದಶಕದ ಶ್ರೇಷ್ಠ ಚಿತ್ರಕಲಾವಿದರೆನಿಸಿದ್ದರೆಂಬ ಮಾತನ್ನು ಬಹುಸ್ಪಷ್ಟವಾಗಿ ಸಾರುತ್ತಿವೆ.

ಡಾ. ಮಿಣಜಗಿಯವರ ಮೇಲಾದ ಪ್ರಭಾವ ಪ್ರೇರಣೆ :


ಸಾಂಪ್ರದಾಯಕ ಪಾರಂಪರಿತ ಚಿತ್ರಣಗಳಿಗಿಂತ ತುಂಬ ಭಿನ್ನವಾದ ಹೊಸ ಪರಂಪರೆಯನ್ನು ರೂಢಿಸುವ ಯತ್ನವಾಗಿ ಡಾ. ಮಿಣಜಗಿ ರಾಗಮಾಲಾ ಚಿತ್ರಗಳನ್ನು ರೂಪಿಸಿದ್ದಾರೆ. ಲಂಡನ್‌ದಿಂದ ಮರಳಿ ಬಂದು ಅವರು ಮುಂಬೈಯಲ್ಲಿ ಕಲಾವಿದರಾಗಿ ಹಲವಾರು ಚಿತ್ರಗಳನ್ನು ರೂಪಿಸಿದಾಗ ಅವರ ಮನಸ್ಸು ಏನಾದರೂ ಹೊಸದನ್ನು ನಿರ್ಮಿಸಬಯಸಿತು. ಹೀಗೆ 1935 ರಿಂದ ಅವರ ಈ ಹೊಸ ಚಿತ್ರ ಪರಂಪರೆ ಪ್ರಾರಂಭವಾಯಿತು. ಈ ಹೊಸ ಚಿತ್ರಗಳ ನಿರ್ಮಾಣಕ್ಕೆ ಅವರ ಮೇಲೆ ಪ್ರಭಾವ ಬೀರಿದವರು ಹಲವರು ವಿದ್ವಾಂಸರು, ಓ.ಸಿ. ಗಂಗೂಲಿ, ಆನಂದ ಕುಮಾರಸ್ವಾಮಿ, ಭಟ್ಟಾಚಾರ್ಯ ಹಾಗೂ ರಾವ್ ಬಹಾದ್ದೂರ ಸ್ವರೂಪ ಇವರ ಕೃತಿಗಳ ಪಠಣ ಡಾ. ಮಿಣಜಗಿಯವರನ್ನು ಮುಗ್ಧಗೊಳಿಸಿದ್ದಲ್ಲದೇ ತುಂಬ ಪರಿಣಾಮವನ್ನು ಬೀರಿದವು. ಹೊಸದಕ್ಕೆ ಪ್ರೇರಣೆ ನೀಡಿದವು. ಇದರಿಂದ ಪ್ರಿನ್ಸ್ ಆಫ್ ವೇಲ್ಸ ಮ್ಯೂಸಿಯಂದಲ್ಲಿ ಅಧ್ಯಯನ ನಡೆಸಿದರು. ಐಕೋನೊಗ್ರಫಿ, ಮತ್ತಿತರ ವಿಷಯಗಳನ್ನು ಆಳವಾಗಿ ಪರಿಶೀಲಿಸಿದರು. ತಮಗೆ ಸಾಕಷ್ಟು

---

೯. ಡಾ. ಪಾಟೀಲ ಪುಟ್ಟಪ್ಪ: ಸಂದರ್ಶನ ದಿನಾಂಕ ೧೯-೧೦-೨೦೦೪
೧೦. ಎಸ್.ಹಿರೇಮಠ:ಸಂದರ್ಶನ ದಿನಾಂಕ ೫-೧೦-೨೦೦೪
೧೧. ಶಂಕರ ಪಾಟೀಲ: ಕಲಾತಪಸ್ವಿ ಮಿಣಜಗಿ, ಪುಟ-೩೦,

ಸಂಗೀತ ಜ್ಞಾನವಿದ್ದರೂ ಈ ಹೊಸ ಚಿತ್ರಗಳ ಬಗೆಗೆ ಸಂಗೀತ ಇನ್ನು ಹೆಚ್ಚಿನ ಅರಿಕ ಇರಲೆಂದು ಪಂಡಿತ ಶಂಕರ ಬುವಾ ಮಿರಜಕರ ಅವರಲ್ಲಿ ಮತ್ತೆ ಸಂಗೀತಾಧ್ಯಯನ ನಡೆಸಿದರು. ಹೀಗೆ ಅವರು ನಾನಾ ರೀತಿಯಲ್ಲಿ ಸಂಪೂರ್ಣವಾಗಿ ಅಣಿಗೊಂಡೇ ಈ ರಾಗಮಾಲಾ ಚಿತ್ರಗಳ ನಿರ್ಮಾಣಕ್ಕೆ ಇಳಿದುದನ್ನು ನೋಡಿದಾಗ ಅವರ ಅಗಾಧ ಅಧ್ಯಯನ ಶೀಲತೆಯ ಪರಿಚಯವಾಗುವುದು. ಪರಿಪೂರ್ಣತೆಗೆ ಅವರೆಷ್ಟು ಮಹತ್ವ ಕೊಡುತ್ತಿದ್ದರೆಂಬ ಅಂಶವು ಇಲ್ಲಿ ಕಂಡು ಬರುತ್ತದೆ.

ಮಿಣಜಗಿಯವರು ರಚಿಸಿದ ಕಲಾಕೃತಿಗಳ ಅಧ್ಯಯನ














ಬ್ರಹ್ಮ ದೇವ ದೃಶ್ಯ. ಸಂಗ್ರಹ: ಕರ್ನಾಟಕ ಲಿಂಗಾಯತ ಸೊಸಾಯಿಟಿ. ಧಾರವಾಡ











ಲಿಂಗ ದೀಕ್ಷೆ. [illegible]





ಕಾಮದಹನ ದೃಶ್ಯ. ಸಂಗ್ರಹ : ಕರ್ನಾಟಕ ಲಿಂಗಾಯತ ಸೊಸಾಯಿಟಿ, ಧಾರವಾಡ



ಪೌರಾಣಿಕ ಸನ್ನಿವೇಶಗಳ ಚಿತ್ರಣಗಳು :

ಚಿತ್ರ 8 ಜಲಂಧರನ ನಾಮಕರಣ ದೃಶ್ಯ ಈ ಚಿತ್ರವು ತೈಲವರ್ಣದಿಂದ ರಚಿಸಿದ್ದಾಗಿದೆ, ಬ್ರಹ್ಮದೇವನು, ಚಿತ್ರವು ಸತ್ಯಂ ಶಿವಂ ಸುಂದರಂ ಎಂಬಂತೆ, ಬ್ರಹ್ಮನನ್ನು ಚಿತ್ರಿಸಿದ್ದಾರೆ, ಬ್ರಹ್ಮನು. ಮಗುವನ್ನು ತನ್ನ ತೊಡೆಯ ಮೇಲೆ ಎತ್ತುಕೊಂಡಿದ್ದು, ಬ್ರಹ್ಮನ ಪಂಜೆಯನ್ನು (ದೋತಿ) ಕೆಂಪು ವರ್ಣದ ಹಾಗೂ ಮಗುವಿನ ಮೇಲ್ಮೆಯ ಬಟ್ಟೆಯನ್ನು ಹಸಿರು ಬಣ್ಣದಿಂದ ಕೂಡಿದ್ದಾಗಿದೆ ಹಿಂಬದಿಯ ನಿಸರ್ಗಚಿತ್ರವು ಅತ್ಯಂತ ಮನಮೋಹಕವಾಗಿದ್ದು, ಆಕಾಶ ಮೋಡಗಳು , ಸಮುದ್ರವು ನೈಜಕತೆಯನ್ನು ಕಂಡುಕೊಂಡಿದೆ. ಅಂತೆಯೇ ಬ್ರಹ್ಮನ ಮುಂದೆ ಕೈ' ಮುಗಿದು ಕುಳಿತಿರುವ ಮನುಷ್ಯನು ನಯ, ವಿನತೆಯ ಮೂಲಕ ನಮ್ರತೆಯನ್ನು ಕಲ್ಪಿಸಿದ್ದಾನೆ. ಮುಂಭಾಗದಲ್ಲಿ ಹಸಿರು ಹಾಗೂ ತಿಳಿಹಳದಿ ವರ್ಣದಿಂದ ಸಮುದ್ರದ ಕಲ್ಪನೆಯನ್ನು ತೋರಿಸಿದ್ದಾರೆ, ಬ್ರಹ್ಮನ ಚಿತ್ರವಂತೂ ಅತ್ಯಂತ ಮನೋಹಕವಾಗಿ ಡಾ. ಮಿಣಜಗಿಯವರು ತೋರಿಸಿದ್ದಾರೆ ಈ ಕಲಾಕೃತಿಯೂ ಕರ್ನಾಟಕ ಲಿಂಗಾಯತ ಸೊಸಾಯಿಟಿ ಧಾರವಾಡ ಇದರ ಸಂಗ್ರಹದಲ್ಲಿರುತ್ತದೆ, ಈಗ ಕಲಾಕೃತಿಯೂ ನೋಡಲು ಸಹ ಕಾಣುವದಿಲ್ಲ.

ಚಿತ್ರ 9 ಲಿಂಗಧಾರಣೆ ಈ ಕಲಾಕೃತಿಯು ತೈಲವರ್ಣದಿಂದ ರಚಿಸಿದ ಕಲಾಕೃತಿಯಾಗಿದೆ. ಈ ಕಲಾಕೃತಿಯು ಬಿಜ್ಜಳ ಅರಮನೆಯಲ್ಲಿ ಬಸವಣ್ಣನವರು ಓದುತ್ತಿರುವ ದೃಶ್ಯವಾಗಿರುತ್ತದೆ. ಎದುರಿಗೆ ಸಿದ್ಧರಾಮನು ಲಿಂಗದೀಕ್ಷೆಗೆ ಕುಳಿತಿರುವ ಚಿತ್ರವೂ ಹಾಗೂ ಅಕ್ಕಪಕ್ಕದಲ್ಲಿ ಭಾವಪೂರ್ಣವಾದ ಶಿವಶರಣರೂ,ಜಂಗಮರು ಸಿದ್ಧರಾಮನ ಲಿಂಗದೀಕ್ಷೆಗೆ ಅತ್ಯಂತ ಭಕ್ತಿಪೂರ್ವಕವಾಗಿ ಕುಳಿತಿರುವ ದೃಶ್ಯವನ್ನು ಡಾ. ಮಿಣಜಗಿ ಚಿತ್ರಿಸಿದ್ದಾರೆ. ಅಕ್ಕಪಕ್ಕದಲ್ಲಿ ಅರಮನೆಯ ಚಿತ್ರ, ಮಂಟಪ, ಸಿಂಹಾಸನದಿಂದ ಕೂಡಿರುತ್ತದೆ. ಒಟ್ಟಾರೆಯಾಗಿ ಈ ಚಿತ್ರವನ್ನು ಅವಲೋಕಿಸಿದಾಗ ಅಲ್ಲಿ ಅರಮನೆಯಲ್ಲಿ ನಡೆದ ದೃಶ್ಯ ವಿಜೃಂಭಿಸುಂತೆ ಕೆಂಪು, ಹಸಿರು, ಬಂಗಾರದ ವರ್ಣ ಲೇಪನ ವಿಭೂತಿ ಕಳಸಗಳಿಂದ ಕಂಗೋಳಿಸುವಂತೆ ಮಿಣಜಗಿಯವರ ಕ್ರಿಯಾಶೀಲತೆಯನ್ನು ವರ್ಣಗಳ ಮೂಲಕ ಕಾಣಿಸಿದ್ದಾರೆ. ಈ ಚಿತ್ರವೂ ಕೂಡ ಕರ್ನಾಟಕ ಲಿಂಗಾಯತ ಸೊಸಾಯಿಟಿ ಧಾರವಾಡ ಇವರ ಸಂಗ್ರಹದಲ್ಲಿ ಇದ್ದಿತು. ಈ ಚಿತ್ರವೂ ಸಹಿತ ಈಗ ಕಂಡು ಬರುವದಿಲ್ಲ.

ಚಿತ್ರ 10 ಕಾಮದಹನ ದೃಶ್ಯ ಈ ಕಲಾಕೃತಿಯು ತೈಲವರ್ಣದಿಂದ ಕೂಡಿದ್ದು ಇಲ್ಲಿ ಏಕವರ್ಣದಿಂದ ಅತ್ಯಂತ ವಿರಳ ಬಣ್ಣದಿಂದ ಕಲಾಕೃತಿಯನ್ನು ರಚಿಸಿದ್ದಾರೆ. ಶಿವ ತನ್ನ ಮೂರನೆಯ ಕಣ್ಣಿನಿಂದ ಕಾಮವನ್ನು ದಹನ ಮಾಡುತ್ತಿರುವ ದೃಶ್ಯವಾಗಿರುತ್ತದೆ. ಶಿವ ತನ್ನ ಕೊರಳಲ್ಲಿ ಹಾವು ಹೆಡೆಯೆತ್ತಿ ಆಡುತ್ತಿರುವ ದೃಶ್ಯವಾಗಿದೆ. ಮುಂಭಾಗದಲ್ಲಿ ಅತ್ಯಂತ ದಟ್ಟವಾದ ವರ್ಣವನ್ನು ಲೇಪಿಸಿ ಅಲ್ಲಿ ಶಿವನ ಏಕಾಗ್ರತೆಯನ್ನು ಕಾಮದಹನ ಮಾಡುತ್ತಿರುವಂತೆ ತನ್ನ ಮೂರನೇ ಕಣ್ಣನ್ನು ಬಿಂಬಿಸಿದ್ದಾರೆ. ಈ ಎಲ್ಲಾ ವರ್ಣ ಚಿತ್ರಗಳು ಚನ್ನಬಸವ ಪುರಾಣದ ಗ್ರಂಥದಲ್ಲಿ ಪ್ರಕಟಗೊಂಡಿರುತ್ತವೆ. ಈ ಕಲಾಕೃತಿಗಳನ್ನು ಹುಡುಕಿಕೊಂಡು ಶೋಧನೆಗೆ ಹೋದಲ್ಲಿ ನಿರಾಶೆಯಾಗುವುದುಂಟು. ಈ ಎಲ್ಲಾ ಕೃತಿಗಳು ಯಾರ ವಶದಲ್ಲಿವೆ ಎಂಬುದೇ ನಿಗೂಢವಾಗಿದೆ.

ಡಾ. ಮಿಣಜಗಿಯವರ ರಾಗಮಾಲಾ ಕಲಾಕೃತಿಗಳು

ರಾಗಮಾಲಾ ಚಿತ್ರಗಳನ್ನು ರೂಪಿಸುವಾಗ ಅವರು ರಜಪೂತ ಶೈಲಿಯನ್ನು ಬಹುಮಟ್ಟಿಗೆ ಅನುಸರಿಸಿದ್ದರೂ ಅನೇಕ ಸಂದರ್ಭಗಳಲ್ಲಿ ತಮ್ಮ ಕಲ್ಪನೆಗಳನ್ನು ಮೆರೆದು ತೋರಿಸಿದ್ದಾರೆಂಬುದೂ ಅಷ್ಟೇ

[illegible]

ಖಚಿತವಾಗಿದೆ. ಪ್ರತಿಯೊಂದು ರಾಗದ ವೈಶಿಷ್ಟ್ಯವನ್ನು ಅವರು ಸ್ವತಃ ಅರಿತವರಾದುದು ಈ ಚಿತ್ರಗಳಲ್ಲಿ ಎದ್ದು ಕಾಣುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಅವರು ತಮ್ಮದೇ ಆಗಿರುವ ಬದಲಾವಣೆಗಳನ್ನು ಮಾಡಿದ್ದಾರೆ. ಮೇಘ ಮಲ್ಹಾರ ಚಿತ್ರಣದಲ್ಲಿ ಪಹರಿ ಶೈಲಿಗಿಂತ ಭಿನ್ನವಾದ ರೀತಿಯಲ್ಲಿ ತಮ್ಮ ಚಿತ್ರವನ್ನು ರೂಪಿಸಿದ್ದಾರೆ. ಇಲ್ಲಿ ಪುರುಷರ ಆಕೃತಿಗೆ ಬದಲಾಗಿ ಸ್ತ್ರೀಯ ಆಕೃತಿಯನ್ನು ತೋರಿಸಿದ್ದಾರೆ. ಈ ಚಿತ್ರಗಳನ್ನು ತುಂಬ ಮೆಚ್ಚಿಕೊಂಡವರು ಕನ್ನಡದ ಶ್ರೇಷ್ಠ ಸಾಹಿತಿಗಳಾದ ದಿ. ಅ.ನ. ಕೃಷ್ಣರಾಯರು ಮಿಣಜಗಿಯವರ ಅತ್ಯಂತ ಆತ್ಮೀಯ ಮಿತ್ರರೂ ಆಗಿದ್ದರು. ಲಲಿತ ಕಲಾವಿಮರ್ಶೆಗೆ ಹೆಸರಾಗಿದ್ದ ಅ. ನ.ಕೃ ಮಿಣಜಗಿಯವರನ್ನು ಬಹುವಾಗಿ ಪ್ರಶಂಸಿದ್ದು ಈ ಚಿತ್ರಗಳಿಗಾಗಿ ಭಾವಸಂಗಮದ ಸಾಮರಸ್ಯವನ್ನು ಇವರಷ್ಟು ಸ್ಪುಟವಾಗಿ ಎತ್ತಿ ತೋರಿಸಿದವರು ಬೇರಾರೂ ಇಲ್ಲವೆಂದು ಹೇಳಬೇಕೆಂದರೆ ಮಿಣಜಗಿಯವರು ಅ.ನ.ಕೃ ಮೇಲೆ ಅದೆಷ್ಟೊಂದು ಪ್ರಭಾವ ಬೀರಿದ್ದಾರೆಂಬುದನ್ನು ಕಾಣಬಹುದು. ಅವರ ಕಲಾಪ್ರತಿಭೆಗೆ ಮಾರುಹೋದ ಅ.ನ.ಕೃ ಮಿಣಜಗಿ ಪ್ರಕೃತಿಚಿತ್ರವನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವ ಅದ್ಭುತ ನಿದರ್ಶನ ಇಲ್ಲಿದೆ ಎಂದು ಹೇಳುವಾಗ ಕಲಾವಿಮರ್ಶಕರೂ ತಲೆದೂಗುವರು.

ಚಿತ್ರ ಸಂಗೀತ ಕಲೆಗಳ ಒಂದು ಪ್ರೇಮ ಸಮನ್ವಯವೇ ಈ ರಾಗಮಾಲಾ ಚಿತ್ರಾವಳಿಯೆಂಬುದು ಅ.ನ.ಕೃ ಅವರ ಖಚಿತವಾದ ಅಭಿಪ್ರಾಯ ವೆನಿಸಿದೆ. ಮೂಲ ಕಂಸ ರಾಗದಲ್ಲಿ ಕರುಣ ರಸ ಕಾವ್ಯ ರಸಗಳಿಗೆ ಪ್ರಾಧಾನ್ಯ ಅದನ್ನು ಮಿಣಜಗಿಯವರು ನಲ್ಲ ನಲ್ಲೆಯರು ಮುನಿಸಿದ ರೂಪದಲ್ಲಿ ಚಿತ್ರಸಿ ತೋರಿಸುವದು. ಅವರ ನೈಪುಣ್ಯಕ್ಕೆ ಒಂದು ನಿದರ್ಶನವೆನಿಸಿದೆ. ಮುನಿಸುಗೊಂಡ ನಲ್ಲ ನನ್ನ ಪ್ರಿಯತಮೆ ಕಾತುರದಿಂದ ನಿರೀಕ್ಷಿಸುತ್ತಿದ್ದಾಳೆ, ಅವಳು ಸ್ಪರ್ಶಿಸಬಂದಾಗ ಅವಳ ಕೈಯನ್ನು ಕಿತ್ತೆಸೆಯತ್ತಾನೆ. ಮುನಿಸು ಅವನನ್ನು ಕಾಡತೊಡಗಿದೆ ಆದರೂ ಕೊನೆಗೆ ನಲ್ಲೆಯ ಆಹ್ವಾನಕ್ಕೆ ಸೋಲುತ್ತಾನೆ. ಹೀಗೆ ಬಹು ಸಹಜವಾದ ರೀತಿಯಲ್ಲಿ ರಸ ವಿಕಾಸವಲ್ಲಡಗಿರುವುದನ್ನು ಕಾಣಬಹುದು. ಈ ರಾಗಚಿತ್ರ ಅವರ ನೈಪುಣ್ಯಕ್ಕೂ, ಭಾವುಕತೆಗೂ ವಿದ್ವತ್ತೆಗೂ ಚಿಂತನಕ್ಕೂ ಸ್ಪುಟವಾದ ನಿದರ್ಶನವಾಗಿ ಸಹಜ ಸುಂದರವಾಗಿ ಅರಳಿ ನಿಂತಿದೆ. ಅದೇ ರೀತಿ ತೋಡಿರಾಗವು ಸಂಗೀತಗಾರರಿಗೆ ತುಂಬ ಪ್ರೀತಿಯ ರಾಗವೆನಿಸಿದೆ. ಗಂಭೀರವಾದ ಭಕ್ತಿಪ್ರದರ್ಶನದ ಮೂಲಕ ಈ ರಾಗ ವಿನ್ಯಾಸವನ್ನು ಡಾ. ಮಿಣಜಗಿ ಬಹು ಸೊಗಸಾಗಿ ಬಿಡಿಸಿ ತೋರಿಸಿರುವರು. ಈ ರಾಗಮಾಲಿಕಾ ಚಿತ್ರಗಳ ಮೂಲಕ ಭಾರತೀಯವೆನಿಸಿದ ಪಹಡಿ ವಿನ್ಯಾಸವನ್ನು ಹೆಚ್ಚು ಅಮೋಘವಾಗಿ ತಮ್ಮದೇ ಆದ ಶೈಲಿಯಲ್ಲಿ ಬೆಳಗಿಸಿ ತೋರಿಸಿದ ಶ್ರೇಯಸ್ಸು ಮಿಣಜಗಿಯವರದು.

“ಮೇಘ ಮಲ್ಹಾರವನ್ನು ಕೂಡ ಮೂಲಕ್ಕಿಂತ ಭಿನ್ನವಾಗಿ ತೋರಿಸುವದರಲ್ಲಿ ಮಿಣಜಗಿಯವರು ಅಪೂರ್ವ ಯಶವನ್ನು ಸಂಪಾದಿಸಿರುವರು. ಹೀಗೆ ಕರ್ನಾಟಕದ ಬಹು ವೈಶಿಷ್ಟ್ಯಪೂರ್ಣವಾದ ಚಿತ್ರಕಲಾ ಸಂಪ್ರದಾಯವನ್ನು ಬಹು ಸೊಗಸಾಗಿ ಬೆಳಸಿಕೊಂಡು ಬರುವಲ್ಲಿ ಇವರು ಸಲ್ಲಿಸಿದ ಸೇವೆ ಅಸದೃಶವಾದುದು ಅನುಪಮವಾದುದು”. ಎಂದವರು ಹೇಳುವಾಗ ಇಲ್ಲಿ ಮಿಣಜಗಿಯವರ ಚಿತ್ರಕಲೆಯ ಅಂತರ್ಯವೇ ನಮಗೆ ಎದ್ದು ತೋರುವುದು, ಇದು ಅವರೊಬ್ಬರ ಮೆಚ್ಚಿಕೆಯ ಮಾತಲ್ಲ. ಈ ಮೂಲಕವಾಗಿ ಹರಡಿಕೊಂಡ ನಾಡಿನ ಮೆಚ್ಚಿಕೆಯ ಮಾತಿನ ಮಾಲೆಯೇ ಆಗಿ ಪರಿಣಮಿಸಿತು, ಭಾರತೀಯ ಸಂಸ್ಕೃತಿಯನ್ನು ಮಿಣಜಗಿ ಅದೆಷ್ಟು ಆಳವಾಗಿ ಅರಿತಿದ್ದರು ; ತಮ್ಮ ಕಲಾ ಜೀವನದಲ್ಲಿ ಅದನ್ನು ರೂಢಿಸಿಕೊಂಡಿದ್ದರೆ ಎಂಬುದನ್ನು ಕೂಡ ನಾವು ಅರಿಯಬಹುದಾಗಿದೆ. ಈ ಚಿತ್ರಗಳ ಮೂಲಕ ಮಿಣಜಗಿ ತಮ್ಮ ಉದಾತ್ತವಾದ ಅಭಿರುಚಿಯನ್ನು ಮೆರೆದು ತೋರಿದನ್ನು ಕೂಡ ಯಾವ ಕಲಾ ವಿಮರ್ಶಕನಾದರೂ ಮೆಚ್ಚಿಕೊಳ್ಳಲೇಬೇಕು.

[illegible]



'ರಾಗಮಾಲಾ' ಮಿಣಜಗಿಯವರು ರೂಪಿಸಿದ ಅಪರೂಪದ ಸೃಷ್ಟಿ ಯಾವ ದೃಷ್ಟಿಯನ್ನು ನಾವು ಕಾಣುತ್ತೇವೆಂಬುದು ಈ ಬಗ್ಗೆ ತಿಳಿಸಿದ ಹಲವಾರು ಮಾತುಗಳಿಂದಲೇ ವ್ಯಕ್ತವಾಗುತ್ತದೆ[12]. ರಾಗಮಾಲಾದಲ್ಲಿ ಕೆಲವೊಂದು ರಸಗಳಷ್ಟನ್ನೇ ಚಿತ್ರಿಸಿರುವ ಬಗೆಗೆ ವಿವರಿಸುವಾಗ ರಾಗಗಳು ಹೆಚ್ಚಾಗಿ ಶೃಂಗಾರ, ಶಾಂತಕರುಣ ರಸಗಳನ್ನಷ್ಟೆ ಪ್ರತಿಪಾದಿಸುತ್ತವೆ.[13] ಹೀಗಿರುವದರಿಂದ ತೆಗೆದುಕೊಳ್ಳುವುದು ಸ್ವಾಭಾವಿಕ ಎಂದು ಹೇಳಿ ಸಂಗೀತಕ್ಕೂ ಕೂಡ ಎಲ್ಲ ರಸಗಳು ಹೊಂದಿಕೆಯಾಗುವದಿಲ್ಲ, ಎಂದು ತಿಳಿಸಿರುವರು. ಮಿಣಜಗಿಯವರು ಸಂಗೀತದ ಆಗಾಧ ಜ್ಞಾನವಿದ್ದುದು ಇದಕ್ಕೆ ಸಹಾಯವಾಗಿದ್ದುದು ನಿಜ, ಆದರೆ ಎಲ್ಲ ಇಂಥ ಚಿತ್ರಕಾರರಿಗೆ ಸಂಗೀತದ ಪರಿ ಜ್ಞಾನವಿರಲೇಬೇಕೆಂದೆನೂ ಅಲ್ಲ ಎಂಬುದು ಅದರ ಸ್ಪಷ್ಟವಾದ ಅಭಿಪ್ರಾಯ ತಮ್ಮ ಈ ಅಭಿಪ್ರಾಯವನ್ನು ಇನ್ನೊಂದು ರೀತಿಯಲ್ಲಿ ಪುಷ್ಟಿಕರಿಸುವರು. ಎಲ್ಲ ಚಿತ್ರ ವಿಮರ್ಶಕರು ಚಿತ್ರಕಲಾವಿದರಾಗುವದಿಲ್ಲ. ಆನಂದ ಕುಮಾರ ಸ್ವಾಮಿಗಳ ಒಳ್ಳೇ ವಿಮರ್ಶಕರಾಗಿದ್ದರು. ಆದರೆ ಅವರೇನೂ ಚಿತ್ರ ಕಲಾವಿದರಾಗಿರಲಿಲ್ಲ. ಆದರೆ ಚಿತ್ರಕಲೆಯ ಬಗೆಗೆ ಅವರಿಗೆ ಒಳ್ಳೆ ಅರಿಕೆಯಿತ್ತೆಂಬುದನ್ನು ನಾವಿಲ್ಲಿ ಮರೆಯಬಾರದು ಎನ್ನುತ್ತಾನೆ. ಹಾಗೆಯೇ ಇಂಥ ಚಿತ್ರಗಳನ್ನು ನಿರ್ಮಿಸುವ ಚಿತ್ರಕಾರನಿಗೆ ಸಂಗೀತದ ಅರಿಕೆಯಿದ್ದರೆ ಸಾಕು, ಎನ್ನುತ್ತಾರೆ ಮಿಣಜಗಿಯವರು.

ಬಣ್ಣಗಳ ಸಂಯೋಜನೆಯ ಬಗೆಗೂ ತಮ್ಮದೇ ಆದ ಖಚಿತವಾದ ಅಭಿಪ್ರಾಯವನ್ನು ಹೊಂದಿದ್ದರು. ಹಲವು ಬಗೆಯ ಮಣ್ಣು, ಕಲ್ಲು,ಚಿನ್ನ, ಬೆಳ್ಳಿ ಅರೆದು ನುಣ್ಣಗೆ ಮಾಡಿ ಬಣ್ಣವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಹೊಳಪು ಬರುವುದಕ್ಕಾಗಿ ರಂಗೋಲಿ ಪುಡಿ, ಗಜ್ಜುಗ, ಕವಡೆ ತಿಕ್ಕುತ್ತಿದ್ದರು. ಅಭ್ರಕ ಪಾರಜವನ್ನು ಉಪಯೋಗಿಸುತ್ತಿದ್ದರು. ದಿಲ್ಲಿಯ ವೈಸ್ ರೀಗಲ್ ಲಾಜ್‌ದಲ್ಲಿ ನಾನು ಬರೆದ ಚಿತ್ರಕ್ಕೆ ಅಂಚು ಸೆರಗುಗಳಿಗೆ ಪ್ರಖರವಾದ ವರ್ಣಸಂಯೋಜನೆ ಮಾಡಬಹುದೆಂಬುದನ್ನು ನಿರೂಪಿಸಿರುವರು. ಹೀಗಿರುವದರಿಂದ ಇಲ್ಲಿ ವರ್ಣ ಸಂಯೋಜನೆ ತುಂಬ ಹೊಂದಾಣಿಕೆಯದೆನಿಸುವದೆಂಬುದು ಅವರ ಅಭಿಪ್ರಾಯ, ಚಿತ್ರಕಾರ ತಮ್ಮ ಚಿತ್ರಗಳನ್ನು ಗಮನಿಸಿ ಈ ಬಗೆಯಲ್ಲಿ ವರ್ಣಗಳನ್ನು ಅಣಿಗೊಳಿಸಿಕೊಳ್ಳಬೇಕಾಗುವದೆಂಬುದು ಅವರ ಅಭಿಪ್ರಾಯವಾಗಿದ್ದಿತು.[14]

ಚಿತ್ರಗಳಿಂದ ರಾಗಗಳನ್ನು ಗುರುತಿಸುವುದು ಹೇಗೆ ಸಾಧ್ಯ ? ವಿವಿಧ ಚಿತ್ರಕಾರರು ವಿವಿಧ ರಾಗಗಳನ್ನು ಭಿನ್ನ ಭಿನ್ನ ಬಗೆಯಲ್ಲಿ ಚಿತ್ರಿಸಬಹುದಲ್ಲ ? ಅಂಥ ಸಂದರ್ಭದಲ್ಲಿ ಯಾವ ಚಿತ್ರವು ಯಾವ ರಾಗದ್ದೆಂದು ಹೇಗೆ ಹೇಳಬಹುದು ಎಂಬುದಕ್ಕೆ ಅವರು ಹೇಳುವ ಮಾತುಗಳು ಬಹು ಸ್ಪಷ್ಟವಾಗಿವೆ.[15] ಒಂದೊಂದು ರಾಗಕ್ಕೂ ಒಂದೊಂದು ಸಂಕೇತವಿದೆ, ತೋಡಿರಾಗದ ಮೇಲೆ ಚಿತ್ರ ರಚಿಸುವಾಗ ಹಾವಭಾವ, ಬಣ್ಣ ರೂಪ ಇವುಗಳಲ್ಲಿ ವ್ಯತ್ಯಾಸ ಮಾಡಬಹುದು. ಆದರೆ ಮೂಲ ಉದ್ದೇಶ ಮಾತ್ರ ಯಾವ ಕಾಲಕ್ಕೂ ಚ್ಯುತಿ ಬರುವಂತಿಲ್ಲ ಹೀಗಿರುವದರಿಂದ ಆಯಾ ಚಿತ್ರವು ಇಂತಹದೇ ರಾಗದ್ದೆಂದು ಸುಲಭವಾಗಿ ಗುರುತಿಸುವದು ಸಾಧ್ಯವಾಗುವದೆಂದು ಹೇಳುವ ಮಾತಿನಲ್ಲಿ ಸಂಪೂರ್ಣತಥ್ಯವಿದೆ ; ಚಿತ್ರಗಳ ವಿಮರ್ಶಕರಿಗೆ ಪ್ರೇಕ್ಷಕರಿಗೆ ಅರ್ಥವಾಗುವಂತಿರುವುದು. ಈ ಮಾತುಗಳನ್ನು ಮೆಲುಕು ಹಾಕುವಾಗ ಚಿತ್ರಕಲೆಯನ್ನು ಸಾಮಾನ್ಯರ

---


೧೨. Rewanasiddhayya Hanneradumath; Minajigi Artist & the Man, Page -17.

೧೩. ಗವೀಶ ಹಿರೇಮಠ ; ಎಂ.ವ್ಹಿ.ಮಿಣಜಗಿ, ಪುಟ-೧೩.

೧೪. ಗವೀಶ ಹಿರೇಮಠ ; ಎಂ.ವ್ಹಿ.ಮಿಣಜಗಿ, ಪುಟ-೧೪.

೧೫. ಶಂಕರ ಪಾಟೀಲ : ಕಲಾ ತಪಸ್ವಿ; ಮಿಣಜಗಿ, ಪುಟ -೩೬

[illegible]



ದೃಷ್ಟಿಯಿಂದ ಕೂಡ ವಿಚಾರಿಸುತ್ತಿದ್ದರು. ಅವರಿಗೂ ಅವು ಸುಲಭವಾಗಿ ಅರ್ಥವಾಗಬೇಕು. ಮನವರಿಕೆಯಾಗಬೇಕು, ಎಂದು ಅಪೇಕ್ಷಿಸುತ್ತಿದ್ದರೆಂಬ ಮಾತು ಅರಿವಿಗೆ ಬರುವುದು. ತಮ್ಮ ಚಿತ್ರಕಲೆ ಎಲ್ಲರನ್ನು ಮೆಚ್ಚಿಸುವಂತೆ ರೂಪಗೊಳ್ಳಬೇಕು. ಎಂಬ ಅಪೇಕ್ಷೆ ಕೂಡ ಬಲವಾಗಿದ್ದಿತೆಂಬ ಮಾತು ಇಲ್ಲಿ ವಿಶದವಾಗುವುದು.

ರಾಗಮಾಲಾ [16] "ಚಿತ್ರಗಳಲ್ಲಿ ಹೆಣ್ಣಿಗೆ ಪ್ರಾಧಾನ್ಯವಿರುವದು ಸಾಮಾನ್ಯವಾಗಿ ಕಂಡು ಬರುವ ನೋಟ, ಹೆಣ್ಣಿನ ಹಲವಾರು ಮುಖಗಳು ಈ ರಾಗಗಳ ಭಾವವನ್ನೂ ಸ್ಫುಟಗೊಳಿಸುವರು. ಅವರೇ ಚಿತ್ರದ ಈ ಬಗೆಯ ವಸ್ತುಗಳಾಗಿರುವದುಂಟು, ಹೀಗೇಕೆ, ಎಂಬ ಪ್ರಶ್ನೆಗೆ ನೀಡುವ ಸಮಾಧಾನ ಬಹು ಅರ್ಥಪೂರ್ಣ, ಶೃಂಗಾರ, ಕರುಣ ಹಾಗೂ ಶಾಂತರಸಗಳು ಕೋಮಲವೆಂದು ಗ್ರಹಿಕೆ, ಹೆಣ್ಣು ಕೋಮಲತೆಯ ಪ್ರತೀಕವೆನಿಸಿದ್ದಾಳೆ. ಹೀಗಿರುವಾಗ ಹೆಣ್ಣಿನ ಚಿತ್ರಗಳಿರುವದು ಸ್ವಾಭಾವಿಕವಲ್ಲವೇ? ಎಂದು ಕೇಳುತ್ತಾರೆ,[17] ಈ ಬಗೆಯ ಚಿತ್ರಗಳನ್ನು ಕುರಿತು ವಿವರಿಸುವಾಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವರು, ಅಲ್ಲಿ ಅಡಗಿರುವ ಚಿಂತನೆ ತಾರ್ಕಿಕತೆಗಳ ಬಗೆಗೂ ಅವರು ವಿಶದೀಕರಿಸುವರು, ಭಾರತೀಯ ಚಿತ್ರಗಳು ಮನುಷ್ಯ ಮನುಷ್ಯನಲ್ಲಿಯೇ ಮೋಹವನ್ನು ಚಿತ್ರಿಸಿಲ್ಲ, ಖ್ಯಾತ ವಿಚಾರವಾದಿ ಚಿಂತಕ ಮ್ಯಾಕ್ಸಮುಲ್ಲರ ಹೇಳಿರುವಂತೆ ನಮ್ಮ ಈ ಚಿತ್ರಗಳೆಲ್ಲ ಸದಾಕಾಲವೂ ಎದ್ದಾಗಲೇ ಇರಲಿ, ಕುಳಿತಾಗಲೇ ಇರಲಿ, ಯಾವುದೇ ಸಂದರ್ಭದಲ್ಲಿ ಪೂಜನೀಯ ಭಾವನೆ ಒಡೆದು ಕಾಣುತ್ತದೆ. ಇಲ್ಲಿ ಕಂಡು ಬರುವ ವಿರಹವೂ ಕೂಡ ಮನುಷ್ಯನಿಗಾಗಿ ಅಲ್ಲ. ದೇವರಿಗಾಗಿ ಎಂದದವರು ವಿವರಿಸಿದಾಗ ಈ ಬಗೆಯ ಚಿತ್ರಗಳನ್ನೂ ನೋಡುವಾಗ ತಮ್ಮಲ್ಲಿ ಮೂಡಿ ನಿಲ್ಲಬೇಕಾದ ಉದಾತ್ತ ಭಾವನೆಯ ಅರಿವು ತಂತಾನೆ ಸ್ಫುಟವಾಗುವದು. ನಮ್ಮ ಮನದಲ್ಲಿ ಹೃದಯದಲ್ಲಿ ಗೌರವನೀಯವಾದ ಭಾವನೆ ಸ್ಮರಿಸುವದು. ಡಾ, ಮಿಣಜಗಿಯವರ ಚಿತ್ರಿಕರಣದ ದೃಷ್ಟಿ ಎಷ್ಟೊಂದು ವಿಶಾಲವಾದುದು; ಅದು ಎಂಥ ಅದ್ಭುತ ರಮ್ಯವಾದದು, ಎಂಬುದನ್ನು ಇಲ್ಲಿ ಕಾಣುತ್ತೇವೆ. ಭಾರತೀಯರು ಅದು ಯಾವುದೇ ಇರಲಿ, ಅಲ್ಲಿ ಸಾಮಾನ್ಯವಾಗಿ ದೈವತ್ವವನ್ನು ಕಾಣುತ್ತಾರೆಂಬುದನ್ನು ಅವರು ಸೋದಾಹರಣವಾಗಿ ನಿರೂಪಿಸಿ ನಮ್ಮ ಕೊಡುಗೆ ಸಣ್ಣದೇನಲ್ಲ; ಅದು ವಿಶ್ವಮಾನ್ಯವಾದುದು. ಎಂಬುದನ್ನು ಶ್ರುತಪಡಿಸಿದ್ದಾರೆ. ಅದೇ ರೀತಿಯಲ್ಲಿ ಅವ್ಯಕ್ತವಾದ ನಾದಕ್ಕೆ ಚಿತ್ರರೂಪದಲ್ಲಿ ವ್ಯಕ್ತರೂಪವನ್ನು ನೀಡುವದು ಎಷ್ಟೊಂದು ಸಮಂಜಸವಾದುದು; ಉದಾತ್ತವಾದುದು, ಎಂಬುದರ ಕಲ್ಪನೆಯೂ ಕೂಡ ಮಿಣಜಗಿಯವರಿಗೆ ಇತ್ತು ಎಂಬುದು ಸ್ಫುಟವಾಗಿದೆ. ಈ ಬಗೆಗೆ ಅವರು ಹೇಳುವದನ್ನು ಎಲ್ಲಿ ಗಮನಿಸಬೇಕು. ಧರ್ಮ, ಅವ್ಯಕ್ತ ರೂಪವಾದರೆ ಸಮಾಜ ಅದರ ವ್ಯಕ್ತ ಸ್ವರೂಪವಾಗಿದೆ. ಧರ್ಮ ಸಮಾಜದ ನಾನಾ ಮುಖಗಳಲ್ಲಿ ಅಭಿವ್ಯಕ್ತವಾಗುತ್ತದೆ. ಭಾರತೀಯರು ಎಲ್ಲ ವಸ್ತುಗಳಲ್ಲಿ ದೇವತಾ ಸ್ವರೂಪವನ್ನು ಕಾಣುತ್ತಾರೆ.ಅಂತೆಯೇ ಒಂದೊಂದು ರಾಗಕ್ಕೂ ಒಂದೊಂದು ರಸ ಒಂದೊಂದು ಅಭಿಮಾನಿ ದೇವತೆ ಇವುಗಳಲ್ಲಿ ಕಲ್ಪಿಸಿದ್ದಾರೆ. ನಾಯಕ-ನಾಯಿಕಾ ಬೇಧ ಮೊದಲಾದ ಅಲಂಕಾರಗಳನ್ನೆಲ್ಲ ಸೇರಿಸಿ ಬರೀ ಶ್ರಾವ್ಯವೇ ಆದ ಸಂಗೀತವನ್ನು ಚಿತ್ರ ರೂಪದಲ್ಲಿ ನಿರ್ಮಿಸಿದ್ದಾರೆ. ಕವಿಯ ಹೊಂದುವ ಪಡೆಯುವ ಸ್ಫೂರ್ತಿಯಂತೆಯೇ ಕಲಾವಿದನ ಸ್ಫೂರ್ತಿಯು ಇರುತ್ತದೆ. ಈ ಮಾತುಗಳಿಂದ ಮಿಣಜಗಿಯವರು ರಾಗಮಾಲಾ ಚಿತ್ರಗಳ ಹಿರಿಮೆಯನ್ನು ವೈಶಿಷ್ಟ್ಯವನ್ನು ವಿಶದಪಡಿಸಿದ್ದಾರೆ.

---

೧೬. ಪಿ.ಆರ್. ತಿಪ್ಪೆಸ್ವಾಮಿ : ಪ್ರಶಸ್ತಿ ಪಡೆದ ಕಲಾವಿದರು, ಪುಟ -೫೫
೧೭. ಶಂಕರ ಪಾಟೀಲ : ಕಲಾ ತಪಸ್ವಿ ಮಿಣಜಗಿ, ಪುಟ -೩.೭

[illegible]



ಸಂಗೀತದ ಮಾಧುರ್ಯವನ್ನು ಶ್ರೋತೃಗಳು ಆಲಿಸಿ ಸವಿಯುವಂತೆ ಚಿತ್ರಗಳಲ್ಲಿ ಅದು ಅಭಿವ್ಯಕ್ತವಾಗಿರುವುದನ್ನು ಅಷ್ಟೆ ಚೆನ್ನಾಗಿ ಸವಿಯಲು ಸಾಧ್ಯ ಎಂಬುದನ್ನು ಡಾ. ಮಿಣಜಗಿಯವರು ಚಿತ್ರಗಳನ್ನು ರೂಪಿಸುವುದುರ ಮುಖಾಂತರ ಶೃತಪಡಿಸುವುದರ ಜೊತೆಗೆ ಅವುಗಳಲ್ಲಿ ವಿಶೇಷತೆ ಇರುವದೇನು ಎಂಬುದನ್ನು ಹಲವಾರು ರೀತಿಯಲ್ಲಿ ನಿರೂಪಿಸಿಯೂ ತಿಳಿಸಿದ್ದಾರೆ. ಹೀಗೆ ಭಾರತೀಯ ಕಲೆಗೆ ಈ ರಾಗಮಾಲಾ ಕರ್ನಾಟಕದ ಒಂದು ಅಪರೂಪದ ದೇಣಿಗೆಯಾಗಿ ಪರಿಣಮಿಸಿದ್ದು ಅವು ಎಂದೆಂದಿಗೂ ಮಾಸದ ಕಲಾಕೃತಿಗಳೆನಿಸಿವೆ. ಇಂಥ ಒಂದು ಹಿರಿಯ ಕೀರ್ತಿ ನಮಗೆ ಲಭಿಸಿದುದು ಕನ್ನಡಿಗರ ಒಂದು ಪುಣ್ಯ ವಿಶೇಷವೇ ಸರಿ. ಅದನ್ನು ದೊರಕಿಸಿ ಕೊಟ್ಟ ಕರ್ನಾಟಕದ ಮಹಾನ ಕಲಾವಿದ ಡಾ. ಮಿಣಜಗಿಯವರನ್ನು ನಾವು ಸದಾ ಕೃತಜ್ಞತೆಯಿಂದ ನೆನೆಯಬೇಕು. ಭಾರತೀಯ ಚಿತ್ರರಂಗದ ನಕ್ಷೆಯಲ್ಲಿ ಭಾರತವನ್ನು ವರ್ಣಮಯವಾಗಿ ಮೂಡಿಸಿ ನಿಲ್ಲಿಸಿದ ಈ ಬಗೆ ಸಣ್ಣದೇನೂ ಅಲ್ಲ.

ಡಾ. ಮಿಣಜಗಿಯವರು ಸೃಜನ ಶಕ್ತಿಗೆ ಅಳತೆಗೋಲಾಗಿರುವ ರಾಗಮಾಲಾ ಚಿತ್ರಗಳ ವಿವರಣೆಯಾಗಲಿ, ವಿಮರ್ಶೆ ಮಾಡುವುದಾಗಲಿ ಸುಲಭದ ಕೆಲಸವಲ್ಲ. ಕಲಾವಿದರ ಕಲ್ಪನೆಗಳನ್ನು ಪ್ರೇಕ್ಷಕ ಗ್ರಹಿಸುವುದು ಅಷ್ಟು ಸುಲಭವಾದ ಕೆಲಸವೇನೂ ಅಲ್ಲ. ಅಂತಹ ಕಲ್ಪನಾ ಶಕ್ತಿಯ ಸೃಜನಶೀಲತೆಯನ್ನು ತಿಳಿದುಕೊಳ್ಳಬಲ್ಲ ಸಹೃದಯ ಕಲಾ ಪ್ರೇಮಿಗಳು ಮಾತ್ರ ಈ ಬಗೆಯ ಕಾರ್ಯದಲ್ಲಿ ತುಸು ಮಟ್ಟಿಗಾದರೂ ಸಾಫಲ್ಯವನ್ನು ಪಡೆಯಬಹುದೋ ಏನೋ ! ಸಾವಿರ ಶಬ್ದಗಳು ಮಾಡುವ ಕೆಲಸವನ್ನು ಒಂದು ಚಿತ್ರವು ಮಾಡುತ್ತದೆ ಎಂದು ಹೇಳುತ್ತಾರೆ. ಅಂತಹ ಒಂದು ಪ್ರಬಲವಾದ ಮಾಧ್ಯಮವಾಗಿ ಪರಿಣಮಿಸಿರುತ್ತದೆ.

ಚಿತ್ರ 11 ರಲ್ಲಿ ತೋಡಿ ರಾಗವು ಸಂಗೀತಗಾರರಿಗೆ ತುಂಬ ಪ್ರೀಯವಾದ ರಾಗವೆನಿಸದೆ. ಅದೊಂದು ಸಂಪೂರ್ಣವಾದ ರಾಗವೂ ಹೌದು. ಗಂಭೀರವಾದ ಭಕ್ತಿಯನ್ನು ಪ್ರತಿಪಾದಿಸುವುದೇ ಈ ರಾಗದ ಉದ್ದೇಶವು ಈ ರಾಗವು ಅರಣ್ಯ ಮೃಗಗಳನ್ನು ಸೆರೆ ಹಿಡಿಯುತ್ತದೆ ಎಂದರೆ ಅದರ ಮಾಧುರ್ಯಕ್ಕೆ ಲಬ್ದರಾಗದವರಾರು ? ಕಲಾವಿದ ಇಲ್ಲಿ ಸಾಂಕೇತಿಕವಾಗಿ ರಮ್ಯ ನಿಸರ್ಗದ ಮಧ್ಯದಲ್ಲಿ ಸಂಗೀತ ನುಡಿಸುವ ರಮಣೀಯ ಸುತ್ತಲೂ ಎರಳೆಗಳು ಸುತ್ತುವರಿದು ಆ ಸಂಗೀತದ ಮಾಧರ್ಯವನ್ನು ಸವಿಯುತ್ತಿರುವುದನ್ನು ಚಿತ್ರಿಕರಿಸಿದ್ದಾರೆ. ಕವಿಯ ಲೇಖಕನ ಬಣ್ಣನೆಗಳಿಗಿಂತ ಪ್ರೇಕ್ಷಕನ ಮೇಲೆ ಇದು ಒಂದು ಬಗೆಯ ಮೋಡಿ ಹಾಕುತ್ತದೆ. ಕಲಾವಿದನ ಕಲ್ಪಕತೆಗೆ ಇದು ನಿದರ್ಶನವೂ ಆಗಿದೆ. ರಾಗ ಮಾಧುರ್ಯವನ್ನು ಅಭಿವ್ಯಕ್ತಗೊಳಿಸುವ ಮಧ್ಯಮದಿಂದ ಸದುಪಯೋಗವನ್ನು ಇಲ್ಲಿ ಕಾಣುತ್ತೇವೆ.

ಚಿತ್ರ 12ರಲ್ಲಿ ಜೋಗಿಯಾ ಅಸಾವರಿ ಈಶ್ವರನನ್ನು ಸ್ತುತಿಸುವಂತಹ ರಾಗವೆನಿಸಿದೆ. ಆದರೆ ಕಲಾವಿದನು ಅದನ್ನಿಲ್ಲಿ ಬಹು ಸಾಂಕೇತಿಕವಾಗಿ ಚಿತ್ರಿಸಿದ್ದಾನೆ. ಜೋಗಿಣಿ ಊದುವ ಪುಂಗಿಯ ನಾದಕ್ಕೆ ಮರುಳಾಗಿರುವ ನಾಗ ಹೆಡೆಯೆತ್ತಿ ನಾದಕ್ಕೆ ತಕ್ಕ ಹಾಗೆ ಹೆಡೆಯಾಡಿಸುತ್ತಿರುವನು. ಈಶ್ವರನ ಕೊರಳಲ್ಲಿ ಧರಿಸಿರುವ ಸರ್ಪ ಅವನ ವಿಶೇಷ ಶಿರೋಭೂಷಣವು ಇಲ್ಲಿ ಸರ್ಪ ಮುದ್ರೆಯ ರೂಪದಲ್ಲಿ ನಾಗನಿದ್ದಾನೆ. ಪುಂಗಿ ಊದುವ ಜೋಗಿಣಿ ನಾದಲೋಲ ಶಿವನನ್ನು ಸರ್ಪ ಮುದ್ರೆಯ ರೂಪದಲ್ಲಿ ಆರಾಧಿಸುವ ಭಾವ ಮೂಡಿಸುವಂತೆ ಈ ಚಿತ್ರ ರೂಪಿತವಾಗಿದೆ.

ಚಿತ್ರ 13 ರಲ್ಲಿ ಪಟಮಂಜರಿ ರಾಗಗಳ ಸಮ್ಮಿಶ ಭಾವದ ಪ್ರತಿರೂಪವೆನಿಸಿದೆ. ಪ್ರೀಯತಮನಿಗಾಗಿ ಕಾಯುವ ಪ್ರೇಯಸಿ ತುಂಬ ಹೊತ್ತು ಕಾದರೂ ಅವನು ಬಾರದೇ ಇದ್ದಾಗ ಮನಸ್ಸಿನಲ್ಲಿ ಅಸಮಾಧಾನಗೊಂಡಿದ್ದಾಳೆ ; ಬೇಸತ್ತಿದ್ದಾಳೆ. ಭಾರೀ ಮಳೆ ಬೀಳುವ ಲಕ್ಷಣಗಳು ತೋರಿ ಬರುತ್ತಿವೆ.

[illegible]



ಆದರೆ ಪ್ರೀಯತಮನ ಆಗಮನ ಕ್ಕಾಗಿ ನಿರೀಕ್ಷಿಸಿ ಬೇಸತ್ತು ಮನೆಯಲ್ಲಿ ನಿಲ್ಲಲಾಗದೇ ಅವನನ್ನು ಹುಡಿಕಿಕೊಂಡು ಅವಳು ಹೊರಟಿರುವುದನ್ನು ಕಂಡು ಅವಳ ಸಖಿ ಅವಳನ್ನು ತಡೆಯಲು ಯತ್ನಿಸಿದಳು. ಆದರೆ ಅವಳು ಒಪ್ಪದೇ ಹೋದಾಗ ಅವಳನ್ನು ಕೈ ಹಿಡಿದು ಒಳಗೆ ಬರಲು ಜಗ್ಗುತ್ತಿದ್ದಾಳೆ. ಸಖಿಯ ಹಿಡಿತ ತಪ್ಪಿಸಿಕೊಳ್ಳಲಾರದೇ ಪ್ರೀಯತಮೆ ಅಸಹಾಯಕಳಾಗಿದ್ದಾಳೆ. ಇದು ಕೂಡ ಶೃಂಗಾರ ರಸದ ಕೋಮಲ ಭಾವದ ಸಂಕೇತವನ್ನು ಎತ್ತಿ ತೋರಿಸುವ ಚಿತ್ರಣವಾಗಿ ರೂಪುಗೊಂಡಿರುವುದನ್ನು ಕಾಣಬಹುದು.

ಚಿತ್ರ 14 ರಲ್ಲಿ ರಾಗಸೌರಾಷ್ಟ್ರದ ಚಿತ್ರವನ್ನು ಕವಿ ಕೂಡ ಬಹು ಅರ್ಥಪೂರ್ಣವಾಗಿ ಕಂಡದನ್ನು ನೋಡಿದ್ದೇವೆ. ಹಿನ್ನೆಲೆಯಲ್ಲಿ ಎರಡೂ ಹಸಿರು ಬಣ್ಣದ ಕಿರಿ ಗುಡ್ಡಗಳಿವೆ. ಹುಲ್ಲು ಹಾಸಿದ ನೆಲದ ಮೇಲೆ ಕಾಡು ಹೂಗಳ ಕಂಟಿ ಬೆಳೆದಿವೆ. ಇಂಥ ಪರಿಸರದಲ್ಲಿ ಗಂಡರೆಳಗಳ ಮಧ್ಯದಲ್ಲಿ ತುಂಬು ಯೌವನದ ಯುವತಿ ನಿಂತಿದ್ದಾಳೆ. ಮುಂದಿನ ಬದಿಗೆ ತಂಪಾದ ಕೊಳವೊಂದಿದೆ. ದಡದಲ್ಲಿ ಎರಡು ಕ್ರೌಂಚ ಪಕ್ಷಿಗಳಿವೆ. ಸೆರಗನ್ನು ಹೊತ್ತು ಆ ಯುವತಿ ಪೂರ್ಣೆಂದುಮುಖಿಯಾಗಿ ನಿಂತಿದ್ದಾಳೆ. ಅವಳಿಂದ ತೂರಿ ಬರುವ ಗಾನದಿಂದ ಹೊರಹೊಮ್ಮಿದ ಈ ರಾಗವನ್ನು ಕೇಳದೇ ಇರುವ ರಸಿಕರಾರು? ಮರುಳಾಗದಿರುವ ಪುರುಷನಾರು? ಕಲಾವಿದನ ಅದ್ಭುತವಾಗಿರುವ ಕಲಾಸೃಷ್ಟಿಯನ್ನಿಲ್ಲಿ ಕಾಣಬಹುದು.

ಚಿತ್ರ 15 ಮೇಘ ಮಲ್ಹಾರವು ಹೆಚ್ಚು ರಮಣೀಯವಾದ ಪ್ರಕೃತಿಗೆ ತುಂಬ ಸಮೀಪವಾಗಿರುವ ರಾಗದ ಚಿತ್ರಣವನ್ನು ತೋರಿಸುವಂಥದು. ಪ್ರಕೃತಿಗೆ ಇಲ್ಲಿ ಹೆಚ್ಚು ಪ್ರಾಧಾನ್ಯವೆಂದರೂ ಸರಿಯೇ ವರ್ಷಾರಂಭದ ಸಾಯಂಕಾಲದ ಪ್ರಕೃತಿಯ ಸೊಬಗಿನ ನೋಟದ ಮಧ್ಯದಲ್ಲಿ ರಮಣೀಯೊಬ್ಬಳು ಆ ಸೊಬಗಿನತ್ತವೂ ಲಕ್ಷ್ಯವಿಲ್ಲದೆ ದೋತಾರವನ್ನು ನುಡಿಸುವಲ್ಲಿ ಮಗ್ನಳಾಗಿದ್ದಾಳೆ. ಅವಳ ಸಮ್ಮುಖದಲ್ಲಿ ಮಯೂರವೊಂದು ತುಂಬ ಗರಿಗೆದರಿಕೊಂಡು ನೃತ್ಯದಲ್ಲಿ ಪೂರ್ಣ ಮಗ್ನವಾಗಿದೆ. ಆಕೆಯ ಬಲಬದಿಗೆ ನಿಂತಿರುವ ಎರಡು ಜಿಂಕೆಗಳು ಕುತೂಹಲದಿಂದ ಅವಳನ್ನು ನಿರೀಕ್ಷಿಸುತ್ತಿದ್ದಂತೆ ಸಂಗೀತದ ಮಾಧುರ್ಯಕ್ಕೆ ಕಿವಿಗೊಟ್ಟಂತೆ ಕಿವಿ ನಿಮಿರಿಸಿ ನಿಂತಿವೆ. ಈ ಮುಂದೆ ಎರಡು ಬಕ ಪಕ್ಷಿಗಳು ಇವೆ. ಈ ಪರಿಸರದತ್ತ ರಮಣೀಯ ಲಕ್ಷಣವೇ ಇಲ್ಲ. ಅವಳು ತುಂಬಾ ಗಂಭೀರವಾದ ಮುದ್ರೆಯಲ್ಲಿದ್ದಾಳೆ ಆದರೆ ಇಲ್ಲಿಯ ಮೋಜೆಂದರೆ ಅವಳು ವಾದ್ಯ ನುಡಿಸುತ್ತಿರುವಾಗ ಆ ಬೆರಳುಗಳಿಂದಲೇ ನಾದ ಮಾಧುರ್ಯ ಹೊರಡುತ್ತಿದ್ದಂತೆ ಭಾಸವಾಗುತ್ತಿದೆ. ಡಾ. ಮಿಣಜಗಿಯವರು ಹಲವಾರು ಬದಲಾವಣೆಗಳಿಂದ ಮೂಲ ಪಹರಿ ಚಿತ್ರವನ್ನು ಮಾರ್ಪಡಿಸಿರುವುದು ಇಲ್ಲಿಯ ಒಂದು ವಿಶೇಷವೆನಿಸಿರುವುದು.

ಮೇಘಮಲ್ಹಾರದಲ್ಲಿ ರಾಗಿಣಿ ಮೇಘ ರಾಗವನ್ನು ನುಡಿಸಿ ಮಳೆಯನ್ನು ಬರಿಸುತ್ತಾಳೆ. ನೀರಿಲ್ಲದೆ ಬವಣೆ ಪಡುತ್ತಿರುವ ಜಿಂಕೆಗಳು, ನವಿಲುಗಳು, ಬಕಗಳು ಮಳೆಯ ಆಗಮನವನ್ನು ಕುತೂಹಲದಿಂದ ನಿರೀಕ್ಷಿಸುತ್ತಿವೆ. ಸುತ್ತಲೂ ಮೋಡಗಳು ಕವಿಯುತ್ತಿವೆ. ಇದನ್ನು ಅನುಲಕ್ಷಿಸಿದಾಗ ಕನಿಕರ ಮೂಡುತ್ತದೆ. ಹೀಗೆ ಕರುಣಾರಸದ ಅವಿರ್ಭಾವು ಇಲ್ಲಿ ಒಡಮೂಡಿದೆ. ಕಲಾವಿದನು ಪ್ರತಿ ಪಾದಿಸುವ ವಿಶೇಷ ಸಂಯೋಜನೆಯಿಂದಾಗಿ ನೋಡುಗರಿಗೆ ಇದು ಭಾವಪೂರಿತವಾಗಿ ತೋರಿಬರುವಲ್ಲಿ ಅಂಥ ಅಚ್ಚರಿಯೇನೂ ಕಾಣುವದಿಲ್ಲವೆನ್ನಬೇಕು.

ಹಂಸಗತಿ ನಾಟ್ಯ ಮುದ್ರೆಯನ್ನು ತೋರಿಸಿರುವ ಕೃತಿಯೆನಿಸಿರುವುದು. ಹಿನ್ನೆಲೆಯಲ್ಲಿ ಶೇಷಾಯಿ ಇದ್ದು ಆ ಮುಂದೆ ಸರ್ಪ ಶೀರ್ಷಿಕೆ ಮುದ್ರೆ ಧರಿಸಿದ ನರ್ತಕಿಯೊಬ್ಬಳು ನಿಂತಿರುವಳು.ಭರದಿಂದ ನೃತ್ಯವು ಸಾಗಿರುವುದು. ಈ ನೃತ್ಯದ ಗತಿಯು ಸರ್ಪ ಶಿರ್ಷವು ಒಂದು ಅಪೂರ್ವವಾದ ಅವಸ್ಥೆಯೆನಿಸಿರುವುದು. ಈ ನೃತ್ಯದ ನಡಿಗೆಗೆ ಅನುಗುಣವಾಗಿ ನರ್ತಕಿಯು ತೊಟ್ಟಿರುವ ಲಂಗದ ವಿನ್ಯಾಸ ಅವಳ ಜಡೆಯ ಓಲಾಟ







ರಾಗಮಾಲಾ ಚಿತ್ರ.
ಸಂಗ್ರಹ :
ಮಿಣಜಿಗಿ ಆರ್ಟ ಗ್ಯಾಲರಿ, ಹುಬ್ಬಳ್ಳಿ





ರಾಗಮಾಲಾ ಚಿತ್ರ.
ಸಂಗ್ರಹ : ಕರ್ನಾಟಕ ಲಲಿತ ಕಲಾ ಅಕಾಡಮಿ,
ಬೆಂಗಳೂರು



ರಾಗಮಾಲಾ ಚಿತ್ರ.
ಸಂಗ್ರಹ : ಕರ್ನಾಟಕ ಲಲಿತ ಕಲಾ ಅಕಾಡಮಿ,
ಬೆಂಗಳೂರು















ಲಯಬದ್ಧವಾಗಿರುವ ಕಾಲುಗಳ ಚಿತ್ರಣವು ಕಲಾವಿದನ ಅಪೂರ್ವ ಸೃಷ್ಟಿಯೆನಿಸಿರುವಂತೆ ಮೂಡಿಬಂದಿರುವುದು ಈ ಚಿತ್ರಕ್ಕೆ ಸೊಗಸು ನೀಡಿದೆ.

ಚಿತ್ರ 16 ಸ್ಟುಡಿಯೋ ಚಿತ್ರ ಡಾ. ಮಿಣಜಗಿ ಕಲಾಕೃತಿ ರಚನೆಗೆ ಪ್ರಾರಂಭ ಮಾಡುವದಕ್ಕಿಂತ ಪೂರ್ವದಲ್ಲಿತಮ್ಮ ಬಣ್ಣದ ಪ್ಯಾಲೇಟನ್ನು ಸ್ವಚ್ಛ ಇರುವಂತೆ ಮಾಡಿಕೊಳ್ಳುತ್ತಿದ್ದರು. ಬಣ್ಣಗಳನ್ನು ಕೂಡ ಸರಣಿಯ ಬಣ್ಣಗಳಂತೆ ಅತ್ಯಂತ ವಿರಳ ರೂಪದಲ್ಲಿ ಅತಿ ಮಿತವ್ಯಯವಾಗಿ ಕಲಾಕೃತಿಗೆ ಬಳಸುತ್ತಿದ್ದರು. ಡಾ. ಮಿಣಜಗಿಯವರ ಕಲಾಕೌಶಲ್ಯ, ವರ್ಣಗಾರಿಕೆಯ ಪ್ರಭಾವ ತಂತ್ರಗಳನ್ನು ಸಹಿತ ಕಲಾಗುರು ರೊಥೆನ ಸ್ಟೆನ್ ಪ್ರಭಾವ ಡಾ. ಮಿಣಜಗಿಯವರ ಮೇಲೆ ಇದ್ದಿತು. ಡಾ. ಮಿಣಜಗಿ ಅತ್ಯಂತ ಅಚ್ಚುಕಟ್ಟಾದ ಉಡುಪುಗಳನು ಷ್ನ ಧರಿಸಿಯೇ ಇರುತ್ತಿದ್ದರು. ಲಂಡನ್‌ದಲ್ಲಿ ವ್ಯಾಸಂಗ ಮಾಡುತ್ತಿರುವಾಗ ಅಲ್ಲಿಯ ಬ್ರಿಟಿಷ ಮಾದರಿಯ ವ್ಯವಸ್ಥೆಯನ್ನು ಕಂಡು ಪ್ರಭಾವಕ್ಕೆ ಒಳಗಾಗಿದ್ದರು. ಅಂತೆಯೇ ಅವರ ವ್ಯಕ್ತಿತ್ವವೂ ಕೂಡ ಬ್ರಿಟಿಷ ಪದ್ಧತಿಯಂತೆ ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದರು.

ಚಿತ್ರ 17ರಲ್ಲಿ ರಾಗ ಭೂಪಾಲವು ಶೃಂಗಾರ ರಸದ ಇನ್ನೊಂದು ಮುಖವನ್ನು ಎತ್ತಿ ತೋರಿಸುವಂತಿದೆ. ನಲ್ಲನಿಗಾಗಿ ಕಾದು ಕಾದು ಅವನು ಬಾರದೇ ಇದ್ದಾಗ ವಿರಹ ಭಾವದಿಂದ ನೊಂದು ಬಸವಳಿದು ಬೇಸತ್ತು ಕಾತುರವಾಗಿ ನಿಂತಿರುವ ಮುಖಭಾವ ಮೋಹಕವೆನಿಸುತ್ತದೆ. ಅವಳಿಗೆ ಯಾವುದರಲ್ಲಿಯೂ ಆಸಕ್ತಿ ಉಳಿದಿಲ್ಲ. ತಬಲಾ ಉರುಳಿ ಬಿದ್ದಿದೆ; ತಮ್ಮನ್ನು ಕೇಳುತ್ತಿಲ್ಲವೆಂದು ವೀಣೆ ಅಡ್ಡ ಮಲಗಿದೆ. ಆ ಮುಗ್ದೆಯ ವಿರಹತಾಪದ ಮುಖ ಭಾವನೆ ಬಹು ಮೋಹಕವಾಗಿ ರೂಪಿತಗೊಂಡಿರುವುದು. ವಿರಹತಾಪದ ಬಸವಳಿಕೆಯ ಸಂಕೇತಗಳು ಸೊಗಸಾಗಿ ನಿರೂಪಿತವಾಗಿವೆ.

ಚಿತ್ರ 18 ರಲ್ಲಿ ಮಾಲಕಂಸವು ಎರಡು ರಸಗಳನ್ನು ವ್ಯಕ್ತಪಡಿಸುವುದು ಕರುಣ ರಸದೊಂದಿಗೆ ರೌದ್ರ ರಸವು ಸೇರಿಕೊಂಡಿರುವುದು. ಇದರದೊಂದು ವಿಶೇಷವಾಗಿರುವುದು. ಹೀಗಿರುವದರಿಂದ ವೀರಭದ್ರನಲ್ಲಿ ತುಸು ಕೋಮಲವಾದ ಭಾವವನ್ನು ತಾಳಿ ನಿಂತಿರುವುದು. ಅಂತೆಯೇ ಪ್ರಣಯ ರೌದ್ರದ ಸ್ವರೂಪವನ್ನು ಅದು ತಾಳಿರುವುದು. ಪ್ರೇಯಸಿ ತನ್ನ ಸ್ನೇಹಿತರ ಮುಖಾಂತರವಾಗಿ ಕೋಪಗೊಂಡ ಪ್ರೀಯತಮನನ್ನು ಒಲಿಸಿಕೊಳ್ಳಲು ಮುಂದಾಗಿರುವ ಭಾವವು ಇಲ್ಲಿ ನಿರೂಪಿತವಾಗಿದೆ. ಸ್ನೇಹಿತೆಯರ ನೆರವು ಪಡೆದು ಹಾಡಿದ್ದಾಳೆ. ನರ್ತಿಸಿಯೂ ಇದ್ದಾಳೆ. ಆದರೂ ಪ್ರೀಯತಮನನ್ನು ಒಲಿಸಿಕೊಳ್ಳಲು ಸಾಧ್ಯವಾಗಿಲ್ಲ . ಪ್ರೀಯತಮನ ಕೋಪವು ನಿವಾರಿತವಾಗುವದಿರಲಿ ; ಕಡಿಮೆಯೂ ಆಗಿಲ್ಲ. ಪ್ರಣಯ ಭಾವವನ್ನು ತಾಳುವದೊಂದೆ ಅವಳಿಗುಳಿದ ದಾರಿ ಅದನ್ನು ಅವಳು ಅನುಸರಿಸಿದ್ದಾಳೆ. ತುಂಬ ನಯವಿನಯ ಭಾವವನ್ನು ತಾಳಿ ಅವನ ಬಳಿ ಸಾರಿದ್ದಾಳೆ. ಅವನನ್ನು ಆಲಂಗಿಸಿಕೊಳ್ಳಲು ಮುಂದಾಗಿದ್ದಾಳೆ. ಈಗಲೂ ಪ್ರೀಯತಮನನ್ನು ಪ್ರಸನ್ನಗೊಳಿಸುದು ಅವಳಿಗೆ ಸಾಧ್ಯವಾಗಲಿಲ್ಲ. ತನ್ನನ್ನು ಆಲಂಗಿಸಿಕೊಳ್ಳಲು ಮುಂದಾದ ಪ್ರೇಯಸಿಯ ಎಡಗೈಯನ್ನು ಕಿತ್ತಿ ಹಾಕಲೆತ್ನಿಸಿದ್ದಾನೆ. ಇದು ಪ್ರಣಯ ಕೋಪದ ರಸಮಯವಾದ ಸನ್ನಿವೇಶದ ಚಿತ್ರಣವೆನಿಸಿದೆ. ಅತೀ ಆಗಾಧವೆನಿಸುವ ರೀತಿಯಲ್ಲಿ ಕಲಾವಿದನ ಭಾವನೆಗಳನ್ನು ಅರಳಿಸಿ ತೋರಿಸುವ ಚಿತ್ರವಿದಾಗಿದೆ. ಈ ಚಿತ್ರಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದು ಈ ಚಿತ್ರಗಳು ಇಂದು ಹಾಳಾಗಿವೆ, ಛಾಯಾಚಿತ್ರಗಳಿಗೂ ಯೋಗ್ಯವಲ್ಲದ್ದಾಗಿದೆ.

ಚಿತ್ರ 19ರಲ್ಲಿ ಗುರ್ಜರಿ ರಾಗವು ಶೃಂಗಾರವನ್ನು ಸಾರಿ ಹೇಳುವಂತಹದೇ ಕೋಮಲತೆಯನ್ನು ಎತ್ತಿ

[illegible]



ತೋರಿಸುವಂತಹದು. ಪ್ರೀಯತಮನೊಂದಿಗೆ ವಿರಸವಾಗಿ ಕೋಪಗೊಂಡಿರುವ ನಲ್ಲೆ ಅವನಿಂದ ದೂರವಿರಲು ಬಯಸಿ ನೀರಿಗಾಗಿ ಹೋಗಿದ್ದಾಳೆ. ಈಗ ಬರುವಳು ಆಗ ಬರುವಳು ಎಂದು ತನ್ನ ಪ್ರೀಯತಮೆಗಾಗಿ ಮನೆಯಲ್ಲಿ ಕಾದು ಕುಳಿತಿರುವ ಪ್ರೀಯತಮ ಎಷ್ಟು ಹೊತ್ತಾದರೂ ಬಾರದೇ ಇದ್ದಾಗ ಜೀವ ತಳಮಳಗೊಳ್ಳುವದು. ಮುನಿಸಕೊಂಡ ಪ್ರೀಯತಮೆಯನ್ನು ಒಲಿಸಿಕೊಳ್ಳಲು ತಾನೇ ಮುಂದಾಗಿ ಅವನು ಬಯಸಿದ ಮನೆಯಲ್ಲಿರಲು ಆಗಲಿಲ್ಲ. ಹೀಗಾಗಿ ಅವಳನ್ನು ಅರಸಿಕೊಂಡು ಅವನೂ ಕೊಳದ ಬಳಿಗೆ ಬಂದಿದ್ದಾನೆ. ಅವಳನ್ನು ಕರೆಯುತ್ತಿದ್ದಾನೆ. ಆದರೆ ಅವಳ ಮುನಿಸು ಇನ್ನೂ ಕಡಿಮೆಯಾಗಿಲ್ಲ ಹೀಗಾಗಿ ತಾನು ಬರುವದಿಲ್ಲವೆಂಬ ಮುಖಭಾವವನ್ನು ಅವಳು ವ್ಯಕ್ತಪಡಿಸಿದ್ದಾಳೆ. ಪ್ರೀಯತಮ ಇನ್ನೂ ವಿನಮ್ರನಾಗಿದ್ದಾನೆ. ಹೀಗೆ ಒಂದು ವಿಶಿಷ್ಟ ರೀತಿಯಲ್ಲಿ ಶೃಂಗಾರವನ್ನು ಹೊರಹೊಮ್ಮಿಸುವ ರೀತಿಯಲ್ಲಿ ಈ ಚಿತ್ರ ನಲ್ಲ-ನಲ್ಲೆಯರ ಮಧುರ ಮುನಿಸಿನ ಚಿತ್ರಣವಾಗಿ ರೂಪಗೊಂಡಿದೆ. ಈ ಚಿತ್ರಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದು ಈ ಚಿತ್ರಗಳು ಇಂದು ಹಾಳಾಗಿವೆ, ಛಾಯಾಚಿತ್ರಗಳಿಗೂ ಯೋಗ್ಯವಲ್ಲದ್ದಾಗಿದೆ.

ಸಂಗೀತ ವಿದ್ವಾಂಸರು ಚಿತ್ರಕಲಾವಿದರ ನೆರವಿನಿಂದ ಕೆಲವೊಂದು ರಾಗ ಮಾಲಾ ಚಿತ್ರಗಳ ಅರ್ಥ ನಿರೂಪಣೆ ಮಾಡುವ ಒಂದು ಯತ್ನ ಮಾತ್ರ ಇದು. ಅವುಗಳ ವಿಮರ್ಶೆ ನನ್ನ ಅಳವಿಗೆ ಮೀರಿದ ಮಾತನು ನಾನು ಸ್ಪಷ್ಟವಾಗಿ ಅರಿತಿರುವದರಿಂದ ಅದಕ್ಕೆ ಎಳಸಿಲ್ಲ. ಸಂಗೀತ ಸಾಹಿತ್ಯಗಳ ಸಂಗಮವಾಗಿ ವಿವಿಧ ರಾಗಗಳ ಈ ಚಿತ್ರಗಳು ರೂಪಿತವಾಗಿದ್ದು ಆ ರಾಗಗಳು ಸೂಚಿಸುವ ಶೃಂಗಾರವಿರಹ ಪ್ರೇಮ ಸಂಭ್ರಮ ಹಾಗೂ ವಾತ್ಸಲ್ಯ ಭಾವನೆಗಳನ್ನು ಇವು ದೃಶ್ಯಾವಳಿಯಲ್ಲಿ ಎತ್ತಿ ತೋರಿವೆ. ಅಂತೇ ಸಂಗೀತ ಶಾಸ್ತ್ರದಲ್ಲಿ ಬಲ್ಲಿದವರೊಬ್ಬರು ರಾಗದಿಂದ ಭಾವನೆಗಳು ಮೂಡಿ ನಿಲ್ಲುವ ಹಾಗೆ ಈ ಬಗೆಯ ವರ್ಣ ಸಂಯೋಜನೆಯಿಂದಲೂ ನೋಡುಗರಲ್ಲಿ ಭಾವನೆಗಳು ಸ್ಫುರಿತವಾಗುತ್ತಿವೆಂದು ಹೇಳಿರುವುದು ಬಹು ಅರ್ಥಪೂರ್ಣವೆನಿಸುವುದು.

ಕಲಾವಿದ ಆ ಕಾಲದಲ್ಲಿ ಎದುರಿಸಬೇಕಾಗಿದ್ದ ತುಮುಲವನ್ನು ಮಿಣಜಗಿಯವರು ಈ ಚಿತ್ರದಲ್ಲಿ ಬಹು ಚೆನ್ನಾಗಿ ಪ್ರತಿ ಬಿಂಬಿಸಿರುವರು. ಒಂದೆಡೆ ಸಮಾಜದ ಅಲಕ್ಷ್ಯ ಸರಕಾರದ ನಿರ್ಲಕ್ಷ್ಯ ಹೀಗೆ ನಾನ ಬಗೆಯ ಒತ್ತಡಗಳಲ್ಲಿ ಸಿಲುಕಿ ಕಲಾವಿದ ಅವನ ಕುಟುಂಬ ತತ್ತರಿಸಿ ಹೋಗುತ್ತಿರುವ ದಾರುಣ ಚಿತ್ರಣವೇ ಇಲ್ಲಿದೆ. ಕಲೆಯನ್ನು ನಮ್ಮವರು ಇಂದಿಗೂ ಕಾಣುತ್ತಿರುವ ಅನಾಧರ ದೃಷ್ಟಿಕೋನವನ್ನು ಗಮನಿಸಿದಾಗ ಈ ಚಿತ್ರಣದಲ್ಲಿ ಅತಿಶಯೋಕ್ತಿಯೇನೂ ಕಾಣಿಸದೇ ಅವನ ಅಸಹಾಯಕತೆಯೇ ಎದ್ದು ತೋರುವುದು. ಕಲಾವಿದ ತನ್ನ ಆಸ್ತಿತ್ವಕ್ಕಾಗಿ ನಡೆಸುತ್ತಿರುವ ಹೋರಾಟದ ಒಂದು ಸಜೀವ ಚಿತ್ರಣವಿದಾಗಿದೆ. ಡಾ. ಮಿಣಜಗಿಯವರ ಪ್ರಜ್ಞ ಚಿಂತನಶೀಲತೆ ಕಲ್ಪಕತೆಗಳು ಇಲ್ಲಿ ಬಹು ಸ್ಪಷ್ಟವಾಗಿ ಒಡಮೂಡಿ ನಿಂತಿರುವಂತೆ ಕಲೆಯ ಕಲಾವಿದನ ದುಃಖಸ್ಥಿತಿಯನ್ನು ನೋಡಿಯೂ ಸಮಾಜ ಕಣ್ತೆರೆಯದಿರುವ ಸಾಂಕೇತಿಕತೆ ಇಲ್ಲಿ ಅರ್ಥಗರ್ಭಿತವಾಗಿ ಹೊರಹೊಮ್ಮಿದೆ.


ಇದೇ ಸಂದರ್ಭದಲ್ಲಿ ಅವರು ಚಿತ್ರಕಲಾ ರಂಗಕ್ಕಾಗಿ ನೀಡಿದ ಇತರ ಅಪರೂಪದ ಕಾಣಿಕೆಗಳ ಬಗೆಗೂ ಪರಿಶೀಲಿಸಿಸುವುದು ಅವಶ್ಯವಿದೆ.ಅವರು ತಮ್ಮ ಐದು ದಶಕಗಳ ಚಿತ್ರಕಲೆಯ ಸೇವಾ ಜೀವನದಲ್ಲಿ ವರ್ಣಚಿತ್ರಗಳು, ಭಾವಚಿತ್ರಗಳು ರೇಖಾ ಚಿತ್ರಗಳು, ಭಿತ್ತಿ ಚಿತ್ರಗಳು ಹೀಗೆ ಸುಮಾರು ಸಾವಿರಕ್ಕೂ ಹೆಚ್ಚು ಚಿತ್ರಗಳನ್ನು ರೂಪಿಸಿರುವರು. ನಿಸರ್ಗ ಚಿತ್ರಗಳು ಇವುಗಳಲ್ಲಿ ಸೇರಿವೆ. ಅವರು ಹುಬ್ಬಳ್ಳಿಗೆ ಬಂದ ಹೊಸದರಲ್ಲಿ ಅನೇಕ ಪ್ರಮುಖ ವ್ಯಕ್ತಿಗಳು ಸಂಘ ,ಸಂಸ್ಥೆಗಳು ಅವರಿಂದ ಚಿತ್ರ ಬರೆಯಿಸಲು ನಾ ಮುಂದು ನೀ ಮುಂದು ಎಂದು ಮುಗಿ ಬಿದ್ದರು. ಸಮಯದ ಕೊರತೆಯಿಂದ ಬಳಲುತ್ತಿದ್ದ ಡಾ. ಮಿಣಜಗಿಯವರು



ಇವರೆಲ್ಲರನ್ನು ಚಿತ್ರಗಳಿಂದಲೇ ಸಮಾಧಾನ ಪಡಿಸಿದರೆನ್ನುವುದು ತುಸು ಅಚ್ಚರಿ ಸಂಗತಿಯೆನಿಸಿದ್ದರೂ ಸಂತೋಷದ್ದು. ಅವರು ರಾಗಮಾಲಾ 15 ಚಿತ್ರಗಳಲ್ಲದೇ ಸುಮಾರು 250 ನಿಸರ್ಗ ಚಿತ್ರಗಳೂ ಭಾವಚಿತ್ರಗಳೂ, 400 ಶರಣ ಸಾಹಿತ್ಯವನ್ನು ಕುರಿತಾಗಿ ರೂಪಿಸಿದ ದೃಶ್ಯಾವಳಿ ಚಿತ್ರಗಳು, 50 ಸಂಯೋಜಿತ ಚಿತ್ರಗಳು, 100 ರೇಖಾ ಚಿತ್ರಗಳು 600 ಹೀಗೆ ಈ ಸಂಖ್ಯೆಯು ಹೆಚ್ಚುತ್ತಲೇ ಹೋಗುತ್ತದೆ. ಈ ಅಧಿಕ ಸಂಖ್ಯೆಯ ಚಿತ್ರಗಳಲ್ಲಿ ಇಂದು ಬಹುಚಿತ್ರಗಳು ಬೇರೆ ಬೇರೆ ಆರ್ಟ ಗ್ಯಾಲರಿಗಳನ್ನು ಅಲಂಕರಿಸಿರುವದರಿಂದ ವ್ಯಕ್ತಿ ಸಂಸ್ಥೆಗಳ ವಶದಲ್ಲಿರುವದರಿಂದ ಕಲಾ ವಿಮರ್ಶಕರಿಗೆ ಪೂರ್ಣವಾಗಿ ಅವಲೋಕಿಸಲು ದೊರೆಯಲಾರವು. ಆದರೆ ಲಭ್ಯವಿರುವ ಚಿತ್ರಗಳನ್ನಷ್ಟೆ ಕಂಡು ಅವಲೋಕನ ನಡೆಸಿದಾಗ ಮನಸ್ಸು ತುಂಬಿ ನಿಲ್ಲುತ್ತದೆ. ನಾವು ಯಾವುದೋ ವಿಚಿತ್ರವಾದ ವಿಶ್ವದಲ್ಲಿ ವಿಹರಿಸುತ್ತಿರುವಂತೆಯೇ ಭಾಸವಾಗುತ್ತದೆ.

ಸತ್ಯಂ ಶಿವಂ ಸುಂದರಂ ಎಂಬ ಕಲಾವಿಷಯಕ ಮಾತನ್ನು ಅವರು ತಮ್ಮ ಚಿತ್ರಗಳ ಮೂಲಕ ನಿಜಗೊಳಿಸಿ ತೋರಿಸಿರುವುದನ್ನೇ ಈ ಚಿತ್ರಗಳು ನಿದರ್ಶಿಸುತ್ತವೆ. ಸೃಷ್ಟಿಸೌಂದರ್ಯವನ್ನು ತಮ್ಮ ಚಿತ್ರಗಳಲ್ಲಿ ಬಹು ಸೊಗಸಾಗಿ ಸೆರೆ ಹಿಡಿದಿರುವುದನ್ನು ಗಮನಿಸಿದಾಗ ಮನ ಮುದಗೊಳ್ಳುವುದು ; ಅನಿವರ್ಚನೀಯವಾದ ಆನಂದವನ್ನು ಅನುಭವಿಸುವುದು.ಅದನ್ನು ನೋಡಿದಷ್ಟೂ ತನಿಯದು ಎಂಬ ಅನುಭವ ಮಾಥೇರಾನ್, ಸೋಮೇಶ್ವರ ದೇವಸ್ಥಾನದ ಚಿತ್ರಗಳನ್ನು ನೋಡಿದಾಗ ನಮ್ಮ ನಿದರ್ಶನಕ್ಕೆ ಬರುವುದು ಬಹುಶಃ ಕಲಾವಿದನೂ ಕೂಡ ಈ ಚಿತ್ರಗಳನ್ನು ರೂಪಿಸುವಾಗ ಆ ಸೌಂದರ್ಯವನ್ನು ಕಣ್ಣುಗಳಲ್ಲಿ ಸೆರೆ ಹಿಡಿದು ಅತ್ಯಾನಂದವನ್ನು ಅನುಭವಿಸಿರಬೇಕು ಎಂದು ಕೂಡಾ ಅನಿಸುತ್ತದೆ. ಅವರು ಭಾವಚಿತ್ರಗಳನ್ನು ಚಿತ್ರಿಸುವಾಗಲೂ ಎಲ್ಲ ಅಂಶಗಳನ್ನು ಬಹು ಸೂಕ್ಷ್ಮವಾದ ದೃಷ್ಟಿಕೋನದಿಂದ ನೋಡಿರುವುದು ಸ್ಪಷ್ಟವಾಗುತ್ತಿದೆ. ಯಾವುದೇ ವ್ಯಕ್ತಿ ಇರಲಿ ಆ ಬಗೆಗೆ ಬಹಳಷ್ಟು ಚಿಂತನೆ ನಡೆಸಿದ ನಂತರವೇ ಅವರು ಕುಂಚವನ್ನು ಹಿಡಿಯತ್ತಿದ್ದರೆಂಬ ಮಾತು ನಿದರ್ಶನಕ್ಕೆ ಬರುತ್ತದೆ. ಅವರು ಆ ರೇಖೆಗಳಲ್ಲಿ ವರ್ಣ ಸಂಯೋಜನೆಯಲ್ಲಿ ಅವರು ನಡೆಸಿದ ಚಿಂತನೆಯ ವಿವಿಧ ಮುಖಗಳನ್ನು ಕಲಾವಿಮರ್ಶಕರು ಸರಿಯಾಗಿ ಗುರುತಿಸಬಹುದು. ಹೀಗಾಗಿ ವ್ಯಕ್ತಿ ಸೂಕ್ಷ್ಮವಾದ ಭಾವಗಳು, ನೋವು, ನಲಿವುಗಳು ಕೂಡ ಆ ಚಿತ್ರದಲ್ಲಿ ಸ್ಫುಟವಾಗುತ್ತಿದ್ದವು. ಗಾಂಧೀಜಿಯ ಚಿತ್ರ ಇವೆಲ್ಲ ಅಂಶಗಳಿಗೆ ಒಂದು ಅತ್ಯುತ್ತಮವಾದ ನಿದರ್ಶನವಾಗಿ ನಿಂತಿದೆ. ಗಾಂಧೀಜಿ ಜೀವನದ ವಿವಿಧ ಮುಖಗಳನ್ನು ಅರಿತ ಅವರಿಗೆ ಇಲ್ಲಿ ಸಾಕಾರವಾಗಿರುವದು ಅರಿವಿಗೆ ಬರುತ್ತದೆ, ಇದು ಡಾ. ಮಿಣಜಗಿಯವರದೇ ಭಾವಚಿತ್ರವೆನ್ನುವಷ್ಟರ ಮಟ್ಟಿಗೆ ಅವರು ತಮ್ಮ ಶೈಲಿಯಲ್ಲಿ ಒಂದು ವಿಶಿಷ್ಟತೆ ತಂದುಕೊಂಡಿದ್ದರೆನ್ನುವುದನ್ನು ಯಾರು ಅಲ್ಲಗಳೆಯುವದಿಲ್ಲ.

ಅವರಿಗೆ ನಿಸರ್ಗದ ಜೊತೆಗೆ ಐತಿಹಾಸಿಕ ಸತ್ಯಗಳ ಪ್ರೀತಿಯೂ ಅಮೋಘವಾಗಿತ್ತು. ಬಾದಾಮಿಯ ಚಾಲುಕ್ಯರ ಇತಿಹಾಸ ಪ್ರಸಿದ್ಧ ಚಿತ್ರಕಲೆ ಅವರಿಗೆ ಬಾಲ್ಯದಿಂದಲೂ ತುಂಬ ಪ್ರೀಯವಾದುದು. ಅಲ್ಲಿಗೆ ಅವರು ಅವಕಾಶ ದೊರೆತಾಗಲೆಲ್ಲ ಸಾಮಾನ್ಯವಾಗಿ ಹೋಗಿ ಬರುತ್ತಿದ್ದರು. ಅವರಿಗೆ ಮೋಹಕವಾಗಿದ್ದ ಅವರ ಮನಸ್ಸನ್ನು ಆಕರ್ಷಿಸಿ ನಿಂತಿದ್ದ ಅದೇಕೆ ಅವರಿಗೆ ಚಿತ್ರ ಜೀವನದ ಕನಸು ಕಾಣುವಂತೆ ಮಾಡಿದ್ದ ಈ ಇತಿಹಾಸ ಪ್ರಸಿದ್ಧ ಚಿತ್ರಗಳು ನಶಿಸುವ ಅವಸ್ಥೆಯಲ್ಲಿವೆ ಎಂಬ ಮಾತು ಅವರ ಗಮನಕ್ಕೆ ಬಂದಾಗ ಅವರಿಗೆ ತುಂಬ ವಿಷಾದವೆನಿಸಿತ್ತು. ಅದನ್ನು ತಡೆಯುವುದಂತೂ ಅವರಿಗೆ ಸಾಧ್ಯವಾಗದು. ಕೈ ಮೀರಿದ ಮಾತೆನಿಸಿತ್ತು. ಅದನ್ನು ಉಳಿಸಿಕೊಳ್ಳುವುದಕ್ಕೆ ನೈಸರ್ಗಿಕ ಪರಿಸರ ಅನುಕೂಲವಾಗಿಲ್ಲವೆಂಬುದನ್ನು ಡಾ. ಮಿಣಜಗಿಯವರು ಗಮನಿಸಿದಾಗ ತಾವು ಅವುಗಳ ಪ್ರತಿಕೃತಿಗಳನ್ನು ಮಾಡಿ ಆ ನೆನಪನ್ನು ಉಳಿಸಿಕೊಳ್ಳುವುದು ಸೂಕ್ತ. ಮತ್ತು ಅನಿವಾರ್ಯವೆನಿಸಿತು. ಇದು ನಿಜವಾಗಿಯೂ ತುಂಬ ಅಪರೂಪದ ಕೆಲಸವೇ ಸರಿ.



ಭಾವಚಿತ್ರ, ವ್ಯಕ್ತಿ ಚಿತ್ರಗಳು

ಡಾ. ಮಿಣಜಗಿಯವರು ರಚಿಸಿದ ಭಾವಚಿತ್ರ ಹಾಗೂ ವ್ಯಕ್ತಿಗಳ ಚಿತ್ರಗಳನ್ನು ಚಿತ್ರ 18 ರಿಂದ 41 ರವರೆಗೆ ಗಮನಿಸಿದರೆ ಎಲ್ಲ ಭಾವಚಿತ್ರ ವ್ಯಕ್ತಿ ಚಿತ್ರಗಳು ತೈಲವರ್ಣದ್ದಾಗಿವೆ. ಚಿತ್ರ 25 ಅಪಾರ ದರ್ಶಕ ವರ್ಣದಿಂದ ಕೆಲವೇ ಕೆಲವು ವರ್ಣಗಳನ್ನು ಬಳಸಿ ಅತ್ಯಂತ ಉತ್ಕೃಷ್ಟ ಮಟ್ಟದ ಕುಂಚದ ಸೆಳೆತಗಳಿಂದ ಈ ಭಾವಚಿತ್ರಗಳನ್ನು ರಚಿಸಿದ್ದಾರೆ, ಅತ್ಯಂತ ವೇಗವಾಗಿ ಅಲ್ಪಾವಧಿಯಲ್ಲಿ ಚಿತ್ರಗಳ ರಚನೆಯಲ್ಲಿ ಡಾ. ಮಿಣಜಗಿ ನಿಷ್ಣಾತರು. ಭಾವಚಿತ್ರವೆಂದರೆ ವ್ಯಕ್ತಿಯ ರೂಪ ಚಿತ್ರಣ ಅಷ್ಟೇ ಅಲ್ಲದೇ ರೂಪದರ್ಶಿಯ ವ್ಯಕ್ತಿತ್ವ, ಹಾವಭಾವ ಮನೋಗತವನ್ನು ಚಿತ್ರಿಸಬೇಕು. ಇಂಥಹ ಚಿತ್ರ ರಚಿಸಲು ಕಲಾವಿದನಿಗೆ ಕಲೆಗಾರಿಕೆ, ಕುಂಚ ಕೌಶಲ್ಯವಿರಬೇಕು. ವ್ಯಕ್ತಿ ಚಿತ್ರಣದಲ್ಲಿ ನಿಖರತೆ ಇರಬೇಕಾಗುತ್ತದೆ. ಆದರೆ ಯಾವುದೇ ಒಂದು ಮರದ ಅಥವಾ ಬೆಟ್ಟದ ಎತ್ತರವನ್ನು ಸಂದರ್ಭೋಚಿತವಾಗಿ ಹಿಗ್ಗಿಸಬಹುದು ಇಲ್ಲವೇ ಕುಗ್ಗಿಸಬಹುದು. ಸಂಯೋಜನೆ ಅಗತ್ಯಗಳಿಗೆ ಅನುಗುಣವಾಗಿ ದೃಶ್ಯದ ಕೆಲವು ಭಾಗಗಳನ್ನು ಚಿತ್ರಿಸದೇ ಬಿಡಬಹುದು. ಅಥವಾ ಇಲ್ಲದ್ದನ್ನು ಸೇರಿಸಬಹುದು. ಆದರೆ ತದ್ರೂಪ ಚಿತ್ರ ರಚನೆಯಲ್ಲಿ ಬದಲಾವಣೆಗಳಿಗೆ ಅವಕಾಶವಿಲ್ಲ. ಪ್ರಮಾಣ ಬದ್ಧತೆ ಹಾಗೂ ನಿಖರತೆ ಕಟ್ಟುಪಾಡು ಬಹಳ ಇರುವದರಿಂದ ಭಾವಚಿತ್ರ ರಚನೆಯಲ್ಲಿ ಕಲಾವಿದನ ಕೌಶಲ್ಯ ಉತ್ಕೃಷ್ಟವಾಗಿರಬೇಕು. ಅಂಥಹ ಕಲಾವಿದರಲ್ಲಿ ಡಾ. ಮಿಣಜಗಿಯವರು ತೈಲ ವರ್ಣದ ಭಾವಚಿತ್ರಗಳಲ್ಲಿ ಅವರು ಬಳಸಿರುವ ಬಣ್ಣಗಳು ಅತ್ಯಂತ ಮಿತವ್ಯಯವಾಗಿದ್ದು, ಅವುಗಳಿಗೆ ಹೆಚ್ಚಿನದಾಗಿ ಲಿನಸೀಡ್ ತೈಲವನ್ನು ಬಳಸಿ ಕ್ಯಾನ್ವಾಸ್ ಕೂಡ ಕಾಣುವಂತೆ ಮಾಡಿರುತ್ತಾರೆ, ಅತೀ ಪ್ರಮುಖವಾಗಿ ಅವರ ಚಿತ್ರದಲ್ಲಿ ಕಣ್ಣು, ಮೂಗು, ಬಾಯಿ,ತುಟಿ ಹಾಗೂ ಭಾವನೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು ಅದಲ್ಲದೇ ಬಟ್ಟೆಯ ನಿಖರತೆಯನ್ನು ವರ್ಣಗಳಲ್ಲಿ (ಕಾಟನ್, ರೇಶ್ಮೆ, ಪಾಲಿಸ್ಟರ್) ತೋರಿಸುತ್ತಿದ್ದರು. ಹಿನ್ನೆಲೆಯಲ್ಲಿ ಕಪ್ಪು ಬಣ್ಣ ಅಥವಾ ಕಂದುಗೆಂಪು ಇಲ್ಲವೇ ವ್ಯಕ್ತಿ ಚಿತ್ರಗಳನ್ನು ಗಮನಿಸಿ ಹಿನ್ನೆಲೆಯ ವರ್ಣಗಳನ್ನು ಹಾಗೂ ಸಲಕರಣೆಗಳನ್ನು ಚಿತ್ರಿಸುತ್ತಿದ್ದರು. ಕೆ. ಸಿ. ಸಿ. ಬ್ಯಾಂಕ ಧಾರವಾಡದಲ್ಲಿ ಸಂಗ್ರಹವಾಗಿರುವ ಚಿತ್ರಗಳು 6X4 ಅಳತೆಯ ವ್ಯಕ್ತಿ ಚಿತ್ರಗಳಾಗಿದ್ದು ಅವುಗಳ ರಚನೆ 1954 ರಲ್ಲಿ ಮಾಡಲ್ಪಟ್ಟಿವೆ. ಇಂದು ಅವುಗಳು ಧೂಳುಗಳಿಂದ ತುಂಬಿದ್ದು ಸ್ವಚ್ಛತೆಯನ್ನು ಕಂಡರೆ ಕಲಾಕೃತಿ ಉತ್ಕೃಷ್ಟತೆಯನ್ನು ಇಂದಿನ ಕಲಾವಿದ್ಯಾರ್ಥಿಗಳಿಗಾದರೂ ಮಾರ್ಗದರ್ಶನ ನೀಡಬಹುದಾಗಿದೆ.

ಡಾ. ಮಿಣಜಗಿಯವರ ಕಲಾಕೃತಿಗಳಲ್ಲಿ ಕಂಡು ಬರುವ ರೂಪಾನ್ವೇಷಣೆ ಒಂದು ಶ್ರೇಷ್ಠ ಮೌಲ್ಯವೆನಿಸಿದರೆ ಅಲ್ಲಿ ವ್ಯಕ್ತವಾಗುವ ಬದುಕಿನ ಅನುಭವಗಳು ಅಷ್ಟೇ ಮಹತ್ವವಾಗುತ್ತವೆ. ಅಂತಹುದರಲ್ಲಿ ವ್ಯಕ್ತಿ ಸಮಾಜ ಸಂಬಂಧಗಳು ಬದುಕಿನ ಘಟನೆಗಳು ಸಾಮಾಜಿಕ ಚಿಂತನ ಎಲ್ಲ ಸೃಜನಶೀಲ ರೂಪದಲ್ಲಿ ವ್ಯಕ್ತಿ ಬದುಕು, ಸಮುದಾಯಿಕ ಬದುಕು ಬೆಸೆದು ಹೋಗುತ್ತದೆ. ಸಂಪೂರ್ಣ ದೃಶ್ಯಮಾಧ್ಯಮವಾದ ಕಲೆ ಸಾಹಿತ್ಯ ರೂಪಕಗಳನ್ನು ಬೆಳೆಸಿಕೊಳ್ಳುವುದು. ಕಲೆಯ ದೃಷ್ಟಿಯಿಂದಲೇ ಅಲ್ಲದೇ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಅಗತ್ಯವಾಗಿದೆ.







ದಿ. ಶ್ರೀ ಚನ್ನಪ್ಪಗೌಡ ಬಸನಗೌಡ ಪಾಟೀಲ ಸಾ॥ ಉಣಕಲ್
ಸಂಗ್ರಹ : ಚನ್ನಪ್ಪಗೌಡ ಮರಿಗೌಡ ಪಾಟೀಲ





ಹುಚ್ಚಪ್ಪ ಲಕ್ಷ್ಮೇಶ್ವರ ವ್ಯಾಪಾರಿ, ಭಾವಚಿತ್ರ. ಸಂಗ್ರಹ : ಕರ್ನಾಟಕ ಲಲಿತ ಕಲಾ ಅಕಾಡಮಿ, ಬೆಂಗಳೂರು





ಶ್ರೀ ಎನ್.ಎ. ಅಬ್ದುಲ್‌ಪುರಕರ

ಸಂಗ್ರಹ : ಕರ್ನಾಟಕ ವಾಣಿಜ್ಯೋದ್ಯಮ ಸಂಘ, ಹುಬ್ಬಳ್ಳಿ






ಲಿ. ಶ್ರೀ ಡಿ.ವ್ಹಿ. ಹಾಲಬಾವಿ ವೆಂಕಟಪ್ಪ ಪ್ರಶಸ್ತಿ ವಿಜೇತರು
ಸಂಗ್ರಹ [illegible] ಧಾರವಾಡ







[illegible] ಮೂರುಸಾವಿರ ಮಠ, ಹುಬ್ಬಳ್ಳಿ
ಸಂಗ್ರಹ : ಗಂಗಾಧರ ಬಾಲಕರ ಪ್ರೌಢ ಶಾಲೆ,





ಶ್ರೀ ಮುರುಗಯ್ಯಸ್ವಾಮಿ, ಎಸ್. ಜಂಗಿನ

ಸಂಸ್ಥಾಪಕರು ಸಂಗ್ರಹ : ಕರ್ನಾಟಕ ವಾಣಿಜ್ಯೋದ್ಯಮ ಸಂಘ, ಹುಬ್ಬಳ್ಳಿ





ಅ. ಜಗದ್ಗುರು ಮೃತ್ಯುಂಜಯ ಮಹಾಸ್ವಾಮಿಗಳು. [illegible]





ಭಾವಚಿತ್ರ. ಸಂಗ್ರಹ : ಮಿಣಜಗಿ ಆರ್ಟ್ ಗ್ಯಾಲರಿ, ಹುಬ್ಬಳ್ಳಿ







[illegible] (ಡಾ। ಪಾಟೀಲ ಪುಟ್ಟಪ್ಪ ಇವರ ತಂದೆ)
ಸಂಗ್ರಹ : ಡಾ। ಪಾಟೀಲ ಪುಟ್ಟಪ್ಪ, ಖ್ಯಾತ ಪತ್ರಕರ್ತರು, ಹುಬ್ಬಳ್ಳಿ







ಶ್ರೀಮತಿ ಬಸ್ಸಮ್ಮ ಸಿದ್ದಲಿಂಗಗೌಡ್ರ ಅವರು:






ಶ್ರೀ ಜಗದ್ಗುರು ಗುರುಸಿದ್ಧ ಮಹಾಸ್ವಾಮಿಗಳು, ಮೂರುಸಾವಿರ ಮಠ, ಹುಬ್ಬಳ್ಳಿ
ಸಂಗ್ರಹ : ಮೂರುಸಾವಿರ ಮಠ, ಹುಬ್ಬಳ್ಳಿ





ಡಾ|| ಎಲ್.ಎಲ್. ಬ್ರಗಜ್. ಸಂಗ್ರಹ : ಹುಬ್ಬಳ್ಳಿ ಕೋ-ಆಪ್. ಆಸ್ಪತ್ರೆ, ಹುಬ್ಬಳ್ಳಿ







[illegible] ಸಂಗ್ರಹ : ಹುಬ್ಬಳ್ಳಿ ಕೋ-ಆಪ್. ಆಸ್ಪತ್ರೆ, ಹುಬ್ಬಳ್ಳಿ





ಡಾ|| ಎಸ್.ಪಿ.ಕುಂಬಕೋಣಂ. ಸಂಗ್ರಹ : ಹುಬ್ಬಳ್ಳಿ ಕೋ-ಆಪ್. ಆಸ್ಪತ್ರೆ, ಹುಬ್ಬಳ್ಳಿ







ಶ್ರೀ ವ್ಹಿ. ಎಸ್. ಬಸವನಾಳ
ಸಂಗ್ರಹ ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ







ಶ್ರೀ ಎಸ್. ಬಿಲಕೇಶ್ವರ
ಸಂಗ್ರಹ ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ





[illegible]







ಶ್ರೀ ರಾ.ಸಾ. ಎಸ್.ಪಿ. ಇನಾಮತಿ
ಸಂಗ್ರಹ ಕೆ.ಸಿ.ಸಿ.ಬ್ಯಾಂಕ ಲಿ., ಧಾರವಾಡ







[illegible] ಸಂಗ್ರಹ : ಹು.ಧಾ.ಮ.ನ.ಸ. ಹುಬ್ಬಳ್ಳಿ





ಪಂಡಿತ ಜವಾಹರಲಾಲ ನೆಹರು



ಸುಭಾಸ ಚಂದ್ರ ಭೋಸ್



ಮಹಾತ್ಮಾ ಗಾಂಧಿಜಿ





ಶ್ರೀ ಪರಪ್ಪ ಚನ್ನಪ್ಪ ಜಾಬಿನ. ಸಂಗ್ರಹ : ಪರಪ್ಪ ಚನ್ನಪ್ಪ ಜಾಬಿನ ಕಾಲೇಜ. ಹುಬ್ಬಳ್ಳಿ





ಸಂಗ್ರಹ : ಮಿಣಜಗಿ ಆರ್ಟ ಗ್ಯಾಲರಿ, ಹುಬ್ಬಳ್ಳಿ



ನಿಸರ್ಗ ಚಿತ್ರಗಳು :

ಪ್ರಕೃತಿ ಸೃಷ್ಟಿಯೇ ಅದ್ಭುತ. ಅಂಥ ಅತ್ಯದ್ಭುತವನ್ನು ಕಲಾವಿದ ಕುಂಚದಿಂದ ಸೃಷ್ಟಿಸಿ ಮತ್ತೊಂದು ಹೊಸಲೋಕವನ್ನೆ ತೆರೆದಿಡಬಲ್ಲ. ಅವನು ನಿಸರ್ಗದಲ್ಲಿ ಇಲ್ಲದ್ದನ್ನು ತನ್ನ ಕಲ್ಪನಾ ಶಕ್ತಿಯಿಂದ ಸೃಜಿಸಿ ಅತ್ಯುತ್ತಮವಾದ ಸುಂದರ ದೃಶ್ಯಗಳಿಗೆ ಜೀವ ನೀಡಬಲ್ಲ. ಅಂಥಹ ಅದ್ಭುತ ಚಿತ್ರಗಳನ್ನು ಕಾಣಿಕೆ ನೀಡಿದ ಡಾ. ಮಿಣಜಗಿ ಅವರು ರಚಿಸಿದ ಮಹಾರಾಷ್ಟ್ರದ ಮಾಥೇರಾನ್ ಎಂಬ ಪ್ರಸಿದ್ಧ ಸ್ಥಳವೊಂದರ ಚಿತ್ರಗಳು ಸಾಕಷ್ಟು ರೀತಿಯಲ್ಲಿ ಪ್ರಖ್ಯಾತಿಯನ್ನು ಗಳಿಸಿದವು. ಅಲ್ಲಿಯ ವಿವರಣೆಗಳನ್ನು ಹೇಳುವಾಗ ಡಾ. ಮಿಣಜಗಿ ಮಾಥೆರಾನ್‌ದ ಚಿತ್ರಣವು ಕಣ್ಮುಂದೆ ಬರುವಂತೆ ತಮ್ಮ ಮಾತುಗಳಲ್ಲಿ ಬಿಡಿಬಿಡಿಯಾಗಿ ವಿವರಿಸುತ್ತಿದ್ದರು. ಚಿತ್ರ 49, 52,55,56,57,63 ರಲ್ಲಿ ಪಾರದರ್ಶಕ ವರ್ಣಗಳ ಮೂಲಕ ಅಲ್ಲಿಯ ಕಲ್ಲು ಬಂಡೆ ದೈವದಂತ ಕೊಡುಗೆಯಾದ ನಿಸರ್ಗದ ಮಡಿಲು, ಆಕಾಶ, ಗಿಡಮರಗಳ ಸಂಯೋಜಿತವಾದ ಚಿತ್ರಣವನ್ನು ಕೆಲವೇ ಕೆಲವು ವರ್ಣಗಳಲ್ಲಿ ನಿಸರ್ಗದ ಮಡಿಲನ್ನು ತೋರಿಸುವಲ್ಲಿ ಡಾ. ಮಿಣಜಗಿಯವರ ಕಲಾಕೌಶ್ಯಲತೆ ಮುಖ್ಯ ಕಾರಣ. ನಿಸರ್ಗದ ಚಿತ್ರಗಳಲ್ಲಿ ಸಾಮಾನ್ಯ ದೃಶ್ಯಗಳಲ್ಲೂ ಅಸಾಮಾನ್ಯ ಸೌಂದರ್ಯ ಕಾಣುತ್ತದೆ. ಅಷ್ಟೇ ಆಸಕ್ತಿ ಮತ್ತು ಒಲವು ಮೂಡಿ ತಾನು ಅವುಗಳನ್ನು ಅನುಕರಿಸಿ ತನ್ನ ಸ್ಮರಣೆಯಲ್ಲಿದ್ದ ದೃಶ್ಯಗಳನ್ನು ಚಿತ್ರಗಳನ್ನಾಗಿ ಬಿಡಿ ಬಿಡಿ ಯಾಗಿ ಚಿತ್ರಿಸಿದ್ದಾರೆ.

ಚಿತ್ರ 42 ನಿಸರ್ಗ ಚಿತ್ರಈ ಚಿತ್ರವು ಗದಗ ತಾಲೂಕದಲ್ಲಿ ಲಕ್ಷ್ಮೇಶ್ವರ ಎಂಬ ಪಟ್ಟಣದಲ್ಲಿರುವ ದೇವಸ್ಥಾನವಾಗಿದ್ದು ಈ ಚಿತ್ರವು ಅತ್ಯಂತ ಪ್ರಭಾವಶಾಲಿಯಾಗಿ ಪಾರದರ್ಶಕ ವರ್ಣದಿಂದ ಕೂಡಿದ ದೃಶ್ಯವಾಗಿದೆ. ಅಲ್ಲಿಯ ನೆರಳು ಬೆಳಕು, ಹಾಳಾದ ದೇಗುಲ ಅಲ್ಲಿಯ ಮನುಷ್ಯ, ಕೃತಿಗಳು, ಅತ್ಯಂತ ಗಂಭೀರವಾಗಿ ಕಂಡುಬರುತ್ತವೆ. ಅವರ ಮಿತ ವ್ಯಯ ಬಣ್ಣಗಳನ್ನು ಸಹ ನಾವು ಇಲ್ಲಿ ಕಾಣಬಹುದಾಗಿದೆ.

ಚಿತ್ರ 43 ಈ ಚಿತ್ರದಲ್ಲಿ ಆಕಾಶವು ನೀಲಿ ವರ್ಣದಿಂದ ಕೂಡಿದ್ದು ಇದೀಗ ಮಳೆ ಬರುವ ಹಾಗೆ ಬಣ್ಣಗಳ ಬಳಕೆಯನ್ನು ಬಳಸಿದ್ದಾರೆ. ಕೆಳಭಾಗದಲ್ಲಿ ನೀರಿನ ಸಂಗ್ರಹದ ಉಣಕಲ್ಲ ಕೆರೆಯನ್ನು ಬಿಂಬಿಸಿದ್ದಾರೆ. ಸುತ್ತ ಮುತ್ತಲೂ ಹಸಿರು, ಕಂದುಗೆಂಪು, ಹಿನ್ನೆಲೆ ಗುಡ್ಡಗಳನ್ನು ಎಂದಿನಂತ ಅತಿಮಿತ ವ್ಯಯ ಬಣ್ಣಗಳನ್ನು ಬಳಸಿದ್ದಾರೆ. ಈ ದೃಶ್ಯವು ಅಪಾರ ದರ್ಶಕ ವರ್ಣಗಳಿಂದ ರಚಿಸಿದ್ದಾರೆ. ಬಿಳಿ ವರ್ಣವು ಧಾರಾಳವಾಗಿ ಬಳಸಿ ನೀರಿನ ಆಕಾರಕ್ಕೆ ಆಕಾಶದ ನೀಲಿ ಛಾಯೆಯನ್ನು ಬಿಂಬಿಸುವಂತೆ ಮಾಡಿ ನೋಡುಗರಿಗೆ ಅತ್ಯಂತ ಆಕರ್ಷಕವಾಗುವಂತೆ ನಿಸರ್ಗ ಚಿತ್ರವನ್ನು ರಚಿಸಿದ್ದಾರೆ.

ಚಿತ್ರ 44, 45, 46, 48 ಈ ಎಲ್ಲ ನಿಸರ್ಗ ಚಿತ್ರಗಳು ಸರಣಿಯ ಚಿತ್ರಗಳಂತೆ ರಚಿಸಿದ್ದಾರೆ. ಹುಬ್ಬಳ್ಳಿ ತಾಲೂಕಿನ ಉಣಕಲ್ಲ ಗ್ರಾಮದಲ್ಲಿ ರೈತರು ತಮ್ಮ ಹೊಲ-ಗದ್ದೆಗಳಲ್ಲಿ ಬಂದ ಫಸಲುಗಳನ್ನು ರಾಶಿ ಮಾಡುತ್ತಿರುವ ಚಿತ್ರಗಳಾಗಿರುತ್ತವೆ. ಚಿತ್ರ 44 ತೈಲವರ್ಣದ ಚಿತ್ರವಾಗಿದ್ದು ರೈತನು ಹೊಲದಲ್ಲಿ ಕೆಲಸಕ್ಕೆ ನಿರತವಾಗಿರುವ ಮಹಿಳೆಯರ ಹಾಗೂ ಮಾಲೀಕರ ದೃಶ್ಯಗಳನ್ನು ರಚಿಸಿದ್ದಾರೆ. ಹಿನ್ನೆಲೆಯಲ್ಲಿ ಅತ್ಯದ್ಭುತವಾದ ಮರಗಳನ್ನು ಸೃಷ್ಟಿಸಿದ್ದಾರೆ. ಅಂತೆಯೇ ರಾಶಿ ಮಾಡುವ ಸಂದರ್ಭದಲ್ಲಿ ಇರುವ ವಾತಾವರಣವನ್ನು ಕಲ್ಪಿಸಿದ್ದಾರೆ. ಚಿತ್ರ 45 ರೈತರು ಬೆಳೆದ ಫಸಲನ್ನು ಒಂದು ಕಡೆ ಕೂಡಿಸಿ ಜಮಾಯಿಸಿದ ದೃಶ್ಯವಾದರೆ, ಚಿತ್ರ 46 ರಲ್ಲಿ ಹೊಲದಲ್ಲಿ ಫಸಲದ ಗೂಡನ್ನು ಕೂಡಿ ಹಾಕಿರುವ ದೃಶ್ಯವಾಗಿರುತ್ತದೆ. ಮುಂಬಾಗದಲ್ಲಿ ಕಂದುಗೆಂಪು ವರ್ಣದಲ್ಲಿ ರೈತನ ಗದ್ದೆಯನ್ನು ತೋರಿಸಿದ್ದಾರೆ, ಅಲ್ಲಲ್ಲಿ ಮನುಷ್ಯಾಕೃತಿಯನ್ನು ರಚಿಸಿದ್ದಾರೆ. ಹಿನ್ನೆಲೆಯಲ್ಲಿ ಬಿಳಿ ಆಕಾಶವನ್ನು ಸೃಷ್ಟಿಸಿದ್ದಾರೆ. ಚಿತ್ರ 48 ರಲ್ಲಿ ಗ್ರಾಮದಲ್ಲಿ ರೈತರು ಫಸಲನ್ನು ಬಣವೆಗಳ ಮುಖಾಂತರ ಸಂಗ್ರಹ ಮಾಡಲ್ಪಟ್ಟ ದೃಶ್ಯವನ್ನು ರಚಿಸಿದ್ದಾರೆ. ಯಥಾವತ್ತಾಗಿ ಚಕ್ಕಡಿ, ಗಿಡಮರಗಳಿಂದ ಬಿಸಿಲಿನ ವಾತಾವರಣವನ್ನು



ಕೂಡ ಈ ಚಿತ್ರದಲ್ಲಿ ಕಂಡುಕೊಳ್ಳಬಹುದಾಗಿದೆ. ಅಲ್ಲಿಯ ಮನುಷ್ಯಾಕೃತಿಗಳು ಸಹ ಕಾರ್ಯನಿರತವಾಗಿರುವುದನ್ನು ಡಾ. ಮಿಣಜಗಿ ಕ್ರಿಯಾಶೀಲ ಕಲಾತ್ಮಕ ಕೌಶಲ್ಯಗಳಿಂದ ಅಪಾರದರ್ಶಕ ವರ್ಣಗಳಿಂದ ಈ ಚಿತ್ರವು ರಚನೆಯಾಗಿವೆ. ಈ ಎಲ್ಲಾ ಕಲಾಕೃತಿಗಳು ಹುಬ್ಬಳ್ಳಿಯ ಕುಂಚ ಬ್ರಹ್ಮ ಮಿಣಜಗಿ ಕಲಾಗ್ಯಾಲರಿಯಲ್ಲಿ ಧೂಳು ಹಿಡಿದು ಒಂದು ಕೋಣೆಯಲ್ಲಿ ಕೊಳೆಯುತ್ತಿರುವುದನ್ನು ಕಂಡು ಮೊದಲು ನಿರಾಶೆನಾದೆನು. ತದನಂತರ ಛಾಯಾಚಿತ್ರಕ್ಕಾದರೂ ಅವುಗಳನ್ನು ಧೂಳು ತೆಗೆದು ಛಾಯಾಚಿತ್ರ ಮಾಡಿಕೊಳ್ಳಲಾಯಿತು.

ಚಿತ್ರ 53 ಈ ನಿಸರ್ಗ ಚಿತ್ರವು ಧಾರವಾಡ ಮಲೆನಾಡಿನ ಸೊಬಗನ್ನು ಕಂಗೊಳಿಸುವಂತೆ ಅಲ್ಲಿಯ ವರ್ಣಗಳನ್ನು ಗಮನಿಸಿದರೆ ಈ ಚಿತ್ರವು ಧಾರವಾಡದ್ದೆ ಎಂಬುದನ್ನು ಕಾಣಬಹುದಾಗಿದೆ. ಈ ನಿಸರ್ಗ ಚಿತ್ರಣವು ಪಾರದರ್ಶಕ ಹಾಗೂ ಅಪಾರದರ್ಶಕ ವರ್ಣಗಳಿಂದ ಕೂಡಿದ್ದಾಗಿದೆ. ಹೀಗೆ ಇನ್ನೂ ಅನೇಕ ನಿಸರ್ಗಚಿತ್ರಗಳು ಕಲಾಕೌಶಲ್ಯದ ಮೂಲಕ ಡಾ. ಮಿಣಜಗಿಯವರ ಚಿತ್ರಗಳು ಜನರನ್ನು ಆಕರ್ಷಿಸುವಂತೆ ಮಾಡುತ್ತವೆ.

ಭಿತ್ತಿಚಿತ್ರ:

ಚಿತ್ರ, 58ರಲ್ಲಿ ಇರುವಂತೆ ಈ ಚಿತ್ರವು ದೆಹಲಿಯ ದರ್ಬಾರ ಹಾಲಿನಲ್ಲಿ ಬಿಡಿಸಿರುವ ಚಿತ್ರವಾಗಿದೆ. ಅದೇ ತಾನೇ ಲಂಡನದಿಂದ ವ್ಯಾಸಂಗವನ್ನು ಪೂರೈಸಿಕೊಂಡು ಬಂದಿದ್ದರು. ಅವರ ಖ್ಯಾತಿಯನ್ನು ಕೇಳಿದ ಭಾರತ ಸರ್ಕಾರವು ಇವರ ಕಲೆಯನ್ನು ಗುರುತಿಸಿ ದರ್ಬಾರಹಾಲಿನ ಭಿತ್ತಿಚಿತ್ರವನ್ನು ತ ರಚಿಸಲಿಕ್ಕೆ ತಿಳಿಸಿದರು ಅದರಂತೆ ಇನ್ನಿತರ ಪ್ರಖ್ಯಾತ ಕಲಾವಿದರನ್ನು ಕರೆಯಿಸಿ ಇಲ್ಲಿ ಭಿತ್ತಿಚಿತ್ರಗಳನ್ನು ರಚಿಸಿ ಸಂಗ್ರಹಿಸಿದ ಖ್ಯಾತಿ ಭಾರತ ಸರ್ಕಾರಕ್ಕೆ ಇದೆ. ಡಾ. ಮಿಣಜಗಿಯವರು ತಮ್ಮ ನೆಲದ ವಾಸನೆಯನ್ನು ಕೂಡ ಇಲ್ಲಿ ಬೆಳೆಸಿ ಇರಿಸಿದ್ದಾರೆ. ಮೂಲತಃ ಬಿಜಾಪೂರದಲ್ಲಿ ಜನಿಸಿದ ಮಿಣಜಗಿ ಅವರ ಸವಿನೆನಪಿಗಾಗಿಯೇ ಬಿಜಾಪೂರದ ಸುಪ್ರಸಿದ್ಧ ಗೋಲಗುಮ್ಮಟದ ಚಿತ್ರವನ್ನು ಅವರು ಇಲ್ಲಿ ನಿರ್ಮಿಸಿದ್ದಾರೆ. ಕಲಾಗುರು ರೊಥೆನ್‌ಸ್ಟೈನ್ ಹೇಳಿದಂತೆ ಪರಿಸರದಲ್ಲಿ ಸಿಗುವ ಹಾಗೂ ತಮ್ಮ ತನವನ್ನು ಗುರುತಿಸುವ ಕಲಾಕೃತಿ ರಚನೆ ಮಾಡಿದಾಗಲೇ ಈ ನೆಲದ ವಾಸನೆ ಕಂಡುಕೊಳ್ಳಬಹುದಾಗಿದೆ. ಎಂಬಂತೆ ಡಾ. ಮಿಣಜಗಿಯವರು ದೂರದ ದೆಹಲಿಗೆ ಹೋಗಿ ಕನ್ನಡ ನಾಡಿನ ಪ್ರಸಿದ್ಧ ಚಿತ್ರವನ್ನು ಚಿತ್ರಿಸಿ ಬಂದರು. ಈ ಚಿತ್ರದಲ್ಲಿ ಮೂವರು ಮಹಿಳೆಯರು ಇದ್ದರೆ ಮುಂಭಾಗದಲ್ಲಿ ಹಾಗೂ ಹಿಂಬಾಗದಲ್ಲಿ ತಮ್ಮ ಸೌಂದರ್ಯವನ್ನು ಮಾಡಿಕೊಳ್ಳುತ್ತಿದ್ದಾರೆ. ಮಧ್ಯಭಾಗದಲ್ಲಿ ಆದಿಲ್ ಶಾನ ಹೆಂಡತಿಯು ತನ್ನ ಕನಸಿನ ಗೋಲಗುಮ್ಮಟವನ್ನು ಹಿಡಿದುಕೊಂಡು ಕುಳಿತಿರುವ ದೃಶ್ಯವಾಗಿದೆ. ಇಲ್ಲಿಯ ಅಂಗವಸ್ತ್ರಗಳು ಅತ್ಯಂತ ನೈಜವಾಗಿ ಮೂಡಿಬಂದಿವೆ.

ರೇಖಾಚಿತ್ರಗಳು:

ನಿಸರ್ಗದಲ್ಲಿ ರೇಖೆ ಎಂಬುದಿಲ್ಲ, ಅದು ತಲಗಳ ಚಲನೆಯಿಂದ ಉಂಟಾಗುವ ಒಂದು ಭ್ರಮೆ, ಆದರೂ ದೃಶ್ಯ ಕಲೆಗಳಲ್ಲಿ ರೇಖಾಚಿತ್ರ ಕಲೆಯೇ ಅತ್ಯಂತ ಪ್ರಾಚೀನ ಎಂದು ಊಹಿಸಲು ಆಧಾರಗಳಿವೆ. ವರ್ಣ



ಚಿತ್ರಗಳಿಗಿಂತಲೂ, ಶಿಲ್ಪಗಳಿಗಿಂತಲೂ ಮೊದಲು ಕಾಣಿಸಿಕೊಂಡವು ರೇಖಾಚಿತ್ರಗಳು. ಆದ್ದರಿಂದ ರೇಖಾ ಚಿತ್ರಕಲೆಯನ್ನು ಅದರ ಉಗಮ ವಿಕಾಸ, ವ್ಯತ್ಯಸ್ತ ವಿಧಾನಗಳು ವೈವಿಧ್ಯ, ಕಾಲ ದೇಶಾನುಗುಣವಾದ ಪರಿಕಲ್ಪನೆಗಳನ್ನು ತಿಳಿಯಲು ತುಂಬ ಕೂತುಹಲಕಾರಿಯಾಗಿರುವಂತೆ ಅದರ ಅಧ್ಯಯನದಿಂದ ದೃಶ್ಯಕಲೆಗಳಲ್ಲಿ ಅದರ ಅನನ್ಯ ಸ್ಥಾನವನ್ನು ಮಹತ್ವವನ್ನು ಪರಿಚಯ ಮಾಡಿಕೊಳ್ಳಬಹುದಾಗಿದೆ. ರೇಖಾ ಚಿತ್ರಕ್ಕೆ ರೇಖೆಯೇ ಜೀವಾಳ ಎಂದಾಯಿತು. ಅದಕ್ಕೊಂದು ಮಹತ್ವವಿದೆ. ಅದು ಕಲಾವಿದನ ಮಾನಸಿಕ ಉದ್ದೇಶವನ್ನು ಅದರ ತೀವ್ರತೆಯೊಂದಿಗೆ ಪರಿಶುದ್ಧ ಸ್ಥಿತಿಯನ್ನು, ಚಿತ್ತ ವೃತ್ತಿಯನ್ನು ಭಾವನೆಗಳನ್ನು ಆ ಕ್ಷಣಕ್ಕೆ ನಮ್ಮ ಮುಂದೆ ತೆರೆದಿಡುತ್ತದೆ.

ರೂಪದರ್ಶಿಗಳನ್ನು ಕೂರಿಸಿ ಮಾಡಿಕೊಳ್ಳುವ ಅಧ್ಯಯನ ಅಥವಾ ಅಭ್ಯಾಸ ಚಿತ್ರಗಳು ಇನ್ನೊಂದು ಬಗೆ. ತನಗೆ ಬೇಕಾದ ಒಪ್ಪಿತವಾಗುವ, ತೃಪ್ತಿಕೊಡುವ ಭಂಗಿಗಳಲ್ಲಿ ಪೂರ್ವಾಭ್ಯಾಸ ರೇಖಾಚಿತ್ರ ರಚಿಸಿ ಅನಂತರ ವರ್ಣ ಚಿತ್ರರಚನೆಯ 15ನೇ ಶತಮಾನದಿಂದ ಈ ಪದ್ಧತಿ ಪಾಶ್ಚಾತ್ಯರಲ್ಲಿ ಒಂದು ಶಿಸ್ತಾಗಿ ರೂಢಿಗೆ ಬಂದಿತು. ಹಾಗೆ ಸ್ಕೆಚ್ ಪುಸ್ತಕಗಳಲ್ಲಿ ಪ್ರವಾಸ ಇತ್ಯಾದಿ ಸಂದರ್ಭಗಳಲ್ಲಿ ದೃಶ್ಯಾನುಭವಗಳನ್ನು ಅಂಕಿತಗೊಳಿಸುವ ಪದ್ಧತಿಯೂ ರೂಡಿಯಾಯಿತು. ಡಾ ಮಿಣಜಗಿ ಪಾಶ್ಚಾತ್ಯದಲ್ಲಿ ಅಭ್ಯಸಿಸಿದ ಅವರು ಅಲ್ಲಿಯ ಚಿತ್ರಗಳನ್ನು ಗಮನಿಸಿದರೆ ಇವರ ಅಭ್ಯಾಸ ಕ್ರಮದ ಬಗ್ಗೆ ಅರಿವಾಗುತ್ತದೆ, ಅದರಂತೆಯೇ ಡಾ ಮಿಣಜಗಿ ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದಾಗ ಹೊಟೆಲ್‌ವೊಂದರಲ್ಲಿ ಇದಕ್ಕಾಗಿಯೇ ನಗ್ನಚಿತ್ರಗಳನ್ನು ಕುರಿತು ರೂಪದರ್ಶಿಗಳನ್ನು ಕರೆದುಕೊಂಡು ಬಂದು ಅವರಿಗೆ ಹಣ ನೀಡಿ ನಗ್ನತೆಯ ಚಿತ್ರಗಳನ್ನು ರಚಿಸುತ್ತಿದ್ದರು, ನಗ್ನ ಚಿತ್ರಗಳನ್ನು ವೀಕ್ಷಿಸಿದಾಗ, ವೆನಿಸ್ ನಿವಾನಿ ಪಬಲೊಪಿನೊ ಎಂಬಾತ 1548ರಲ್ಲಿ ಚಿತ್ರಕಲೆಯ ಬಗ್ಗೆ ವ್ಯಾಖ್ಯಾನಿಸುತ್ತ ಅದು ರೇಖಾಚಿತ್ರ. ಅವಿಷ್ಕಾರ ಹಾಗೂ ಬಣ್ಣಗಳು ಎಂಬ ಮೂರು ಪ್ರಧಾನ ಅಂಶಗಳಿಂದ ಕೂಡಿರುತ್ತದೆ. ಎಂದು ಹೇಳಿದ. ಮೊದಲ ಅಂಶವಾದ ರೇಖಾಚಿತ್ರವು.ನಿರ್ಣಯ, ಹೊರ ಆವರಣ, ರೇಖೆ, ತಂತ್ರ ಹಾಗೂ ಸಮರ್ಪಕ ಸಂಯೋಜನೆಯಿಂದ ಕೂಡಿರಬೇಕು, ಎಂದು ಒಳ ಮನಸ್ಸಿನ ಅಂತರ ಭಾವನೆಯಿಂದ ಬಂದ ರೂಪವೇ ನಿರ್ಣಯವೆಂದು ಅದು ಬಾಹ್ಯ ಪ್ರಯತ್ನದಿಂದ ಹೊರ ಆವರಣದ ರೇಖಾ ರೂಪದಿಂದ ದೃಗ್ಗರ್ಶನವನ್ನು ಅನುಸರಿಸಿಸಂಯೋಜಿತಗೊಳ್ಳುವದು. ಹಾಗೂ ನೆರಳು ಬೆಳಕನ್ನೊಳಗೊಂಡು ಪ್ರಥಮ ಪರಿಪೂರ್ಣ ಚಿತ್ರವಾಗುವುದಲ್ಲದೆ ವಿಸ್ತ್ರತ ಚಿತ್ರದ ಕರಡು ನಕ್ಷೆಯೂ ಆಗುತ್ತದೆ. ಎಂದು ಸೂತ್ರರ ರೂಪದ ಹೇಳಿಕೆ ನೀಡಿದೆ. 1557ರಲ್ಲಿ ಯುಕ್ತಿಯಿಂದ ನಿರ್ವಹಿಸಿದ ರೇಖೆಯಿಂದ ಅನಿಶ್ಚಿತ ಆಕೃತಿಗಳು ನಿಶ್ಚಿತರೂಪಕ್ಕೆ ತಿರುಗುವಂತೆ ಹಂತಹಂತವಾಗಿ ತಯಾರಿಸಿದ ಸಂಯೋಜನೆಯೊಂದರ ಅವಿಷ್ಕಾರವಾಗುವುದು ಅದೇ ಕಾಲದಲ್ಲಿ ಹೇಗಿದ್ದರೂ ಸಂಯೋಜನೆಯ ಆಶಯಗಳ ಹುಡುಕಾಟದಲ್ಲಿ ಹೊಸರೂಪಗಳು. ಈ ಬಗೆಯ ಶೀಘ್ರ ಹೊಳಹಿನ (ಕ್ವಿಕ್‌ಸ್ಕೆಚ್) ಅಥವಾ ಅಲ್ಪಕಾಲದಲ್ಲಿ ರಚಿಸಿಕೊಂಡ ಬಿಡಿಯಾದ ರೇಖಾಚಿತ್ರಗಳಿಂದ ಸಾಧ್ಯವಾಗುತ್ತದೆ ಎಂದು ಹೇಳಿದೆ. ಜಿಡಿಬಿಡಿಯಾಗಿ ಹಲವಾರು ವಸ್ತುಗಳನ್ನು ಅಥವಾ ಆಕೃತಿಗಳನ್ನು ಇಲ್ಲವೆ ಮನುಷ್ಯರ ವಿವಿಧ ಭಾವ ಭಂಗಿಗಳನ್ನು, ದೇಹದ ವಿವಿಧ ಅಂಗಾಂಗಗಳನ್ನು ಬೇರೆ ಬೇರೆ ಮೈ ಬಳಕೆಯ ವಸ್ತುಗಳನ್ನು, ನೆರಳು-ಬೆಳಕನ್ನು ರೇಖಾಚಿತ್ರದಲ್ಲಿ ಮೂಡಿಸಿಕೊಂಡು ಅವುಗಳಲ್ಲಿ ವಸ್ತುವಿಗೆ ತಕ್ಕಂತೆ ಹಲವನ್ನು ಆಯ್ದು ಸಂಯೋಜನಾ ತತ್ವಕ್ಕೆ ಅನುಗುಣವಾಗಿ ಇರಿಸಿ ಪುನರ್ ರೂಪಿಸಿ ವಿಸ್ತ್ರತವರ್ಣ ಚಿತ್ರ ರಚಿಸುವದು ಸಾಂಪ್ರದಾಯಿಕ ಅಥವಾ ನೈಜವಾದ ಕಲಾವಿದರಲ್ಲಿ ಇಂದಿಗೂ ಇರುವ ಪದ್ಧತಿ ಆಗಿದೆ.

ಡಾ. ಮಿಣಜಗಿಯ ಅನೇಕ ನಗ್ನರೇಖಾ ಚಿತ್ರಗಳು ಲಂಡನ್ ವ್ಯಾಸಂಗದಲ್ಲಿ ಚಿತ್ರಿಸಿದ್ದರು. ಅದರಂತೆಯೇ ಹುಬ್ಬಳ್ಳಿಯಲ್ಲಿ ಅನೇಕ ರೂಪದರ್ಶಿಗಳನ್ನು ಬಳಸಿಕೊಂಡು ಸ್ತ್ರೀಯರ, ಪುರುಷರ ನಗ್ನ ಚಿತ್ರಗಳನ್ನು ನೆರಳು

[illegible]



ಬೆಳಕಿನ ಸಹಾಯದಿಂದ ರಚಿಸಿದ್ದರು, ಇಂತಹ ಸಾಕಷ್ಟು ರೇಖಾಚಿತ್ರಗಳು ಹುಬ್ಬಳ್ಳಿಯ ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯದ ಸಂಗ್ರಹದಲ್ಲಿ ಇರುತ್ತವೆ. ಎಂಬುದನ್ನು ಅವರ ಶಿಷ್ಯರಾಗಿದ್ದ ಶ್ರೀ ವಿ.ಬಿ.ಹಿರೇಗೌಡರ, ಎಂ.ಜಿ.ಪಾಟೀಲ, ಹಾಗೂ ಪಿ.ಎಸ್ ಹಿರೇಮಠ ಅವರನ್ನು ಕಂಡಾಗ ಮಹಾವಿದ್ಯಾಲಯದಲ್ಲಿ ಇಂತಹ ಅನೇಕ ನಗ್ನ ಚಿತ್ರಗಳು ಇದ್ದವು ಎಂಬುದನ್ನು ತಿಳಿದಾಗ ಈ ಚಿತ್ರಗಳನ್ನಾದರೂ ಸಂಶೋಧನೆಗೆ ಬಳಸಿಕೊಳ್ಳಬಹುದೆಂಬ ಆಶೆಯಿಂದ ಪ್ರಸ್ತುತ ಪ್ರಾಚಾರ್ಯರನ್ನು ವಿಚಾರಿಸಿದಾಗ ಈ ಚಿತ್ರಗಳು ಇಂದು ಕಾಣೆಯಾಗಿವೆಯೆಂಬ ಉತ್ತರದಿಂದ ನಿರಾಶೆಯುಂಟಾಯಿತು. ಕೊನೆಗೆ ಮಿಣಜಗಿಯವರು ಚಿತ್ರಿಸಿದ ಚಿತ್ರಗಳ ಶೋಧನೆ ಹೋದಾಗ ಈ ಎರಡು ನಗ್ನ ಚಿತ್ರಗಳು ಸಿಕ್ಕಿದ್ದೇ ನನ್ನ ಭಾಗ್ಯ ಎಂದುಕೊಂಡೆನು ಆದ್ದರಿಂದ ಈ ಚಿತ್ರಗಳ ಬಗ್ಗೆ ಅರಿವಿದ್ದವರೇ ಈ ಚಿತ್ರಗಳನ್ನು ತೆಗೆದುಕೊಂಡು ಹೋಗಿ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಮುಚ್ಚಿಟ್ಟುಕೊಂಡಿರುವದು ಅತ್ಯಂತ ದುರದೃಷ್ಟಕರ ಸಂಗತಿಯನ್ನಬಹುದು, ಇಂದು ಆ ನಗ್ನ ಚಿತ್ರಗಳು ನಮ್ಮ ನಿಮ್ಮ ಮುಂದೆ ನೋಡಲು ಲಭ್ಯವಾಗಿದ್ದರೆ ಇದ್ದಿದರೆ ಸಾವಿರಾರು ವಿದ್ಯಾರ್ಥಿಗಳು ಅವುಗಳ ಲಾಭವನ್ನು ಪಡೆಯುತ್ತಿದ್ದರು, ಡಾ ಮಿಣಜಗಿಯವರಂತೆ ದೇಹ ರಚನಾತಂತ್ರದ ಕುರಿತಂತೆ ವಿದ್ಯಾರ್ಥಿಗಳಿಗೆ ಕಲ್ಪನೆಯಾದರೂ ನೀಡಬಹುದಾಗಿತ್ತು.

ಬಾದಾಮಿ ಗುಹಾಂತರ ಭಿತ್ತಿಚಿತ್ರಗಳು

ಬಾದಾಮಿ ಊರಿನ ಮರಳುಗಳಿನ ಗುಡ್ಡದ ಸೆರಗೊಂದರಲ್ಲಿ ನಾಲ್ಕು ಸುಂದರ ಗುಹಾಲಯಗಳನ್ನು ಕೊರೆದಿದ್ದಾರೆ. ಅವುಗಳಲ್ಲಿ ಮೂರನೆಯ ಗುಹೆಯನ್ನು ಕೀರ್ತಿ ವರ್ಮನ ತರುವಾಯ ಪಟ್ಟಕ್ಕೆ ಬಂದ ಅವನ ಸಹೋದರ ಮಂಗಲೇಶ [18] ಕೊರೆಯಿಸಿದ್ದ ವಿಷ್ಣು ಗುಹೆ ಎಂದಿದರ ಹೆಸರು ಅಲ್ಲಿರುವ ನಾಲ್ಕು ಗುಹೆಯಲ್ಲಿ ಇದೇನೆ ಉತ್ಕೃಷ್ಟ ರಚನೆ, ಈ ಗುಹೆಯಲ್ಲಿ ಕೊರೆದಿರುವ ಉಬ್ಬು ಗೆತ್ತನೆಗಳು, ಶಿಲ್ಪಗಳ ಸ್ತಂಭಗಳು ಮದನ ಕೈಗಳು ಶಿಲ್ಪದ ದೃಷ್ಟಿಯಿಂದ ಸುಂದವರು ಶಕ್ತಿಯವೂ ಆದವು ಅದರ ಪೂರ್ವದಲ್ಲಿ ಕೆಲವೊಂದು ಸುಂದರ ಉಬ್ಬುಕೆತ್ತನೆಗಳಿವೆ. ಅವಕ್ಕೆ ಹಿಂದೊಂದು ಕಾಲದಲ್ಲಿ ಬಣ್ಣ ಸವರಿದಂತಿದೆ. ಆದರೆ ಇಂದು ಅದೇನು ಉಳಿದಿಲ್ಲ. ಈ ಗುಹೆಯಲ್ಲಿ ಮುಂಗಡೆ ಚಾಚುವ ಬಂಡೆಯ ಭಾಗವನ್ನು ಒಳಗಿನಿಂದ ಕೊರೆದು ಸಜ್ಜೆಯಾಗಿ ರೂಪಿಸಿದ್ದಾರೆ. ಭಿತ್ತಿ ಚಿತ್ರಗಳನ್ನು ಅದರ ಮೇಲೆ ಬರೆದಿದ್ದಾರೆ. ಆದರೆ ಇಂದು ಅವನ್ನು ಕಾಣುವದಕ್ಕಿಲ್ಲ. ಕಾಲಗತಿಯಿಂದ ಅವು ಬಹಳ ಮಾಸಿ ಹೋಗಿದ್ದು ಅಲ್ಲಿ ಚಿತ್ರಗಳಿವೆಯೆಂಬ ಕಲ್ಪನೆಯೇ ಬರುತ್ತಿರಲಿಲ್ಲ. ಅದನ್ನು ,ಮೊದಲ ಬಾರಿಗೆ ಗುರುತಿಸಿ, ಪ್ರಸಿದ್ಧಿಗೆ ತಂದವಳು ಸ್ಟೆಲ್ಲಾ ಕ್ರಾಮಿಶ್,[19] ಎಂಬ ಪಾಶ್ಚಿಮಾತ್ಯ ಮಹಿಳೆ. ಆಕೆ ಪೂರ್ವ ಏಷ್ಯಾ ಮತ್ತು ಭಾರತಗಳ ಶಿಲ್ಪ ಚಿತ್ರಕಲೆಗಳನ್ನು ಕುರಿತು ವಿಶೇಷ ವ್ಯಾಸಂಗ ಮಾಡಿದಳು.[20]

ಈ ಚಿತ್ರಗಳ ಹೆಸರನ್ನು ಡಾ. ಶಿವರಾಂ ಕಾರಂತರು ಕೇಳಿದ್ದರಾದರೂ, ಹಿಂದೆ ಹಲವು ಬಾರಿಗೆ ಅಲ್ಲಿಗೆ ಹೋದರೂ ಶಿವರಾಂ ಕಾರಂತರಿಗೆ ಕಂಡ ನೆನಪೇ ಇದ್ದಿಲ್ಲ.[21] ಲಲಿತ ಕಲಾ ಅಕಾಡೆಮಿಯ ಪರವಾಗಿ ಅವನ್ನು

೧೮. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩
೧೯. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩
೨೦. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩
೨೧. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩



ಪರಿಶೀಲಿಸಲೆಂದೇ ಹೋಗುವ ಸಂದರ್ಭ ಶಿವರಾಂ ಕಾರಂತರಿಗೆ ಬಂದಿತು.[22] ಆ ಕಾಲಕ್ಕೆ ಹಿಂದಿದ್ದ ಚಿತ್ರಗಳನ್ನು ಪ್ರತಿ ಮಾಡಿದ ಚಿತ್ರಕಾರ ಶ್ರೀ ಮಿಣಜಗಿಯವರೂ ಸಹ ಇವರೊಂದಿಗಿದ್ದರು.[23] ಗುಹೆಯ ಸೆಜ್ಜೆಗೆ ಏಣಿಯನ್ನು ತಗುಲಿಸಿ ಏರಿ ಹೋಗಿ ತೀರ ಹತ್ತಿರದಿಂದ ಕಂಡಾಗ ಏನೋ ಬಣ್ಣಸವರಿದ ಮಾಸಲು ಗುರುತಷ್ಟೆ ಕಾಣಿಸಿತು. ಒದ್ದೆ ಅರಿವೆಯಿಂದ ಅದನ್ನು ಸವರಿ ನೋಡಿದಾಗ ಮಾತ್ರ ಅಹುದೋಅಲ್ಲವೋ ಎಂಬಷ್ಟು ಅಸ್ಪಷ್ಟವಾದ ಚಿತ್ರಗತ ವ್ಯಕ್ತಿಗಳ ಮೈ ಉಡುಪು ಮೊದಲಾದವು ಕಾಣಿಸಿದವು. ಆಗ ಕಾರಂತರಿಗಾದ ನಿರಾಶೆ ಹೇಳತೀರದು. ಕೇವಲ ಮೂರು ದಶಕಗಳ ಅವಧಿಯಲ್ಲಿ ಹಿಂದಿದ್ದ ಚಿತ್ರಗಳ ಅವಶೇಷವೂ ಇಲ್ಲದಾಯಿತಲ್ಲವೆಂದು ಇದಕ್ಕೆ ಮುಖ್ಯ ಕಾರಣ ಇಲ್ಲಿನ ಚಿತ್ರಗಳನ್ನು ರಕ್ಷಿಸುವ ನೆಪದಿಂದ ನಮ್ಮ ಆರ್ಕಿಯಾಲಾಜಿಕಲ್ ಇಲಾಖೆಯವರು ಸವರಿದ ಯಾವುದೋ ಅಯೋಗ್ಯ ವಾರ್ನಿಶಿಂಗ್ ದೋಷ ಅದು ಕಪ್ಪಾಗಿ ಹಿಂದಿನ ಚಿತ್ರಾಂಶಗಳನ್ನ ತೀರಾ ಮರೆಯಿಸಿಯೇ ಬಿಟ್ಟಿದೆ. ಇನ್ನಾದರೂ ಆ ವಾರ್ನಿಶಿಂಗ ಲೇಪವನ್ನು ಯೋಗ್ಯ ರಸಾಯನಿಕಗಳಿಂದ ತೊಡೆಯುವುದು ಅಸಾಧ್ಯವಲ್ಲ. ಆದರೆ ಅದು ಇಲಾಖೆಯವರ ಗಮನಕ್ಕೆ ಬರಬೇಕಷ್ಟೆ.ಹಾಗೇ ಮಾಡುವತನಕ ಬಾದಾಮಿ ಚಿತ್ರಗಳು ಸಂಪೂರ್ಣ ನಷ್ಟವಾದಂತೆಯೇ ಸರಿ.

ಆದರೂ ಸುದೈವದಿಂದ ಬಾದಾಮಿ ಚಿತ್ರಗಳನ್ನು ಉಳಿಸಿಕೊಟ್ಟ ನಮ್ಮ ನಾಡಿನ ಪ್ರಸಿದ್ಧ ಚಿತ್ರಕಾರ ಡಾ. ಮಿಣಜಗಿಯವರಿಗೂ ಅದನ್ನು ಪ್ರತಿ ತೆಗೆಯಲು ಇನ್ನೊಂದು ಬಾರಿ ಏರ್ಪಡಿಸಿದ ದಿಲ್ಲಿಯ ಲಲಿತ ಕಲಾ ಅಕಾಡೆಮಿಯವರಿಗೂ ನಾವು ಋಣಿಯಾಗಿರಬೇಕು. ಮಿಣಜಗಿಯವರು ಜಲವರ್ಣಗಳಲ್ಲಿ ಇಲ್ಲಿನ ನಾಲ್ಕಾರು ಚಿತ್ರ ಭಾಗಗಳನ್ನು ಪ್ರತಿ ಮಾಡಿದ್ದರು. ಅವುಗಳು ಇಂದು ಧಾರವಾಡದ ಇತಿಹಾಸ ಸಂಶೋಧನಾ ಸಂಸ್ಥೆಯವರ[24] ಸಲುವಾಗಿ ಮರು ಪ್ರತಿ ಮಾಡಿಕೊಟ್ಟರು. ಇಲ್ಲಿ ಉದಾಹರಿಸಿದ ವರ್ಣ ಚಿತ್ರ ಸಂಶೋಧನಾ ಕೃಪೆಯಿಂದ ದೊರಕಿಸಿದ್ದು ಲಲಿತ ಕಲಾ ಅಕಾಡೆಮಿಯವರು. ಈ ಚಿತ್ರಗಳ ಪ್ರತೀಕರಣಕ್ಕೆ ಆದಿವಾಸಿಯೆಂಬ ಚಿತ್ರಕಾರ ಜೊತೆಗೆ ಕೆಲವು ಶಿಷ್ಯರನ್ನು ಕಳುಹಿಸಿದ್ದರು. ಅವರು ಮಾಡಿದ ಚಿತ್ರ ಪ್ರತಿಗಳು[25] ಪ್ರಕಟಗೊಂಡಿವೆ. ಪ್ರತೀಕರಣದ ದೃಷ್ಟಿಯಿಂದ ಮಿಣಜಗಿಯವರ ಕೈಯೇ ಬೇರೆ ಆಹಿವಾಸಿ ಪಂಗಡದವರ ಬಗೆಯೇ ಬೇರೆ ಎಂದು ನೋಡಿದೊಡನೆಯೇ ಹೊಳೆಯುತ್ತದೆ.[26]

ಚಿತ್ರ 76ರ ಭಿತ್ತಿಚಿತ್ರದಲ್ಲಿ ದೊರೆಯೊಬ್ಬನ ಒಡ್ಡೋಲಗವಾಗಿದೆ. ಚಿತ್ರದ ಬಲ ಅರ್ಧ ಭಾಗದ ಮುಂಗಡೆಯಲ್ಲಿ ದೊರೆ ಕುಳಿತಿದ್ದಾನೆ. ಅವನ ಸಮ್ಮುಖದಲ್ಲಿ ಕುಳಿತ ಅರಸಿಯೊಬ್ಬಳು ಚಿತ್ರಿತಳಾಗಿದ್ದಾಳೆ. ದೊರೆಯ ಮುಖ ಮೈಗಳು ಅಳಸಿ ಹೋಗಿವೆ. ಮಡಿಸಿದ ಕಾಲುಗಳಷ್ಟೇ ಕಾಣಿಸುತ್ತವೆ. ಎದೆಯ ಮೇಲೆ ಯಜ್ಞೋಪವೀತದಂತೆ ಮುತ್ತಿನ ಸರ ಕಾಣಿಸುತ್ತಿದೆ. ದೊರೆಯ ಬೆನ್ನುಗಳೇ ಚಿತ್ರದ ಎಡಭಾಗದಲ್ಲಿ ನರ್ತಕಿಯರು ವಾದ್ಯಗಾರರು ಕಾಣಿಸುತ್ತಾರೆ. ಅರಸಿಯ ಬೆಂಗಡೆ ಮತ್ತು ಹಿಂಗಡೆಗಳಲ್ಲಿ ಕುಂಚ ಹಿಡಿದು ಸೇವೆ ಸಲ್ಲಿಸುವ ಪರಿಚಾರಕ, ಚಾರಕೀಯರಿದ್ದಾರೆ. ದೂರ ಎತ್ತರದಲ್ಲಿ ಪ್ರೇಕ್ಷಕ ವರ್ಗವಿದೆ. ಚಿತ್ರ ಅಲ್ಲಲ್ಲಿ ಬಳೆದ ಬಣ್ಣದಬಚ್ಚಿ ಹೋದ ದೆಸೆಯಿಂದ ಅದರ ರೇಖೆಗಳ ಚೆಲುವನ್ನು ಅನುಭವಿಸುವುದು ಕಷ್ಟವಾಗುತ್ತದೆ.

ಚಿತ್ರ 77 ರಲ್ಲಿ ಇಲ್ಲಿನ ಇನ್ನೆರಡು ಭಿತ್ತಿಚಿತ್ರಗಳು ಗಗನದಲ್ಲಿ ಹಾರುತ್ತಿರುವ ವಿದ್ಯಾಧರೆ

---

೨೨. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩
೨೩. ಶಿವರಾಂ ಕಾರಂತ (ಸಂ) : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೩
೨೪. ಶಂಕರ ಪಾಟೀಲ : ಕಲಾ ತಪಸ್ವಿ ಮಿಣಜಗಿ, ಪುಟ -೪೭
೨೫. ಕಲಾವಾರ್ತೆ; ಕೇಂದ್ರ ಲಲಿತ ಕಲಾ ಅಕಾಡೆಮಿ, ಪುಟ-೧೮,೧೯೬೫ ; ಎಪ್ರೀಲ್
೨೬. ಶ್ರೀ ಎಸ್.ಎಂ.ಶಿರಹಟ್ಟಿ; ಚಿತ್ರಕಲಾ ಕೈದೀಪ, ಪುಟ -೧೧೨



ದಂಪತಿಗಳದ್ದು, ಅಂತಹ ಒಂದು ಚಿತ್ರದಲ್ಲಿ ಒಬ್ಬರು ಇನ್ನೊಬ್ಬರ ಕೊರಳನ್ನು ಅಪ್ಪಿ ಹಿಡಿದಂತೆ ಚಿತ್ರಿತರಾಗಿದ್ದಾರೆ. ಇನ್ನೊಂದು ಚಿತ್ರದಲ್ಲಿ ವಿದ್ಯಾಧರ ವೀಣೆಯನ್ನು ಹಿಡಿದು ನುಡಿಸುತ್ತಿದ್ದಾನೆ. ಈ ದಂಪತಿಗಳಲ್ಲಿ ಗಂಡಸರನ್ನೂ ಪಾಟಲಬಣ್ಣದಿಂದಲೂ, ಅವರ ಮಡದಿಯರ ಮೈಯನ್ನು ಹಸುರು ನೀಲ ವರ್ಣಗಳಿಂದಲೂ ಬಳಸಿದ್ದಾರೆ. ವಾಸ್ತವಿಕ ದೇಹಗಳ ಬಣ್ಣದ ಚಿತ್ರಣ ಅವರ ಉದ್ದೇಶವಾಗಿರದೇ ವರ್ಣಗಳ ಸಾಮರಸ್ಯಕ್ಕೆ ಅವರು ಪ್ರಾಮುಖ್ಯತೆ ಕೊಟ್ಟುದು ಕಾಣಿಸುತ್ತ ದೆ.

ಚಿತ್ರ 78ರ ಭಿತ್ತಿಚಿತ್ರಗಳಲ್ಲಿ ತದ್ರೂಪಿಕತೆಯ ಪ್ರಯತ್ನವಿದೆಯಾದರೂ ಮೈ ಬಣ್ಣವನ್ನು ಬರೆಯವುದರಲ್ಲಿ, ಒಟ್ಟು ಚಿತ್ರಗಳ ವರ್ಣಕ್ಕೆ ಪುಷ್ಟಿಯನ್ನು ದಗಿಸುವದರಲ್ಲಿ ವಾಸ್ತವಿಕ ಅನುಕರಣೆ ಇಲ್ಲ. ದೊರೆಯ ಹಿಂದಿನ ನರ್ತಕಿಯ ಮೈಬಣ್ಣ ನೀಲ ಛಾಯೆಯದು. ಈ ಪುಟದಲ್ಲಿ ಉದಾಹರಿಸುವ ಛಾಯಾ ಚಿತ್ರ, ನರ್ತಕಿಯ ಬೆಂಗಡೆಯ ನೋಟವನ್ನು ಒದಗಿಸುತ್ತದೆ. ಚಿತ್ರಗಳ ವಿವಿಧ ಆಕೃತಿಗಳೊಳಗೆ ಮೇಳವೂ ಬಣ್ಣಗಳಲ್ಲಿ ಹೊಂದಿಕೆ ಯಾಗಿ ಕಾಣಿಸುವಂಥ ಕೃತಿಯಿದು. ಅದರಲ್ಲಿಯೂ ನರ್ತಕ ನರ್ತಕಿಯರು ಹಿಮ್ಮೇಳದೊಡನೆ ನಿಂತಿರುವ ಗುಂಪು ತುಂಬಾ ಆಕರ್ಷಕವಾಗಿವೆ. ಚಿತ್ರಕಾರ ಅಹಿವಾಸಿಯವರು ಈ ಚಿತ್ರದ ಬಿಡಿಭಾಗಗಳನ್ನು ಬೇರೆ ಬೇರೆಯಾಗಿ ಆರಿಸಿ ಪ್ರತಿ ತೆಗೆದು ಅವುಗಳ ಒಳ್ಳೆಯ ಲಕ್ಷಣಗಳನ್ನು ಸ್ವಾರಸ್ಯವಾಗಿ ಉದಾಹರಿಸಿದ್ದಾರೆ.

ಚಿತ್ರ 79ರಲ್ಲಿ ಇಂತಹದೇ ಆಸ್ಥಾನದ ಚಿತ್ರವಿದೆ. ಅದರ ಮುಂಭಾಗದಲ್ಲಿ ದೊರೆ ಅವನ ಅರಸಿ ಪರಿವಾರಗಳು ಕಾಣಿಸಿದರೆ ಬೆಂಗಡೆ ಎತ್ತರದಲ್ಲಿ ಇಂದ್ರನೇ ಒಡ್ಡೋಲಗ ಸಹಿತನಾಗಿ ದೊರೆಯನ್ನು ಹರಸುವಂತೆ ಚಿತ್ರ ವಸ್ತುವನ್ನು ಕಲ್ಪಿಸಿದ್ದಾರೆ. ಇದು ಚಾಲುಕ್ಯ ದೊರೆ ಕೀರ್ತಿ ವರ್ಮನನ್ನು ಉದ್ದೇಶಿಸಿ ಬರೆದಿರಬಹುದಾದ ಚಿತ್ರವೆಂದು ಕೆಲವರ ಊಹೆ. ಅರಸ ಸಿಂಹಾನಸದಲ್ಲಿ ಕುಳಿತಿದ್ದಾನೆ. ತನ್ನ ಒಂದು ಕಾಲನ್ನು ಮಡಿಚಿ ಮನೆಯೊಂದರ ಮೇಲಕ್ಕೆ ಇರಿಸಿದ್ದಾನೆ. ಅವರ ಮುಂಗಡೆಯಲ್ಲಿ ರಾಣಿಯು ಒಂದು ಕಾಲನ್ನು ಇನ್ನೊಂದನ್ನು ಮುಂದಕ್ಕೆ ಚಾಚಿ ಕುಳಿತಿದ್ದಾಳೆ. ಅವಳ ಆಕೃತಿಯ ರೇಖೆ ಬಣ್ಣಗಾರಿಕೆಯ ರೀತಿ ಸಿಲೋನಿನ ಸಿಗ್ರಿಯ ಗುಹೆಯಲ್ಲಿನ ಅಂಥದೇ ಒಬ್ಬಳ ರೂಪವನ್ನು ನಮ್ಮ ಸ್ಮರಣೆಗೆ ತರುವಂತಿದೆ. ಈ ಎರಡನೆಯ ಭಿತ್ತಿ ಚಿತ್ರವೂ ಹಲವಾರು ವ್ಯಕ್ತಿಗಳಿಂದ ಕೂಡಿದೊಂದು ಜಟಿಲ ಸಮೂಹ.

ಈ ಚಿತ್ರಗಳು ಮಾಸದೇ ಮತ್ತು ಅಲ್ಲಲ್ಲಿ ಬಿಚ್ಚದೆ ಹೋಗಿದ್ದರೆ ಆರನೆಯ ಶತಮಾನದ ಭಿತ್ತಿ ಚಿತ್ರಗಳ ಮಾದರಿ ನಮ್ಮ ನಾಡಿನಲ್ಲಿ ಉಳಿಯುವಂತಾಗುತ್ತಿತ್ತು. ಈಗಂತೂ ಬಾದಾಮಿಯಲ್ಲಿ ನೋಡುವುದಕ್ಕೆ ಏನೇನು ಚಿತ್ರ ಉಳಿದಿಲ್ಲ. ಹೀಗಾಗಿ ನಮ್ಮ ನಾಡಿನ ಆ ಕಾಲದ ಚಿತ್ರಕಲೆ ಸ್ವರೂಪವನ್ನು ಸ್ವಲ್ಪವಾದರೂ ತಿಳಿಯುವ ಆಸೆಯಿದ್ದವರು ಅಹಿವಾಸಿಯವರ ಮತ್ತು ಮಿಣಜಗಿಯವರ ಚಿತ್ರ ಪ್ರತಿಗಳನ್ನು ನೋಡಿ ತಿಳಿಯುವುದು ತೀರಾ ಅವಶ್ಯ. ಆದಕ್ಕಿಂತಲೂ ಪೂರ್ವದ ಇನ್ನಾವ ಉದಾಹರಣೆಗಳೂ ನಮ್ಮಲ್ಲಿ ಇಲ್ಲವಷ್ಟೇ.

ಡಾ. ಮಿಣಜಗಿಯವರ ಕಲಾಪ್ರತಿಭೆ ಹಲವಾರು ಪ್ರತಿಭೆಗಳಲ್ಲಿ ಪ್ರವಹಿಸಿ ತನ್ನ ವಿಶಾಲತೆಯನ್ನು ತೋರುವದರೊಂದಿಗೆ ಜನಮನವನ್ನು ಸೂರೆಗೊಂಡಿತು. ಅನೇಕ ಹಿರಿಯ ಕಲಾವಿದರೂ ಕೂಡ ಈ ಕಲೆಗೆ ಮಾರುಹೋಗಿ ಅವರ ಪ್ರತಿಬೆಯನ್ನು ಗುರುತಿಸಿದರು. ಇದರಲ್ಲಿ ದಿ.ಅ.ನ.ಕೃಷ್ಣರಾಯರು ಮಿಣಜಗಿಯವರ ಪ್ರತಿಬೆಯನ್ನು ಬಹು ಚೆನ್ನಾಗಿ ಅರಿತವರು. ಅವರು ಹೇಳಿರುವ ಮಾತುಗಳು ತುಂಬಾ ಮಾನನೀಯವಾಗಿವೆ. ಮಿಣಜಗಿಯವರ ಚಿತ್ರಗಳಲ್ಲಿ ವ್ಯಕ್ತಿಗಳು ಮಾತ್ರ ಸಚೇತರಾಗಿಲ್ಲ. ನಿಸರ್ಗವೂ ಕೂಡ ಚೇತನವಾಗಿದೆ. ಅವರ ಅನುಭವ ಇಲ್ಲಿ ಪಕ್ವಗೊಂಡು ಬಂದಿದೆ. ವರ್ಣ ಸಂಯೋಜನೆಯಲ್ಲಿ ಅಪರೂಪದ ಸಾಮರಸ್ಯವಿದೆ. ಪ್ರತಿಯೊಂದು ಚಿತ್ರವೂ ಅವರ ಆರಾಧಕ ದೃಷ್ಟಿಗೆ ಚಿಂತನೆಗೆ ನಿದರ್ಶನವಾಗಿ ನಿಂತಿವೆ. ಅವರ ಈ ಮಾತುಗಳಲ್ಲೂ ಮಿಣಜಗಿಯವರ ಕಲಾ ಸೃಷ್ಟಿಯ ಯಥಾರ್ಥ ಬಣ್ಣನೆಯನ್ನು ಕಾಣಬಹುದಾಗಿದೆ.





ನಿಸರ್ಗ ಚಿತ್ರ ಲಕ್ಷ್ಮೇಶ್ವರ. ಸಂಗ್ರಹ : ಕರ್ನಾಟಕ ಲಲಿತ ಕಲಾ ಅಕಾಡಮಿ, ಬೆಂಗಳೂರು



ನಿಸರ್ಗ ಚಿತ್ರ. ಸಂಗ್ರಹ : ಎಂ.ಸಿ. ಶೆಟ್ಟಿ






ನಿಸರ್ಗ ಚಿತ್ರಣ ಲಂಕಿವಿ. ಸಂಗ್ರಹ : ಮಿಣಜಗಿ ಆರ್ಟ ಗ್ಯಾಲರಿ, ಹುಬ್ಬಳ್ಳಿ



ನಿಸರ್ಗ ಚಿತ್ರಣ ಉಣಕಲ್ಲ. ಸಂಗ್ರಹ : ಮಿಣಜಗಿ ಆರ್ಟ ಗ್ಯಾಲರಿ, ಹುಬ್ಬಳ್ಳಿ



